ಅಧ್ಯಕ್ಷರು.—ತಾವು ಎಲ್ಲಾ ವಿಚಾರಗಳನ್ನೂ ಚರ್ಚೆ ಸಮಯದಲ್ಲಿ ಹೇಳಿ. ಈಗ ಕಾವೇರಿ ವಿಚಾರದಲ್ಲಿ ಸಭೆಯಲ್ಲಿ ಚರ್ಚೆ ಮಾಡುವುದಕ್ಕೆ ಸರ್ವಾನುಮತದ ಒಪ್ಪಿಗೆ ಇದೆ. ಆದ್ದರಿಂದ ಮಿಕ್ಕ ಕಾರ್ಯಕ್ರಮಗಳನ್ನು ಸ್ಥಗಿತ ಮಾಡಿ ಕಾವೇರಿ ಜಲಾನಯನ ಪ್ರದೇಶದಲ್ಲಿರತಕ್ಕ ಕೋಟ್ಯಾಂತರ ಜನಗಳ ಆಸೆ ಆಕಾಂಕ್ಷೆಗಳಿಗೆ ಬರಸಿಡಿಲು ಬಡಿಯುವ, ಈ ಕಾವೇರಿ ಪ್ರಶ್ನೆಯ ವಿಚಾರದಲ್ಲಿ ಏಕಪಕ್ಷೀಯವಾದ ನಿರ್ಧಾರವನ್ನು ತೆಗೆದುಕೊಳ್ಳದೇ ಹೋದರೆ, ಈ ಒಂದು ಕರಾಳ ಛಾಯೆ ಮುಂದಿನ ಪೀಳಿಗೆ ಮೇಲೆ ಬೀಳುತ್ತದೆ ಎನ್ನುವುದರಲ್ಲಿ ಎರಡು ಅಭಿಪ್ರಾಯ ಇಲ್ಲ. ಇದು ಅತ್ಯಂತ ಸೂಕ್ಷ್ಮವಾದ ಹಾಗೂ ಅತ್ಯಂತ ಗಂಭೀರವಾದ ವಿಚಾರ. ಆದ್ದರಿಂದ ಮಿಕ್ಕ ವಿಚಾರಗಳನ್ನು ಬದಿಗೊತ್ತಿ. ಕಾವೇರಿ ನೀರಿನ ಪ್ರಸ್ತಾಪದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಪ್ರಸ್ತಾವವನ್ನು ಸದನದ ಮುಂದೆ ಮಂಡಿಸಬಹುದು.

ಕಾವೇರಿ ಜಲ ವಿವಾದದ ಪ್ರಸ್ತಾವನೆ ಮತ್ತು ಚರ್ಚೆ

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ತಮ್ಮ ಅನುಮತಿ ಕೋರಿ ಈ ಪ್ರಸ್ತಾವವನ್ನು ಮಂಡಿಸುತ್ತಿದ್ದೇನೆ. ಅದು ಹೀಗಿದೆ. ತಮಿಳುನಾಡು ಮುಂತಾದ ರಾಜ್ಯಗಳು ಮತ್ತು ಕರ್ನಾಟಕ ರಾಜ್ಯದ ಮಧ್ಯೆ ಉಂಟಾಗಿರುವ ಕಾವೇರಿ ಜಲವಿವಾದದ ಪ್ರಸ್ತಾವನನ್ನು ಮಂಡಿಸುತ್ತೇನೆ ಮತ್ತು ಇದನ್ನು ಪರಿಶೀಲನೆಗೆ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಪ್ರಸ್ತಾವವನ್ನು ಸಭೆಯ ಮುಂದೆ ಮಂಡಿಸಲಾಯಿತು.

೧೧-೫೫ ಎ. ಎಂ.

† ಶ್ರೀ ವೀರೇಂದ್ರ ಪಾಟೀಲ್ (ಮುಖ್ಯಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಕಾವೇರಿ ನದಿ ಜಲ ವಿವಾದ ಮತ್ತು ಅದರ ಇತಿಹಾಸ ಕರ್ನಾಟಕದ ಇಡೀ ಜನತೆಗೆ ಮತ್ತು ವಿಶೇಷವಾಗಿ ಕಾವೇರಿ ನದಿ ಪಾತ್ರದಲ್ಲಿರತಕ್ಕಂಥ ಎಲ್ಲರಿಗೂ ಗೊತ್ತಿದ್ದ ವಿಚಾರ. ಆದರೆ ಸುಮಾರು ಒಂದು ನೂರು ವರ್ಷಗಳ ನಂತರ ಕಾವೇರಿ ನದಿ ಜಲ ವಿವಾದವು ಒಂದು ಸೂಕ್ಷ್ಮ ಹಂತದಲ್ಲಿ ಇವತ್ತು ಬಂದು ನಿಂತಿದೆ. ಮಾನ್ಯ ಅಧ್ಯಕ್ಷರೇ ತಾವು ಪ್ರಸ್ತಾಪ ಮಾಡಿದ ಹಾಗೆ ಇದು ಒಂದು ಪ್ರಶ್ನೆ, ಇದು ಕರ್ನಾಟಕದ ಪ್ರಶ್ನೆ, ಕರ್ನಾಟಕದ ಜನತೆಯ ಪ್ರಶ್ನೆ ಇದು, ಇದು ಯಾವುದೋ ಒಂದು ರಾಜಕೀಯ ಪಕ್ಷದ ಪ್ರಶ್ನೆಯಲ್ಲ. ಅದಕ್ಕಾಗಿ ನಾವೆಲ್ಲ ನಮ್ಮ ಪಕ್ಷ ಆಶ್ರಮಗಳನ್ನು ಮರೆತು, ಪಕ್ಷದಿಂದ ಮೇಲಕ್ಕೆ ಎದ್ದು ಕರ್ನಾಟಕದ ಹಿತದೃಷ್ಟಿಯಿಂದ ಮತ್ತು ಕರ್ನಾಟಕದ ಜನತೆಯ ಹಿತ ದೃಷ್ಟಿಯಿಂದ ಇವತ್ತು ಉದ್ಭವಿಸಿರುವಂಥ ಪರಿಸ್ಥಿತಿ ಬಗ್ಗೆ ಚರ್ಚೆ ಮಾಡಬೇಕಾಗಿದೆ, ಸಮಾಲೋಚನೆ ಮಾಡಬೇಕಾಗಿದೆ ಮತ್ತು ಬಹಳಗಂಭೀರವಾಗಿ ಸಮಾಲೋಚನೆ ಮಾಡಬೇಕಾದಂಥ ಅಗತ್ಯವೂ ಇದೆ. ಕಾವೇರಿ ನದಿ ಜಲವಿವಾದದ ಪೂರ್ತಿ ಇತಿಹಾಸವನ್ನು ಇವತ್ತು ಸದನದ ಮುಂದೆ ಇಡುವುದಕ್ಕೆ ನಾನು ಹೋಗುವುದಿಲ್ಲ, ಅದರ ಅವಶ್ಯಕತೆಯೂ ಇಲ್ಲ. ಆದರೆ ನಮ್ಮ ಪಕ್ಷ ಮತ್ತು ನಾನು ಅಧಿಕಾರಕ್ಕೆ ಬಂದ ಮೇಲೆ ಏನು ಮಾಡಿದ್ದೇವೆ ಮತ್ತು ಇವೊತ್ತು ಪರಿಸ್ಥಿತಿ ಯಾವ ರೀತಿ ಉದ್ಭವವಾಗಿದೆ ಎನ್ನುವುದರ ಬಗ್ಗೆ ಸೂಕ್ಷ್ಮ ಪರಿಚಯವನ್ನು ಈ ಸದನಕ್ಕೆ ಕೊಡುವುದಕ್ಕೆ ಇಷ್ಟಪಡುತ್ತೇನೆ. ನಾನು ಅಧಿಕಾರ ವಹಿಸಿಕೊಂಡ ಮೇಲೆ ಫೆಬ್ರುವರಿಯಲ್ಲಿ ತಮಿಳುನಾಡು ಮುಖ್ಯಮಂತ್ರಿಯವರಿಗೆ ಒಂದು ಪತ್ರ ಬರೆದೆ, ಕಾವೇರಿ ನದಿ ಜಲ ವಿವಾದದ ಪ್ರಶ್ನೆ ಬಹಳ ದಿವಸಗಳಿಂದ ನನೆಗುದಿಗೆ ಬಿದ್ದಿದೆ, ಈ ಪ್ರಶ್ನೆಯನ್ನು ಪರಸ್ಪರವಾಗಿ ಚರ್ಚೆ ಮಾಡಿ, ವಿಚಾರ ಮಾಡಿ ಕೊಟ್ಟು ತೆಗೆದುಕೊಳ್ಳುವಂಥ ಮನೋಭಾವನೆಯಿಂದ ಬಗೆಹರಿಸಲಿಕ್ಕೆ ಸಾಧ್ಯವಿದೆ, ಆದಕ್ಕಾಗಿ ಈ ಪ್ರಶ್ನೆಯನ್ನು ಇತ್ಯರ್ಥ ಮಾಡುವುದಕ್ಕಾಗಿ ನಾವು ಮನಸ್ಸು ಮಾಡಬೇಕು ಮತ್ತು ನಾವುಗಳು ಒಂದು ಕಡೆ ಸೇರಬೇಕು, ಅದಕ್ಕಾಗಿ ತಾವು ದಯಮಾಡಿ ಬೆಂಗಳೂರಿಗೆ ಬರಬೇಕೆಂದು ತಿಳಿಸಿದ್ದೆ. ೧೨ನೇ ಫೆಬ್ರುವರಿ ೧೯೯೦ಕ್ಕೆ ತಾವು ಬೆಂಗಳೂರಿಗೆ ಬರಬೇಕೆಂದು ನಾನು ಮೊದಲನೇ ಸಲ ಆಹ್ವಾನಿಸಿದ್ದೆ. ಆಗ ಅವರು ಒಪ್ಪಿಕೊಂಡಿದ್ದರು. ನಾವು ಕೂಡ ಅವರು ಬರುತ್ತಾರೆಂದು ಎಲ್ಲಾ ಸಿದ್ಧತೆಗಳನ್ನು ಮಾಡಿಕೊಂಡಿದ್ದೆವು. ದುರ್ದೈವದಿಂದ ಎರಡು ಕಾರಣಗಳಿಗಾಗಿ ಅವರು ಬರಲಿಲ್ಲ. ಅದು ತಮಗೆಲ್ಲರಿಗೂ ಗೊತ್ತಿದ್ದ ಹಾಗೆ ಒಂದು, ದೊಡ್ಡ ಪ್ಲೇನಿನ ದುರಂತವಾಯಿತು, ಏರ್‌ಕ್ರ್ಯಾಷ್, ಇನ್ನೊಂದು ಕಾರಣ ನಮ್ಮ ಸಿಬ್ಬಂದಿ ವರ್ಗದವರು ಒಮ್ಮಿಂದೊಮ್ಮೆಗೆ ಸ್ಟ್ರೈಕ್‌ಗೆ ಹೋದರು. ಅದಕ್ಕಾಗಿ ನಾನು ಅವರಿಗೆ ಮತ್ತೆ ತಿಳಿಸಿದೆ. ಈ ಪರಿಸ್ಥಿತಿಯಲ್ಲಿ ಸೇರುವುದು ಕಷ್ಟವಾಗುತ್ತದೆ, ಅನಂತರ ಮತ್ತೊಂದು ದಿನಾಂಕ ನಿಗದಿ ಮಾಡಿ ಹೇಳುತ್ತೇನೆ ಆವಾಗ ಬರಬೇಕೆಂದು ಕೇಳಿಕೊಂಡಿದ್ದೆ. ಅದಾದ ಮೇಲೆ ಅದೇ ರೀತಿ ಇನ್ನೊಂದು ಸಲ ದಿನಾಂಕ

೧೨-೩-೧೯೯೦ಕ್ಕೆ ಸಿಗದಿ ಮಾಡಿ ಬೆಂಗಳೂರಿಗೆ ತಾವು ಬರಬೇಕೆಂದು ತಮ್ಮ ಜೊತೆಯಲ್ಲಿ ತಮ್ಮ ಸಹೋದ್ಯೋಗಿಗಳು ಹಾಗೂ ಸಂಬಂಧಪಟ್ಟ ಅಧಿಕಾರಿಗಳನ್ನು ಕರೆದುಕೊಂಡು ಬನ್ನಿ, ಇದರ ಬಗ್ಗೆ ಚರ್ಚೆ ಮಾಡೋಣ ಇದರ ಜೊತೆಗೆ ನೀರು ಬಿಡುವುದಾಗಲಿ ಮತ್ತು ನೀರಿನ ಬದಲು ಪವರ್ ಸರಬರಾಜು ಮಾಡುವುದಾಗಲೀ ಹಾಗೂ ನಮ್ಮ ನದಿ ಪಾತ್ರದಲ್ಲಿರತಕ್ಕ ಶಿವನಸಮುದ್ರದ ಪ್ರಾಜೆಕ್ಟ್ ಬಗ್ಗೆ, ತಮಿಳುನಾಡಿನಲ್ಲಿರುವಂಥ ಪವರ್ ಪ್ರಾಜೆಕ್ಟ್ ಬಗ್ಗೆ ನೆನಗುದಿಗೆ ಬಿದ್ದಿರುವ ಎಲ್ಲಾ ವಿಚಾರವನ್ನು ಚರ್ಚೆ ಮಾಡೋಣವೆಂದು ಅವರಿಗೆ ಹೇಳಿದ್ದೆ. ಅವರೂ ಒಪ್ಪಿಕೊಂಡಿದ್ದರು.

ದಿನಾಂಕ ೧೨-೩-೯೦ಕ್ಕೆ ನಾವು ಸೇರಬೇಕಾಗಿತ್ತು, ಆದರೆ ಈ ಮಧ್ಯೆದಲ್ಲಿ ಅವರು ತಿಳಿಸಿದರು. ಕೇಂದ್ರ ಸರ್ಕಾರದವರು ಈಗಾಗಲೇ ಕಾವೇರಿ ಜಲ ವಿವಾದದ ಬಗ್ಗೆ ಒಂದು ಮೀಟಿಂಗ್ ಕರೆದಿದ್ದಾರೆ, ಅದಕ್ಕೆ ನಾವು ಇಲ್ಲಿ ಪ್ರತ್ಯೇಕ ಮೀಟಿಂಗ್ ಮಾಡುವ ಅವಶ್ಯಕತೆ ಇಲ್ಲ. ನಾವು ಏನಾದರೂ ಮಾತನಾಡುವುದಿದ್ದರೆ ಅಲ್ಲಿಯೇ ಮೀಟಿಂಗ್‌ನಲ್ಲಿ ಮಾತನಾಡೋಣ ಎಂದು ಹೇಳಿ ನಾವು ಇಲ್ಲಿ ಕರೆದಿದ್ದ ಮೀಟಿಂಗ್‌ಗೆ ಅವರು ಬರಲಿಲ್ಲ, ಅಲ್ಲಿಂದ ಕೇಂದ್ರದಲ್ಲಿ ಬೇರೆ ಸರ್ಕಾರ ಅಧಿಕಾರ ಸ್ವೀಕಾರ ಮಾಡಿದ ಮೇಲೆ ಮೊದಲನೆಯ ಪ್ರಯತ್ನ ಏನೆಂದರೆ, ಕಾವೇರಿ ಜಲವಿವಾದದ ಪ್ರಶ್ನೆಯನ್ನು ಬಗೆಹರಿಸುವುದಕ್ಕೆ ದಿನಾಂಕ ೫-೪-೯೦ಕ್ಕೆ ಕಾವೇರಿ ಜಲವಿವಾದಕ್ಕೆ ಸಂಬಂಧಪಟ್ಟಂತೆ ಈ ಭಾಗದ ಎಲ್ಲಾ ಮುಖ್ಯಮಂತ್ರಿಗಳ ಸಭೆಯನ್ನು ದಿಲ್ಲಿಯಲ್ಲಿ ಸೇರಿಸಿದರು. ಆ ಸಭೆಗೆ ನಾನೂ ಹೋಗಿದ್ದೆ. ತಮಿಳುನಾಡಿನ ಮುಖ್ಯಮಂತ್ರಿಗಳು ಬಂದಿದ್ದರು, ಕೇರಳ ಮುಖ್ಯಮಂತ್ರಿಗಳು, ಮತ್ತು ಪಾಂಡಿಚೇರಿ ಮುಖ್ಯಮಂತ್ರಿಗಳು ಸಹ ಬಂದಿದ್ದರು. ನಮ್ಮ ಜೊತೆಯಲ್ಲಿ ನಮ್ಮ ಸಹೊದ್ಯೋಗಿಗಳು ಮತ್ತು ಸಂಬಂಧಪಟ್ಟ ಅಧಿಕಾರಿಗಳು ಕೂಡ ಇದ್ದರು. ನಾವು ಅಲ್ಲಿ ಹೋದಾಗ ಈ ಜಲವಿವಾದವನ್ನು ಯಾವ ರೀತಿ ಬಗೆಹರಿಸಬೇಕು, ಯಾವ ರೀತಿ ಇತ್ಯರ್ಥ ಮಾಡಬೇಕೆನ್ನುವ ಪ್ರಶ್ನೆ ಬಂದಾಗ ನಾನು ಸ್ಪಷ್ಟವಾಗಿ ಮೀಟಿಂಗ್‌ನಲ್ಲಿ ಹೇಳಿದೆ ನಾವು ಇವತ್ತು ಕೂಡ ಗೀವ್ ಅಂಡ್ ಟೇಕ್ ಪಾಲಿಸಿಯಿಂದ ಈ ಪ್ರಶ್ನೆ ಬಗೆಹರಿಸುವ ವಿಚಾರದಲ್ಲಿದ್ದೇವೆ ಒಂದು ವೇಳೆ ಇದರಿಂದ ಈ ವಿವಾದವನ್ನು ಬಗೆಹರಿಸುವುದಕ್ಕೆ ಸಾಧ್ಯವಿಲ್ಲವೆನ್ನುವ ಪ್ರಶ್ನೆ ಬಂದಾಗ ಟ್ರಿಬ್ಯೂನಲ್ ನೇಮಕ ಮಾಡುವ ವಿಚಾರ ಮಾಡಬೇಕೆಂದು ಹೇಳಿದೆ ಇವೊತ್ತಿನ ಪರಿಸ್ಥಿತಿಯಲ್ಲಿ ಟ್ರಿಬ್ಯೂನಲ್ ರಚಿಸುವಂತಹ ಸನ್ನಿವೇಶ ಉದ್ಭವವಾಗಿಲ್ಲ. ಅದಕ್ಕೆ ನಮಗೆ ಬೇಕಾಗಿರುವಂತಹ ಎಲ್ಲಾ ಅಂಕಿ ಅಂಶಗಳನ್ನು ನೀವು ಒದಗಿಸಬೇಕು. ಯಾವ ರೀತಿಯಿಂದ ಕೇಂದ್ರ ಸರ್ಕಾರದವರು ಈ ಪ್ರಶ್ನೆಯನ್ನು ಇತ್ಯರ್ಥ ಮಾಡಬಹುದು ನೀವು ನೀರನ್ನು ಯಾವ ಒಂದು ಪ್ರಿನ್ಸಿಪಲ್ ಮೇಲೆ ಹಂಚಬೇಕು, ಇವನ್ನೆಲ್ಲಾ ಮಾಡಬೇಕಾದ ಅವಶ್ಯಕತೆ ಇದೆ. ೧೯೭೨ನೇ ಇಸವಿಯಲ್ಲಿ ಫ್ಯಾಕ್ಟ್ ಫೈಂಡಿಂಗ್ ಕಮಿಟಿ ಇತ್ತು. ಆ ಕಮಿಟಿ ಸರಿಯಾಗಿ ಕೆಲಸ ಮಾಡುವುದಕ್ಕೆ ಸಾಧ್ಯವಾಗಲಿಲ್ಲ ಅವರು ತಮ್ಮ ರಿಪೋರ್ಟ್‌ನಲ್ಲಿ ಬರೆದಿದ್ದಾರೆ. ಅವರು ಹೇಳಿದಂತೆ ಅವರೇನು ಅಂಕಿ ಅಂಶಗಳು ರಿಪೋರ್ಟ್‌ನಲ್ಲಿ ಕೊಟ್ಟಿದ್ದಾರೆ. ಆ ಅಂಕಿ ಅಂಶಗಳು ಪ್ರತಿಯೊಂದು ರಾಜ್ಯದವರು ಏನು ಅಂಕಿ ಅಂಶಗಳನ್ನು ಒದಗಿಸಿರುತ್ತಾರೋ ಅವನ್ನು ನಾವು ಒಟ್ಟಿಗೆ ಸೇರಿಸಿ ಒಂದು ರಿಪೋರ್ಟ್ ಮಾಡಿದ್ದೇವೆ ಎಂದು. ಅದಕ್ಕೆ ನಾನು ಹೇಳಿದೆ ಇದು ಬಹಳ ಸೂಕ್ಷ್ಮವಾದ ಪ್ರಶ್ನೆ ನೀರಿನ ಹಂಚಿಕೆ ಮಾಡುವಾಗ ಎಷ್ಟು ನೀರು ಇದೆ. ಯಾವ ಪ್ರಮಾಣದಲ್ಲಿ ನೀರು ಇದೆ. ಎನ್ನುವುದು ಮೊದಲು ನಿರ್ಧಾರವಾಗಬೇಕು ನೀರನ್ನು ಪ್ರತಿಯೊಂದು ಏರಿಯಾದಲ್ಲಿ ನೀರಿನ ಈಲ್ಡ್ ಎಷ್ಟು ಇದೆ ಕರ್ನಾಟಕದಲ್ಲಿ ನೀರಿನ ಈಲ್ಡ್ ಎಷ್ಟು ಇದೆ. ಅಂದರೆ ತಮಿಳುನಾಡಿನಲ್ಲಿ ಎಷ್ಟು ಇದೆ ಅದೇ ರೀತಿಯಲ್ಲಿ ತಮಿಳುನಾಡಿನವರು ಎಷ್ಟು ನೀರನ್ನು ಉಪಯೋಗಿಸಿಕೊಳ್ಳುತ್ತಿದ್ದಾರೆ. ಕರ್ನಾಟಕದಲ್ಲಿ ಎಷ್ಟು ನೀರನ್ನು ಉಪಯೋಗಿಸಿಕೊಳ್ಳುತ್ತಿದ್ದಾರೆ. ಕೇರಳದಲ್ಲಿ ಎಷ್ಟು ನೀರು ಉಪಯೋಗವಾಗುತ್ತಿದೆ. ಪಾಂಡಿಚೇರಿಯಲ್ಲಿ ಎಷ್ಟು ನೀರು ಉಪಯೋಗವಾಗುತ್ತಿದೆ ಈ ಎಲ್ಲಾ ಅಂಕಿಅಂಶಗಳ ಆಧಾರದ ಮೇಲೆ ಈ ಪ್ರಶ್ನೆಯನ್ನು ಚರ್ಚೆ ಮಾಡಬೇಕಾಗುತ್ತದೆಂದು ನಾನು ಹೇಳಿದೆ. ಆದರೆ ದುರಾದೃಷ್ಟವಶಾತ್ ಫ್ಯಾಕ್ಟ್ ಫೈಂಡಿಂಗ್ ಕಮಿಟಿಯವರು ಯಾವ ರೀತಿಯಿಂದ ಸೈಂಟಿಫಿಕ್ ಆಗಿ ಸ್ಟಡಿ ಮಾಡಿ ರಿಪೋರ್ಟ್ ಸಲ್ಲಿಸಬೇಕಾಗಿತ್ತೋ ಆ ರೀತಿ ಸಲ್ಲಿಸಲಾಗಲಿಲ್ಲ. ಅದಕ್ಕೆ ಒಂದು ಫ್ಯಾಕ್ಟ್ ಫೈಂಡಿಂಗ್ ಕಮಿಟಿ ಮಾಡಬೇಕು. ಆ ಕಮಿಷನ್ ವರದಿ ಮಾಡಿದರೆ ಆಗ ಯಾವ ತರಹ ಮಾಡಬಹುದೆನ್ನುವುದು ಗೊತ್ತಾಗುತ್ತದೆ. ಈ ಮಧ್ಯೆ ನಮ್ಮ ನೆಗೋಷಿಯೇಶನ್ಸ್ ಮುಂದುವರಿಸುವುದಕ್ಕೆ ಸಾಧ್ಯವಾಗುತ್ತದೆ ಎಂದು ನಾನು ಯಾವಾಗ ಹೇಳಿದೆ ಆಗ ಕೇಂದ್ರ ಸರ್ಕಾರದ ನೀರಾವರಿ ಸಚಿವರು ತಮ್ಮ ಛೇಂಬರ್‌ನಲ್ಲಿ ಎಲ್ಲಾ ರಾಜ್ಯಗಳ ಮುಖ್ಯಮಂತ್ರಿಗಳನ್ನು ಕರೆಯಿಸಿ ಈ ಜಲವಿವಾದವನ್ನು ಏನಾದರೂ ಮಾಡಿ ಬಗೆಹರಿಸಬೇಕು ಅದಕ್ಕೆ ಅಡ್‌ಹಾಕ್ ಆಗಿ ನೀವು ಏನಾದರೂ ಒಂದು ನಿರ್ಧಾರ ತೆಗೆದುಕೊಳ್ಳಿ ಎಂದು ಅವರು ಹೇಳಿದರು. ದುರಾದೃಷ್ಟವಶಾತ್ ತಮಿಳುನಾಡಿನ ಮುಖ್ಯಮಂತ್ರಿಗಳು ಇಲ್ಲಾ ಇದನ್ನು ಇಲ್ಲಿ ಬಗೆಹರಿಸುವುದಕ್ಕೆ ಸಾಧ್ಯವಿಲ್ಲ. ಇದು ಟ್ರಿಬ್ಯುನಲ್‌ಗೆ ಹೋಗಬೇಕೆಂದು ಒತ್ತಾಯ ಮಾಡಿದರು. ಅದಕ್ಕೆ ನಾವು ಒಪ್ಪಲಿಲ್ಲ. ಅದಕ್ಕೆ ನಾನು ಬಹಳ ಮಟ್ಟಿಗೆ ಪ್ರಯತ್ನ ಮಾಡಿ ತಮಿಳುನಾಡಿನ

ಮುಖ್ಯಮಂತ್ರಿಗಳನ್ನು ಒಪ್ಪಿಸಿ ತಾವು ಈ ರೀತಿ ಅವಸರ ಮಾಡಬೇಡಿ. ತಾವು ಅಧಿಕಾರಕ್ಕೆ ಬಂದು ನಾಲ್ಕು ತಿಂಗಳಾಯಿತು, ನಾವು ಅಧಿಕಾರಕ್ಕೆ ಬಂದು ನಾಲ್ಕು ತಿಂಗಳಾಯಿತು ಕೇಂದ್ರ ಸರ್ಕಾರ ಕೂಡ ಅಧಿಕಾರ ವಹಿಸಿಕೊಂಡು ನಾಲ್ಕು ತಿಂಗಳಾಗಿದೆ, ಇದು ಅನೇಕ ವರ್ಷಗಳಿಂದ ನನೆಗುದಿಗೆ ಬಿದ್ದಿದ್ದ ಪ್ರಶ್ನೆಯನ್ನು ಒಂದೆರಡು ತಿಂಗಳುಗಳಲ್ಲಿ ಇತ್ಯರ್ಥ ಮಾಡುವುದಕ್ಕೆ ಕಷ್ಟವಾಗುತ್ತದೆ. ನಾವು ಇವತ್ತೂ ಗೀವ್ ಅಂಡ್ ಟೇಕ್ ಪಾಲಿಸಿಯಿಂದ ಈ ಪ್ರಶ್ನೆಯನ್ನು ಇತ್ಯರ್ಥ ಮಾಡಿಕೊಳ್ಳುವುದಕ್ಕೆ ಸಾಧ್ಯವಿದೆ. ತಾವು ಇಂತಹ ಒಳ್ಳೆಯ ವಾತಾವರಣವನ್ನು ಕೆಡಿಸುವುದಕ್ಕೆ ಪ್ರಯತ್ನ ಮಾಡಬೇಡಿ. ಸಮಾಲೋಚನೆ ಮಾಡಿ ಇತ್ಯರ್ಥ ಮಾಡಿಕೊಳ್ಳೋಣವೆಂದು ನಾನು ಅವರನ್ನು ಒತ್ತಾಯ ಮಾಡಿದೆ. ಅದಕ್ಕೆ ಅವರೂ ಸಹ ಒಪ್ಪಿಕೊಂಡರು. ನೀವು ಮತ್ತು ನಾವು ಮಾತ್ರ ಬೈಲ್ಯಾಟರಲ್ ಆಗಿ ಚರ್ಚೆ ಮಾಡಬೇಕೆಂದು ಹೇಳಿದರು. ತಮಿಳುನಾಡು ಮತ್ತು ಕರ್ನಾಟಕ ಎರಡೇ ರಾಜ್ಯಗಳು ಮೊದಲು ಚರ್ಚೆಯಾಗಬೇಕೆಂದು ಹೇಳಿದ್ದಕ್ಕೆ ಒಪ್ಪಿ ಮದ್ರಾಸ್‌ನಲ್ಲಿ ಸೇರೋಣವೆಂದು ಒಪ್ಪಿಕೊಂಡೆವು, ಇವಾದ ಮೇಲೆ ಎಲ್ಲಾ ರಾಜ್ಯಗಳ ಚರ್ಚೆ ಆಗಬೇಕೆಂದು ನಾನು ಹೇಳಿದೆ. ಇದಾದ ಮೇಲೆ ಮೀಟಿಂಗ್ ಮುಂದೆ ಹೋಗುವಂತಹ ಪ್ರಸಂಗ ಬಂತು. ಸುಪ್ರೀಂ ಕೋರ್ಟ್‌ನವರು ೨೪ಕ್ಕೆ ಫೈನಲ್ ಹಿಯರಿಂಗ್ ಡೇಟ್ ಇಟ್ಟುಕೊಂಡಿದ್ದರು. ೨೪ನೇ ತಾರೀಖಿನೊಳಗೆ ಕೇಂದ್ರ ಸರ್ಕಾರದವರು ಮತ್ತು ಸಂಬಂಧಪಟ್ಟ ರಾಜ್ಯ ಸರ್ಕಾರದವರು ತಮ್ಮ ತಮ್ಮ ನಿಲುವು ಏನಿದೆ ಎಂಬುದನ್ನು ನನಗೆ ತಿಳಿಸಬೇಕೆಂದು ಅವರು ಹೇಳಿದ್ದರು. ಅಲ್ಲದೆ ಇನ್ನು ಮುಂದೆ ನಾವು ಯಾವ ಅಡ್ಜರ್ನ್‌ಮೆಂಟ್ ಕೊಡುವುದಕ್ಕಾಗುವುದಿಲ್ಲ ಎನ್ನುವಂಥ ಮಾತನ್ನು ಅವರು ಹೇಳಿದ್ದರು, ಅದಕ್ಕಾಗಿ ತಮಿಳುನಾಡಿನ ಮುಖ್ಯಮಂತ್ರಿಗಳು ಏನಾಗಬೇಕಾಗಿದ್ದರೂ ೨೪ನೇ ತಾರೀಖಿನೊಳಗೆ ಆಗಬೇಕೇ ಹೊರತು ನಾನು ೨೪ನೇ ತಾರೀಖಿನ ಡೆಡ್‌ಲೈನ್‌ನ್ನು ದಾಟುವುದಕ್ಕೆ ತಯಾರಿಲ್ಲ ಎನ್ನತಕ್ಕ ಮಾತನ್ನು ಹೇಳಿದ್ದರು. ಆಗ ನಾನು ಕೇಂದ್ರದ ಮಂತ್ರಿಗಳಿಗೂ ಮತ್ತು ತಮಿಳುನಾಡಿನ ಮುಖ್ಯಮಂತ್ರಿಗಳಿಗೂ ನಾವೇನು ಡಿಲೇ ಮಾಡಬೇಕು ಅಥವಾ ಯಾವ ರೀತಿಯಿಂದ ಲಾದರೂ ಈ ಪ್ರಶ್ನೆ ಮುಂದೆ ಹೋಗಬೇಕೆನ್ನುವ ವಿಚಾರ ಮಾಡುತ್ತಿಲ್ಲವೆಂದು ಸ್ಪಷ್ಟವಾಗಿ ಹೇಳಿದ್ದೇನೆ. ಒಂದು ವೇಳೆ ೨೪ನೇ ತಾರೀಖಿನೊಳಗೆ ಮಾಡಬೇಕೆನ್ನುವ ಪ್ರಶ್ನೆ ಇದ್ದರೆ, ಬೈಲ್ಯಾಟರಲ್ ಡಿಸ್ಕಷನ್ ೧೯ನೇ ತಾರೀಖೇ ಆಗಲಿ ಎಂದು ಹೇಳಿದ್ದೆ. ಅದಾದ ಮೇಲೆ ಮಾರು ದಿವಸವೇ ಎಲ್ಲಾ ರಾಜ್ಯಗಳ ಮುಖ್ಯಮಂತ್ರಿಗಳ ಜೊತೆಯಲ್ಲಿ ಕೇಂದ್ರದ ಮಂತ್ರಿಗಳು ಚರ್ಚೆ ಮಾಡಲಿ ಆಮೇಲೆ ನಮ್ಮ ನಮ್ಮ ನಿಲುವು ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ ಎನ್ನುವ ಮಾತನ್ನು ಹೇಳಲಾಯಿತು. ಆಮೇಲೆ ಒಂದು ನಿರ್ಣಯವನ್ನು ನಾವೆಲ್ಲಾ ಸೇರಿ ಮಾಡಿದೆವು. ೧೯ನೇ ತಾರೀಖು ಮದ್ರಾಸ್‌ನಲ್ಲಿ ಬೈಲ್ಯಾಟರಲ್ ಡಿಸ್ಕಷನ್ ಆಗಬೇಕು, ಅದಾದಮೇಲೆ ೨೦ನೇ ತಾರೀಖು ಎಲ್ಲಾ ಮುಖ್ಯಮಂತ್ರಿಗಳು ಸೇರಿ ಚರ್ಚೆ ಮಾಡಬೇಕು ಎನ್ನುವ ನಿರ್ಣಯ ಆಯಿತು. ಅದಾಗಿಬಂದ ಮೇಲೆ ಮಾನ್ಯ ಅಧ್ಯಕ್ಷರೇ ಇದೇ ಸಂದರ್ಭದಲ್ಲಿ ನಾನು ಸ್ಪಷ್ಟಪಡಿಸುತ್ತಿದ್ದೇನೆ. ಇದು ಪಕ್ಷದ ಸಮಸ್ಯೆಯಲ್ಲ, ಇದು ರಾಜ್ಯದ ಸಮಸ್ಯೆ ಇರುವುದರಿಂದ ನಾನು ಎಲ್ಲಾ ಪಕ್ಷಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಇದರ ಬಗ್ಗೆ ನಮ್ಮ ಟೀಕೆ ಏನು ಇರಬೇಕು, ನಮ್ಮ ಧೋರಣೆ ಏನಿರಬೇಕು, ನಮ್ಮ ಕಾರ್ಯಕ್ರಮ ಏನಿರಬೇಕು ಎನ್ನುವಂತಾದ್ದನ್ನು ಹಂತ ಹಂತವಾಗಿ ನಿರೂಪಿಸುವುದಕ್ಕೆ ನಾನು ಪ್ರಯತ್ನ ಮಾಡಿದೆ. ಅಲ್ಲಿ ಮೀಟಿಂಗ್ ಆದ ತಕ್ಷಣ ಇಲ್ಲಿಗೆ ಬಂದು ಸರ್ವ ಪಕ್ಷದ ನಾಯಕರ ಸಭೆ ಕರೆಯಿಸಿದೆ. ನಾವೆಲ್ಲರೂ ೧೧ನೇ ಏಪ್ರಿಲ್‌ಗೆ ಸೇರಿದೆವು. ಆಗ ಕೇಂದ್ರದ ಮಟ್ಟದಲ್ಲಿ ಯಾವ ರೀತಿ ಚರ್ಚೆಯಾಯಿತು ಮತ್ತು ಅವರು ಏನು ಹೇಳಿದರು, ತಮಿಳುನಾಡಿನವರು ಏನು ಹೇಳಿದರು, ನಾವು ಏನು ಹೇಳಿದ್ದೇವೆ ನಮ್ಮ ನಿಲುವು ಏನು, ಪಾಂಡಿಚೇರಿ, ಕೇರಳ ರಾಜ್ಯಗಳ ನಿಲುವು ಏನಿತ್ತು ಎಂದು ಸ್ಪಷ್ಟವಾಗಿ ಎಲ್ಲಾ ವಿರೋಧಪಕ್ಷದ ನಾಯಕರುಗಳಿಗೂ ನಾನು ತಿಳಿಸಿದ್ದೇನೆ. ಇವತ್ತು ನಾನು ಬಹಳ ಅಭಿಮಾನದಿಂದ ಮತ್ತು ಸಂತೋಷದಿಂದ ಹೇಳುತ್ತಿದ್ದೇನೆ. ಆ ದಿವಸ ಎಲ್ಲಾ ವಿರೋಧಪಕ್ಷದ ನಾಯಕರು ನನ್ನ ಕರೆಗೆ ಓಗೊಟ್ಟು ಎಲ್ಲರೂ ಬಂದು ಪೂರ್ತಿಯಾಗಿ ನನ್ನ ಸರ್ಕಾರಕ್ಕೆ ಮತ್ತು ನನಗೆ ಸಹಕಾರ ನೀಡಿದ್ದಾರೆ, ಇದು ರಾಜಕೀಯ ಪ್ರಶ್ನೆಯಲ್ಲ. ಇದನ್ನು ರಾಜಕೀಯದಿಂದ ಮೇಲಿಕ್ಕೆ ಎತ್ತಿಕೊಂಡು ಈ ಪ್ರಶ್ನೆಯನ್ನು ಇತ್ಯರ್ಥ ಮಾಡಬೇಕೇ ಹೊರತಾಗಿ ಒಬ್ಬರಿಗೊಬ್ಬರು ನೀವು ಜವಾಬ್ದಾರರು ನಾವು ಜವಾಬ್ದಾರರು ಎಂದು ಬಯ್ದುಕೊಂಡು ದೋಷಾರೋಪಣೆ ಮಾಡಿದರೆ ಬಹುಶಃ ನದಿ ಪಾತ್ರದಲ್ಲಿರತಕ್ಕಂಥ ಜನರುಗಳಿಗೆ ಧಕ್ಕೆಯಾಗುತ್ತದೆ ಮತ್ತು ಕರ್ನಾಟಕಕ್ಕೂ ತೊಂದರೆಯಾಗುತ್ತದೆ ಎಂದು ಎಲ್ಲರೂ ಒಪ್ಪಿಕೊಂಡರು. ಆಪ್ರೊತ್ತಿನ ದಿವಸ, ಸುಪ್ರೀಂ ಕೋರ್ಟ್‌ನವರು ೨೪ನೇ ತಾರೀಖಿನೊಳಗೆ ಏನಾದರೂ ನಿರ್ಣಯಕ್ಕೆ ಬರಬಹುದೆಂದು ನಮಗೆ ಭಯ ಇತ್ತು. ಆಗ ೨೪ನೇ ತಾರೀಖಿನೊಳಗೆ ಸರ್ವ ಪಕ್ಷದ ನಾಯಕರುಗಳು ಮತ್ತು ಪಾರ್ಲಿಮೆಂಟಿನ ಸದಸ್ಯರುಗಳು ಸೇರಿ ಪ್ರಧಾನ ಮಂತ್ರಿಗಳಿಗೆ ಮತ್ತು ಸಂಬಂಧಪಟ್ಟ ಕೇಂದ್ರದ ನೀರಾವರಿ ಮಂತ್ರಿಗಳಿಗೆ ಒಂದು ಮೆಮೋರಾಂಡಮ್ ಕೊಡಬೇಕೆಂದು ನಿರ್ಣಯವಾಯಿತು. ಮೊದಲೇ

ನಿಗದಿಯಾಗಿದ್ದಂತೆ ನಾನು ೧೯ನೇ ತಾರೀಖು ಏಪ್ರಿಲ್‌ನಲ್ಲಿ ಮದ್ರಾಸ್‌ಗೆ ಹೋದೆ. ೧೯ನೇ ತಾರೀಖು ಏಪ್ರಿಲ್‌ಗೆ ಸೇರಬೇಕಾದ್ದರಿಂದ ೧೮ನೇ ತಾರೀಖು ಏಪ್ರಿಲ್‌ಗೆ ನಾನು ರೈಲು ಮುಖಾಂತರ ರಾತ್ರಿ ಹೊರಟ್ಟಿದೆ ರೈಲು ಹತ್ತಿ ಕಂಟೋನ್‌ಮೆಂಟ್‌ಗೆ ಬಂದಿದ್ದೆನೋ ಇಲ್ಲವೋ ಆಗ ಒಂದು ಮೆಸೇಜ್ ಬಂತು. ಮೀಟಿಂಗ್ ಕ್ಯಾನ್ಸಲ್ ಆಯಿತೆಂದು. ಆಗ ನಾನು ಮುಂದಕ್ಕೆ ಹೋಗಬೇಕೋ ಬೇಡವೋ ಎಂದು ಗೊತ್ತಾಗಲಿಲ್ಲ. ಆ ಮೇಲೆ ನಮ್ಮ ಕಚೇರಿಯವರು ವಿಚಾರಿಸಿಕೊಂಡ ಮೇಲೆ ೨೦ನೇ ತಾರೀಖು ನಡೆಯುವ ಮೀಟಿಂಗ್‌ಗೆ ಕೇಂದ್ರದ ಮಂತ್ರಿಗಳು ಬರುವುದಕ್ಕೆ ಆಗದೇ ಇರುವುದರಿಂದ ೨೦ನೇ ತಾರೀಖಿನ ಮೀಟಿಂಗ್ ಕ್ಯಾನ್ಸಲ್ ಆಗಿದೆ. ಈಗ ೧೯ನೇ ತಾರೀಖು ನಡೆಯುವ ತಮಿಳುನಾಡಿನ ಮುಖ್ಯಮಂತ್ರಿಗಳ ಜೊತೆಯ ಮೀಟಿಂಗ್ ನಡೆಯುತ್ತದೆಂದು ಹೇಳಿದ ಮೇಲೆ ನಾನು ಮದ್ರಾಸ್‌ಗೆ ಹೋದೆ. ೧೯ನೇ ತಾರೀಖು ಮದ್ರಾಸ್‌ನಲ್ಲಿ ಬಹಳ ದೀರ್ಘವಾಗಿ ಚರ್ಚೆಯಾಯಿತು. ಒಳ್ಳೆಯ ವಾತಾವರಣದಲ್ಲಿ ಚರ್ಚೆಯಾಯಿತು ನಾವು ಸ್ಪಷ್ಟವಾಗಿ ತಮಿಳುನಾಡಿಗೆ ಹೇಳಿದೆವು, ಯಾವ ರೀತಿಯಿಂದಲೂ ಇದನ್ನು ಮುಂದಕ್ಕೆ ಹಾಕಬೇಕೆನ್ನುವ ವಿಚಾರವನ್ನು ನಾವು ಮಾಡುತ್ತಿಲ್ಲ. ನಿಮಗೆ ಗೊತ್ತಿದ್ದ ಹಾಗೆ ನಮಗೆ ಬೇಕಾಗಿರುವ ಅಂಕಿ ಸಂಖ್ಯೆಗಳನ್ನು ಸೆಂಟ್ರಲ್ ವಾಟರ್ ಕಮಿಷನರ್‌ರವರು ಕೇಳಿದರೂ ಕೊಡುತ್ತಿಲ್ಲ. ಅಂಕಿ ಸಂಖ್ಯೆಗಳು ನಮ್ಮ ಹತ್ತಿರ ಇಲ್ಲವೆಂದು ಕೂಡ ಅವರು ಕಾಗದ ಬರೆದು ತಿಳಿಸುತ್ತಿದ್ದಾರೆ.

ಇಂತಹ ಪರಿಸ್ಥಿತಿಯಲ್ಲಿ ನಾನು ಯಾವ ಆಧಾರದ ಮೇಲೆ ಚರ್ಚೆ ಮಾಡಬೇಕು ಎಂದು ನಾನು ಹೇಳಿದೆ. ಅದಕ್ಕೆ ತಡೆಯುವುದಕ್ಕೆ ನಾವು ತಯಾರಾಗಿಲ್ಲ ವೈಟ್ ಮಾಡುವುದಕ್ಕೆ ತಯಾರಾಗಿಲ್ಲ ಎಂದು ನೀವು ಹೇಳುವುದಾದರೆ, ನೀವು ನಿಮ್ಮ ಡಿಮ್ಯಾಂಡ್ ಎಷ್ಟು ಎಂದು ಹೇಳಿ ನಾವು ನಮ್ಮ ಡಿಮ್ಯಾಂಡ್ ಎಷ್ಟು ಎಂದು ಹೇಳುತ್ತೇವೆ. ಅಲ್ಲಿಂದ ಟೋಟಲ್ ಈಲ್ಡ್ ಕಾವೇರಿಯಲ್ಲಿ ಎಷ್ಟಿದೆ ಏನು ಕೊರತೆ ಬರುತ್ತದೆ, ಏನು ಶಾರ್ಟ್‌ಫಾಲ್ ಇದೆ, ಅದರಲ್ಲಿ ೫೦ ಪರ್‌ಸೆಂಟ್ ನೀವು ಒಪ್ಪಿಕೊಳ್ಳಿ, ೫೦ ಪರ್‌ಸೆಂಟ್ ಕಡಿಮೆ ಮಾಡುವುದಕ್ಕೆ ನಾನು ಒಪ್ಪಿಕೊಳ್ಳುತ್ತೇನೆ ಎಂದು ಹೇಳಿದೆ. ಇವೊತ್ತು ಕೆಲವು ವಿಷಯಗಳನ್ನು ನಾವು ಇಲ್ಲಿ ಹೇಳಬಾರದು, ಅಲ್ಲಿಯೂ ಕೂಡ ಮಾನ್ಯ ಕರುಣಾನಿಧಿಯವರಿಗೆ ಬಹುಶಃ ರಾಜಕೀಯ ಒತ್ತಡ ಇತ್ತು ಎಂದು ಕಾಣಿಸುತ್ತದೆ. ಹಾಗೆಂದು ನನಗೆ ಅವರೇನೂ ಹೇಳಲಿಲ್ಲ, ಆದರೆ ನೋಡಿದಾಗ, ವಾತಾವರಣದ ಮೇಲೆ ಆ ಸಂದರ್ಭದಲ್ಲಿ ರಾಜಕೀಯ ಒತ್ತಡ ಇತ್ತು ಎಂದು ಅರ್ಥವಾಗುತ್ತಿತ್ತು. ಇಲ್ಲದೇ ಹೋಗಿದ್ದರೆ ಅವರು ಈ ವಿಚಾರವನ್ನು ಸಮಾಧಾನದಲ್ಲಿ ಇತ್ಯರ್ಥ ಮಾಡುವುದಕ್ಕೆ ಸಾಧ್ಯವ ಗುತ್ತಾ ಇತ್ತು. ಅವೊತ್ತಿನ ದಿವಸ ಅವರು ನನಗೆ ನಾಳೆ ಬೆಳಿಗ್ಗೆ ಮತ್ತೆ ಸೇರೋಣ ಈ ಬಗ್ಗೆ ವಿರೋಧ ಪಕ್ಷದ ನಾಯಕರ ಜೊತೆಯಲ್ಲಿ ನಾನು ಸಮಾಲೋಚನೆ ಮಾಡುತ್ತೇನೆ, ನೀವು ಏನೊಂದು ಪ್ರಪೋಸಲ್ಸ್ ಕೊಟ್ಟಿದ್ದೀರಿ ಅದನ್ನು ಕೂಡ ನಮ್ಮ ವಿರೋಧ ಪಕ್ಷದ ನಾಯಕರ ಜೊತೆಯಲ್ಲಿ ಪ್ರಸ್ತಾಪ ಮಾಡುತ್ತೇನೆ ಎಂದು ಹೇಳಿದರು. ಅದಕ್ಕೆ ನಾನು ಹೇಳಿದೆ ನಾಳೆ ಮಧ್ಯಾಹ್ನದವರೆಗೆ ನಾನು ಇಲ್ಲಿ ಇದ್ದೇನೆ, ಆ ಮೇಲೆ ನನಗೆ ಕೃಷ್ಣ ನದಿ ನೀರಿನ ಬಗ್ಗೆ ಚರ್ಚೆ ಮಾಡುವುದಕ್ಕೆ ತಿರುಪತಿಗೆ ಹೋಗಬೇಕಾಗಿದೆ. ತಮಗೆ ಏನಾದರೂ ಹೇಳಬೇಕಾಗಿದ್ದರೆ ನಾಳೆ ೧೦-೩೦ ರಿಂದ ೧೧ರವರೆಗೆ ದಯಮಾಡಿ ಹೇಳಿ ಎಂದು ಹೇಳಿದೆ. ಅವರೂ ಕೂಡ ಆಯಿತು ಹೇಳುತ್ತೇನೆ ಎಂದು ಹೇಳಿದರು. ಆದರೆ ದುರ್ದೈವದ ಸಂಗತಿ ಎಂದು ಹೇಳಬೇಕಾಗಿದೆ, ನಾನು ರಾತ್ರಿ ಎಲ್ಲಾ ಅವರಿಂದ ಫೋನ್ ಬರುತ್ತದೆ ಎಂದು ಹಾದಿ ನೋಡಿದೆ. ಬೆಳಿಗ್ಗೆಯೂ ಫೋನ್‌ಗಾಗಿ ಕಾದು ಕುಳಿತೆ. ಆದರೆ ಅವರಿಂದ ಫೋನ್ ಕರೆ ಬರಲೇ ಇಲ್ಲ. ಮಾನ್ಯರು ಅಸೆಂಬ್ಲಿಗೆ ಹೋಗಿ ಆ ಬಗ್ಗೆ ಡಿಕ್ಲೇರ್ ಮಾಡಿದರು 'talks have failed' ಎಂದು ಹೀಗೆ ಮಾಡಿದ್ದಾರೆ ಎಂದು ಕೆಲವು ಪತ್ರಿಕರ್ತರು ಹೇಳಿದರು. ಅದಕ್ಕೆ ನಾನು ಹೇಳಿದೆ, ಇದು ನಿಜವಾಗಿಯೂ ದುರ್ದೈವದ ಸಂಗತಿ ಬಹುಶಃ ಚರ್ಚೆ ಮೂಲಕ ಈ ಕುರಿತು ಏನಾದರೂ ಒಂದು ಇತ್ಯರ್ಥಕ್ಕೆ ಬರುವುದಕ್ಕೆ ಸಾಧ್ಯತೆಗಳು ಇದ್ದವು ಎನ್ನುವಂಥ ಒಂದು ವಾತಾವರಣವು ನಿನ್ನೆಯ ಸಂದರ್ಭದಲ್ಲಿತ್ತು ಆದರೆ ಆ ಮಾತುಕತೆಯ ಲಾಭ ಏನೂ ಆಗಲಿಲ್ಲ, ಪರವಾಗಿಲ್ಲ ಮುಂದೆ ಏನು ಮಾಡಬೇಕೆಂದು ವಿಚಾರ ಮಾಡೋಣ ಎಂದು ಹೇಳಿ ಅಲ್ಲಿಂದ ನಾನು ಬಂದುಬಿಟ್ಟೆ. ಮೊದಲೇ ನಿಗದಿ ಮಾಡಿದ ಹಾಗೆ ಕೇವಲ ನಾಲ್ಕು ದಿವಸಗಳು ಉಳಿದಿದ್ದು ಅದರೊಳಗಾಗಿ ನಾವು ಡೆಲ್ಲಿಗೆ ಹೋಗಬೇಕಾಗಿತ್ತು. ೨೪ನೇ ತಾರೀಖಿಗೆ ಡೆಲ್ಲಿಯಲ್ಲಿ ಕೇಂದ್ರ ಸರಕಾರದ ನಿಲುವು ಈ ಬಗ್ಗೆ ಏನು? ಎನ್ನುವುದನ್ನು ಕೂಡ ತಿಳಿಯಬೇಕಾಗಿದ್ದು ಅದು ಬಹಳ ಮಹತ್ವವುಳ್ಳ ವಿಚಾರವಾಗಿತ್ತು. ಸುಪ್ರೀಂ ಕೋರ್ಟ್‌ನ ನಿರ್ಣಯವು ಅವರ ಮೇಲೆ ಬಹಳಮಟ್ಟಿಗೆ ನಿರ್ಭರವಾಗುತ್ತದೆ ಆದುದರಿಂದ 'ವಿಷಯಕ್ಕೆ ಬಹಳ ಮಹತ್ವ ಇದೆ. ನಾವು ಅದನ್ನು ತಿಳಿದುಕೊಂಡು ವಿರೋಧ ಪಕ್ಷದ ನಾಯಕರಿಗೆ ಹೇಳಿದೆ, ನಾವುಗಳು ೨೨ನೇ ತಾರೀಖಿಗೆ ಡೆಲ್ಲಿಗೆ ತಲುಪಬೇಕಾಗಿದೆ. ೨೩ಕ್ಕೆ ಭೇಟಿ ಮಾಡುವುದಕ್ಕೆ ವಿನಂತಿಸಿಕೊಂಡು ನಾನು ಪ್ರಧಾನ ಮಂತ್ರಿಯವರಿಗೆ ಕೇಳಿಕೊಂಡಿದ್ದೇನೆ, ಅದಕ್ಕಾಗಿ ತಾವುಗಳು ಬರಬೇಕೆಂದು ಕೇಳಿಕೊಂಡ ಪ್ರಕಾರ, ೨೨ನೇ ತಾರೀಖಿಗೆ

ಅನೇಕ ಮಾನ್ಯ ಸದಸ್ಯರು, ವಿರೋಧ ಪಕ್ಷದ ನಾಯಕರು ನನ್ನ ಜೊತೆಗೆ ಬಂದರು. ಆ ಪ್ರಕಾರ ೨೨ನೇ ತಾರೀಖು ನಾವು, ನಮ್ಮ ಪಾರ್ಲಿಮೆಂಟ್ ಸದಸ್ಯರು ಎಲ್ಲರೂ ಸೇರಿ ಕರ್ನಾಟಕ ಭವನದಲ್ಲಿ ಚರ್ಚಿಸಿ ಒಂದು ನಿರ್ಣಯ ಮಾಡಿದ್ದೇವೆ. ಪ್ರಧಾನ ಮಂತ್ರಿಯವರನ್ನು ಭೇಟಿ ಮಾಡಿ. ಮೆಮೋರಾಂಡಂ ಕೊಡುವುದು ಎಂದು ನಿಶ್ಚಯಿಸಿದ್ದೆವು. ೨೩ ರಂದು ಬೆಳಿಗ್ಗೆ ೯-೦೦ಗಂಟೆಗೆ ಪ್ರಧಾನ ಮಂತ್ರಿಯವರು ನಮಗೆ ಸಂದರ್ಶನದ ಸಮಯವನ್ನು ಕೊಟ್ಟಿದ್ದರು. ಆದರೆ ಬೆಳಿಗ್ಗೆ ವರ್ತಮಾನ ಬಂತು ಪ್ರಧಾನ ಮಂತ್ರಿಯವರ ಆರೋಗ್ಯ ಸರಿಯಾಗಿಲ್ಲವಾದ ಕಾರಣ ನಿಗದಿತ ಸಮಯದಲ್ಲಿ ಭೇಟಿ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಬಹುಶಃ ಅವರ ಭೇಟಿ ಮಾಡುವುದಕ್ಕೆ ನಮಗೆ ಆಗುತ್ತದೆಯೋ ಇಲ್ಲವೋ ಎಂಬ ಒಂದು ಪರಿಸ್ಥಿತಿಯು ಆಗ ಉದ್ಭವವಾಗಿತ್ತು. ನಮಗೆ ಆದ ಚಿಂತೆ ಏನು ಅಂದರೆ, ೨೩ಕ್ಕೆ ಅವರನ್ನು ಭೇಟಿ ಮಾಡುವುದಕ್ಕೆ ಆಗದಿದ್ದರೆ ೨೪ಕ್ಕೆ ಕೇಸ್ ಬಂದೇ ಬರುತ್ತದೆ, ಆ ಮೇಲೆ ಭೇಟಿ ಆಗಿ ಏನು ಪ್ರಯೋಜನ ಇಲ್ಲ ಭೇಟಿ ಆಗುವುದಿದ್ದರೆ ಅದರೊಳಗಾಗಿ ಭೇಟಿಯಾಗ ಬೇಕೆಂದು ವಿಚಾರ ಮಾಡಿದ್ದೆವು, ಆಗ ಬಹಳ ಮಟ್ಟಿಗೆ ಪ್ರಯತ್ನ ಮಾಡಿದಾಗ ಸಾಯಂಕಾಲ ೬ ಗಂಟೆಗೆ ನೀವು ಬಂದು ಭೇಟಿಯಾಗಬಹುದು ಎಂದು ಪ್ರಧಾನ ಮಂತ್ರಿಯವರಿಂದ ಸಂದೇಶ ಬಂತು. ಅವೊತ್ತು ನಮ್ಮ ಜೊತೆಯಲ್ಲಿ ಬಂದಿದ್ದಂಥ ಮಾನ್ಯ ಸದಸ್ಯರುಗಳು. ಪಾರ್ಲಿಮೆಂಟ್ ಸದಸ್ಯರು, ಮತ್ತು ವಿರೋಧಪಕ್ಷದ ನಾಯಕರು ಮತ್ತು ಮಾಜಿ ಮುಖ್ಯ ಮಂತ್ರಿಗಳಾಗಿದ್ದಂಥ ಮಾನ್ಯ ಬೊಮ್ಮಾಯಿಯವರೂ, ಮಾನ್ಯ ಶ್ರೀ ರಾಮಕೃಷ್ಣ ಹೆಗಡೆಯವರು ಕೂಡ ನಮ್ಮ ಜೊತೆಗೆ ಬಂದರು. ಯೋಜನಾ ಆಯೋಗದ ಡೆಪ್ಯುಟಿ ಚೇರ್‌ಮನ್‌ರವರಾದ ರಾಮಕೃಷ್ಣ ಹೆಗಡೆಯವರು ನಮ್ಮ ಡೆಲಿಗೇಶನ್‌ನಲ್ಲಿ ಇದ್ದರು ಎಂಬುದನ್ನು ಮಾನ್ಯ ಕರುಣಾನಿಧಿಯವರು ಕಂಡೆಮ್ ಮಾಡಿದಂಥ ಸ್ಟೇಟ್‌ಮೆಂಟ್‌ನ್ನು ಪತ್ರಿಕೆಯಲ್ಲಿ ತಾವುಗಳೆಲ್ಲರೂ ನೋಡಿದ್ದೀರಿ. ನಾವೆಲ್ಲರೂ ಜೊತೆಯಲ್ಲಿ ಹೋಗಿ ಪ್ರಧಾನ ಮಂತ್ರಿಯವರಿಗೆ ಮೆಮೋರಾಂಡಂ ಕೊಟ್ಟಿದ್ದೇವೆ. ಹಾಗೆಯೇ ನಾಳೆಯ ದಿವಸ ಈ ಪ್ರಶ್ನೆ ಬರುತ್ತಾ ಇದೆ, ಇದಕ್ಕಾಗಿ ಅವರು ಅವಸರವಾಗಿ ಏನಾದರೂ ಮಾಡಬೇಕೆಂದು ವಿಚಾರ ಇಟ್ಟು ಕೊಂಡಿದ್ದಾರೆ, ಅದಕ್ಕಾಗಿ ಇದನ್ನು ದಯಮಾಡಿ ಮಾತುಕತೆಯ ಮೂಲಕ ಇತ್ಯರ್ಥ ಮಾಡಬೇಕ್ಕೆ ಹೊರತಾಗಿ ಎರಡನೆಯ ರೀತಿಯಿಂದ ಇದನ್ನು ಟ್ರಿಬ್ಯೂನಲ್‌ಗೆ ಹಾಕಬೇಕೆಂಬ ಒಂದು ತರಾತುರಿ ಏನು, ಇದೆ, ಅದು ಸಮಂಜಸವಲ್ಲ ನೀವೂ ಕೂಡ ಅಧಿಕಾರಕ್ಕೆ ಬಂದು ಕೇವಲ ನಾಲ್ಕೈದು ತಿಂಗಳುಗಳು ಮಾತ್ರ ಸಂದಿವೆ ಆದುದರಿಂದ ಇಂಥ ಒಂದು ಪ್ರಶ್ನೆಯನ್ನು ತೀವ್ರಗತಿಯಿಂದ, ಹುಬರಿಯಾಗಿ ಮಾಡತಕ್ಕಂಥಾದ್ದು ಸಾಧುವಲ್ಲ ಎಂದು ನಾವು ಒಂದು ಮೆಮೋರಾಂಡಂನ್ನು ಕೊಟ್ಟಿದ್ದೇವೆ. ಎಲ್ಲರೂ ಅದಕ್ಕೆ ಸಹಿ ಹಾಕಿದ್ದಾರೆ. ಆದರೆ ನಾವು ಏನು ನಿರ್ಣಯ ಮಾಡಿದ್ದೇವೆ, ಅದರಲ್ಲಿ ನಾವು ಕೇಂದ್ರವನ್ನು ಯಾವ ರೀತಿಯಲ್ಲಿ ವಿನಂತಿ, ಮಾಡಿಕೊಂಡಿದ್ದೇವೆ ಎನ್ನುವುದನ್ನು ತಮ್ಮ ಗಮನಕ್ಕೆ ತರುತ್ತಾ ಇದ್ದೇನೆ. ಕೊನೆಯ ಪ್ಯಾರದಲ್ಲಿ ಏನು ಹೇಳಿದ್ದೇವೆ ಎಂದರೆ in view of the above we earnestly request you to take the following action.

1. Inform the Supreme Court on 24th April 1990 when the writ petitions come up for hearing that the Centre is cotninuing negotiations and is of the firm opinion that the matter can be settled through negotiations.

2. To inform the Court that the Centre is considering the constitution of a technical fact finding committee to collect essentail data to aid negotiations.

3. To incorporate specilic guidelinee, objectives and principles in the national water policy for sharing of water of inter-state rivers and to amend the Inter States Water Disputes Act, 1956 including the above objectives and principles,

4. To order for the clearance of the on going projects in the Cauvery basin in Karnataka.

ನಾವು ೨೨ನೇ ತಾರೀಖು ಈ ರೀತಿ ಮೆಮೋರಾಂಡಂ ಕೊಟ್ಟೆವು. ಒಂದು ವಿಚಾರವನ್ನು ಇವತ್ತು ವಿಷಾದದಿಂದ ಹೇಳಬೇಕಾಗುತ್ತದೆ. ಏನೆಂದರೆ ಕೇಂದ್ರ ಸರ್ಕಾರದವರೇ ಒಪ್ಪಿ ೨೦ನೇ ತಾರೀಖು ಮದ್ರಾಸ್‌ನಲ್ಲಿ ಮೀಟಿಂಗ್ ಇಟ್ಟರು ಇದುವರೆಗೂ ನಾವು ಸ್ಪಷ್ಟವಾಗಿ ಹಂತಹಂತವಾಗಿ ನಮ್ಮ ಧೋರಣೆ ಏನು ಇದೆ ಅದು ಡಿಲೇಯಿಂಗ್ ಟ್ಯಾಕ್ಟಿಕ್ಸ್ ಅಲ್ಲ ಎಂದು ಹೇಳಿದ್ದೇವೆ, ಕುಂಟು ನೆಪ ಹಾಕಿ

ಮುಂದುವರಿಸಬೇಕೆಂದು ನಾವು ಇಲ್ಲ. ಅವರು ೨೦ನೇ ತಾರೀಖು ಮದ್ರಾಸ್‌ನಲ್ಲಿ ಮೀಟಿಂಗ್ ಇಟ್ಟರು ಅದಕ್ಕೆ ಕೇಂದ್ರ ಮಂತ್ರಿಗಳೇ ಬರಲಿಲ್ಲ. ಆ ಮೇಲೆ ಈ ಮೆಮೋರ್‍ಯಾಂಡಮ್‌ನ್ನು ನಾವು ಸಲ್ಲಿಸಲೆಂದು ಯಾವತ್ತು ತೆಗೆದುಕೊಂಡು ಹೋದೆವೋ ಆವತ್ತು ಪ್ರಧಾನಮಂತ್ರಿಗಳಿಗೆ ಹುಷಾರಿಲ್ಲವೆಂದು ಹೇಳಲಾಗಿ ಅವತ್ತು ಸಂಜೆಗೆ ಭೇಟಿ ಮಾಡಬಹುದು ಎಂದು ತಿಳಿಸಲಾಯಿತು. ಸರಿ ನಾವು ಮಧ್ಯಾಹ್ನಕ್ಕೆ ಕೇಂದ್ರ ನೀರಾವರಿ ಸಚಿವರನ್ನಾದರೂ ಭೇಟಿ ಆಗೋಣ ಅವರು ಕಠೋರಿಯಾ ಇರಬಹುದು. ಪಾಪ ಅವರೂ ಹೊಸಬರು. ಈ ಸಮಸ್ಯೆಗಳ ಪರಿಚಯ ಇರುವುದಿಲ್ಲ ಎಂದು ಕೊಂಡು ನಾವೆಲ್ಲ ಹೋದೆವು. ನಾವು ಅವರನ್ನು ೨೦ನೇ ತಾರೀಖು ಮೀಟಿಂಗ್ ಕರೆದು ಏಕೆ ಕ್ಯಾನ್ಸಲ್ ಮಾಡಿದಿರಿ. ನಮಗೆ ಕಾರಣವನ್ನು ತಿಳಿಸಲಿಲ್ಲ. ಈಗ ಮೀಟಿಂಗ್ ಕರೆಯುತ್ತೀರೋ ಇಲ್ಲವೋ ಎಂದು ಕೇಳಿದೆವು. ಅಲ್ಲದೆ ೫ನೇ ಏಪ್ರಿಲ್‌ನಲ್ಲಿ ನಡೆದ ಮೀಟಿಂಗ್ ನಲ್ಲಿ ೨೦ನೇ ತಾರೀಖು ಸೇರಬೇಕೆಂದು ನಿರ್ಣಯವಾಗಿತ್ತು. ಎಲ್ಲಾ ಮುಖ್ಯಮಂತ್ರಿಗಳು ಮದ್ರಾಸ್‌ನಲ್ಲಿ ಮೀಟಿಂಗ್ ಮಾಡಬೇಕೆಂದು ನಿರ್ಣಯ ಮಾಡಿ ಅದು ಕ್ಯಾನ್ಸಲಾದ ಮೇಲೆ ಇನ್ನೊಂದು ಡೇಟಿಗೆ ಕರೆಯಬೇಕಲ್ಲ. ಈಗ ನೀವು ಯಾವಾಗ ಮೀಟಿಂಗ್ ಕರೆಯಲು ಅನುಕೂಲವಾಗುತ್ತದೆ ಎಂಬುದನ್ನು ತಿಳಿಸಿದರೆ ನಮಗೆ ಆವೊತ್ತಿಗೆ ಬರುವುದಕ್ಕೆ ಆಗುತ್ತದೋ ಇಲ್ಲವೋ ತಿಳಿಸುತ್ತೇವೆ ಎಂದು ಹೇಳಿ ಬಂದೆವು. ಇಲ್ಲಿಗೆ ಬಂದ ಮೇಲೆ ಪೋಸ್ಟ್‌ಪೋನ್ ಮಾಡಿದ ಮೀಟಿಂಗ್‌ನ್ನು ೧೦ ನೇ ತಾರೀಖು ಇಟ್ಟುಕೊಂಡಿದ್ದೇವೆ. ಮೇ ತಿಂಗಳಲ್ಲಿ ನೀವು ಡೆಲ್ಲಿಗೆ ಬನ್ನಿ ಎಂದು ಟೆಲೆಕ್ಸ್ ಮೆಸೇಜ್ ಬಂತು. ಅದಕ್ಕೆ ನಾನು ಅವತ್ತೇ ೧೦ನೇ ತಾರೀಖು ಆಗುವುದಿಲ್ಲ ಏಕೆಂದರೆ ಪ್ರಧಾನ ಮಂತ್ರಿಗಳು ಮೊದಲಬಾರಿಗೆ ೧೦ನೇ ತಾರೀಖು ರಾಜ್ಯಕ್ಕೆ ಪ್ರವಾಸ ಬರುತ್ತಿದ್ದಾರೆ ಆದ್ದರಿಂದ ನಾವು ಇಲ್ಲಿಂದ ಬರುವುದಕ್ಕೆ ಆಗುವುದಿಲ್ಲ ಒಂದು ವೇಳೆ ಲೇಟಾಯಿತು ಎಂದರೆ ಬೇಕಾದರೆ ೮ನೇ ತಾರೀಖೇ ಮೀಟಿಂಗನ್ನು ಇಟ್ಟುಕೊಳ್ಳಿ, ನಾವು ಡಿಲೇಯಿಂಗ್ ಟ್ಯಾಕ್ಟಿಕ್ಸ್ ಮಾಡುತ್ತಿದ್ದೇವೆ ಎಂದು ಗೂಬೆ ಕೂರಿಸಬೇಡಿ, ಲೇಟಾದರೂ ಪರವಾಗಿಲ್ಲ ಎಂದರೆ ೧೫ನೇ ತಾರೀಖಿಗೆ ಇಟ್ಟುಕೊಳ್ಳಿ ನಾವೆಲ್ಲರೂ ಅದಕ್ಕೆ ಬರುತ್ತೇವೆ ಅಥವಾ ದಕ್ಷಿಣ ರಾಜ್ಯಗಳ ಮುಖ್ಯಮಂತ್ರಿಗಳೆಲ್ಲಾ ಇಲ್ಲೇ ಇರುವುದರಿಂದ ಬೆಂಗಳೂರಿನಲ್ಲೇ ಮೀಟಿಂಗ್ ವ್ಯವಸ್ಥೆ ಮಾಡುವುದಕ್ಕೆ ತಯಾರಾಗಿದ್ದೇವೆಂದೂ ಟೆಲೆಕ್ಸ್ ಮೆಸೇಜ್ ಕೊಟ್ಟೆವು. ಹೀಗಾಗಿ ಈ ವಿಷಯವನ್ನು ದುರ್ದೈವದ ಡೆವಲಪ್‌ಮೆಂಟ್ ಎಂದು ಏಕೆ ಹೇಳಿದೆನೆಂದರೆ ದಕ್ಷಿಣದ ಎಲ್ಲಾ ರಾಜ್ಯಗಳ ಮುಖ್ಯಮಂತ್ರಿಗಳು ನಿರ್ಣಯ ಮಾಡಿದ ತಾರೀಖಿನಲ್ಲಿ ಮೀಟಿಂಗ್ ಕರೆಯಲಿಲ್ಲ. ಮುಂದೆ ನಾವು ಮೆಮೋರ್‍ಯಾಂಡಮ್ ಕೊಡುವಾಗ ಇನ್ನೂ ನೆಗೋಷಿಯೇಷನ್ ನಡೆಯುತ್ತಿದೆ ಅದಕ್ಕಾಗಿ ಇದನ್ನು ಇತ್ಯರ್ಥ ಮಾಡಬೇಡಿ ಎಂದು ಸುಪ್ರೀಂಕೋರ್ಟಿಗೆ ಹೇಳಿ ಎಂದು ಹೇಳಿದೆವು. ಅವರು ಅದನ್ನು ಮಾಡಲಿಲ್ಲ. ೨೪ನೇ ತಾರೀಖು ಆರ್ಗ್ಯುಮೆಂಟ್ ಆಯಿತು, ಜಡ್ಜ್‌ಮೆಂಟ್ ಬಂದಿದೆ ಅದರಲ್ಲಿ ಕೇಂದ್ರದ ಧೋರಣೆ ಬಗ್ಗೆ ಏನು ಹೇಳಿದ್ದಾರೆ ಎನ್ನುವುದನ್ನು ಮಾತ್ರ ಇಲ್ಲಿ ಓದುತ್ತೇನೆ. ಇಲ್ಲಿ ಕೇಂದ್ರ ಸರ್ಕಾರದ ನಿಲುವೇನು ಏನು ಇತ್ತು ರಾಜ್ಯಸರ್ಕಾರಗಳ ನಿಲುವು ಏನು ಇತ್ತು ಎನ್ನುವುದನ್ನು ಡಿಟೈಲ್ ಆಗಿ ಹೇಳಿದ್ದಾರೆ. ಇಲ್ಲಿ ಕೇಂದ್ರ ಸರ್ಕಾರದ ಸ್ಟ್ಯಾಂಡ್ ಏನು ಎಂದು ಜಡ್ಜ್‌ಮೆಂಟ್‌ನಲ್ಲಿ ಹೇಳಿದ್ದಾರೆ.

> "Mr Goswami, Learned Additional Solicitor General, appearing for the Union of India informed us on the 25th April 1990 in the presence of the Counsel for the other Parties that the Central Government did not want to undertake any further negotiations and left the matter for disposal by the Court."

ಮೀಟಿಂಗ್ ನೋಟೀಸ್ ಕೊಟ್ಟು ಮೀಟಿಂಗ್ ಕರೆದಿದ್ದರು ಆದರೆ ಅದು ನಡೆಯಲಿಲ್ಲ. ಅಲ್ಲಿಂದ ಎಲ್ಲಾ ರಾಜ್ಯ ಮುಖ್ಯಮಂತ್ರಿಗಳು ನಿರ್ಣಯವನ್ನು ಮಾಡಿ ಮೀಟಿಂಗ್ ಮಾಡಲಾರದೆ ಅದರ ಮೇಲೆ ನಾವು ಮೆಮೋರಾಂಡಮನ್ನು ಕೊಟ್ಟಿದ್ದೇವೆ. ಎಲ್ಲಾ ವಿರೋಧ ಪಕ್ಷದ ನಾಯಕರು ಮತ್ತು ನಾನು ಸೇರಿ ಮೆಮೋರಾಂಡಮನ್ನು ಕೊಟ್ಟಿದ್ದೇವೆ. ಈ ಮೆಮೋರಾಂಡಮ್‌ನಲ್ಲಿ ನಾವೇನು ರಿಕ್ವೆಸ್ಟ್ ಮಾಡಿದ್ದೇವೆ ಎಂದು ಹೇಳಿದರೆ "to inform the Supreme Court on 24th April 1990 when the writ petitions come up for hearing that the Centre in continuing the negotiation and is of the firm opinion that the matter can be settled through negotiations." ಈ ರೀತಿ ನಾವು ರಿಕ್ವೆಸ್ಟ್ ಮಾಡಿದ್ದೇವೆ ಅದರ ಪ್ರಕಾರ ಅವರು ಇನ್ನೊಂದು ಮೀಟಿಂಗನ್ನು ಕರೆದಿದ್ದಾರೆ. ೧೦ನೇ ತಾರೀಖಿಗೆ ಮೀಟಿಂಗ್‌ನ್ನು ಕರೆದು ಅಲ್ಲಿ ಸಾಲಿಸಿಟರ್ ಜನರಲ್‌ರವರು ಏನು ಹೇಳುತ್ತಾರೆ ಎಂದರೆ "Mr Goswarmi, the Learned Additional Solicitor General, appearing for the Union of India,

informed us on the 25th April 1990 in the presence of the Counsel for the other Parties that the Central Govt. did not want to undertake any further negotiations and left the matter for disposal by the Court'' ಇದನ್ನು ಅವರು ನಮಗೆ ಹೇಳಬಹುದಾಗಿತ್ತು. ಮತ್ತು ನಾವು ಪ್ರಧಾನಮಂತ್ರಿಯವರ ಹತ್ತಿರ ಮೆಮೋರಾಂಡಂನ್ನು ತೆಗೆದುಕೊಂಡು ಹೋದಾಗ ಅವರು ಹೇಳಬಹುದಾಗಿತ್ತು. ಇದು ಆಗುವ ಹಾಗೆ ಇಲ್ಲ, ಈ ರೀತಿ ನಿರ್ಣಯವನ್ನು ಮಾಡಿದ್ದೇವೆ. ನೆಗೋಷಿಯೇಷನ್ ಮಾಡುವುದಕ್ಕಾಗುವುದಿಲ್ಲ ಎನ್ನುವ ಮಾತನ್ನು ಅವರೇ ಹೇಳಬಹುದಾಗಿತ್ತು. ಮತ್ತು ಆದೇ ಮಧ್ಯಾಹ್ನ ನೀರಾವರಿ ಮಂತ್ರಿಗಳ ಹತ್ತಿರ ಹೋಗಿದ್ದೆವು. ಈಗ ಮೀಟಿಂಗ್ ಆಗಿಲ್ಲ ಮತ್ತೆ ಮೀಟಿಂಗನ್ನು ಕರೆಯುತ್ತೇವೆ ಇಂಥ ದಿವಸ ಮೀಟಿಂಗನ್ನು ಕರೆಯುತ್ತೇವೆ ಎಂದು ಹೇಳಿ ಒಂದು ಕಡೆ ಮೀಟಿಂಗ್ ಕರೆಯುವುದಕ್ಕೆ ನೋಟೀಸನ್ನು ಕೊಟ್ಟಿದ್ದಾರೆ, ಮತ್ತು ಮೀಟಿಂಗ್ ತಾರೀಖನ್ನು ನಿಗದಿ ಮಾಡಿದ್ದಾರೆ. ಇನ್ನೊಂದು ಕಡೆ ನಾವು ಇನ್ನು ಮುಂದೆ ಯಾವ ತರಹದ ನೆಗೋಷಿಯೇಷನ್ಸ್‌ನ್ನು ಮಾಡುವುದಕ್ಕಾಗುವುದಿಲ್ಲ, ಸುಪ್ರೀಂ ಕೋರ್ಟ್‌ನವರು ಏನು ನಿರ್ಣಯವನ್ನು ಮಾಡುತ್ತಾರೋ ಅದನ್ನು ಒಪ್ಪಿಕೊಳ್ಳೋಣ ಎನ್ನತಕ್ಕಂಥ ಒಂದು ನಿಲುವೆಯನ್ನು ಕೇಂದ್ರ ಸರ್ಕಾರದವರು ತೆಗೆದುಕೊಂಡಿದ್ದಾರೆ. ಇದು ನಿಜವಾಗಿಯೂ ಇದು ದುರದೃಷ್ಟಕರ ಇಂಥ ನಿಲುವೆಯನ್ನು ಅವರು ತೆಗೆದುಕೊಳ್ಳಬಾರದಾಗಿತ್ತು ಮತ್ತು ಇದು ಒಂದು ಕನ್‌ಸಿಸ್ಟೆಂಟ್ ಸ್ಟ್ಯಾಂಡ್ ಅಲ್ಲ. ಒಂದು ಕಡೆ ನೆಗೋಷಿಯೇಷನ್ಸ್ ಎಂದು ಹೇಳಿದರೆ ಇನ್ನೊಂದು ಕಡೆ ಸುಪ್ರೀಂ ಕೋರ್ಟ್‌ನಲ್ಲಿ ಇನ್ನೊಂದು ಹೇಳುತ್ತಾರೆ. ಇನ್ನೊಂದು ಕಡೆ ಎಲ್ಲಾ ಮುಖ್ಯಮಂತ್ರಿಗಳ ಸಭೆ ಎಂದು ಹೇಳಿ ಅಲ್ಲಿ ಒಂದು ಸ್ಟ್ಯಾಂಡ್ ತೆಗೆದುಕೊಂಡಿದ್ದಾರೆ. ಇದರ ಬಗ್ಗೆ ಹೆಚ್ಚಿಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ ಈ ಒಂದು ಸಮಸ್ಯೆ ಬಹಳ ಸೂಕ್ಷ್ಮವಾದ ಸಮಸ್ಯೆ, ಜಟಿಲವಾದಂಥ ಸಮಸ್ಯೆ ಇರುವುದರಿಂದ ಇದರ ಬಗ್ಗೆ ಹೆಚ್ಚಿಗೆ ಏನು ಹೇಳುವುದಕ್ಕೆ ಹೋಗುವುದಿಲ್ಲ.

೧೨-೦೫ ಪಿ.ಎಂ.

ಅಲ್ಲಿಂದ ಅವರು ೪ನೇ ಮೇ ನಲ್ಲಿ ಜಡ್ಜ್‌ಮೆಂಟ್ ಕೊಟ್ಟಿದ್ದಾರೆ. ಅದರ ಪ್ರಕಾರ ಕೇಂದ್ರ ಸರ್ಕಾರಕ್ಕೆ ಒಂದು ಡೈರೆಕ್ಟಿವ್ ಕೊಟ್ಟರು. ನೀವು ಒಂದು ತಿಂಗಳೊಳಗೆ ಟ್ರಿಬ್ಯೂನಲ್ ಮಾಡಬೇಕೆಂದು ಅವರು ಒಂದು ಡೈರೆಕ್ಟಿವ್ ಕೊಟ್ಟರು ಅದಾದಮೇಲೆ ನಾವು ಮತ್ತೆ ಇಲ್ಲಿ ಎಲ್ಲಾ ವಿರೋಧ ಪಕ್ಷದ ನಾಯಕರುಗಳನ್ನು ಎರಡು ಸಲ ಮೀಟಿಂಗಿಗೆ ಕರೆದೆ. ಸುಪ್ರೀಂ ಕೋರ್ಟಿನವರು ಈ ರೀತಿಯ ಒಂದು ನಿರ್ಣಯನ್ನು ಮಾಡಿದ್ದಾರೆ. ಈಗ ನಾವು ಏನು ಮಾಡಬೇಕೆಂಬುದರ ವಿಚಾರದ ಸಲುವಾಗಿ ೯-೫-೯೦ ರಂದು ನಾನು ಆಲ್‌ಪಾರ್ಟಿಲೀಡರ್ಸ್ ಮೀಟಿಂಗ್ ಮಾಡಿದ್ದೇನೆ, ಮತ್ತೆ ಕೆಲವು ಸಮಸ್ಯೆಗಳು ಬಂದಿದ್ದು, ೧೨-೫-೯೦ರಂದು ಮತ್ತೊಂದು ಆಲ್‌ಪಾರ್ಟಿ ಲೀಡರ್ಸ್ ಮೀಟಿಂಗನ್ನು ಮಾಡಿದ್ದೇನೆ. ಎಲ್ಲಾ ಪಕ್ಷದ ನಾಯಕರುಗಳು ಈ ಮೀಟಿಂಗಿಗೆ ಬಂದಿದ್ದರು. ಅಲ್ಲಿ ನಾವು ಒಂದು ನಿರ್ಣಯಕ್ಕೆ ಬಂದೆವು ನಾವು ಒಂದು ರಿವ್ಯೂ ಪಿಟಿಷನ್ ಹಾಕೋಣ. ಇವತ್ತು ಈ ರಿವ್ಯೂ ಪಿಟಿಷನ್ ಹಾಕಬೇಕೆಂದು ಅನೇಕ ರೀತಿಯಿಂದ ಬೇಡಿಕೆಗಳು ಬರುತ್ತಿವೆ. ನಾವು ರಿವ್ಯೂಪಿಟಿಷನ್ ಹಾಕದಿದ್ದರೆ ನಾಳೆಜನಗಳಿಗೆ ಬೇರೆರೀತಿಯ ಭಾವನೆ ಬರಬಹುದು. ರಿವ್ಯೂ ಪಿಟಿಷನ್ ಹಾಕಿದ್ದರೆ, ನಮ್ಮ ಕೇಸ್ ಹಾಳಾಗುತ್ತಿರಲಿಲ್ಲ, ಇವರು ರಿವ್ಯೂ ಪಿಟಿಷನ್ ಹಾಕದೆ ಇರುವುದರಿಂದ ಈ ರೀತಿ ಆಯಿತೆಂಬ ಭಾವನೆ ನಾಳೆ ಬರಬಾರದೆಂಬ ಉದ್ದೇಶದಿಂದ ನಾವೆಲ್ಲರೂ ಸೇರಿ ರಿವ್ಯೂ ಪಿಟಿಷನ್ ಹಾಕಬೇಕೆಂದು ನಿರ್ಣಯ ಮಾಡಿದೆವು. ನಮ್ಮ ಆಡ್ವೋಕೇಟ್ ರವರು ಏನು ಹೇಳಿದರು ಅದನ್ನೆಲ್ಲಾ ಕೂಲಂಕುಷವಾಗಿ ಚರ್ಚೆ ಮಾಡಿದಮೇಲೆ ಕೊನೆಗೆ ರಿವ್ಯೂ ಪಿಟಿಷನ್ ಹಾಕಬೇಕೆಂದು ನಿರ್ಣಯ ಮಾಡಿದೆವು. ಅದೇ ರೀತಿಯಿಂದ ರಿವ್ಯೂ ಪಿಟಿಷನ್ ಅನ್ನು ೧೬-೫-೯೦ ರಂದು ನಮ್ಮ ಆಡ್ವೋಕೇಟ್ ಅವರು ಫೈಲ್ ಮಾಡಿದ್ದಾರೆ. ನಮ್ಮ ಲಾ ಡಿಪಾರ್ಟ್‌ಮೆಂಟ್ ಆಫೀಸರ್‌ರವರು ಮುಂತಾದವರೆಲ್ಲರೂ ಹೋಗಿ ಇದನ್ನು ಆ ತಾರೀಖಿನೊಳಗಾಗಿ ಹಾಕಿದರು. ಆದರೆ ಪರಿಸ್ಥಿತಿ ದುರಾದೃಷ್ಟವಶಾತ್ ಏನಾಗಿದೆಯೆಂದರೆ ನಾವು ಯಾವಾಗ ರಿವ್ಯೂ ಪಿಟಿಷನ್ ಹಾಕಿದೆವು, ಆಗ ಸುಪ್ರೀಂ ಕೋರ್ಟಿಗೆ ವೆಕೇಷನ್ ರಜ ಪ್ರಾರಂಭವಾಯಿತು ಸುಪ್ರೀಂ ಕೋರ್ಟಿನಲ್ಲಿ ವೆಕೇಷನ್ ಜಡ್ಜ್‌ಸ್‌ಗಳನ್ನು ಬಿಟ್ಟರೆ ಬೇರೆಯಾರೂ ಆ ವೇಳೆಯಲ್ಲಿ ಇರುವುದಿಲ್ಲ. ನಮ್ಮ ಕಾನೂನು ತಜ್ಞರು ಏನು ಹೇಳುತ್ತಾರೆಂದರೆ ಈ ರಿವ್ಯೂ ಪಿಟಿಷನ್‌ನ್ನನ್ನು ಪರಿಶೀಲನೆಗೆ ತೆಗೆದುಕೊಳ್ಳಬೇಕೆಂದರೆ ಯಾರು ಜಡ್ಜ್‌ಮೆಂಟ್ ಕೊಟ್ಟಿದ್ದಾರೆ, ಅದೇ ಜಡ್ಜ್‌ಸ್‌ಗಳು ಇದನ್ನು ಪರಿಶೀಲನೆಗೆ ತೆಗೆದುಕೊಳ್ಳಬೇಕೆಂದು ಹಾಗೂ ಇದು ಎರಡನೆಯವರ ಮುಂದೆ ಹೋಗುವುದಿಲ್ಲವೆಂದು ಹೇಳುತ್ತಾರೆ. ಇನ್ನು ನಮಗೆ ಜಡ್ಜ್‌ಮೆಂಟ್ ಕೊಟ್ಟ ಆ ಜಡ್ಜ್‌ಸ್‌ಗಳು ಎಲ್ಲಿದ್ದಾರೆ? ವೆಕೇಷನ್ ಕಾಲದಲ್ಲಿ ಅವರು ಎಲ್ಲಿ ಹೋಗುತ್ತಾರೆಂಬುದು ಗೊತ್ತಿಲ್ಲ. ಇವತ್ತಿನವರೆಗೆ ನಮ್ಮ ರಿವ್ಯೂ ಪಿಟಿಷನ್ ಗತಿ ಏನಾಗಿದೆ ಎಂಬುದು ಕೂಡ ಗೊತ್ತಾಗಿಲ್ಲ. ಊನೆ ನಾನು ದೆಹಲಿಗೆ ಹೋದಾಗ ನಮ್ಮ ಪರವಾಗಿ

ಅಪಿಯರ್ ಆಗಿದ್ದ ಲಾಯರನ್ನು ಕರೆಯಿಸಿದ್ದೆ. ಅವರೂ ಸಹ ಈ ಕೇಸ್ ಏನಾಗಿದೆ ಎಂಬುದು ಗೊತ್ತಿಲ್ಲವೆಂದು ಹೇಳಿದರು. ಆ ಮೂರು ಜಡ್ಜ್‌ಸ್‌ಗಳು ದೆಹಲಿಯಲ್ಲಿ ಇಲ್ಲವೆಂದು ಹೇಳಿದರು. ಆಗ ಇನ್ನೂ ವೆಕೇಷನ್ಸ್ ಮುಗಿದಿರಲಿಲ್ಲ. ಬಹುಶಃ ಇದು ಅವರ ಮುಂದೆ ಯಾವಾಗ ಬರುತ್ತದೆಂಬುದು ಗೊತ್ತಿಲ್ಲ. ಈ ರಿವ್ಯೂ ಪಿಟಿಷನ್ ಪರಿಸ್ಥಿತಿ ಏನಾಗುತ್ತದೆಂಬುದು ಕೂಡ ಗೊತ್ತಾಗುತ್ತಿಲ್ಲ. ಇದಾದನಂತರ ಮೊನ್ನೆ ದಿವಸ ಸುಪ್ರೀಂ ಕೋರ್ಟ್‌ನ ಆದೇಶದ ಪ್ರಕಾರ ಕೇಂದ್ರ ಸರ್ಕಾರದವರು ಟ್ರಿಬ್ಯೂನಲ್ ಅನ್ನು ನೇಮಕ ಮಾಡಿದ್ದಾರೆ. ಇದನ್ನು ತಾವೆಲ್ಲರೂ ಪತ್ರಿಕೆಗಳಲ್ಲಿ ಓದಿದ್ದೀರಿ. ಈ ಪರಿಸ್ಥಿತಿಯಿಂದ ನಾವು ಮುಂದೆ ಯಾವ ರೀತಿಯಲ್ಲಿ ಸಾಗಬೇಕು ? ಯಾವ ದಿಕ್ಕಿನಲ್ಲಿ ಸಾಗಬೇಕು ? ಹಾಗೂ ಮುಂದೆ ನಾವು ಯಾವ ಹೆಜ್ಜೆಯಿಟ್ಟರೆ ಕರ್ನಾಟಕ ರಾಜ್ಯದ ಕಾವೇರಿ ನದಿಯ ಪಾತ್ರದ ಜನತೆಯ ಹಿತರಕ್ಷಣೆ ಆಗುತ್ತದೆ ಎನ್ನತಕ್ಕದ್ದನ್ನು ಇವತ್ತು ಬಹಳ ಕೂಲಂಕುಷವಾಗಿ ಗಂಭೀರವಾಗಿ ವಿಚಾರ ಮಾಡುವಂತಹ ಒಂದು ಪರಿಸ್ಥಿತಿಯಲ್ಲಿ ಇದ್ದೇವೆ.. ಈಗ ಒಂದು ವಿಚಾರ ಹೇಳಬೇಕೆಂದರೆ, ಒಂದು ಭಾವನೆ ಹೊರಗಡೆಯಿದೆ. ಈ ಕಾವೇರಿ ಜಲ ವಿವಾದ ಈ ಘಟ್ಟಕ್ಕೆ ಬಂದು ನಿಂತಾಗ ಈ ಸದನದ ಸದಸ್ಯರೆಂದು ನಾನು ಹೇಳುವುದಿಲ್ಲ ಆದರೆ ಈ ಸದನದಲ್ಲಿ ನಾನಾ ರೀತಿಯಿಂದ ನಾನಾ ವಿಧದಲ್ಲಿ ಕೆಲಸ ಮಾಡಿದಂಥ ಕೆಲವು ನಮ್ಮ ಸ್ನೇಹಿತರು ಹೊರಗಡೆಯಿಂದ ಹೇಳಿಕೆಗಳನ್ನು ಕೊಡುವಂಥದ್ದನ್ನು ನಾನು ಪತ್ರಿಕೆಗಳಲ್ಲಿ ಓದಿದ್ದೇನೆ. ಅವು ಎಷ್ಟರ ಮಟ್ಟಿಗೆ ಕರ್ನಾಟಕದ ಹಿತದೃಷ್ಟಿಯಿಂದ ಸರಿಯಾಗಿದೆಯೋ ನನಗೆ ಗೊತ್ತಿಲ್ಲ. ಅದನ್ನು ನಾವು ಪರಿಶೀಲನೆ ಮಾಡೋಣ. ಆದರೆ ಅವರು ಹೇಳುವುದೇನೆಂದರೆ ''ಹೋಗಿ'' ಎಲ್ಲಾ ಮುಗಿದುಹೋಯಿತು. ಕರಾಳ ದಿವಸ, ನಾವೆಲ್ಲ ಕಾವೇರಿ ನದಿಯಲ್ಲಿ ಮುಳುಗಿ ಹೋದೆವು. ಈ ರೀತಿಯ ಹೇಳಿಕೆಗಳು ಕೆಲವು ನಾಯಕರುಗಳಿಂದ ಹೊರಗಡೆಯಿಂದ ಬರುತ್ತಿವೆ. ಇದರಿಂದ ನನಗೆ ಅನ್ನಿಸುತ್ತದೆ, ಅದು ನಮ್ಮ ಹಿತರಕ್ಷಣೆಗೆ ಅನುಕೂಲವಾಗುವುದಿಲ್ಲ, ಮತ್ತು ಪ್ರತಿಕೂಲವಾಗುತ್ತದೆ. ಏತಕ್ಕೆಂದರೆ ಟ್ರಿಬ್ಯೂನಲ್ ಬೇಡವೆಂದು ಹೇಳುವುದು ಯಾವುದೇ ಭಯದಿಂದ ಅಲ್ಲ. ಕರ್ನಾಟಕದ ಮುಖ್ಯ ಮಂತ್ರಿಯಾಗಿ ಸ್ಪಷ್ಟಪಡಿಸುತ್ತಿದ್ದೇನೆ. ಮತ್ತು ಕರ್ನಾಟಕ ಸರ್ಕಾರದ ಪರವಾಗಿ ಹೇಳುತ್ತಿದ್ದೇನೆ. I am not afraid of Tribunal. ಟ್ರಿಬ್ಯೂನಲ್‌ಗೆ ಹೋಗುವುದರಲ್ಲಿ ನನಗೇನೂ ಹೆದರಿಕೆ ಇಲ್ಲ, ನಮ್ಮ ಕೇಸ್ ವೀಕ್ ಆಗಿದೆ, ಅಲ್ಲಿ ಬಿದ್ದು ಹೋಗುತ್ತದೆ ಎನ್ನುವ ಪರಿಸ್ಥಿತಿ ಏನೂ ಇಲ್ಲ. ನಾವು ಬೇಕಾದರೆ ಟ್ರಿಬ್ಯೂನಲ್ ಮುಂದೆ ಹೋಗುವುದಕ್ಕೆ ತಯಾರು ಇದ್ದೇವೆ. ಆ ಮೂರು ಜನ ಜಡ್ಜಸ್ ಏನು ಇದ್ದಾರೆ. ಅವರ ಬಗ್ಗೆ ವೈಯಕ್ತಿಕವಾಗಿ ನಾನು ಏನೂ ಹೇಳುವುದಿಲ್ಲ ಅಥವಾ ವಿರುದ್ಧವಾಗಿಯೂ ಹೇಳುವುದಿಲ್ಲ. ಏನಾದರೂ ಹೇಳುವುದಾದರೆ. ಅವರೂ ಸಹ ಎಮಿನೆಂಟ್ ಜಡ್ಜಸ್ ಇದ್ದಾರೆ. ಅವರ ಕೈಯಿಂದ ನ್ಯಾಯ ಸಿಗುತ್ತದೆ. ಅನ್ಯಾಯ ಆಗುತ್ತದೆ ಎಂದು ಹೇಳುವ ಸ್ಥಿತಿಯಲ್ಲಿ ಇಲ್ಲ, ನಾನು ಅದಕ್ಕೆ ತಯಾರೂ ಇಲ್ಲ. ಪ್ರಶ್ನೆ ಏನು ಅಂದರೆ ಟ್ರಿಬ್ಯೂನಲ್‌ಗೆ ಏಕೆ ಹೋಗುವ ಹಾಗೆ ಇಲ್ಲ ಎಂದರೆ ಟ್ರಿಬ್ಯೂನಲ್‌ಗೆ ಹೋಗುವಂತಹ ಒಂದು ಪಕ್ವತೆ ಅಥವಾ ರೈಪ್ ಈ ಕೇಸ್‌ನಿಂದ ಆಗಿದೆಯೋ ಎನ್ನುವುದು ಪ್ರಶ್ನೆ. ನಮ್ಮ ಲೆಕ್ಕದಲ್ಲಿ ಆಗಿಲ್ಲ. ಅದನ್ನು ನಾವು ಹೇಳಿದ್ದೇವೆ. ಏಕೆಂದರೆ ಟ್ರಿಬ್ಯೂನಲ್‌ಗೆ ಹೋಗಬಹುದು. ಟ್ರಿಬ್ಯೂನಲ್‌ನಲ್ಲಿ ಮೂರು ಜನ ಕುಳಿತು ಯಾವ ರೀತಿ ನದಿ ನೀರನ್ನು ಹಂಚಬೇಕು ಎಂದು ಕೇಂದ್ರ ಸರ್ಕಾರದವರು ಇದುವರೆಗೆ ಯಾವುದೇ ಗೈಡ್‌ಲೈನ್ಸ್ ಮಾಡಿಲ್ಲ. ಯಾವುದಾದರೂ ಅಂತರ್ ರಾಜ್ಯದ ನದಿಯಲ್ಲಿರುವಂತಹ ನೀರು ಸಂಬಂಧಪಟ್ಟ ರಾಜ್ಯಗಳಿಗೆ ಯಾವ ರೀತಿ ಹಂಚಬೇಕು, ಯಾವ ಪದ್ಧತಿ ಮೇಲೆ ಹಂಚಬೇಕು, ಯಾವ ಯಾರ್ಡ್‌ಸ್ಟಿಕ್ ಅಥವಾ ನಾರ್ಮ್ಸ್‌ನಲ್ಲಿ ಹಂಚಬೇಕು ಎಂಬ ಬಗ್ಗೆ ಇವೊತ್ತಿನವರೆಗೆ ಕೇಂದ್ರದ ಯಾವುದೇ ಗೈಡ್‌ಲೈನ್ಸ್ ಇಲ್ಲ. ಇದರ ಬಗ್ಗೆ ನಿರ್ಣಯ ಮಾಡಿ ಎಂದು ನಾವು ಹೇಳುತ್ತಿದ್ದೇವೆ. ಗೈಡ್ ಲೈನ್ಸ್ ಅನ್ನು ಹಾಕಿಕೊಂಡು, ಕೆಲವು ನಾರ್ಮ್ಸ್‌ಗಳನ್ನು ಫ್ರೇಂ ವರ್ಕ್ ಮಾಡಿಕೊಂಡು ನೀರನ್ನು ಹಂಚಿ ಎಂದು ನಾವು ಅವರಿಗೆ ಹೇಳಿದ್ದೇವೆ. ಇದನ್ನು ನಾವು ನಮ್ಮ ಮೆಮೋರ್‍ಯಾಂಡಮ್‌ನಲ್ಲಿಯೂ ಸಹ ಹೇಳಿದ್ದೇವೆ ಹಾಗೂ ನಾಲ್ಕನೆಯ ಏಪ್ರಿಲ್‌ನ ಮೀಟಿಂಗ್‌ನಲ್ಲಿ ಸಹ ಸ್ಪಷ್ಟವಾಗಿ ಹೇಳಿದ್ದೇವೆ. ಗೈಡ್‌ಲೈನ್ಸ್ ಇಲ್ಲ, ದುರ್ದೈವ ಎಂದರೆ ನೀರಿನ ಗಾತ್ರದ ಬಗ್ಗೆ ಸ್ಟ್ಯಾಟಿಸ್ಟಿಕ್ಸ್ ಸಹ ಇಲ್ಲ. ಮೊದಲನೆಯ ಸಲ 4ನೇ ಏಪ್ರಿಲ್ ಮೀಟಿಂಗ್‌ನಲ್ಲಿ ಬಹಳ ಜನ ಸೆಂಟ್ರಲ್ ವಾಟರ್ ಕಮೀಷನ್‌ನ ಅಧಿಕಾರಿಗಳು ಬಂದಿದ್ದರು. ನಾನು ಹೇಳಿದೆ, ಇದು ಎಂತಹ ಆರ್ಗನೈಸೇಷನ್ ಎಂದು. ಈ ಮಾತಿನಿಂದ ವಾಟರ್ ಕಮೀಷನ್‌ನ ಅಧಿಕಾರಿಗಳಿಗೆ ಬೇಸರ ಆಗಿರಬಹುದು. ಇಡೀ ಭರತಖಂಡದಲ್ಲಿ ರಿವರ್ ಬಗ್ಗೆ, ವಾಟರ್ ಯೀಲ್ಡ್ ಬಗ್ಗೆ, ಫ್ಲೋ ಬಗ್ಗೆ, ಯುಟಿಲೈಸೇಷನ್ ಬಗ್ಗೆ ಅಧಿಕಾರ ವಾಣಿಯಿಂದ ಹೇಳುವಂತಹ ಸಂಸ್ಥೆ ಎಂದರೆ ಅದು ಸೆಂಟ್ರಲ್ ವಾಟರ್ ಕಮೀಷನ್., ಅಲ್ಲಿ ಅಂಕಿಅಂಶಗಳು ಇಲ್ಲ. ಎಂದು ಅವರು ನಮಗೆ ಬರೆದುಕೊಟ್ಟಿದ್ದಾರೆ. We are sorry we are not in position to furnish that information ಎಂದು ಹೇಳಿದ್ದಾರೆ. ನೀವು ಯಾವ ಆಧಾರದ ಮೇಲೆ ಟ್ರಿಬ್ಯೂನಲ್ ಮಾಡಿದ್ದೀರಿ. ಇದಕ್ಕೆ ಡಾಕ್ಯುಮೆಂಟ್ಸ್ ಬೇಕು. ಸ್ಟ್ಯಾಟಿಸ್ಟಿಕ್ಸ್ ಬೇಕು ಎಂದು ನಾನು ಕೇಳಿದ ಮೇಲೆ ಅವರು ರೈಟಿಂಗ್‌ನಲ್ಲಿ ಕೊಟ್ಟಿದ್ದಾರೆ. ನಾವು ಯಾವ ಸಾಮಗ್ರಿಗಳು

ಬೇಕು, ಯಾವ ಯಾವ ಹಂತದಲ್ಲಿ ಮೆಟೀರಿಯಲ್ಸ್ ಬೇಕು ಕೊಡುವುದಕ್ಕೆ ನಾವು ತಯಾರು ಇದ್ದೇವೆ. ಅಲ್ಲಿ ಸ್ಟ್ಯಾಟಿಸ್ಟಿಕ್ಸ್ ಇಲ್ಲದಿದ್ದರೆ ಹೇಗೆ ? ಗೈಡ್‌ಲೈನ್ಸ್ ಇಲ್ಲದೆ ಇದ್ದರೆ ಟ್ರಿಬ್ಯೂನಲ್‌ನಲ್ಲಿ ಏನು ಮಾಡಬೇಕು ? ಹೇಗೆ ಕೆಲಸ ಮಾಡುವುದು ? ನನಗೆ ಒಂದು ಭಯ ಏನು ಇದೆ ಅಂದರೆ ಟ್ರಿಬ್ಯೂನಲ್ ರಚನೆ ಆದರೆ ಅದರ ತೀರ್ಮಾನ ಎಷ್ಟು ವರ್ಷ ಹಿಡಿಯುತ್ತದೆಯೋ ಗೊತ್ತಿಲ್ಲ. ಏಕೆಂದರೆ ಕೃಷ್ಣಾದ ಒಂದು ಉದಾಹರಣೆಯನ್ನು ತೆಗೆದುಕೊಂಡರೆ ಗೊತ್ತಾಗುತ್ತದೆ. ಕೃಷ್ಣಾದ ಟ್ರಿಬ್ಯೂನಲ್ ಅಂತಿಮ ತೀರ್ಮಾನ ಆಗುವುದಕ್ಕೆ ಏಳು ವರ್ಷ ಆಯಿತು. ಏಳು ವರ್ಷಗಳು ಆಯಿತು ಅಂದರೆ, ಎರಡನೆಯ ಟ್ರಿಬ್ಯೂನಲ್‌ಗಳು ಗೋದಾವರಿ ಹಾಗೂ ನರ್ಮದಾ ಹತ್ತು ವರ್ಷ ಆಯಿತು. ನಾನು ಹೇಳಿದೆ ೧೦ ವರ್ಷ ಅಥವಾ ೭ ವರ್ಷದವರೆಗೆ ಕಾಯ್ದುಕೊಂಡು ಕೊಡೋಣವೇ ಎಂದು. ನಾವು ಲೆಕ್ಕ ಹಾಕಿದರೆ ೬೦ ಅಥವಾ ೭೦ ಟಿ ಎಂ ಸಿ ನೀರು ಆ ಕಡೆ ಅಥವಾ ಈ ಕಡೆ ಹೆಚ್ಚು ಕಡಿಮೆ ಹಾಕಿದರೆ ಈ ಪ್ರಶ್ನೆ ಬಗ್ಗೆ ಹರಿದು ಹೋಗಬಹುದು. ಇಂತಹ ಪರಿಸ್ಥಿತಿ ಇರುವಾಗ ನಾವು ಇದನ್ನು ಒಂದು ಟ್ರಿಬ್ಯೂನಲ್ ಕೊರಳಿಗೆ ಕಟ್ಟಿ ೮–೧೦ ವರ್ಷ ಕಾಯುವುದು ಯೋಗ್ಯವಾಗುತ್ತದೆಯೇ ? ಟ್ರಿಬ್ಯೂನಲ್‌ಗೆ ಹೋಗುವುದರಿಂದ ಟೈಮ್ ಕನ್‌ಸ್ಯೂಮ್ ಆಗುತ್ತದೆ. ಈ ಕಾರಣದಿಂದ ನಾವು ನೀವು ಕುಳಿತು ಸಮಾಧಾನಕರವಾಗಿ ಇತ್ಯರ್ಥ ಮಾಡಿಕೊಳ್ಳೋಣವೆಂದು ಪಕ್ಕದ ರಾಜ್ಯದವರಿಗೆ ಹೇಳಿದೆ. ಟ್ರಿಬ್ಯೂನಲ್‌ಗೆ ಹೋಗುವುದರಿಂದ ನಮಗೆ ಹೆದರಿಕೆ ಆಗುತ್ತದೆ ಎಂಬ ನಿಲುವೆಯನ್ನು ನಾವು ತಾಳಿಲ್ಲ. ಈ ಮಾತನ್ನು ಇವೊತ್ತು ಸ್ಪಷ್ಟಪಡಿಸುವುದಕ್ಕೆ ನಾನು ಪ್ರಯತ್ನ ಮಾಡುತ್ತಿದ್ದೇನೆ. ನಾನು ಅಂತಿಮವಾಗಿ ಹೇಳುವುದು ಏನು ಎಂದರೆ ಮಾನ್ಯ ವಿರೋಧ ಪಕ್ಷದ ಅನೇಕ ನಾಯಕರು ಈ ವಿಷಯದಲ್ಲಿ ನಾನು ಎಷ್ಟು ಅಧ್ಯಯನ ಮಾಡಿದ್ದೇನೋ ಅದಕ್ಕೂ ಹೆಚ್ಚು ಅಧ್ಯಯನ ಮಾಡಿದ್ದಾರೆ. ಅವರು ಈ ಸಮಸ್ಯೆ ಬಗ್ಗೆ ಯೋಗ್ಯವಾದ ಸಲಹೆ ಮತ್ತು ಮಾರ್ಗದರ್ಶನವನ್ನು ನಮ್ಮ ಸದನಕ್ಕೆ, ನಮ್ಮ ಸರ್ಕಾರಕ್ಕೆ ಮಾಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಕೊನೆಯದಾಗಿ ಹೇಳುವುದಾದರೆ ಇವೊತ್ತು ಕೇಂದ್ರ ಸರ್ಕಾರದವರು ಆಪ್ತಾಲೋಚನೆಯಿಂದ ಈ ಪ್ರಶ್ನೆಯನ್ನು ಇತ್ಯರ್ಥ ಮಾಡುತ್ತೇವೆಂದು ಮನಸ್ಸು ಮಾಡಿದರೆ ನಾನು ಅದನ್ನು ಸ್ವಾಗತ ಮಾಡುತ್ತೇನೆ. ಇವೊತ್ತು ಇದಕ್ಕೆ ಅವಕಾಶ ಇದೆ. ನಾನು ಇದನ್ನು ಏಕೆ ಹೇಳುತ್ತಿದ್ದೇನೆ ಎಂದರೆ ನನಗೆ ಗೊತ್ತಿರುವ ಹಾಗೆ ನರ್ಮದಾ ಟ್ರಿಬ್ಯೂನಲ್ ಆದ ಮೇಲೂ ಎರಡು ಸಲ ಟ್ರಿಬ್ಯೂನಲ್ ಬೇಡ, ನಾವು ನಾವು ಹೊರಗಡೆ ಹೋಗಿ ಇತ್ಯರ್ಥ ಮಾಡಿಕೊಳ್ಳೋಣ ಎಂದು ಹೇಳಿದಂತಹ ಘಟನೆಗಳು ಇವೆ ಹಾಗೂ ನಿದರ್ಶನಗಳೂ ಇವೆ. ಅದಕ್ಕಾಗಿ ಟ್ರಿಬ್ಯೂನಲ್ ಆದಕೂಡಲೆ ನೆಗೋಸಿಯೇಷನ್‌ನ ಬಾಗಿಲುಗಳು ಯಾವತ್ತೂ ಮುಚ್ಚಿದ್ದುವು ಸದಾಕಾಲ ಮುಚ್ಚಿದ್ದುವು ಎನ್ನುವಂಥ ಭಾವನೆ ನನ್ನದಲ್ಲ. ಅದಕ್ಕಾಗಿ ನಾನು ಇವತ್ತು ಹೇಳುತ್ತೇನೆ. ನಾನು ಮತ್ತೆ ಟ್ರಿಬ್ಯೂನಲ್‌ಗೆ ಹೆದರಿ ಈ ಮಾತನ್ನು ಹೇಳುತ್ತೇನೆ ಎಂದು ಯಾರೂ ಭಾವಿಸಬಾರದು. ಏಕೆಂದರೆ ಟ್ರಿಬ್ಯೂನಲ್‌ನಲ್ಲಿ ಯಾವತ್ತು ನಿರ್ಣಯ ಬರುತ್ತದೋ ಯಾವಾಗ ನಿರ್ಣಯ ಬರುತ್ತದೋ ನಿರ್ಣಯ ಬರುವುದಕ್ಕೆ ಎಷ್ಟು ದಿವಸ ಬೇಕಾಗುತ್ತದೋ ಏನೇನು ಸಮಸ್ಯೆಗಳು ಉದ್ಭವವಾಗುತ್ತವೋ, ಇವನ್ನು ನೋಡಿಕೊಂಡು ಮತ್ತು ನಮ್ಮ ಅನುಭವವನ್ನು ಹಿನ್ನೆಲೆಯಾಗಿಟ್ಟುಕೊಂಡು ನಾನು ಇವತ್ತು ಕೇಂದ್ರಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತಾ ಇದ್ದೇನೆ. ಅವರು ಇವತ್ತೂ ಕೂಡ ಇದನ್ನು ಇತ್ಯರ್ಥ ಮಾಡುವುದಕ್ಕೆ ಸಂಬಂಧಪಟ್ಟ ಮುಖ್ಯ ಮಂತ್ರಿಗಳನ್ನು ಕರೆಯಬಹುದು. ನಾನು ಬಹಳ ಹೆಮ್ಮೆಯಿಂದ ಹೇಳುತ್ತಾ ಇದ್ದೇನೆ. ಇಲ್ಲ ಟ್ರಿಬ್ಯೂನಲ್‌ಗೆ ಹೋಗಿರಿ ಎಂದು ಮೊದಲನೇ ಸಲ ಕೇರಳ ಮುಖ್ಯ ಮಂತ್ರಿಗಳೇ ಹೇಳಿದರು. ಆ ನಂತರ ನಾನು ಬೇಡಿ ಟ್ರಿಬ್ಯೂನಲ್‌ಗೆ ಹೋದರೆ ಬಹಳ ಕಷ್ಟವಾಗುತ್ತದೆ ಎಂದು ಹೇಳಿದಾಗ ಅವರೂ ಕೂಡ ತಮ್ಮ ನಿಲುವೆಯನು ಬದಲಾಯಿಸಿ ಟ್ರಿಬ್ಯೂನಲ್ ಬೇಡ ಸೌಹಾರ್ದಯುತವಾಗಿ ಪಾರಸ್ಪರಿಕ ಚರ್ಚೆಯಿಂದ ನಾವು ಈ ಸಮಸ್ಯೆಯನ್ನು ಬಗೆಹರಿಸಿಕೊಳ್ಳೋಣ ಎಂಬ ನಿಲುವನ್ನು ಕೇರಳದ ಮುಖ್ಯ ಮಂತ್ರಿಗಳೇ ತೆಗೆದುಕೊಂಡರು. ನಾನು ಏನು ನಿಲುವನ್ನು ತೆಗೆದುಕೊಂಡಿದ್ದೆನೋ ಅದೇ ಒಂದು ಸ್ಟ್ಯಾಂಡನ್ನು ಅವರೂ ಕೂಡ ತೆಗೆದುಕೊಂಡಿದ್ದಾರೆ. ಇಂತಹ ಒಂದು ಪರಿಸ್ಥಿತಿ ಇದ್ದಾಗ ಈ ಪ್ರಶ್ನೆ ಮತ್ತೆ ಟ್ರಿಬ್ಯೂನಲ್‌ಗೆ ಹೋಯಿತು ಇನ್ನೇನು ನಮ್ಮ ಕೆಲಸ ಆಗಿಹೋಯಿತು ಎಂದು ಕೇಂದ್ರ ಸರ್ಕಾರ ಸುಮ್ಮನೆ ಕೂಡುವುದಕ್ಕಿಂತಲೂ ಇನ್ನೂ ಇವತ್ತು ಪ್ರಯತ್ನ ಮಾಡುತ್ತಿದ್ದರೆ ಕರ್ನಾಟಕದ ಪರವಾಗಿ, ಕರ್ನಾಟಕ ಸರ್ಕಾರದ ಪರವಾಗಿ ಸಂಪೂರ್ಣ ಸಹಕಾರ ನೀಡುವುದಕ್ಕೆ ನಾನು ತಯಾರಿದ್ದೇನೆ. ಮತ್ತು ಅವರು ಎಲ್ಲಿಗೆ ಕರೆದರೂ, ಯಾವಾಗ ಕರೆದರೂ ನಾನು ಬರುವುದಕ್ಕೆ ತಯಾರಿದ್ದೇನೆ ಮತ್ತು ಟ್ರಿಬ್ಯೂನಲ್ ಇದ್ದರೂ ಕೂಡ ಟ್ರಿಬ್ಯೂನಲ್ ಹೊರಗಡೆ ಕೂಡ ಇದನ್ನು ಇತ್ಯರ್ಥ ಮಾಡುವುದಕ್ಕೆ ಸಾಕಷ್ಟು ಅವಕಾಶವಿದೆ. ಇಂತಹ ಒಂದು ಜಟಿಲವಾದಂಥ ಸೂಕ್ಷ್ಮವಾದಂಥ, ಗಹನವಾದಂಥ, ಗಂಭೀರವಾದಂಥ ಸಮಸ್ಯೆಯನ್ನು ಅಷ್ಟೇ ಗಂಭೀರತೆಯಿಂದ ನಾವೆಲ್ಲರೂ ಈ ಸದನದಲ್ಲಿ ಚರ್ಚೆ ಮಾಡಬೇಕು ಎಂದು ಮಾನ್ಯ ವಿರೋಧಪಕ್ಷದ ನಾಯಕರಲ್ಲಿ ನಾನು ವಿನಂತಿ ಮಾಡಿಕೊಂಡು ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಡಿ.ಬಿ. ಚಂದ್ರೇಗೌಡ (ವಿರೋಧಪಕ್ಷದ ನಾಯಕರು).—ಸನ್ಮಾನ್ಯ ಅಧ್ಯಕ್ಷರೆ, ಇದುವರೆಗೆ ಮಾನ್ಯ ಸಭಾನಾಯಕರಾದ ಮುಖ್ಯ ಮಂತ್ರಿಗಳು ಕಾವೇರಿ ನದಿ ನೀರಿನ ಸಮಸ್ಯೆ ಬಗ್ಗೆ ಇತ್ತೀಚೆಗೆ ನಡೆದಂಥ ಪ್ರಕರಣಗಳ ಬಗ್ಗೆ ಸುದೀರ್ಘವಾಗಿ ತಮ್ಮದೇ ಆದ ಧಾಟಿಯಲ್ಲಿ ಬೆಳಕು ಚೆಲ್ಲುವುದಕ್ಕೆ ಪ್ರಯತ್ನ ಮಾಡಿದ್ದಾರೆ. ನಾವು ಇವತ್ತು ಇಲ್ಲಿ ಚೆಲ್ಲಿ ಹೋದಂಥ ಹಾಲಿಗಾಗಿ ಕಣ್ಣೀರು ಸುರಿಸುತ್ತಾ ಇದ್ದೇವೆ. ಮತ್ತೊಂದು ದೃಷ್ಟಿಯಿಂದ ತೌಡು ಕುಟ್ಟುವ ಕೆಲಸ ನಡೆಯುತ್ತಾ ಇದೆ. ಹೀಗೆ ಹಾಲು ಚೆಲ್ಲಿತು ಎಂದು ಕಣ್ಣೀರು ಸುರಿಸುವುದಕ್ಕೆ ಮುನ್ನ ಹಾಲು ಚೆಲ್ಲದೇ ಇದ್ದ ಹಾಗೆ ಮಾಡಿದ ಪ್ರಯತ್ನಗಳು ಏನು ಎಂದು ನಾವು ಸೂಕ್ಷ್ಮವಾಗಿ ಅವಲೋಕನ ಮಾಡುವುದು ಅಗತ್ಯವಿದೆ. ಕಾರಣ, ಮುಂದೆ ನಾವು ತೆಗೆದುಕೊಳ್ಳಬೇಕಾದಂಥ ನಿಲುವಿಗೆ ಇದು ಸಹಾಯಕವಾಗಬಹುದು. ಮಾನ್ಯ ಅಧ್ಯಕ್ಷರೆ, ಒಂದು ಶತಮಾನದಷ್ಟು ಹಳೆಯದಾದ ಕಾವೇರಿ ನದಿ ನೀರಿನ ಹಂಚಿಕೆಯ ವಿವಾದ ಏನಿದೆ ಅದು ಬಹುಶಃ ಅದಕ್ಕಿಂತ ಹಳೆಯದಾದಂಥ ಅನೇಕ ಸಂದಿಗ್ಧಗಳಿಂದ ಉಂಟಾದ ಪರಿಸ್ಥಿತಿಯಿಂದ ಉದ್ಭವಿಸಿದಂಥ ಒಂದು ಸಮಸ್ಯೆ ಇದು ಎಂದು ನನಗನ್ನಿಸುತ್ತದೆ. ಟಿಪ್ಪುಸುಲ್ತಾನರು ಹಳೆಯ ಮೈಸೂರಿನ ಬ್ರಿಟಿಷರ ವಿರುದ್ಧ ಸಂಗ್ರಾಮ ಮಾಡಿದಾಗ ಬಹುಶಃ ಆ ಸಂಗ್ರಾಮದ ಕಹಿಯನ್ನು, ಸೇಡನ್ನು ತೀರಿಸಿಕೊಳ್ಳುವುದಕ್ಕೆ ೧೮೮೧ರಲ್ಲಿ ಮೈಸೂರು ಅರಸರ ಕೈಗೆ ಹಸ್ತಾಂತರ ಆದಮೇಲೆ ಹಳೆಯ ಮೈಸೂರಿನ ಜನರಿಗೆ ತೊಂದರೆ ಕೊಡಬೇಕು ಎನ್ನತಕ್ಕಂಥ ಏಕೈಕ ಉದ್ದೇಶದಿಂದ ೧೮೯೨ ಅಥವಾ ೧೯೨೪ರ ಕರಾರನ್ನು ನಮ್ಮ ಮೇಲೆ ಹೇರತಕ್ಕಂಥ ಒಂದು ಪ್ರಯತ್ನವನ್ನು ಮಾಡಿದರೆನೋ ಆಗ ಎಂದು ನನಗೆ ಚರಿತ್ರೆಯು ನೆನಪಾಗುತ್ತದೆ. ಮಾನ್ಯ ಹಿರಿಯ ಸದಸ್ಯರೇನಿದ್ದಾರೆ ಅವರು ಇದರ ಬಗ್ಗೆ ಇದಕ್ಕಿಂತಲೂ ಹೆಚ್ಚು ಬೆಳಕನ್ನು ಚೆಲ್ಲಬೇಕು.... ಮುಖ್ಯವಾಗಿ ಇವತ್ತು ನಮ್ಮ ಮುಂದೆ ಇರತಕ್ಕಂಥದ್ದು ಏನೆಂದರೆ, ಮೇ ಐದನೇ ತಾರೀಖು ಸರ್ವೋಚ್ಚ ನ್ಯಾಯಾಲಯದವರು ಕಾವೇರಿ ವಿವಾದವನ್ನು ಪಂಚಾಯಿತಿಗೆ ಒಪ್ಪಿಸಬೇಕು ಎಂದು ಕೇಂದ್ರಕ್ಕೆ ಏನು ಆದೇಶವನ್ನು ಇತ್ತರು ಆ ಆದೇಶದಂತೆ ಜೂನ್ ಎರಡನೇ ತಾರೀಖು ಕೇಂದ್ರ ಸರ್ಕಾರದವರು ತ್ರಿಸದಸ್ಯ ಆಯೋಗವನ್ನು ನೇಮಕ ಮಾಡಿದ್ದಾರೆ. ಇದರಿಂದ ಉದ್ಭವಿಸಿರತಕ್ಕಂಥ ಸಮಸ್ಯೆಗಳನ್ನು ಚರ್ಚೆ ಮಾಡುವುದಕ್ಕಾಗಿ ನಾವು ಈ ದಿವಸ ವಿಶೇಷವಾಗಿ ಇದನ್ನು ಕೈಗೆತ್ತಿಕೊಂಡಿದ್ದೇವೆ.

ಮಾನ್ಯ ಅಧ್ಯಕ್ಷರೆ, ನಾವು ಸುಪ್ರೀಂ ಕೋರ್ಟ್ ಕೊಟ್ಟಿರತಕ್ಕ ತೀರ್ಪನ್ನು ಓದಿದ್ದೇವೆ. ಎಲ್ಲಿ ತಪ್ಪು ಮಾಡಿದ್ದೇವೆಂದು ಗುರುತಿಸಬಹುದು. ಮೂಲತಃ ಇದು ಎರಡು ರಾಜ್ಯಗಳಿಗೆ ಸಂಬಂಧಪಟ್ಟಿರತಕ್ಕ ಸಮಸ್ಯೆ. ಈ ಸಮಸ್ಯೆಯನ್ನು ಕೇಂದ್ರ ಪಂಚಾಯ್ತಿಗೆ ಒಪ್ಪಿಸುವುದಕ್ಕೆ ಮುಂಚೆ ಏನು ನಿಯಮಗಳನ್ನು ಅನುಸರಿಸಬೇಕೆಂದು ೧೯೫೬ನೇ ಕಾಯಿದೆಯೊಳಗೆ ನಿರೂಪಿಸಿದ್ದಾರೆ. ಆ ಕಾಯಿದೆಯ ಪ್ರಕಾರ I quote Section 3 of the Inter-State Water Dispute Act, 1956 which reads thus :

> "If it appears to the Government of any State that a water dispute with the Government of another State has arisen or is likely to arise by reason of the fact that the interests of the State, or of any of the inhabitants there of in the waters of an inter-State river or river valley have been, or are likely to be, affected prejudicially by
>
> a) any executive action or legislation taken or passed, or proposed to be taken or passed, by other State. or, etc. etc,

Further Section 4 of the said Act reads thus :

> "When any request under Section 3 is received from any State Government in respect of any water dispute and the Central Government is of opinion that the water dispute cannot be settled by negotiations, the Central Government shall, by notification in the Official Gazette, constitute a Water Disputes Tribunal for the adjudication of the water dispute."

ಇಲ್ಲಿ ವಿಭಿನ್ನವಾದುದು ಏನು ಎಂದರೆ ಯಾವ ರಾಜ್ಯ ತನಗೂ ಮತ್ತು ಕೇಂದ್ರಕ್ಕೂ ತಮಿಳು ನಾಡಾಗಲೀ, ಕರ್ನಾಟಕವಾಗಲೀ, ಕೇರಳವಾಗಲೀ ನಮ್ಮಗಳ ಮಧ್ಯೆ ವ್ಯಾಜ್ಯ ಇದೆ, ಇದನ್ನು ನೆಗೋಷಿ

ಯೋಷನ್ ಮೂಲಕ ಸೆಟ್ಲಮೆಂಟ್ ಮಾಡಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ, ಆದ್ದರಿಂದ ಈ ಸಮಸ್ಯೆಯನ್ನು ಟ್ರಿಬ್ಯೂನಲ್‌ಗೆ ರೆಫರ್ ಮಾಡಿ ಎಂದು ಕೇಳಿಕೊಂಡಿದ್ದರ ಮೇರೆಗೆ ಸರ್ವೋಚ್ಚನ್ಯಾಯಾಲಯ ನಿರ್ದೇಶನ ಕೊಡುತ್ತದೆ, ಸರ್ವೋಚ್ಚ ನ್ಯಾಯಾಲಯದ ನಿರ್ದೇಶನ ಕೊಡುವಾಗ ನಿಬಂಧನೆ ಎರಡೂ ರಾಜ್ಯಗಳಿಗೆ ಇರತಕ್ಕ ಡಿಸ್‌ಪ್ಯೂಟ್ ಏನಿದೆ ಅದನ್ನು ನೆಗೋಷಿಯೇಷನ್ ಮೂಲಕ ಬಗೆಹರಿಸುವುದಕ್ಕೆ ಸಾಧ್ಯವಿಲ್ಲ ಎನ್ನುವ ತೀರ್ಮಾನಕ್ಕೆ ಬಂದರೆ ಕೇಂದ್ರ ಟ್ರಿಬ್ಯೂನಲ್‌ರೆಫರ್ ಮಾಡಬಹುದು ಆದರೆ ಇಲ್ಲಿ ಪಿಟಿಷನ್ ಹಾಕಿರುವುದು ರಾಜ್ಯ ಸರ್ಕಾರವಲ್ಲ. ತಮಿಳುನಾಡು ರೈತರು ಸುಪ್ರೀಂ ಕೋರ್ಟಿಗೆ ಅರ್ಜಿ ಹಾಕಿರುತ್ತಾರೆ ಕರ್ನಾಟಕ ಸರ್ಕಾರವನ್ನು ಈ ಕೇಸ್‌ನಲ್ಲಿ ಪಾರ್ಟಿ ಮಾಡಿರುತ್ತಾರೆ. ಸರ್ವೋಚ್ಚ ನ್ಯಾಯಾಲಯ ೧೯೫೬ನೇ ಕಾಯಿದೆಯಲ್ಲಿ ಎರಡೂ ರಾಜ್ಯಗಳಿಗೆ ಇರತಕ್ಕ ವ್ಯಾಜ್ಯವನ್ನು ತೀರ್ಮಾನ ಮಾಡುವ ಕೇಂದ್ರ ಸರ್ಕಾರದ ಅಧಿಕಾರ ವ್ಯಾಪ್ತಿಯನ್ನು ತಾನು ತೆಗೆದುಕೊಂಡಿದೆ. ಆ ಜನಕ್ಕೂ ಇನ್ನೊಂದು ಸರ್ಕಾರಕ್ಕೂ ಇರತಕ್ಕ ವ್ಯಾಜ್ಯ ಬೇರೆ. ಎರಡೂ ರಾಜ್ಯಗಳಿಗೆ ಇರತಕ್ಕ ವ್ಯಾಜ್ಯ ಬೇರೆ ಈಗ ಆಗಿರತಕ್ಕ ನಿರ್ಣಯ ಮುಂದೆ ಕರ್ನಾಟಕ ಜನಕ್ಕೂ ತಮಿಳುನಾಡು ರಾಜ್ಯಕ್ಕೂ ಆದರೆ ಈ ಹಿಂದೆ ತಮಿಳುನಾಡು ಜನಕ್ಕೂ ಕರ್ನಾಟಕ ರಾಜ್ಯಕ್ಕೂ ವಾದ ಇತ್ತು. ಈಗ ಕರ್ನಾಟಕದ ಜನಕ್ಕೂ ತಮಿಳುನಾಡಿನ ರಾಜ್ಯಕ್ಕೂ ವಿವಾದ ಆದರೆ ಇದು ಯಾವ ಘಟ್ಟವನ್ನು ಮುಟ್ಟಬಹುದು. ಈ ಪ್ರಿಲಿಮಿನರಿ ಅಬ್ಜೆಕ್ಷನ್ ಕೇಂದ್ರ ಸರ್ಕಾರ ತೆಗೆದುಕೊಂಡಿದೆ, ರಾಜ್ಯ ಸರ್ಕಾರದ ವಕೀಲರುಗಳು ತೆಗೆದುಕೊಂಡಿದ್ದಾರೆ. ಆದರೆ, ಇಲ್ಲಿ ಸುಪ್ರೀಂಕೋರ್ಟ್ ಅಬ್ಸರ್‌ವೇಷನ್ ಏನು ಇದೆ ಅದು ಬಹಳ ಮುಖ್ಯ. Sir. I quote Page-7 of the Supreme Court Judgement Where in it is observed thus :

> "No serious dispute, however, has been raised before us (i. e., the Supreme Court) Challenging our jurisdiction to consider the claim in the writ Petition confined to the question of reference of a dispute to the Tribunal within the meaning of Section 3 of the Act."

This means that the State Government has failed, the Legal Department has failed and the Advocates on whom we reposed confidence have failed to convince the Central Government that Supreme Court has no jurisdiction to go into the case. This is the observation of the Supreme Court.

ಆದರೆ ನಾವು ಇವೊತ್ತು ಯಾರನ್ನು ಹೊಣೆಗಾರರನ್ನಾಗಿ ಮಾಡಬೇಕು ರಾಜ್ಯ ಸರ್ಕಾರದ ಪರವಾಗಿ ವಕಾಲತ್ತು ವಹಿಸಿದಂಥ, ರಾಜ್ಯ ಸರ್ಕಾರದ ಪರವಾಗಿ ಕೆಲಸ ಮಾಡಿದಂಥ ವಕೀಲರುಗಳು ಈ ಒಂದು ಜ್ಯೂರಿಸ್‌ಡಿಕ್ಷನ್ ಪ್ರಶ್ನೆಯ ಬಗ್ಗೆ ಏತಕ್ಕೆ ಒತ್ತು ಕೊಡಲಿಲ್ಲ ಎನ್ನತಕ್ಕಂಥ ಪ್ರಶ್ನೆಗೆ ಸರ್ಕಾರ ಉತ್ತರ ಕೊಡಬೇಕಾಗುತ್ತದೆ; ಇದು ಬಹಳ ಮುಖ್ಯವಾದಂಥ ಪ್ರಶ್ನೆ. ಒಂದು ವೇಳೆ ಇಂಥದ್ದಕ್ಕೆ ಒತ್ತು ಕೊಟ್ಟು ರಾಜ್ಯ ಸರ್ಕಾರ ತನ್ನ ನಿಲುವನ್ನು ಸರ್ವೋಚ್ಚನ್ಯಾಯಾಲಯದಲ್ಲಿ ಪ್ರತಿಪಾದನೆ ಮಾಡಿದ್ದಾರೆ ಸರ್ವೋಚ್ಚನ್ಯಾಯಾಲಯದಿಂದ ಈ ತೀರ್ಪು ಬರುತ್ತಿತ್ತು ಎಂದು ನಾನು ಅಂದುಕೊಳ್ಳದೇ ಇದ್ದರೆ, ಅದನ್ನು ಅಪರಾಧ ಅಂಥ ಹೇಳೋಣ. ಇದು ಮುಖ್ಯವಾದಂಥ ಪಾಯಿಂಟ್ ಆಫ್ ಲಾ ಇದರಲ್ಲಿ ಫೈಲ್ ಆಗಿದ್ದಾರೆ ಎನ್ನತಕ್ಕದ್ದನ್ನು ಸುಪ್ರೀಂ ಕೋರ್ಟ್ ತನ್ನ ತೀರ್ಪಿನಲ್ಲಿ ಅಬ್ಸರ್ವ್ ಮಾಡಿದೆ. ಮತ್ತೊಂದು ಮುಖ್ಯವಾದಂಥ ಅಂಶವನ್ನು ಸುಪ್ರೀಂಕೋರ್ಟ್ ಇಲ್ಲಿ ಗಮನಿಸುತ್ತದೆ. ಅದೇನೆಂದರೆ, ಕಳೆದ ೨೦ ವರ್ಷಗಳ ಕಾಲ ಆಳಿದ ಸರ್ಕಾರಗಳು ಕೇಂದ್ರ ಮತ್ತು ರಾಜ್ಯಗಳಲ್ಲಿ ಒಂದೇ ಪಕ್ಷದ ಸರ್ಕಾರ ಇದ್ದಾಗ ಇಂತಹ ಸಮಸ್ಯೆಗಳ ಪರಿಹಾರಕ್ಕೆ ಕಾಲ ಪಕ್ವವಾಗಿತ್ತು. ಆ ಪಕ್ವವಾಗಿದ್ದಂಥ ಕಾಲದ ಲಾಭವನ್ನು ಅಂದು ಆಳಿದಂಥ ರಾಜಕೀಯ ಪಕ್ಷಗಳು ಉಪಯೋಗಿಸಿಕೊಳ್ಳಲಿಲ್ಲ ಎನ್ನುವ ಮಾತನ್ನು ಈ ಒಂದು ತೀರ್ಪಿನಲ್ಲಿ ಬಹಳ ಸೊಗಸಾಗಿ ಹೇಳಿದ್ದಾರೆ. ಅದರ ಬಗ್ಗೆ ನಾನು ಜಡ್ಜ್‌ಮೆಂಟ್ ಕೋಟ್ ಮಾಡಿ ಹೇಳುತ್ತೇನೆ. ಕೇಂದ್ರ ಸರ್ಕಾರದ ನಿಲುವನ್ನು ಸುಪ್ರೀಂ ಕೋರ್ಟ್‌ನಲ್ಲಿ ಏನು ಹೇಳಿದ್ದಾರೆ ಅದಕ್ಕೆ ಹಿಂದಿನ ಸ್ವಲ್ಪ ಶ್ರವಣ ಅಗತ್ಯ ಎನ್ನುವ ಕಾರಣಕ್ಕಾಗಿ ಹೇಳುತ್ತೇನೆ.

> "There was a time, after the dispute arose, when the Governments in the States of Karnataka and Tamil Nadu as also at the Gentre were run by one common Political Party.

> There cannot be any Party other than the Congress Party which had ruled all these States and Central Government. Perhaps if the Centre had intervened in an effective way during that period, there was considerable chance of settlement by negotiations."

ಇವೊತ್ತು ನಾವು ಏನು ಹೇಳುತ್ತಿದ್ದೇವೆ, ಕೇಂದ್ರ ಸರ್ಕಾರ ನೆಗೋಷಿಯೇಷನ್ ಮೂಲಕ ಈ ಸಮಸ್ಯೆಯನ್ನು ಪರಿಹರಿಸಬಹುದಿತ್ತು. ತನ್ನ ಜವಾಬ್ದಾರಿಯಿಂದ, ಹೊಣೆಗಾರಿಕೆಯಿಂದ, ಕೇಂದ್ರ ಸರ್ಕಾರ ಮುಕ್ತವಾಗಿದೆ ಎನ್ನುವ ಮಾತನ್ನು ಹೇಳುವಾಗ ಸರ್ವೋಚ್ಚ ನ್ಯಾಯಾಲಯದವರು ತನ್ನ ತೀರ್ಪಿನಲ್ಲಿ ಏನು ಅಬ್ಸರ್ವೇಷನ್ ಮಾಡಿದ್ದಾರೆ ಇದನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಬೇಕು. ಅಷ್ಟರಿಂದ ಆಗಿರತಕ್ಕ ಅಪರಾಧವನ್ನು ಸರಿ ಎಂದು ನಾನು ಹೇಳುವುದಿಲ್ಲ. ಸರ್ಕಾರ ಕೂಡ ತಾನು ಏನು ಕರ್ತವ್ಯವನ್ನು ಮಾಡಬೇಕಾಗಿತ್ತೋ ಅದನ್ನು ಮಾಡಲಿಲ್ಲ. ಈ ವಿಚಾರದಲ್ಲಿ ತಮಗೆ ತಮ್ಮ ಮನಸ್ಸಿಗೆ ಎಷ್ಟು ನೋವಾಗಿದೆಯೋ ಅಷ್ಟೇ ನೋವು ನಮಗೂ ಕೂಡ ಆಗಿದೆ ಎಂದು ಹೇಳಬಯಸ್ತೇನೆ. ಇದುವರೆಗಿನ ಸರ್ಕಾರ ಯಾವುದೇ ಇರಲಿ, ೨೦ ವರ್ಷಗಳ ಹಿಂದಿನ ಈ ತೀರ್ಪನ್ನು ಕೋಲ್ಡ್ ಸ್ಟೋರೇಜ್‌ನಲ್ಲಿಡುವುದಕ್ಕೆ ಯಾರು ಯಾರು ಕಾರಣ ಎಂಬುದನ್ನು ಸರ್ವೋಚ್ಚ ನ್ಯಾಯಾಲಯ ತನ್ನ ತೀರ್ಪಿನಲ್ಲಿ ಹೇಳಿದೆ. ನಾನು ಕೇಳಿದ ಇನ್ನೊಂದು ವಿಚಾರ ಬಹಳ ಮುಖ್ಯವಾದದ್ದು ಎಂದರೆ, ಅದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದುದು, ನಾನು ಟ್ರಿಬ್ಯುನಲ್‌ಗೆ ಹೋಗುವ ಉದ್ದೇಶವೇನೂ ಇಲ್ಲ, ಅಲ್ಲಿ ನಮಗೆ ನ್ಯಾಯ ಸಿಕ್ಕುವುದಿಲ್ಲ ಎಂಬ ಅಪನಂಬಿಕೆ ನನಗೇನೂ ಇಲ್ಲ. ಅಲ್ಲಿ ನಮಗೆ ನ್ಯಾಯ ದೊರೆಕುತ್ತದೆಂಬ ವಿಶ್ವಾಸ ನಮಗಿದೆ ಎಂದು ಹೇಳಿದ್ದಾರೆ. ಆದರೆ ಈ ಬಗ್ಗೆ ಸಂಪೂರ್ಣವಾದ ನಂಬಿಕೆ ನನಗೆ ಇಲ್ಲವೆಂದು ಹೇಳುವುದನ್ನು ಸ್ಪಷ್ಟ ಪಡಿಸುವುದಕ್ಕೆ ಇಷ್ಟ ಪಡುತ್ತೇನೆ. ಸರ್ವೋಚ್ಚ ನ್ಯಾಯಾಲಯ ಪ್ರಾರಂಭದಲ್ಲಿ ಏನು ಹೇಳಿದೆ ಎಂದರೆ. The Prayer sought for is "Respondent-1 i.e., the Registered organisation to refer the dispute relation to water utilisation of the Cauvery river and equitable distribution there of in terms of Section 4 of the Inter-State Water Dispute Act 1956 and for mandamus to the State of Karnataka, not to proceed with the construction of dams, Projects and reservoirs across the said river or any of its tributories within the State and to restore supply of water to the State of Tamil Nadu as envisaged under Agreement of 12-2-1984."

Unfortunately, nowhere in the whole judgment, the plea of the Karnataka State has been even taken notice of. No where in the whole judgment, the case of Karnataka was referred to either sympathetically or otherwise. I would ask the Government as to who should be held responsible for this? ಇವತ್ತು ನಾವು ಈ ವಿಚಾರವನ್ನು ಈ ಸದನದಲ್ಲಿ ಚರ್ಚೆಮಾಡುತ್ತಿದ್ದೇವೆ, ಹೀಗೆ ಚರ್ಚೆ ಮಾಡುವಾಗ ಇದರ ಹಿನ್ನೆಲೆಯನ್ನು ಗಮನದಲ್ಲಿಟ್ಟುಕೊಂಡು ಚರ್ಚೆಮಾಡಬೇಕಾಗುತ್ತದೆ. ಈ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಕಳೆದ ನವೆಂಬರ್ ತಿಂಗಳಿಂದ ಇದುವರೆಗೆ ಏನೇನು ಮಾಡಿದೆ ಎಂಬುದನ್ನು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಅನೇಕಸಾರಿ ಈ ವಿಚಾರದಲ್ಲಿ ಚರ್ಚೆಮಾಡಿದ್ದೇವೆ. ನವೆಂಬರ್ ಕೊನೆಯ ದಿನಗಳಲ್ಲಿ ಅಧಿಕಾರಕ್ಕೆ ಬಂದರೆ ಈ ಸರ್ಕಾರ ಪ್ರತಿಪಕ್ಷಗಳನ್ನು ಮಾತುಕತೆಗೆ ಕರೆದದ್ದು ಏಪ್ರಿಲ್ ೯ ಅಥವಾ ೧೦ನೇ ತಾರೀಖು. ಆವೊತ್ತು ಮೊದಲನೇ ಸಭೆಯನ್ನು ಕರೆದದ್ದು. ಅದುವರೆಗೂ ನಮ್ಮ ರಾಜ್ಯಕ್ಕೆ ಸೀಮಿತವಾದಂಥ, ಗಂಭೀರವಾದಂಥ, ಗಹನವಾದಂಥ ಮುಂದಿನ ಜನಾಂಗದ ಮೇಲೆ ಕರಾಳ ಛಾಯೆ ಮೂಡಬಹುದಾದಂಥ ಇಂಥ ವಿಚಾರವನ್ನು ಚರ್ಚೆಮಾಡಿರಲಿಲ್ಲ. ಈಗ ಇದನ್ನು ಇಲ್ಲಿ ಚರ್ಚೆ ಮಾಡುವಂಥ ಸಂದರ್ಭ ಬಂದಿದೆ. ಇದರಲ್ಲಿ ಏನೇ ಹೆಚ್ಚೂ ಕಡಿಮೆಯಾದರೂ ಇದರ ಸಂಪೂರ್ಣ ಹೊಣೆಗಾರಿಕೆಯನ್ನು ಈ ಸರ್ಕಾರ ಹೊತ್ತುಕೊಳ್ಳಬೇಕಾಗುತ್ತದೆ. ಪ್ರತಿ ಪಕ್ಷಗಳ ಸಭೆಯನ್ನು ಮೊದಲನೇ ಸಾರಿ ಕರೆದದ್ದು ಏಪ್ರಿಲ್ ೧೦ನೇ ತಾರೀಖು ಮಾನ್ಯ ಮುಖ್ಯ ಮಂತ್ರಿಗಳ ಜೊತೆಯಲ್ಲಿ ಮೊದಲನೆಯ ಚರ್ಚೆ ಇದಕ್ಕೆ ಪೂರ್ವಭಾವಿಯಾಗಿ ಪ್ರತಿಪಕ್ಷದ ಯಾವ ಮುಖಂಡರನ್ನೇ ಆಗಲಿ, ವಿಶ್ವಾಸಕ್ಕೆ ತೆಗೆದುಕೊಳ್ಳದೆ ಏಪ್ರಿಲ್ ೫ನೇ ತಾರೀಖು ಮಾನ್ಯ ಮುಖ್ಯ ಮಂತ್ರಿಗಳು ದೆಹಲಿಯಲ್ಲಿ ನಡೆದಂಥ ಅಂತರರಾಜ್ಯ ಮುಖ್ಯ ಮಂತ್ರಿಗಳ ಸಭೆಗೆ ಹೋಗಿದ್ದಾರೆ.

೧೨-೩೫ ಪಿ. ಎಂ.

ಈ ಸಭೆ ೫ನೇ ತಾರೀಖು ಏಪ್ರಿಲ್ ೧೯೯೦ರಲ್ಲಿ ನಡೆಯಿತು. ಅದಕ್ಕೆ ಪೂರ್ವಭಾವಿಯಾಗಿ ನಮ್ಮನ್ನು ಕರೆದಿದ್ದರೆ ಏನು ಮಹಾ ಮಾಡುತ್ತಿದ್ದೀರಿ ಎಂದು ಹೇಳುವುದಲ್ಲ ಇವತ್ತು ತಾವು ಈ ಸಭೆಯಲ್ಲಿ ಎಲ್ಲಾ ಪಕ್ಷಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡಿದ್ದೇವೆಂದು ಹೇಳುವಾಗ ರಾಜ್ಯದ ನಿಲುವು ಯನ್ನು ದೆಹಲಿಯಲ್ಲಿ ಪ್ರತಿಪಾದನೆ ಮಾಡುವಾಗ ನಮ್ಮನ್ನು ಕರೆಯಲಿಲ್ಲ ಎನ್ನತಕ್ಕಂಥ ಆಪಾದನೆಯನ್ನು ನಾನು ಮಾಡಿದರೆ ಆಗ ಮಾನ್ಯ ಮುಖ್ಯಮಂತ್ರಿಗಳು ಒಪ್ಪಿಕೊಳ್ಳಬಹುದು. ಆ ಸಭೆಯಲ್ಲಿ ಅವರು ಮಾಡಿದ ಭಾಷಣದ ಪ್ರತಿಯಲ್ಲಿ ಏನು ಹೇಳಿದ್ದಾರೆ. ಮೊದಲನೆಯ ಬಾರಿಗೆ ಕರ್ನಾಟಕದ ಒಟ್ಟಾರೆ ನಿಲುವಿನಿಂದ ಹೊರಗೆ ಉಳಿದು ಒಂದು ಮಾತನ್ನು ಹೇಳಿದರು. I quote from the spech of Mr. Veerrendra Patil. Hon'ble Chief Minister of Karnataka at the inter–state meeting in Cauvery water dispute, New Delhi on 5th April 1990 page 2: "There was a demand from some quarters to refer the issue to the Tribunal. Karnataka does not find much meaning in this demand. The time is not ripe to refer the issue to the Tribunal... This is the cross of the case. ೧೯೭೦ನೇ ಇಸವಿಯಿಂದಲೂ ಟ್ರಿಬ್ಯೂನಲ್‌ಗೆ ಹಾಕಬೇಕೆಂದು ಕೇಳುತ್ತಿದ್ದಾರೆ. ಆದರೆ ನಾವು ನೆಗೋಸಿಯೇಷನ್ ಮೂಲಕ ಸೆಟಲ್ ಮಾಡಿಕೊಳ್ಳಬೇಕೆಂಬ ನಿಲುವನ್ನು ಭದ್ರವಾಗಿ ಹೇಳಿಕೊಂಡು ಬಂದಿದ್ದೇವೆಂದು ಟ್ರಿಬ್ಯೂನಲ್‌ಗೆ ಹಾಕುವುದಕ್ಕೆ ಕಾಲ ಪಕ್ವವಾಗಿಲ್ಲವೆಂದು ಮೊದಲನೆ ಬಾರಿಗೆ ತಾವು ಏನು ಹೇಳಿದ್ದೀರಿ ಅರ್ಥಾತ್ ಈ ನಿರ್ಣಯವನ್ನು ಟ್ರಿಬ್ಯೂನಲ್‌ನಿಂದಲೇ ಮಾಡಬೇಕು, ಆ ಕಾಲಕ್ಕಾಗಿ ಕಾಯೋಣ ಎನ್ನುವ ಮಾತನ್ನು ಹೇಳಿದಂತಾಯಿತು, ಫಾರ್ ದಿ ಫಸ್ಟ್ ಟೈಮ್ ರಾಜ್ಯ ಸರ್ಕಾರದ ನಿಲುವೆಯಿಂದ ಆದ ಬದಲಾವಣೆ, ಏನೆಂದರೆ ಟ್ರಿಬ್ಯೂನಲ್‌ಗೆ ಹೋಗುವುದಕ್ಕೆ ಕಾಲ ಪಕ್ವವಾಗಿಲ್ಲ ಎಂದು ಹೇಳುವಾಗ ಈ ನಿರ್ಣಯವನ್ನು ನೆಗೋಸಿಯೇಷನ್‌ನಿಂದ ತೀರ್ಮಾನ ಮಾಡಿಕೊಳ್ಳಲು ಸಾಧ್ಯವಿಲ್ಲ. ಟ್ರಿಬ್ಯೂನಲ್‌ಗೆ ಹೋಗಬೇಕು ಎನ್ನುವ ಒಂದು ಪ್ರಿನ್ಸಿಫಲನ್ನು ತಾವು ಒಪ್ಪಿಕೊಂಡಿರಿ ಎನ್ನುವುದನ್ನು ನಾನು ಅರ್ಥಮಾಡಿಕೊಂಡಿದ್ದೇನೆ. ಈಗಲೂ ಕೂಡ ತಾವು ಹೇಳಿದ್ದೀರಿ ಟ್ರಿಬ್ಯೂನಲ್‌ಗೆ ಹೋಗುವುದಕ್ಕೆ ಪಕ್ವವಾಗಿಲ್ಲ ಕಾಲವೆಂದು. ಕಾರಣವೇನೆಂದರೆ ಸೆಂಟ್ರಲ್ ವಾಟರ್ ಕಮಿಷನ್‌ನಲ್ಲಿ ಸಾಕಷ್ಟು ಮಾಹಿತಿ ಇಲ್ಲ. ಬೇಕಾಗಿರತಕ್ಕಂಥ ಸಾಹಿತ್ಯವಿಲ್ಲ, ಎಷ್ಟು ನೀರು ಲಭ್ಯವಿದೆ ಎನ್ನುವ ಬಗ್ಗೆ ದಾಖಲೆಗಳಿಲ್ಲ. ಈ ಎಲ್ಲಾ ಕಾರಣಗಳಿಗಾಗಿ ಟ್ರಿಬ್ಯೂನಲ್‌ಗೆ ಹೋಗುವುದಕ್ಕೆ ಕಾಲ ಪಕ್ವವಾಗಿಲ್ಲವೆಂದು ಹೇಳುವಾಗ, ನಗೋಸಿಯೇಷನ್ ಮುಖಾಂತರ ತೀರ್ಮಾನ ಮಾಡಿಕೊಳ್ಳುವುದಕ್ಕೆ ಸಾಧ್ಯವಿಲ್ಲವೆಂದು ತಮಿಳುನಾಡು ಹೇಳಿದಾಗ ಅರ್ಥಾತ್ ಇದೆಲ್ಲಾ ಬಂದಮೇಲೆ ಟ್ರಿಬ್ಯೂನಲ್‌ಗೆ ರೆಫರ್ ಮಾಡೋಣ ವೆಂದು ಹೇಳುವಂಥ ಮಾತನ್ನು ಕೇಂದ್ರದವರು ಹೇಳಿದಾಗ ನಿಮ್ಮ ಭಾಷಣದಲ್ಲಿ ಭಾಷೆಯ ಬಳಕೆಯಲ್ಲಿ ತಾವು ಎಚ್ಚರಿಕೆಯನ್ನು ವಹಿಸತಕ್ಕಂಥದ್ದು ಅಗತ್ಯವಿದೆ ಎಂದು ನನ್ನ ಅನಿಸಿಕೆ. ಈ ಮುಂಚೆ ಸರ್ವೋಚ್ಚ ನ್ಯಾಯಾಲಯ ಏಪ್ರಿಲ್ ೨೪ನೇ ತಾರೀಖು ಅಂತಿಮವಾದ ದಿನಾಂಕವೆಂದು ನಿರ್ಣಯ ಮಾಡಿತ್ತು. ಫೆಬ್ರವರಿ ತಿಂಗಳಲ್ಲಿ ಇದೇ ಕೊನೆಯ ಗಡವು, ಏಪ್ರಿಲ್ ೨೪ರ ನಂತರ ಸಮಯ ಸಿಕ್ಕುವುದಿಲ್ಲವೆನ್ನುವ ಸ್ಪಷ್ಟವಾದ ನಿಲುವನ್ನು ಹೇಳಿತ್ತು.

" Writ petition is adjourned to 24-4-1990 for final hearing and is to be listed at the top of the list. No further adjournment shall be granted. " ಎಂದು ಹೇಳುತ್ತಾರೆ. The Advoccte General of the States of Karnataka and Tamil Nadu are present in the court. The Solicitor General of India is present in the Court. The Tamilnadu Advocate General insists that there shall not be a further adjourment. ಆದ್ದರಿಂದ ಈ ಸನ್ನಿವೇಶದಲ್ಲಿ ನಾವು ಏನನ್ನು ನೋಡಬಹುದು ? ೨೪ನೇ ತಾರೀಖು ಸರ್ವೋಚ್ಚ ನ್ಯಾಯಾಲಯ ತಾನು ನಿರ್ಣಯ ಮಾಡತಕ್ಕಂಥ ನಿರ್ಧಾರವನ್ನು ಬಹುತೇಕವಾಗಿ ಫೆಬ್ರವರಿಯಲ್ಲಿಯೇ ಹೇಳಿತ್ತು.

" Learned Solicitor General has told as that in the month of March, the Chief Ministers of the two States shall meet. "

ಇದನ್ನು ಕೇಂದ್ರ ಸರ್ಕಾರದವರು ಹೇಳಿದರು. ನಾನು ಕೇಳುತ್ತೇನೆ, ಅಂತಿಮವಾಗಿ ಏಪ್ರಿಲ್ ೨೪ಕ್ಕೆ ಸರ್ವೋಚ್ಚ ನ್ಯಾಯಾಲಯದ ತೀರ್ಪು ಬರುತ್ತದೆಬಂದು ತಮಗೆ ಗೊತ್ತಿರಲಿಲ್ಲವೆ ? ಆ ಪೂರ್ವಭಾವಿಯಾಗಿ ೪ ತಿಂಗಳ ಕಾಲ ಎಲ್ಲಾ ಪ್ರತಿ ಪಕ್ಷಗಳನ್ನು ನಂಬಿಕೆಗೆ, ವಿಶ್ವಾಸಕ್ಕೆ ತೆಗೆದುಕೊಂಡು ನಮ್ಮ ಅಭಿಪ್ರಾಯವನ್ನು ಕೇಂದ್ರ ಸರ್ಕಾರಕ್ಕೆ ಹೇಳಬೇಕಕು ಪ್ರಧಾನ ಮಂತ್ರಿಗಳನ್ನು ಮತ್ತು ಸಂಬಂಧಪಟ್ಟ ಮಂತ್ರಿಗಳನ್ನು ಭೇಟಿ ಮಾಡಬೇಕೆಂಬ ಪ್ರಯತ್ನ ಈ ಸರ್ಕಾರದಿಂದ ಆಗಲಿಲ್ಲ. ಅದಕ್ಕಾಗಿ ಹೇಳಿದೆ. ಸಭೆಯನ್ನು ಏಪ್ರಿಲ್ ೧೦ಕ್ಕೆ ಕರೆದು ಅಷ್ಟು ಹೊತ್ತಿಗೆ ಮುಖ್ಯಮಂತ್ರಿಗಳು ೫ನೇ ತಾರೀಖಿನ ಸಭೆಯಲ್ಲಿ ಈ ರಾಜ್ಯದ ಅಭಿಪ್ರಾಯವನ್ನು ಹೇಳಿಬಂದು ಸಭೆ ಕರೆದರು. ೨೪ನೇ ತಾರೀಖು ಸರ್ವೋಚ್ಚ ನ್ಯಾಯಾಲಯದ ತೀರ್ಪು ಏನು ಬರುತ್ತದೆ ಆ ಕಾರಣದಿಂದ ನಮ್ಮ ಅಭಿಪ್ರಾಯವನ್ನು ಕೇಂದ್ರ ಸರ್ಕಾರಕೆ ಹೇಳಬೇಕು ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಬೇಕು. ೨೪ಕ್ಕೆ ಅಂತಿಮವಾಗಿ ನಿರ್ಣಯ ಕೊಡತಕ್ಕದ್ದು ಇರುವುದರಿಂದ ೨೩ನೇ ತಾರೀಖು ಸಾಯಂಕಾಲ ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಿ ನಂತರ ಕೇಂದ್ರದ ಮಂತ್ರಿಯಾಗಿರತಕ್ಕ ಕೊಠಾರಿಯವರನ್ನು ಭೇಟಿ ಮಾಡುತ್ತಾರೆ. ಪ್ರಧಾನ ಮಂತ್ರಿಗಳು ಒಂದು ಸಲಹೆ ಕೊಟ್ಟಿದ್ದಾರೆ. ಅದನ್ನು ಹೇಳಬೇಕಾಗಿತ್ತು. ಅವರು ಅದನ್ನು ಫಾಲೋ ಮಾಡಿದ್ದಾರೆಂದು ಹೇಳುವುದಿಲ್ಲ. ಆ ದಿವಸ ಏನು ಹೇಳಿದರು, ಇಂತಹ ಅಂತರರಾಜ್ಯ ಸಮಸ್ಯೆಗಳನ್ನು ಚರ್ಚೆಯ ಮೂಲಕ ಪರಿಹರಿಸುವುದಕ್ಕೆ ಅತ್ಯಂತ ಪ್ರಮುಖವಾದ ಒಂದು ವೇದಿಕೆಯು ಈಗ ಅಸ್ತಿತ್ವದಲ್ಲಿ ಬರುವುದು ಇದೆ. ಅದು ಇಂಟರ್‌ಸ್ಟೇಟ್ ಕೌನ್ಸಿಲ್. ಇಂಟರ್‌ಸ್ಟೇಟ್ ಕೌನ್ಸಿಲ್ ಅಸ್ತಿತ್ವಕ್ಕೆ ಬಂದರೆ ಇಂಥ ವಿಭಿನ್ನ ರಾಜ್ಯಗಳಿಗೆ ಇರತಕ್ಕ ವಿಚಾರಗಳನ್ನು ಚರ್ಚಿಸುವುದಕ್ಕೆ ಅದೊಂದು ಶ್ರೇಷ್ಠವಾದ ವೇದಿಕೆ ಆಗಬಹುದು. ಆ ವೇದಿಕೆಯನ್ನು ಬಳಸಿಕೊಳ್ಳುವುದಕ್ಕೆ ಪ್ರಯತ್ನ ಮಾಡೋಣ ಎಂದು ಹೇಳಿದರು. ಎಲ್ಲರೂ ಒಪ್ಪಿಕೊಂಡವು ಅದಾದ ಮೇಲೆ ದುರ್ದೈವದಿಂದ ೨೪, ೨೫ ಮತ್ತು ೨೬ನೇ ತಾರೀಖು ಇದರ ಮೇಲೆ ಏನು ಕಾರ್ಯಾಚರಣೆಯಾಯಿತು ಎಂಬುದು ನಮಗೆ ಗೊತ್ತಿಲ್ಲ. ತಮಗೂ ಪ್ರಧಾನ ಮಂತ್ರಿಗಳಿಗೂ ಏನು ನಡೆಯಿತು ಆಮೇಲೆ ಎಂದು ನಮಗೆ ಗೊತ್ತಿಲ್ಲ. ನಾವು ಮೆಮೋರ್‍ಯಾಂಡಂ ಕೊಟ್ಟು ಬಂದೆವು, ಈಗ ಇಂಟರ್ ಸ್ಟೇಟ್ ಕೌನ್ಸಿಲ್ ಅಸ್ತಿತ್ವಕ್ಕೆ ಬಂದಿದೆ. ಪ್ರಧಾನ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಇಂಟರ್ ಸ್ಟೇಟ್ ಕೌನ್ಸಿಲ್ ಕಾರ್ಯ ನಿರ್ವಹಿಸುತ್ತದೆ. ಆ ಕೌನ್ಸಿಲ್‌ನಲ್ಲಿ ತಾವು ಮುಖ್ಯಮಂತ್ರಿಗಳಾಗಿ ಸದಸ್ಯರಿದ್ದೀರಿ. ಆ ಒಂದು ವೇದಿಕೆಯಲ್ಲಿ ಪ್ರಧಾನ ಮಂತ್ರಿಗಳು ಕೊಟ್ಟಂತಹ ಆಶ್ವಾಸನೆಯ ಆಧಾರದ ಮೇಲೆ ಪುನ: ಪರಿಶೀಲಿಸಿ. ಇಂದು ಈ ನಿರ್ಣಯವನ್ನು ಪರಿಶೀಲನೆ ಮಾಡತಕ್ಕ ಪ್ರಯತ್ನವನ್ನು ತಾವು ಮಾಡಿದ್ದೀರಾ ? ಇದನ್ನು ಸದನದ ಗಮನಕ್ಕೆ ತರಬೇಕೆಂದು ತಮ್ಮಲ್ಲಿ ಪ್ರಾರ್ಥಿಸುತ್ತೇನೆ. ಸರ್ವೋಚ್ಚ ನ್ಯಾಯಾಲಯದ ನಿರ್ಣಯ ಬಂದಮೇಲೆ ಚರ್ಚೆಯ ಬಾಗಿಲು ಹಾಕಿದೆ ಎಂಬ ಅಭಿಪ್ರಾಯದ ಅಗತ್ಯವಿಲ್ಲ. ನನಗೆ ಈಗಲೂ ನೆನಪಿದೆ. ೧೯೭೭-೭೮ರ ಸಮಯ ಇರಬೇಕು. ಆಗ ನಮ್ಮ ಬಚಾವತ್ ಟ್ರಿಬ್ಯುನಲ್‌ನಿಂದ ತೀರ್ಪು ಬಂದಿತ್ತು. ಆಗ ದೇವರಾಜ ಅರಸುರವರು ಮುಖ್ಯಮಂತ್ರಿಗಳಾಗಿದ್ದರು. ಕಮಿಟ್‌ಮೆಂಟ್ಸ್ ಎಷ್ಟು ಇತ್ತು ಅವರಿಗೆ ಎಂಬುದಕ್ಕೆ ಹೇಳುತ್ತೇನೆ. ಶ್ರೀಮಾನ್ ಲಿಂಗ್ ಅವರು ಆಪ್ತ ಕಾರ್ಯದರ್ಶಿಯಾಗಿದ್ದರು. ನನಗೆ ನೆನಪಿರುವಂತೆ ನರಸಿಂಹರಾವ್ ಅವರು ರಾಜ್ಯದ ಮುಖ್ಯ ಕಾರ್ಯದರ್ಶಿಯಾಗಿದ್ದರು. ತೀರ್ಪು ಒಂದ ಮೇಲೆ ಸಮಾಧಾನವಾಗಿಲ್ಲವೆಂದು ಮರು ಪರಿಶೀಲನೆಗೆ ಅರ್ಜಿ ಹಾಕಬೇಕೆಂಬ ಸಂದರ್ಭದಲ್ಲಿ ಇದನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ ಅಂದಾಗ ರಾಜ್ಯದ ಮುಖ್ಯಮಂತ್ರಿಗಳು ತೆಗೆದುಕೊಂಡ ನಿಲುವು ಪ್ರಶಂಸನೀಯವಾದುದು. ರಾಜ್ಯದ ಹಿತದ ಬಗ್ಗೆ ಎಂತಹ ಕಠಿಣತರವಾದ ನಿಲುವನ್ನು ತೆಗೆದುಕೊಳ್ಳುತ್ತಿದ್ದರು ಎಂಬುದನ್ನು ಸದನದ ಗಮನಕ್ಕೆ ತರುತ್ತಿದ್ದೇನೆ. ಬಚಾವತ್ ಅವಾರ್ಡ್‌ನಲ್ಲಿ ಅನ್ಯಾಯವಾಗಿದೆ. ಆದ್ದರಿಂದ ಮರುಪರಿಶೀಲನೆ ಮಾಡತಕ್ಕ ಅರ್ಜಿ ಹಾಕಬೇಕು ಎಂದು ಕರ್ನಾಟಕ ಭವನಕ್ಕೆ ಬಂದೆವು. ಈಗ ರಿವ್ಯೂ ಪಿಟಿಷನ್ ಹಾಕಿ ಎಂದು ಏನು ಒತ್ತಾಯ ಮಾಡಿದೆವು ಅಂಥದ್ದೇ ಒಂದು ಸನ್ನಿವೇಶ ಆಗ ಇತ್ತು. ಆಗ ಮಾನ್ಯ ದೇವರಾಜ ಅರಸು ಅವರು ನಾವು ಟ್ರಿಬ್ಯುನಲ್‌ನಿಂದ ವಾಕ್ ಔಟ್ ಮಾಡಿ ಎಂದು ಸಲಹೆ ಕೊಟ್ಟರು. ಅಡ್ವೊಕೇಟ್ ಜನರಲ್ ಬೈರಾರೆಡ್ಡಿಯವರು ಟ್ರಿಬ್ಯುನಲ್‌ನಿಂದ ಹೊರ ಬರತಕ್ಕ ಧೈರ್ಯವಾದ ಕೆಲಸ ಮಾಡಿದರು. ಪತ್ರಿಕೆಗಳಲ್ಲಿ ಮುಖಪುಟಗಳಲ್ಲಿ ಬಂತು. ಏನು ? ಕಂಟೆಂಪ್ಟ್ ಆಫ್ ಕೋರ್ಟ್ ಆಯಿತು ಎಂದು. ಮುಖ್ಯ ಕಾರ್ಯದರ್ಶಿಯವರಾದ ನರಸಿಂಹರಾಯರು ಓಡಿ ಬಂದು ಅರಸು ಅವರಿಗೆ ಕಂಟೆಂಪ್ಟ್ ಆಫ್ ಕೋರ್ಟ್ ಆಯಿತು ಏನು ಗತಿ ಎಂದುಹೇಳಿದರು. ಕಂಟೆಂಪ್ಟ್ ಆಫ್ ಕೋರ್ಟ್ ಆದರೆ ನಾನು ಮತ್ತು ಬೈರಾರೆಡ್ಡಿಯವರು ಜೈಲಿಗೆ ಹೋಗುತ್ತೇವೆ. ನಿಮ್ಮನ್ನು ಕಳುಹಿಸುವುದಿಲ್ಲ ಎಂದು ಹೇಳಿದರು. ನನ್ನ ಸರ್ಕಾರ ಈ ರಾಜ್ಯದ ಹಿತ ಕಾಪಾಡಬೇಕಾದ ಸಂದರ್ಭ ಬಂದಾಗ ಜೈಲಿಗೆ ಹೋಗುವುದಕ್ಕೂ ಸಿದ್ಧನಾಗುತ್ತೇನೆ, ಆದರೆ ನಿಮ್ಮನ್ನು ಕಳುಹಿಸುವುದಿಲ್ಲ ಎಂದು ಅರಸು ಅವರು ಹೇಳಿದರು. ಆದರ ಪರಿಣಾಮ ಏನಾಯಿತು ? ಅಂಥ ಒಂದು ಗಟ್ಟಿಯಾದ ನಿಲುವನ್ನು ತೆಗೆದುಕೊಂಡಿದ್ದರಿಂದ ಬಚಾವತ್ ಅವಾರ್ಡ್‌ನಲ್ಲಿ ಪುನ: ಅದನ್ನು ರಿವ್ಯೂ ಮಾಡತಕ್ಕ

ಅವಕಾಶ ಸಿಕ್ಕಿತು. ೧೯೭೬ರಲ್ಲಿ ಏನು ಬಚಾವತ್ ಅವಾರ್ಡ್ ಬಂದಿತ್ತು ಅದು ಬದಲಾವಣೆಯಾಯಿತು. ೧೯೭೩ರಲ್ಲಿ ೨೦೬೦ ಟಿ. ಎಂ. ಸಿ. ಒಟ್ಟಾರೆ ಲಭ್ಯವಾಗತಕ್ಕ ನೀರು ಎಂದು ತೀರ್ಮಾನಿಸಿ ಕರ್ನಾಟಕಕ್ಕೆ ೬೯೫ ಟಿ. ಎಂ. ಸಿ. ಕೊಟ್ಟಿದ್ದರು. ಆಂಧ್ರಪ್ರದೇಶಕ್ಕೆ ೮೦೦ ಟಿ. ಎಂ. ಸಿ. ಕೊಟ್ಟಿದ್ದರು ಮಹಾರಾಷ್ಟ್ರಕ್ಕೆ ೫೬೫ ಟಿ. ಎಂ. ಸಿ. ಕೊಟ್ಟಿದ್ದರು. ಅದನ್ನು ಮರು ಪರಿಶೀಲನೆ ಮಾಡಿ ಕರ್ನಾಟಕಕ್ಕೆ ೭೦೦ ಟಿ. ಎಂ. ಸಿ. ಕೊಟ್ಟರು. ಮಹಾರಾಷ್ಟ್ರಕ್ಕೆ ೫ ಟಿ. ಎಂ. ಸಿ. ಕಡಿಮೆ ಮಾಡಿದರು. ಹೆಚ್ಚು ಲಾಭ ರಾಜ್ಯಕ್ಕೆ ಬಂತು. 'Rejnvenation of water resources' ಆಕಾಲಕ್ಕೆ ಶೇಕಡ ೫ರಷ್ಟು ಲೆಕ್ಕಕ್ಕೆ ತೆಗೆದುಕೊಂಡಿದ್ದರು. ಅದನ್ನು ಶೇಕಡ ೧೦ಕ್ಕೆ ಏರಿಸಬೇಕೆಂಬ ತೀರ್ಪು ಬಚಾವತ್ ಅವಾರ್ಡ್‌ನಿಂದ ಬಂತು. ಇದರಿಂದ ೩೪ ಟಿ. ಎಂ. ಸಿ. ಜಾಸ್ತಿ ನೀರು ಸಿಕ್ಕಿತು. ಕರ್ನಾಟಕಕ್ಕೆ ಸರ ಪ್ಲಸ್ ೩೩ ೧/೩ ಇದ್ದದ್ದು, ೫೦ ಬಂತು. ಆಂಧ್ರ ಪ್ರದೇಶಕ್ಕೆ ಮಹಾರಾಷ್ಟ್ರಕ್ಕೆ ಶೇಕಡ ೨೫ ಹೆಚ್ಚಿಗೆ ಆಯಿತು. ನಾನು ಹೇಳುವ ಉದ್ದೇಶ ರಾಜ್ಯದ ಹಿತ ಬಂದಾಗ ಗಟ್ಟಿ ನೆಲದಲ್ಲಿ ನಿಂತುಕೊಂಡು ಶಾಸನಸಭೆಯನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಮುಖ್ಯಮಂತ್ರಿಗಳು ಇಲ್ಲಿಯೂ ಕೂಡ ಗಡುಸು ನಿಲುವು ತೆಗೆದುಕೊಳ್ಳಬೇಕಾಗುತ್ತದೆ ಎಂಬುದು. ಸರ್ವೋಚ್ಚ ನ್ಯಾಯಾಲಯದ ವಿರುದ್ಧ ಚರ್ಚೆ ಮಾಡುತ್ತೇವ ಎಂದಲ್ಲ. ಕರ್ನಾಟಕ ರಾಜ್ಯದ ರಾಜಧಾನಿ ಬೆಂಗಳೂರಲ್ಲ ಮದ್ರಾಸ್ ಎಂದರೆ ಇದನ್ನು ಒಪ್ಪಿಕೊಳ್ಳತಕ್ಕದ್ದಲ್ಲ. ಬೆಂಗಳೂರು ಎಂದು ಹೇಳಲೇ ಬೇಕಾಗುತ್ತದೆ. ಸರ್ವೋಚ್ಚ ನ್ಯಾಯಾಲಯದ ತೀರ್ಪು ಕೊಟ್ಟರೆ ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಕೆಲವು ವಿಚಾರಗಳನ್ನು ಹೇಳಿದ್ದಾರೆ. ನನ್ನದೇ ಆದ ಸಲಹೆಯನ್ನು ಕೊನೆಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಅದಕ್ಕೆ ಪೂರ್ವಭಾವಿಯಾಗಿ ಕೆಲವು ಮಾತುಗಳನ್ನಾಡ ಬೇಕಾಗಿದೆ. ಪ್ರತಿಪಕ್ಷಗಳನ್ನು ಯಾವ ಕಾಲದಲ್ಲಿ ಗಣನೆಗೆ ತೆಗೆದುಕೊಂಡು ಅದರ ವಿಶ್ವಾಸವನ್ನು ಪಡೆದು ಈ ಇಷ್ಟೂ ತೆಗೆದುಕೊಂಡು ಹೋಗಬೇಕಾಗಿತ್ತೋ ಆ ಸಮಯ ದಾಟಿ ಕೈತಪ್ಪಿ ಹೋಗುತ್ತದೆ ಎಂದಾಗ ಆ ಹೊರೆಯನ್ನು ನಾನೊಬ್ಬನೇ ಏತಕ್ಕೆ ಹಂಚಿಕೊಳ್ಳಲಿ ಎಲ್ಲರೂ ಸೇರಿ ಹಂಚಿಕೊಳ್ಳೋಣ ಎಂದು ಸಭೆ ಕರೆದಿದ್ದಾರೆ ಎಂಬ ಭಾವನೆ ನನಗೆ ಬಂದಿತ್ತು ಸರ್ಕಾರ ಅಧಿಕಾರಕ್ಕೆ ಬಂದಾಗ ಇದ್ದಂಥ ಸ್ಥಿತಿ ಏನು ? ಎರಡು ಮುಖ್ಯವಾದ ಅಂಶಗಳನ್ನು ನಾವು ಗಮನಿಸಬೇಕು. ಜನವರಿ ೨೩-೧೯೮೯ರಲ್ಲಿ ಡಿ. ಎಂ. ಕೆ. ಸರ್ಕಾರದ ಅಧಿಕಾರ ಸ್ವೀಕಾರ ಸಮಾರಂಭ ಮದ್ರಾಸಿನಲ್ಲಿ ನಡೆಯಿತು. ಆಗ ಕರ್ನಾಟಕದ ಮುಖ್ಯಮಂತ್ರಿಗಳಾದ ಶ್ರೀ ಬೊಮ್ಮಾಯಿಯವರು ಆ ಸಂದರ್ಭದಲ್ಲಿ ಹಾಜರಿದ್ದರು. ಆಗ ಕರುಣಾನಿಧಿಯವರು ಒಂದು ಮಾತನ್ನು ಹೇಳಿದರು. ನನಗೆ ಸರಿಯಾದ ಪದಗಳು ಸಿಕ್ಕಿಲ್ಲ. ಆದರೆ ಅದರ ಭಾವಾರ್ಥ ಏನು ಎಂದರೆ ಕರ್ನಾಟಕಕ್ಕೂ ತಮಿಳುನಾಡಿಗೂ ಇರತಕ್ಕ ಯಾವುದೇ ಸಮಸ್ಯೆಗಳನ್ನು ನಾವು ಮಾತುಕತೆಗಳ ಮೂಲಕ ಪರಿಹರಿಸಿಕೊಳ್ಳೋಣ, ಮಾತುಕತೆಗಳ ಮೂಲಕ ಪರಿಹರಿಸಿಕೊಳ್ಳತಕ್ಕ ವಿಶ್ವಾಸ ನನಗಿದೆ ಅಂಥ ನಿರ್ಣಯವನ್ನು ಮದ್ರಾಸಿನಂಥ ನಗರದಲ್ಲಿ ಒಂದು ಬಹಿರಂಗ ಸಭೆ ಕರೆದು ಹೇಳೋಣ ಎಂಬುವಷ್ಟು ದೂರಕ್ಕೆ ಸಂಬಂಧ ಚೆನ್ನಾಗಿತ್ತು.

ಅಷ್ಟು ಸುಮಧುರ ಇದ್ದಂತಹ ಸಂಬಂಧ, ನಿಮ್ಮ ಜೊತೆ ಮಾತೇ ಆಡುವುದಕ್ಕೆ ಸಿದ್ಧ ಇಲ್ಲ ಎನ್ನುವಷ್ಟು ಕೆಡಿಸಿದ್ದಾರೆ. ಈ ಕೀರ್ತಿಯನ್ನು ನಾನು ಯಾರ ಕೊರಳಿಗೆ ಕಟ್ಟಬೇಕು ಹೇಳಿ? ಅಷ್ಟು ಸುಮಧುರ ಸಂಬಂಧವನ್ನು ಮಾತನಾಡಬಾರದಂತಹ ಸ್ಥಿತಿಗೆ ತಂದ ಕೀರ್ತಿ ನಮಗೆ ಅಲ್ಲ. ಈ ಸ್ಥಿತಿಗೆ ಕೊಂಡೊಯ್ದು ಕೀರ್ತಿ ತಮ್ಮ ಕೊರಳಿಗೆ ಕಟ್ಟಬೇಕು.

ಶ್ರೀ ವೀರೇಂದ್ರ ಪಾಟೀಲ್.— ಚಂದ್ರೇಗೌಡರೇ, ಕ್ಷಮಿಸಬೇಕು. ಯಾವ ಮಾರ್ಗದಲ್ಲಿ ಚರ್ಚೆಯಾಗಬೇಕೋ ಅದು ಆಗುತ್ತಾ ಇಲ್ಲ. ಅದನ್ನು ನಿಮಗೆ ಬಿಡುತ್ತೇನೆ, ಮನಸ್ಸಿಗೆ ಬಂದಹಾಗೆ ಮಾತನಾಡಬಹುದು. ಪ್ರಮಾಣವಚನ ಸ್ವೀಕಾರ ಮಾಡುವ ಮುನ್ನ ಕರುಣಾನಿಧಿಯವರು ಬೊಮ್ಮಾಯಿ ಯವರಿಗೆ ಏನು ಹೇಳಿದರು ಎಂಬುದನ್ನು ಹೇಳಿದಿರಿ. ಇದೇ ರೀತಿಯಲ್ಲಿ ಎಲ್ಲಾ ವಿವಾದಗಳ ಬಗ್ಗೆ ಮಾತುಕತೆ ಇತ್ಯರ್ಥ ಮಾಡಿ ಇಲ್ಲೇ ಪ್ರಾರಂಭೋತ್ಸವ ಮಾಡುತ್ತೇನೆ ಘೋಷಣೆ ಮಾಡುತ್ತೇನೆಂದು ಹೇಳಿದ ಕರುಣಾನಿಧಿಯವರು ಈ ಮಾತನ್ನು ಯಾವಾಗ ಹೇಳಿದರು? ಆಗ ಕೇಂದ್ರದಲ್ಲಿ ಯಾವ ಸರ್ಕಾರ ಇತ್ತು? ಕರುಣಾನಿಧಿಯವರು ಒಂದು ವರ್ಷದಲ್ಲಿ ತಮ್ಮ ಆಟಿಟ್ಯೂಡ್ ಚೇಂಜ್ ಮಾಡಿದ್ದರು? ಆಗ ಕೇಂದ್ರದಲ್ಲಿ ಯಾವ ಸರ್ಕಾರ ಇತ್ತು? ಈಗ ಯಾವ ಸರ್ಕಾರ ಇದೆ? ಇದನ್ನೆಲ್ಲಾ ನಾನು ಹೇಳುವುದಕ್ಕೆ ಇಷ್ಟ ಇರಲಿಲ್ಲ. ನೀವು ಪ್ರವೋಕ್ ಮಾಡುತ್ತಿರುವುದರಿಂದ ಹೇಳಬೇಕಾಗಿ ಬಂತು. ಈಗ ಕೇಂದ್ರದಲ್ಲಿ ನ್ಯಾಷನಲ್ ಫ್ರಂಟ್ ಸರ್ಕಾರ ಇದೆ, ಅವರ ಕೈ ಹಿಡಿದು ಏನು ಬೇಕಾದರೂ ಬರೆಸಿಕೊಳ್ಳುತ್ತೇವೆ ಎನ್ನುವ ಒಂದು ಮನೋಸ್ಥೈರ್ಯ ಬಂದು ಈ ರೀತಿಯಿಂದ ಹೇಳಿದ್ದಾರೆಯೇ ಹೊರತು, ತಾವು ಇದಕ್ಕೆ ಕಥೆ ಕಟ್ಟುವುದಕ್ಕೆ ಹೋಗಬೇಡಿ ಏಕೆಂದರೆ ಒಂದು ವರ್ಷದ ಹಿಂದೆ ಈ ರೀತಿ ಹೇಳಿದಂತಹ ಒಬ್ಬ ಕರುಣಾನಿಧಿ ಒಂದು ವರ್ಷದೊಳಗೆ ತನ್ನ ಆಟಿಟ್ಯೂಡ್ ಛೇಂಜ್ ಮಾಡುತ್ತಾರೆ. ಆತ ಹೇಳಿದಾಗ ಸೆಂಟ್ರಲ್ ಗೌರ್ನಮೆಂಟ್ ಒಂದು ಪಾರ್ಟಿಯ ಕೈಲಿತ್ತು. ಈಗ ತನ್ನ ಪಾರ್ಟಿ ಇದೆ ಎಂದು ಆಟಿಟ್ಯೂಡ್ ಚೇಂಜ್

ಮಾಡಿದ್ದಾರೆ. ಅದನ್ನು ನೀವು ಇಂಟರ್‌ಪ್ರಿಟ್ ಮಾಡುತ್ತೀರೇ ಹೊರತಾಗಿ ಈ ಪಕ್ಷದ ಮೇಲೆ ಗೂಬೆ ಕೂರಿಸುವ ಕೆಲಸ ಮಾಡಬಾರದು. ತಮ್ಮ ಭಾಷಣ ಕೇಳಿ ನಿಜವಾಗಿಯೂ ಬಹಳ ವಿಷಾದವಾಗುತ್ತದೆ. I am sorry, such an important thing, you are making it as a party Issue.

SRI D.B. CHANDRE GOWDA -- No certainly not. ನಾನು ಹೇಳುತ್ತೇನೆ. ಸರ್ಕಾರದ ಜವಾಬ್ದಾರಿಯನ್ನು ಹೊತ್ತ ನೀವೂ ಕೂಡಾ ಜವಾಬ್ದಾರರಾಗುತ್ತೀರಿ.

SRI VEERENDRA PATIL.— If he feels that the interests of the State, interests of the people and the farmars of Cauvery basin are going to be safegarded and further strengthened by such a statement, let him say it. I have absolutely no objection.

ಶ್ರೀ ಡಿ.ಬಿ. ಚಂದ್ರೇಗೌಡ.— ಕೇಂದ್ರದಲ್ಲಿ ಸರ್ಕಾರದ ಬದಲಾವಣೆ ಆಯಿತು ಎಂದು ಹೇಳಿದಿರಿ. ಈ ಬಗ್ಗೆ ಕೇಂದ್ರ ಸರ್ಕಾರದ ನಿಲುವು ಏನು ಇತ್ತು? ರಾಷ್ಟ್ರಪತಿಗಳು ತಮ್ಮ ಭಾಷಣದಲ್ಲಿ ಏನು ಹೇಳಿದರು? ಕೇಂದ್ರ ಸರ್ಕಾರದ ನಿಲುವಿನಲ್ಲಿ ಬದಲಾವಣೆಯಾಯಿತೆಂದು ತಾವು ಹೇಳಿದಿರಿ. ಅದನ್ನು ನಾನು ಒಪ್ಪಿಕೊಳ್ಳುವುದಕ್ಕೆ ಸಿದ್ಧನಿಲ್ಲ. ಕೇಂದ್ರ ಸರ್ಕಾರ ಏನು ಹೇಳಿತು ಎನ್ನುವುದನ್ನು ನಾನು ಇಲ್ಲಿ ಕೋಟ್ ಮಾಡುತ್ತೇನೆ. ಅದನ್ನು ತಾವೇ ಬರೆದಿರತಕ್ಕದ್ದು. I would like to recall the President's Address in the year 1990. The President's Address before the Joint Session of Parliament. "Government is also committed to find solution for inter-state water disputes through dialogues or negotiations with the concerned States". This is the stand of the Central Government i.e. the present Government.

SRI VEERENDRA PATIL -- Then why did they change that stand, why they said it is not possible and whatever Supreme Court states they abide by that deicision?

ಶ್ರೀ ಡಿ.ಬಿ. ಚಂದ್ರೇಗೌಡ.— ಆ ಒಂದು ಕಾರಣದಿಂದಲೇ ನಾನು ಹೇಳಿದೆ, ಇಂತಹ ಸನ್ನಿವೇಶದ ಹಿನ್ನೆಲೆಯಲ್ಲಿ ನೀವು ಸರ್ಕಾರವನ್ನು ಮಾಡಿದ್ದೀರಿ. ಕೇಂದ್ರ ಸರ್ಕಾರದ ಒಲವೂ ಇತ್ತು, ಕರುಣಾನಿಧಿಯವರ ಒಲವೂ ಇತ್ತು. ಇದರ ಲಾಭವನ್ನು ನೀವು ಪಡೆಯಲಿಲ್ಲ ಎಂದು ನನ್ನ ಛಾರ್ಜ್. ಅದೇ ರೀತಿ ತಮಿಳುನಾಡಿನ ಲೋಕೋಪಯೋಗಿ ಮಂತ್ರಿಗಳಾದ...

ಶ್ರೀ ಎಂ. ವೀರಪ್ಪ ಮೊಯ್ಲಿ.— ತಾವು ಈಗ ಆದರೆ ಒಂದು ವಿಷಯ ಹೇಳುತ್ತೇನೆ. ಕೇಂದ್ರದಲ್ಲಿ ರಾಷ್ಟ್ರೀಯ ರಂಗದ ಸರ್ಕಾರ ಅಧಿಕಾರಕ್ಕೆ ಬಂದಿದೆ. ಇದಕ್ಕೂ ಮೊದಲು ಡಿಸ್‌ಪ್ಯೂಟ್ ಇದ್ದಾಗಲೂ ೨೦ ವರ್ಷಗಳ ಕಾಲ ಕಾಂಗ್ರೆಸ್ ಸರ್ಕಾರ ಕೇಂದ್ರದಲ್ಲಿ ಅಧಿಕಾರದಲ್ಲಿ ಇತ್ತು. ಅವರು ನೆಗೋಷಿಯೇಷನ್ಸ್‌ಗೆ ಪ್ರಯತ್ನ ಮಾಡುತ್ತಿದ್ದರು. ತಾವು ಒಂದು, ತಮ್ಮ ಮುಖಕ್ಕೆ ಒಂದೇ ಒಂದು ಪ್ರಯತ್ನ ನೆಗೋಷಿಯೇಷನ್ಸ್ ಬಗ್ಗೆ ಕೇಂದ್ರ ಸರ್ಕಾರದವರು ಮಾಡಿದ್ದರೆ ತಾವು ಈ ಮಾತನ್ನು ಹೇಳಬಹುದಿತ್ತು. ಒಂದೇ ಒಂದು ಪ್ರಯತ್ನ ಮಾಡದೇ ಇವತ್ತು ಸಂಪೂರ್ಣವಾಗಿ, ಕರುಣಾನಿಧಿ ಶಾಮೀಲಾಗಿ ಈ ಕೆಲಸ ಮಾಡುವುದಕ್ಕೆ. ತಾವು ಇವತ್ತು ಈ ವಿಷಯವನ್ನು ತಲೆ ತಗ್ಗಿಸಿ ಮಾತನಾಡಬೇಕು. ಮುಖ ಎತ್ತಿ ಮಾತನಾಡುವುದಕ್ಕೆ ನಿಮಗೆ ಅಧಿಕಾರ ಇಲ್ಲ, totally betraying the interests of the State and you want to join them.

ಶ್ರೀ ಡಿ.ಬಿ. ಚಂದ್ರೇಗೌಡ.— ಯಾರ ಮುಖಕ್ಕೆ ಯಾರು ಬಡಿಯಬೇಕು ಎಂದು ಜನರು ಮಾತನಾಡುತ್ತಾರೆ. ಒಂದೂ ಪ್ರಯತ್ನ ಮಾಡಲಿಲ್ಲವೆಂದು ಹೇಳಬೇಡಿ. ಏಪ್ರಿಲ್ ೫ನೇ ತಾರೀಖು ಸಭೆಯನ್ನು ಯಾರು ಕರೆದರು? ಕೇಂದ್ರ ಸರ್ಕಾರ ಸಭೆಯನ್ನು ಕರೆದಿತ್ತು. ಸಭೆಯಲ್ಲಿ ಏಕಾಏಕಿ ಹೋಗಿ ಹೇಳಿದ್ದಾರೆ. ಕೇಂದ್ರ ಸರ್ಕಾರ ಪ್ರಯತ್ನ ಮಾಡಲಿಲ್ಲವೆಂದು ಹೇಳಬೇಡಿ. ಏಪ್ರಿಲ್ ೫ನೇ ತಾರೀಖು ಸಭೆಯನ್ನು ಕರೆದಿದ್ದು ಕೇಂದ್ರ ಸರ್ಕಾರ ನೀವು ಆ ಸಭೆಯಲ್ಲಿ ಭಾಷಣ ಮಾಡಿದ್ದೀರಿ. ಅದು ಆದಮೇಲೆ ಏಪ್ರಿಲ್ ೨೬ನೇ ತಾರೀಖು ನಡೆದ ಸಭೆಯಲ್ಲಿ ಏನಾಯಿತೆಂದು ಅವರು ಹೇಳಿದ್ದಾರೆ. ಅದಕ್ಕೆ ಪೂರ್ವಭಾವಿಯಾಗಿ ತಮಿಳುನಾಡು ಶಾಸನ ಸಭೆ ಏಕಪಕ್ಷೀಯವಾದ ನಿರ್ಣಯ ಮಾಡುತ್ತದೆ. ನಾನು ನಿಮ್ಮ ಜೊತೆ ಚರ್ಚೆಗೆ ಬರುವುದಿಲ್ಲವೆಂದು ಹೇಳಿ. ಈ ಹಿನ್ನೆಲೆಯನ್ನು ನೀವು ನೆನಪಿನಲ್ಲಿಟ್ಟುಕೊಳ್ಳಬೇಕಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.— ಅದಕ್ಕೆ ನಮಗೆ ಏನು ಸಂಬಂಧವಿರುತ್ತದೆ?

ಶ್ರೀ ಡಿ.ಬಿ. ಚಂದ್ರೇಗೌಡ.— ಸಂಬಂಧವೇನು ಎಂಬುದನ್ನು ಹೇಳುತ್ತೇನೆ. ಸಂಬಂಧವಿದೆ' ನೀವು ಏತಕ್ಕೆ ನಿರ್ಣಯ ಮಾಡಲಿಲ್ಲ? ತಮಿಳುನಾಡು ಶಾಸನಸಭೆ ನಿರ್ಣಯ ಮಾಡುತ್ತದೆ, ನೀವು ಏತಕ್ಕೆ ಮಾಡಲಿಲ್ಲ? ಈ ಸಭೆಯನ್ನು ತುರ್ತಾಗಿ ನೀವು ಕರೆದು ನಿರ್ಣಯವನ್ನು ನೀವು ಏತಕ್ಕೆ ಮಾಡಲಿಲ್ಲವೆಂದು ನನ್ನ ಆಪಾದನೆ. ನಮ್ಮ ಮುಖಕ್ಕೆ ಹೇಳುವುದಲ್ಲ! ಸಂಸದೀಯ ವ್ಯವಹಾರಗಳ ಮಂತ್ರಿಗಳ ಮುಖಕ್ಕೆ ಹೇಳುತ್ತೇನೆ. ಇಂತಹ ಒಂದು ತೀರ್ಮಾನ ಬರುತ್ತದೆಂದು ಗೊತ್ತಿದ್ದರೂ ಕೂಡ ಈವೊಂದು ಶಾಸನ ಸಭೆಯನ್ನು ಕರೆದು ಇಂತಹ ಒಂದು ನಿರ್ಣಯ ಏತಕ್ಕೆ ತೆಗೆದುಕೊಳ್ಳಲಿಲ್ಲವೆಂದು ನಾನು ಕೇಳುತ್ತಿದ್ದೇನೆ. ತಮಿಳುನಾಡಿನವರು ಒಂದಾಗಿದ್ದಾರೆ, ಕೇರಳದವರುಒಂದಾಗಿದ್ದಾರೆನ್ನುವ ಪ್ರಶ್ನೆ ಇಲ್ಲಿ ಬರುವುದಿಲ್ಲ. ನಾವು ನಮ್ಮ ಕರ್ತವ್ಯವನ್ನು ಮಾಡಿದ್ದೇವೆ, ನೀವು ಮಾಡಿದಂಥ ತಪ್ಪನ್ನು ನಿಮ್ಮ ಮುಖಕ್ಕೆ ಹೇಳದಿದ್ದರೆ ಶಾಸನಸಭೆಯಲ್ಲಿ ನಾನು ಇಲ್ಲಿ ಏತಕ್ಕೆ ಇರಬೇಕು? ನಾನು ಮಾಡಿದ್ದೇನೆಂದು ಹೇಳುತ್ತೇನೆ, ನಾನು ಪುನ; ಪುನ: ಹೇಳುತ್ತೇನೆ. ತಮಿಳುನಾಡಿನ ದೊರೈಮುರುಗನ್ ಎನ್ನುವವರು, ನೀವು ಮಾಡದೇ ಇರತಕ್ಕ, ನಿಭಾಯಿಸದೇ ಇರತಕ್ಕ ಜವಾಬ್ದಾರಿಯನ್ನು ಹೇಳಬೇಕಾದ್ದು ನನ್ನ ಕರ್ತವ್ಯ ಅದಕ್ಕಾಗಿ ನಾನು ಹೇಳುತ್ತೇನೆ. ಸಾಮೂಹಿಕ ನಿರ್ಣಯಕ್ಕೆ ಬರೋಣ. ನಾನು ಯಾರ ಪರವಾಗಿಯೂ ಮಾತನಾಡುತ್ತಿಲ್ಲ. ನಿಮ್ಮ ಅಪರಾಧಗಳನ್ನು ಹೇಳುತ್ತಿದ್ದೇನೆ. ಜನಗಳಿಗೆ ಗೊತ್ತಾಗಲಿ ಎಂದು ಹೇಳುತ್ತೇನೆ. ಈ ಸರ್ಕಾರ ಈ ವಿಚಾರದಲ್ಲಿ ಏನು ತಪ್ಪು ಮಾಡಿದೆಯೆಂದು ಈ ದೇಶದ ಜನಗಳಿಗೆ ಗೊತ್ತಾಗಬೇಕು.

ಶ್ರೀ ಕೆ. ಎಸ್. ಕಾಳಮರಿಗೌಡ.— ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವ ಧಾಟಿಯನ್ನು ನೋಡಿದರೆ ತಮಿಳುನಾಡಿನ ಪರವಾಗಿ ಮಾತನಾಡುತ್ತಿದ್ದಾರೆಂದು ಗೊತ್ತಾಗುತ್ತದೆ.

ಅಧ್ಯಕ್ಷರು.— ಮಾನ್ಯ ಸದಸ್ಯರು ಕುಳಿತುಕೊಳ್ಳಬೇಕು. ಮಾನ್ಯ ವಿರೋಧ ಪಕ್ಷದ ನಾಯಕರು ಈಲ್ಡ್ ಆದರೆ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ. ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ಒಂದು ಸೂಚನೆ. ತಾವು ಭಾಷಣ ಪ್ರಾರಂಭ ಮಾಡತಕ್ಕ ಸಂದರ್ಭದಲ್ಲಿ ಹೇಳಿದ್ದೀರಿ, ಇದು ಸೂಕ್ಷ್ಮವಾದ ವಿಚಾರ, ಒಡೆದು ಹೋಗಿರತಕ್ಕ ಹಾಲಿನ ಬಗ್ಗೆ ನಾವು ಚರ್ಚೆ ಮಾಡುತ್ತಿದ್ದೇವೆಂದು ಹೇಳಿದ್ದೀರಿ. ಆದ್ದರಿಂದ ಪರಸ್ಪರ ದೋಷಾರೋಪಣೆಗೆ ಹೆಚ್ಚು ಮಹತ್ವ ಕೊಡದೆ ಒಟ್ಟಾರೆ ಈ ಸದನ ಏನು ಮಾಡಬಹುದು ಎನ್ನುವುದರ ಬಗ್ಗೆ ತಾವು ಹೆಚ್ಚು ಕಾಲವನ್ನು ಉಪಯೋಗಿಸಿದರೆ, ಅದರಿಂದ ಅನುಕೂಲ ವಾದೀತು ಎಂದು ನಮ್ರತೆಯಿಂದ ನಾನು ಸೂಚನೆ ಕೊಡಲಿಕ್ಕೆ ಬಯಸುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.— ಇದು ಒಡೆದ ಹಾಲಲ್ಲ. ಸತ್ತಿರುವ ಹೆಣವನ್ನು ಗುಂಡಿಯಿಂದ ವಾಪಸ್ಸು ತೆಗೆದು ಪ್ರಾಣ ಕೊಡುವ ಪ್ರಯತ್ನ ಮಾಡುತ್ತಿದ್ದಾರೆ.

ಶ್ರೀ ಡಿ. ಬಿ. ಚಂದ್ರೇಗೌಡ.— ಈ ವಿಚಾರದಲ್ಲಿ ಜವಾಬ್ದಾರಿಯನ್ನು ಹೊತ್ತ ಸರ್ಕಾರ ತಾನು ಏನು ಮಾಡಬೇಕಾಗಿತ್ತೋ ಅದನ್ನು ಮಾಡಲಿಲ್ಲವೆಂದು ಈ ಸದನದ ಮೂಲಕ ತಮ್ಮ ಮೂಲಕ ಜನಗಳಿಗೆ ಹೇಳತಕ್ಕ ಕರ್ತವ್ಯ, ಜವಾಬ್ದಾರಿ ನನ್ನದು ಇದೆ, ಆ ಕಾರಣಕ್ಕಾಗಿ ನಾನು ಹೇಳಿಸಿದ್ದೇನೆ. ತಮಿಳುನಾಡಿನ ದುರೈಮುರುಗನ್‌ರವರು ಇಲ್ಲಿಗೆ ಬರುತ್ತಾರೆ. ಯಾವತ್ತು ಅಂದರೆ, ಜನವರಿ ೪ನೇ ತಾರೀಖು. ಮತ್ತೆ ೭ನೇ ತಾರೀಖು. ಇವರನ್ನು ನೋಡತಕ್ಕ ಸೌಜನ್ಯ ಕೂಡ ಈ ಸರ್ಕಾರಕ್ಕೆ ಇಲ್ಲ,

ಅಧ್ಯಕ್ಷರು.— ಅವರು ನೀರು ಕೇಳಲಿಕ್ಕೆ ಬಂದಿದ್ದರು ಎಂದು ಕಾಣುತ್ತದೆ.

ಶ್ರೀ ಡಿ.ಬಿ. ಚಂದ್ರೇಗೌಡ.— ಮಾನ್ಯ ಮುಖ್ಯಮಂತ್ರಿಗಳು ಅವರನ್ನು ೯ನೇ ತಾರೀಖು ನೋಡುತ್ತಾರೆ.

ಶ್ರೀ ವೀರೇಂದ್ರ ಪಾಟೀಲ್.— ವಿರೋಧ ಪಕ್ಷದ ನಾಯಕರು ಬಹುಶಃ ಇವತ್ತು ಏನೋ ಮನಸ್ಸು ಮಾಡಿಕೊಂಡು ಬಂದ ಹಾಗೆ ಕಾಣುತ್ತದೆ. ಏಕೆಂದರೆ He is pleading a very weak case. ಅಲ್ಲಿಂದ ತಾವು ಏನು ಅವರಿಗೆ ಅಪೀಲ್ ಮಾಡಿದಿರಿ, ಅದನ್ನೇ ನಾನು ಕೂಡ ಮಾಡುತ್ತಿದ್ದೇನೆ. ಸರ್ಕಾರವನ್ನು ಬಯ್ಯುವುದಕ್ಕೆ ಬೇಕಾದಷ್ಟು ಇದೆ. ಬಯ್ಯುವುದಕ್ಕೆ ಬೇಕಾದಷ್ಟು ಅಸ್ತ್ರಗಳು ಇವೆ. ದಯವಿಟ್ಟು ಕರ್ನಾಟಕ ರಾಜ್ಯದ ನಾಗರೀಕನಾಗಿ ನಾನು ನಿಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ಕಾವೇರಿ ವಿವಾದದ ಅಸ್ತ್ರದಿಂದ ಈ ಸರ್ಕಾರವನ್ನು ಬಯ್ಯುವುದಕ್ಕೆ ಹೋಗಬೇಡಿ. ನೀವು ಹೊಡೆಯುವ ಪೆಟ್ಟು ನಮಗೆ ಬೀಳುವುದಿಲ್ಲ. ನಿಮ್ಮ ಪೆಟ್ಟಿನಿಂದ ಕರ್ನಾಟಕ ರಾಜ್ಯದ ಜನತೆಗೆ ಹೊಡೆತ ಬೀಳುತ್ತದೆ. ರೈತರಿಗೆ ಬೀಳುತ್ತದೆ. ತಮಿಳುನಾಡಿನಿಂದ ಮಂತ್ರಿಗಳು

ಬಂದಿದ್ದರು. ಅವರನ್ನು ಭೇಟ್ಟಿಯಾಗುವುದಕ್ಕೆ ನಮಗೆ ಸೌಜನ್ಯ ಇಲ್ಲವೆಂದು ಹೇಳಿದಿರಿ. ಬಹುಶಃ ಮಾನ್ಯ ವಿರೋಧಪಕ್ಷದ ನಾಯಕರು ವಿಚಾರವನ್ನು ತಿಳಿದುಕೊಳ್ಳಬೇಕು. ನಿಮ್ಮ ಕರ್ತವ್ಯ ಅದು ಅವರು ಬರುವುದು ನನಗೆ ಗೊತ್ತಿಲ್ಲ. ಅವರು ಬರುವ ಕಾರ್ಯಕ್ರಮ ನಮಗೆ ಬಂದಿಲ್ಲ. ಅವರು ಬರುವ ದಿವಸ ನಾನು ಇರಲಿಲ್ಲ. ನಾನು ಉತ್ತರ ಕರ್ನಾಟಕದಲ್ಲಿ ಪ್ರವಾಸದಲ್ಲಿದ್ದೆ. ಅವರಿಗೆ ನಾನು ಒಂದು ಸಂದೇಶ ಕಳುಹಿಸಿದೆ. ನೋಡಿ ನನಗೆ ಬರುವುದಕ್ಕೆ ಇಷ್ಟು ದಿವಸ ಆಗುತ್ತದೆ ಅದಕ್ಕಾಗಿ ನೀವು ತಿರುಗಿಹೋಗಿ ಇಂಥ ದಿವಸ ಬರಬೇಕು ಎಂದು ಹೇಳಿದ್ದಕ್ಕೆ ಅವರು ತಿರುಗಿಹೋಗಿ ಅನಂತರ ಬಂದರು. ಅವರು ನಾವು ಹೇಳಿದ ದಿವಸ ಬಂದಮೇಲೆ ಅವರ ಜೊತೆ ಮಾತನಾಡಿದ್ದೇನೆ. ನಾನು ಇಲ್ಲಿ ಇಲ್ಲದಿದ್ದರೆ ಅವರ ಜೊತೆಯಲ್ಲಿ ಹೇಗೆ ಮಾತನಾಡಬೇಕೆಂದು ನನಗೆ ಅರ್ಥವಾಗುತ್ತಿಲ್ಲ. ನಾನು ಇಲ್ಲದಿದ್ದಾಗ ನನಗೆ ಗೊತ್ತಿಲ್ಲದೆ ಒಮ್ಮಿಂದೊಮ್ಮೆ ಯಾರೋ ಮಂತ್ರಿಗಳು ಬಂದರೆ ಏನು ಮಾಡುವುದು? ನಾನು ಅಲ್ಲಿಂದ ಹಾರಿ ಬರುವುದಕ್ಕೆ ಆಗುವುದಿಲ್ಲ. ಅವರು ಕಾರ್ಯಕ್ರಮ ಕೊಟ್ಟು ಬಂದಾಗ ನಾವು ಮುಖ ತಪ್ಪಿಸಿ ಭೇಟಿ ಮಾಡಲಿಲ್ಲ ಎಂದರೆ I can take that blame. ಅವರು ಬರುವುದು ಗೊತ್ತಿಲ್ಲ. ನಾನು ಅಧಿಕಾರವಾಣಿಯಿಂದ ಹೇಳುತ್ತಿದ್ದೇನೆ. ಅವರ ಕಾರ್ಯಕ್ರಮ ನಮಗೆ ಗೊತ್ತಿಲ್ಲ. ಅವರು ಇಲ್ಲಿ ಬಂದಿದ್ದಾರೆ ಎನ್ನುವುದನ್ನು ನಮ್ಮ ಇರಿಗೇಶನ್ ಮಂತ್ರಿಗಳು 'ಹೀಗೆ ನೆರೆರಾಜ್ಯದ ಮಂತ್ರಿಗಳು ಬಂದು ಕುಳಿತಿದ್ದಾರೆ.' ಎಂದಾಗ ನಾನು ಹೇಳಿದೆ 'ನೋಡಿ. ನನ್ನ ಪ್ರೋಗ್ರಾಮ್ಸ್ ಎರಡು-ಮೂರು ದಿವಸ ಮೊದಲೇ ಫಿಕ್ಸ್ ಆಗಿದೆ. ನನಗೆ ಇಂಥ ತಾರೀಖು ಒಳಗೆ ಬರುವುದಕ್ಕೆ ಆಗುವುದಿಲ್ಲ. ಆದ್ದರಿಂದ ಅದಕ್ಕಾಗಿ ದಯಮಾಡಿ ಅವರಿಗೆ ಹೋಗಿ ಇಂಥ ದಿವಸ ಬಾ' ಎಂದು ಹೇಳಿ ಅಂತ ಹೇಳಿದೆ. ಅವರು ಯಾವ ದಿವಸ ಬಂದಿದ್ದಾರೋ ಅದೇ ದಿವಸ ಅವರಿಗೆ ನಾನು ಭೇಟ್ಟಿಯಾಗಿದ್ದೇನೆ. ಒಳ್ಳೆಯ ವಾತಾವರಣದಲ್ಲಿ ಅವರ ಜೊತೆಯಲ್ಲಿ ಚರ್ಚೆ ಮಾಡಿದ್ದೇನೆ. ಮತ್ತು ಸಮಾಧಾನದಿಂದ ಅವರು ತಿರುಗಿ ಹೋಗಿದ್ದಾರೆ. ಅದಕ್ಕಾಗಿ ನೀವು ವಿಚಾರವನ್ನು ತಿಳಿದುಕೊಳ್ಳಿ. ಏಕೆಂದರೆ ನೀವು ಹೇಳಿದ್ದನ್ನು ನಾನು ಕೇಳಿಕೊಂಡು ಸುಮ್ಮನೆ ಬಾಯಿ ಮುಚ್ಚಿಕೊಂಡು ಕುಳಿತಿದ್ದರೆ 'ಇವರು ಎಂತಹ ಮುಖ್ಯಮಂತ್ರಿಗಳಪ್ಪ. ಇಷ್ಟೂ ಸೌಜನ್ಯ ಇಲ್ಲ. ನೆರೆ ರಾಜ್ಯದ ಮಂತ್ರಿಗಳು ಬರುತ್ತಾರೆ, ಭೇಟ್ಟಿಯಾಗುವುದಕ್ಕೂ ತಯಾರಿಲ್ಲ' ಎನ್ನುವಂಥ ಭಾವನೆ ಪತ್ರಿಕೆ ಓದುವವರಿಗೆ ಬರುತ್ತದೆ. ಅದು ಬರಬಾರದು ಎನ್ನುವುದಕ್ಕಾಗಿ ನಾನು ಈ ಸ್ಪಷ್ಟೀಕರಣ ಕೊಟ್ಟು ಹೇಳಿದ್ದೇನೆ.

ಶ್ರೀ ಡಿ.ಬಿ. ಚಂದ್ರೇಗೌಡ.-- ನಾನೂ ಸಹ ಈ ಕಾರಣಕ್ಕಾಗಿ ಹೇಳಿದೆ. ನೀವು ಈ ಸೌಜನ್ಯ ತೋರಿಸಿದ್ದರೆ ಬಹುಶಃ ಮಾತುಕತೆಗೆ ಒಂದು ಪರಿಸರವನ್ನು ನಿರ್ಮಾಣ ಮಾಡಬಹುದಿತ್ತು. ಹಾಗೆ ಮಾಡದೇ ಇದ್ದುದರಿಂದಲೇ ಜನವರಿ ೨೩ರಲ್ಲಿ ಇದ್ದಂಥ ಗುಡ್‌ವಿಲ್ ನಂತರ ನಿಮಗೆ ಸಿಗಲಿಲ್ಲ.

ಅಧ್ಯಕ್ಷರು.-- ನೀವು ಏನು ಮಾಡಬಹುದಿತ್ತು ಎಂದು ಹೇಳುತ್ತೀರಿ? ಅವರು ಬಹಳ ದೂರದಲ್ಲಿದ್ದರು. ಪೂರ್ವ ನಿಯೋಜಿತ ಕಾರ್ಯಕ್ರಮ ಇರುವಾಗ ತಮಿಳುನಾಡಿನ ಮಂತ್ರಿಗಳು ಬಂದರೆ ಅವರು ಏನು ಮಾಡಬೇಕು?

ಶ್ರೀ ಡಿ.ಬಿ. ಚಂದ್ರೇಗೌಡ.-- ೨೦ ವರ್ಷಗಳಿಂದ ಇದ್ದ ಸೌಜನ್ಯ ಕಳೆದ ನಾಲ್ಕು ತಿಂಗಳಲ್ಲಿ ಏಕೆ ಹೋಯಿತು? ೭೧ನೇ ಇಸವಿಯಲ್ಲಿ ಶ್ರೀ ಡಿ.ಸಿ. ಪಟೇಲ್ ಕಮಿಟಿ ಪ್ರಾರಂಭವಾದಾಗಿನಿಂದ ಇದ್ದ ಸೌಜನ್ಯ ಈಗ ನಾಲ್ಕು ತಿಂಗಳಲ್ಲಿ ಏಕೆ ಹೋಯಿತು? ಈ ಪ್ರಶ್ನೆಯನ್ನು ನಾವು ಕೇಳಬಾರದೇನು?

(ಗೊಂದಲ)

ಶ್ರೀ ವೀರೇಂದ್ರ ಪಾಟೀಲ್.--- ನಾನು ಸುಳ್ಳು ಹೇಳಿದ್ದೇನೆಯೇ ನಾನು ಅವೊತ್ತಿನ ದಿವಸ ಇರಲಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ -- ನೀವು ಇರಲಿಲ್ಲ ಎಂದು ಹೇಳುವುದು ನಿಮ್ಮ ಕೆಲಸ. ಭೇಟ್ಟಿ ಮಾಡಲಿಲ್ಲ ಎಂದು ಹೇಳುವುದು ನನ್ನ ಕೆಲಸ.

ಅಧ್ಯಕ್ಷರು.--- ಅವರಿಗೆ ಪೂರ್ವನಿಯೋಜಿತ ಕಾರ್ಯಕ್ರಮ ಇತ್ತು. ಆದ್ದರಿಂದ...

ಶ್ರೀ ಡಿ. ಬಿ. ಚಂದ್ರೇಗೌಡ.— ನನ್ನ ಮಾತು ಹೇಳಿಬಿಡುತ್ತೇನೆ. ೯ನೇ ತಾರೀಖು ಬಂದರಲ್ಲ, ಆಗ ಭೇಟ್ಟಿ ಮಾಡಿ ಅವರು ನಮಗೆ ೧೦ ಟಿ. ಎಂ. ಸಿ. ನೀರು ಕೊಡಿ ಎಂದರೆ ಸಾಧ್ಯವಿಲ್ಲವೆಂದು ಮಾರನೆಯ ದಿವಸ ಪತ್ರಿಕೆಯಲ್ಲಿ ಬಂದ ವರದಿ ಪ್ರಕಾರ ಸಾಧ್ಯವಿಲ್ಲ ಎಂದರು...

ಶ್ರೀ ವೀರೇಂದ್ರ ಪಾಟೀಲ್.— ಈ ರೀತಿ ಅವರು ಭಾಷಣ ಮಾಡುತ್ತಾ ಹೋದರೆ ಬಹಳ ಕಷ್ಟವಾಗುತ್ತದೆ. ವಾಸ್ತವಾಂಶ ಏನಿದೆ ಅದನ್ನು ತಿಳಿದುಕೊಳ್ಳಲಾರದೆ ಮಾತನಾಡುತ್ತಿದ್ದಾರೆ. ನಾನು ನೀರು ಬಿಡುವಹಾಗಿಲ್ಲ ಎಂದು ಹೇಳಲಿಲ್ಲ. ಈ ರೀತಿ ಮಾನ್ಯ ವಿರೋಧ ಪಕ್ಷದ ನಾಯಕರು ಕೇಳಿದರೆ ಏನು ಹೇಳಬೇಕೆಂದು ನನಗೆ ಅರ್ಥವಾಗುತ್ತಿಲ್ಲ.

ಅಧ್ಯಕ್ಷರು — ಅವರು ಇಲ್ಲಿ ಬರುತ್ತೇವೆ ಎಂದು ಪೂರ್ವಭಾವಿಯಾಗಿ ತಿಳಿಸಿದ್ದರೆ ನಿಮ್ಮ ಜೊತೆ **ಸಮಾಲೋಚನೆ ಮಾಡಿದ್ದರೆ?**

ಶ್ರೀ ವೀರೇಂದ್ರ ಪಾಟೀಲ್.— ಇಲ್ಲ.

ಅಧ್ಯಕ್ಷರು.— ಅವರು ಸಮಾಲೋಚನೆ ಮಾಡಿಲ್ಲ. ಹಾಗಿರುವಾಗ ಸರ್ಕಾರದಿಂದ, ಮುಖ್ಯ ಮಂತ್ರಿಗಳಿಂದ ನೀವು ಏನನ್ನು ನಿರೀಕ್ಷಣೆ ಮಾಡುತ್ತಿದ್ದೀರಿ ?

ಶ್ರೀ ಡಿ. ಬಿ. ಚಂದ್ರೇಗೌಡ.— ಪತ್ರಿಕೆಯಲ್ಲಿ ಬರುವ ಮಾತುಗಳೆಲ್ಲ ಸುಳ್ಳು ಎಂದು ಅವರೆ... ಅವರು ಹೇಳಿದ ಭಾಷೆಯಲ್ಲಿ. ಇಲ್ಲದಿದ್ದರೆ ನಾನು ಸುಳ್ಳು ಪದವನ್ನು ಬಳಸುತ್ತಿರಲಿಲ್ಲ. ಅದನ್ನು ವೆರಿಫೈ ಮಾಡಿಕೊಳ್ಳುವುದಕ್ಕೆ ನೀವು ಪ್ರಯತ್ನ ಮಾಡಿ ೯ನೇ ತಾರೀಖು ಬಂದಿದ್ದು ಗೊತ್ತಿದೆ, ೭ನೇ ತಾರೀಖು ಬಂದಿದ್ದು ಗೊತ್ತಿದೆ, ೩ನೇ ತಾರೀಖು ಬಂದಿದೂ ಗೊತ್ತಿದೆ. ಮೂರು ದಿವಸಗಳ ಮೇಲೆ ಮಾಜಿ ಮುಖ್ಯ ಮಂತ್ರಿಗಳಾದ ಗುಂಡೂರಾಯರು ನೀರು ಕೊಡಬೇಕೆಂದು ಹೇಳಿದರೆ ನೀರು ಬಿಡುತ್ತೇವೆ...

೧–೦೫ ಪಿ.ಎಂ.

ಶ್ರೀ ಬಿ. ಎಸ್. ಯಡಿಯೂರಪ್ಪ.— ಪಕ್ಕದ ರಾಜ್ಯದ ಒಬ್ಬ ನೀರಾವರಿ ಮಂತ್ರಿಗಳು ರಾಜ್ಯಕ್ಕೆ ಬರುತ್ತಿದ್ದಾರೆ ಎಂದು ಹೇಳತಕ್ಕ ಸಂದರ್ಭದಲ್ಲಿ, ಇಂಟೆಲಿಜೆನ್ಸ್ ಡಿಪಾರ್ಟ್‌ಮೆಂಟ್ ಏನು ಮಾಡುತ್ತಾ ಇತ್ತು, ಇದು ಅವರಿಗೆ ಗೊತ್ತಿರಲಿಲ್ಲವೇ ? ಆ ರಾಜ್ಯದ ನೀರಾವರಿ ಮಂತ್ರಿಗಳು ನಮ್ಮ ರಾಜ್ಯಕ್ಕೆ ಬಂದು ಹೋಗುವುದು ಯಾರಿಗೂ ಗೊತ್ತಿರಲಿಲ್ಲವೇ ? ಈ ರೀತಿ ಗೊತ್ತಾಗದೇ ಅವರು ಬಂದು ಹೋಗುವುದಕ್ಕೆ ಸಾಧ್ಯವಿದೆಯೇ ? ಸನ್ಮಾನ್ಯ ಮುಖ್ಯ ಮಂತ್ರಿಗಳು ನಮಗೆ ಗೊತ್ತಿರಲಿಲ್ಲ ಎಂಬ ಮಾತನ್ನು ಹೇಳಿದರು. ಆದರೆ ಇದು ಅತ್ಯಂತ ಪ್ರಮುಖವಾದ ವಿಚಾರ ಎಂದು ಅವರಿಗೆ ಮನವರಿಕೆಯಾದ ಮೇಲೆ, ತಮ್ಮ ಎಲ್ಲಾ ಕಾರ್ಯಕ್ರಮಗಳನ್ನೂ ರದ್ದು ಮಾಡಿ ಬರಬಹುದಾಗಿತ್ತು.

ಅಧ್ಯಕ್ಷರು.— ನೀವು ಯಾರ ಕಾಜನ್ನು ಪ್ಲೀಡ್ ಮಾಡುತ್ತಿದ್ದೀರಿ ಎನ್ನುವುದು ನಮಗೆ ಅರ್ಥವಾಗುತ್ತಾ ಇಲ್ಲ. ಇನ್ನೊಂದು ರಾಜ್ಯದ ಮಂತ್ರಿಗಳು ಇಲ್ಲಿಗೆ ಬರಬೇಕಾಗಿದ್ದರೆ...

ಶ್ರೀ ಬಿ. ಎಸ್. ಯಡಿಯೂರಪ್ಪ — ಪಕ್ಕದ ರಾಜ್ಯದ ನೀರಾವರಿ ಮಂತ್ರಿಗಳು ಈ ರಾಜ್ಯಕ್ಕೆ ಬರುವಂಥ ವಿಷಯ ಯಾರಿಗೂ ಗೊತ್ತಿಲ್ಲದೆ ಬಂದು ಹೋದರು ಎನ್ನತಕ್ಕಂಥ ಮಾತನ್ನು ನಂಬುವುದಕ್ಕೆ ಸಾಧ್ಯವಿಲ್ಲ. ಸನ್ಮಾನ್ಯ ಮುಖ್ಯ ಮಂತ್ರಿಗಳು ಇದು ಅತ್ಯಂತ ಪ್ರಮುಖವಾದ ಅಂಶ ಎಂದು, ತಮ್ಮ ಎಲ್ಲಾ ಕಾರ್ಯಕ್ರಮಗಳನ್ನೂ ರದ್ದು ಮಾಡಿ ಬರಬಹುದಿತ್ತು ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

(ಗೊಂದಲ)

ಅಧ್ಯಕ್ಷರು.— ನನಗೆ ತಿಳಿದಮಟ್ಟಿಗೆ, ಒಂದು ರಾಜ್ಯದಿಂದ, ಇನ್ನೊಂದು ರಾಜ್ಯಕ್ಕೆ ಮುಖ್ಯ ಮಂತ್ರಿಗಳೇ ಆಗಲೀ ಅಥವಾ ಮತ್ತೊಬ್ಬ ಮಂತ್ರಿಗಳೇ ಆಗಲೀ ಸಮಾಲೋಚನೆಗೆ ಬರುವಂಥ ಸಂದರ್ಭದಲ್ಲಿ ಪೂರ್ವಭಾವಿಯಾಗಿ ಆ ಸರ್ಕಾರದ ಜೊತೆಯಲ್ಲಿ ಟೆಲೆಕ್ಸ್ ಮಾಡಿ ಟೆಲಿಫೋನ್ ಮಾಡಿ, ನಮ್ಮ ಮುಖ್ಯ ಮಂತ್ರಿಗಳು ಬರುತ್ತಾರೆ, ಅಥವಾ ಮಂತ್ರಿಗಳು ಬರುತ್ತಾರೆ ನಿಮಗೆ ಅನುಕೂಲ ಇದೆಯೇ ಎಂದು ಕೇಳಿ, ಎರಡು ರಾಜ್ಯಗಳ ಮಂತ್ರಿಗಳಿಗೂ ಒಪ್ಪಿಗೆಯಾದ ಕಾಲ, ದಿನ, ವೇಳೆಯನ್ನು ನಿಗದಿ ಮಾಡಿ, ಅನಂತರ ಭೇಟಿಗೆ ಏರ್ಪಾಡು ಮಾಡುತ್ತಾರೆ. ಏಕಾಏಕಿ ಇವರನ್ನು ಸಮಾಲೋಚನೆ ಮಾಡದೇ ಬಂದುಬಿಟ್ಟರೆ, ಸರ್ಕಾರ ಏನು ಮಾಡಬಹುದು ಎನ್ನುವುದನ್ನು ನೀವು ಯೋಚನೆ ಮಾಡಬೇಕು. ಅದೂ ಮುಖ್ಯ ಮಂತ್ರಿಗಳು ಊರಿನಲ್ಲಿ ಇಲ್ಲದೇ ಇದ್ದ ಕಾಲದಲ್ಲಿ ಇದನ್ನೇ ಒಂದು ಇಷ್ಯೂ ಮಾಡುತ್ತಾ, ನೀವು ಸೌಜನ್ಯ ತೋರಿಸಲಿಲ್ಲ ಎಂದು ಆರೋಪ ಮಾಡುವುದು ಸರಿಯೋ ಎನ್ನುವುದನ್ನು ಆಲೋಚನೆ ಮಾಡಬೇಕು.

ಶ್ರೀ ಡಿ. ಬಿ. ಚಂದ್ರೇಗೌಡ.— ನಾನು ಆರೋಪ ಮಾಡುತ್ತಾ ಇಲ್ಲ. ನಾನು ಹೇಳಿದ ಉದ್ದೇಶ ಇಷ್ಟೆ, ನೀವು ಆ ಒಂದು ಸೌಜನ್ಯ ಇಟ್ಟುಕೊಂಡಿದ್ದರೆ, ಮಾತುಕತೆಗೆ ಅವಕಾಶ ಸಿಗುತ್ತಿತ್ತು. ನೀರಾವರಿ ಮಂತ್ರಿಗಳು ಬಂದಿರುವುದು ನಮಗೆ ಗೊತ್ತಿಲ್ಲ ಎಂದು ಹೇಳಿದರೆ, ಅದರಲ್ಲಿ ಅರ್ಥ ಇಲ್ಲ.

ಅಧ್ಯಕ್ಷರು — ಮಾನ್ಯ ವಿರೋಧಪಕ್ಷದ ನಾಯಕರಿಂದ ನನ್ನ ಪ್ರಶ್ನೆಗೆ ನೇರ ಉತ್ತರವನ್ನು ಅಪೇಕ್ಷೆಮಾಡುತ್ತೇನೆ. ಮಂತ್ರಿಗಳು ಬರುವಂಥ ಕಾಲದಲ್ಲಿ, ಪೂರ್ವಭಾವಿಯಾಗಿ ಸರ್ಕಾರದ ಜೊತೆಯಲ್ಲಿ ಸಮಾಲೋಚನೆ ಮಾಡಿದ್ದಾರೆಯೋ ಎನ್ನುವುದರ ಬಗ್ಗೆ ಏನಾದರೂ ಮಾಹಿತಿ ಸಂಗ್ರಹಣೆ ಮಾಡಿದ್ದೀರಾ ?

ಶ್ರೀ ಡಿ. ಬಿ. ಚಂದ್ರೇಗೌಡ.-- ನಮಗೆ ಒಳ್ಳೆಯ ವಾತಾವರಣದಲ್ಲಿ ತಿಳಿಯಾದ ವಾತಾವರಣದಲ್ಲಿ ಚರ್ಚೆಗೆ ಕೊಡುವುದಕ್ಕೆ ಇದ್ದಂಥ ಅವಕಾಶಗಳು, ಈ ಸಂದರ್ಭದಲ್ಲಿ ಸಣ್ಣಪುಟ್ಟ ತಪ್ಪುಗಳಿಂದ ನಿಂತು ಹೋದವು...

ಅಧ್ಯಕ್ಷರು.— ತಪ್ಪು ಯಾರದು ಎಂದು ತಾವು ಹೇಳುತ್ತೀರಿ...

(ಗೊಂದಲ)

ಶ್ರೀ ಎಂ. ಪಿ. ಈಶ್ವರಪ್ಪ.— ರಾಜ್ಯ ಸರ್ಕಾರದವರು ಸಮುಚಿತವಾಗಿ ಅವರನ್ನು ಕರೆದು ಚರ್ಚೆ ಮಾಡಲಿಲ್ಲ, ಇದರಿಂದ ನಾವು ತಪ್ಪು ಮಾಡಿದ್ದೇವೆಂದು ಅವರು ಹೇಳುವುದಕ್ಕೆ ತಯಾರಿಲ್ಲ. ಕೇಂದ್ರ ಸರ್ಕಾರದವರು ತಪ್ಪು ಮಾಡಿದ್ದಾರೆ, ಅನ್ಯಾಯ ಮಾಡಿದ್ದಾರೆಂದು ಹೇಳುವುದಕ್ಕೆ ವಿರೋಧಪಕ್ಷದ ನಾಯಕರು ತಯಾರಿಲ್ಲ ಇವರಿಬ್ಬರ ಮಧ್ಯದಲ್ಲಿ ರೈತರು ಹಾಳಾಗುತ್ತಿದ್ದಾರೆ.

ಶ್ರೀ ಡಿ. ಬಿ. ಚಂದ್ರೇಗೌಡ.— ಕೇಂದ್ರ ಸರ್ಕಾರವೂ ಕೂಡ ತನ್ನ ಹೊಣೆಗಾರಿಕೆಯಿಂದ ಜಾರಿ ಕೊಳ್ಳುವುದಕ್ಕಾಗಿ, ನಾವು ಏಕೆ ಒಪ್ಪಿಕೊಳ್ಳಬೇಕು, ಈ ಹೊಣೆಯನ್ನು ಎಂದು ಸುಪ್ರೀಂಕೋರ್ಟಿನ ಮೇಲೆ ಹಾಕಿದರು. ರಾಜ್ಯ ಸರ್ಕಾರದವರೂ ಕೂಡ ತಮ್ಮ ಜವಾಬ್ದಾರಿಯ ಹೊರೆಯನ್ನು ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ನೆರಳಿನಲ್ಲಿ ಪ್ರಸ್ತಾಪ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಶಾಸನ ಸಭೆಯ ಹೊರಗಡೆ ನಡೆಯತಕ್ಕ ವಿಚಾರಗಳನ್ನೂ ಮುಖ್ಯ ಮಂತ್ರಿಗಳು ಮಾತ ನಾಡಿದರು. ನಾವು ಇದನ್ನು ಅವರ ಗಮನಕ್ಕೆ ತರುತ್ತಿದ್ದೇವೆ. ೧೯೮೦ನೇ ಇಸವಿಯಲ್ಲಿ ಅಚ್ಚು ಕಟ್ಟುದಾರರ ಸಂಘ ಎಂದು ಆಯಿತು. ಆದರೆ ಅಧ್ಯಕ್ಷರು ಇವತ್ತು ಈ ಸಭೆಯಲ್ಲಿ ಇಲ್ಲ. ಅವರು ನೀರಾವರಿಯ ಬಗ್ಗೆ ಬಹಳ ಆಸಕ್ತಿ ಇದ್ದವರು.

ಶ್ರೀ ಜಿ. ಎಸ್. ಶಿವನಂಜಪ್ಪ.— ಮಾನ್ಯ ಚಂದ್ರೇಗೌಡರೇ ಒಂದು ನಿಮಿಷ ಇದರಲ್ಲಿ ಡಿಸ್ಪ್ಯೂಟ್ ಇದೆಯೋ ? ಡಿಸ್ಪ್ಯೂಟ್ ಇದ್ದರೆ ಯಾವ ಡಿಸ್ಪ್ಯೂಟ್ ಎಂಬುದನ್ನು ದಯವಿಟ್ಟು ತಿಳಿಸಿಹೇಳಿದರೆ ಒಪ್ಪಿಕೊಳ್ಳುತ್ತೇವೆ. ಪದೇ ಪದೇ ತಮಿಳುನಾಡಿನವರು ನೀರಿಗೆ ಬೇಡಿಕೆ ಕೊಟ್ಟರು, ಕರ್ನಾಟಕದವರು ಔದಾರ್ಯ ತೋರಿ ನೀರು ಬಿಟ್ಟರು. ಇದು ಡಿಸ್ಪ್ಯೂಟೇ ? ಇದರಲ್ಲಿ ಯಾವ ಡಿಸ್ಪ್ಯೂಟ್ ಇದೆ ಎಂಬುದನ್ನು ತಾವು ಸಭೆಗೆ ದಯವಿಟ್ಟು ಹೇಳಬೇಕು.

ಶ್ರೀ ಡಿ. ಬಿ. ಚಂದ್ರೇಗೌಡ.— ನಿಮ್ಮ ಪ್ರಶ್ನೆ ನನಗೆ ಅರ್ಥವಾಗಲಿಲ್ಲ. ಆಗ ಒಂದು ಅಚ್ಚು ಕಟ್ಟುದಾರರ ಸಂಘ ಎಂದು ಮಾಡಿದರು. ಅಚ್ಚುಕಟ್ಟುದಾರರ ಪರವಾಗಿ ಕೋರ್ಟಿಗೆ ಹೋಗ ಬೇಕೆಂದರು. ಪ್ರಮಾಣಪತ್ರ ಹಾಕುವುದಕ್ಕೆ ಯಾರೂ ಸಿಗಲಿಲ್ಲ. ಇವತ್ತು ನೀರಾವರಿ ಮಂತ್ರಿ ಗಳಾಗಿರತಕ್ಕಂಥ ಪುಟ್ಟಸ್ವಾಮಿಗೌಡರು ಪ್ರಮಾಣಪತ್ರ ಹಾಕಿದರು. ಆದರೆ ಅಧ್ಯಕ್ಷರು ಹಾಕಲಿಲ್ಲ. ಎಲ್ಲರೂ ಮೊಸಳೆ ಕಣ್ಣೀರು ಸುರಿಸಿದ್ದೇವೆ. ಆದರೆ ಇವತ್ತು ವಸ್ತುಸ್ಥಿತಿ ಏನು ? ನಾನು ಬಹಳ ಜವಾಬ್ದಾರಿಯುತವಾದ ಜಾಗದಲ್ಲಿ ನಿಂತು ತಮಗೆ ಹೇಳುತ್ತೇನೆ. ನಿಜಕ್ಕೂ ನಾವು ನಿರ್ಣಯ ಮಾಡುವುದು ಸಾಧ್ಯ ಇದ್ದರೆ, ತಮಿಳುನಾಡಿನ ವಿಧಾನಸಭೆ ಮಾಡಕ್ಕಂಥ ತೀರ್ಪನ್ನು ರಾಷ್ಟ್ರದ ಪ್ರಧಾನಮಂತ್ರಿಗಳು ಆಧಾರವಾಗಿ ಇಟ್ಟುಕೊಂಡು, ತಮಿಳುನಾಡು ವಿಧಾನಸಭೆ ಯುನಾನಿಮಸ್ ಡಿಸಿಷನ್ ಮಾಡಿದೆ, ಅದಕ್ಕೋಸ್ಕರ ಟ್ರಿಬ್ಯೂನಲ್ ರಚನೆ ಮಾಡುತ್ತೇವೆ ಎನ್ನುವುದಾದರೆ, ನಾನು ಏನೂ ಹೇಳುವುದಕ್ಕೆ ಆಗುವುದಿಲ್ಲ. ನಾನೂ ಅದಕ್ಕೆ ಭಾಗಿಯಾಗಿದ್ದೇನೆ ಎಂದು ಹೇಳುವುದಾದರೆ, ಸರ್ವೋಚ್ಚನ್ಯಾಯಾಲಯ ತಮಿಳುನಾಡಿನ ಅಸೆಂಬ್ಲಿ ನಿರ್ಣಯವನ್ನು ಗಮನಕ್ಕೆ ತೆಗೆದುಕೊಂಡು ತೀರ್ಪು ಬರೆಯುವುದಾದರೆ, ನಮ್ಮ ಶಾಸನಸಭೆ ಏನು ತೀರ್ಮಾನ ಮಾಡಬಹುದು, ಏನು ಮಾಡಬೇಕು, ಆ ತೀರ್ಮಾನಕ್ಕೆ ಅಷ್ಟು ಗಾಂಭೀರ್ಯ ಬರಬೇಕು ಎಂಬುದನ್ನು ನಾವು ನೋಡಬೇಕಲ್ಲ. ನಮ್ಮ ನಿರ್ಣಯ ಏನು, ನಮ್ಮ ನಿಲವು ಏನು, ನಾವು ಏನು ಮಾಡಬೇಕು ? ನಾನು ವೈಯಕ್ತಿಕವಾಗಿ ಹೇಳುತ್ತೇನೆ, ಟ್ರಿಬ್ಯೂನಲ್‌ನಲ್ಲಿ ನ್ಯಾಯ ಸಿಗುತ್ತದೆ ಎಂದು ನಂಬಿಕೊಂಡು, ಜನಕ್ಕೆ ಅನ್ಯಾಯವಾದಾಗ ಪುನಃ ಪ್ರಸ್ತಾಪ ಮಾಡುವ ಬದಲು ನಾವು ಟ್ರಿಬ್ಯೂನಲ್‌ಗೆ ಹೋಗುವುದಿಲ್ಲ ಎಂದು ಹೇಳೋಣ. ಟ್ರಿಬ್ಯೂನಲ್‌ಗೆ ಹೋಗದೇ ಇದ್ದರೆ ಆಗತಕ್ಕಂಥ ಪರಿಣಾಮವನ್ನು ಎದುರಿಸುವುದಕ್ಕೆ ಸಿದ್ಧರಾಗಿರೋಣ. ಇದನ್ನೇ ೧೯೭೭ನೇ ಇಸವಿಯಲ್ಲಿ ದೇವರಾಜ ಅರಸರು ಮಾಡಿದರು ಎನ್ನತಕ್ಕಂಥಾದ್ದನ್ನು ತಮ್ಮ ಗಮನಕ್ಕೆ ತಂದ ಉದ್ದೇಶ ಇದೆ. ಟ್ರಿಬ್ಯೂನಲ್‌ನಿಂದ ಹೊರಗೆ ಬಂದರೆ ಏನು ನಮ್ಮನ್ನು ಜೈಲಿಗೆ ಹಾಕುತ್ತಾರೆಯೇ ? ಅದಕ್ಕಾಗಿ ಆಗಿನ ಮುಖ್ಯ ಮಂತ್ರಿಗಳಾದ ದೇವರಾಜ ಅರಸು ಹೇಳಿದರು. ಕಂಟೆಂಪ್ಟ್ ಆಫ್ ಕೋರ್ಟ್ ಆದರೆ ನಾನು ಜೈಲಿಗೆ ಹೋಗುತ್ತೇನೆ ಎಂದು ಹೇಳಿದರು.

ಶ್ರೀ ವೀರೇಂದ್ರ ಪಾಟೀಲ್. — ತಾವು ತಮ್ಮ ಭಾಷಣದ ಕೊನೆಗೆ ಅಪರೇಟೀವ್ ಪೋಷನ್‌ಗೆ ಬರುತ್ತಿದ್ದೀರಿ. ತಾವು ತಮ್ಮ ಸ್ಪೀಚ್‌ನಲ್ಲಿ ಸ್ಪಷ್ಟವಾಗಿ ಹೇಳಿ. ಅಂತು, ಪರಂತು ಇದು ಬೇಡ. ಟ್ರಿಬ್ಯೂನಲ್ ಬಾಯ್‌ಕಾಟ ಮಾಡುವ ಸಲಹೆ ಇದೆಯೇ ಎಂಬುದನ್ನು ಸ್ಪಷ್ಟವಾಗಿ ಹೇಳಬೇಕೇ ಹೊರತು, ಆ ಕಡೆ ಅರ್ಧ, ಈ ಕಡೆ ಅರ್ಧ, ಇಂಟರ್‌ಪ್ರಿಟೆಷನ್‌ಗೆ ಅವಕಾಶ ಇರುವ ಹಾಗೆ ಮಾತನಾಡ ಬೇಡಿ. ನೀವು ವಿರೋಧ ಪಕ್ಷದ ನಾಯಕರು. ಈ ಸದನದ ಮೂಲಕ ಸರಕಾರಕ್ಕೆ ನಿಮ್ಮ ಸಲಹೆ ಏನು ? ಟ್ರಿಬ್ಯೂನಲ್ ಬಾಯ್‌ಕಟ್ ಮಾಡಬೇಕೆಂಬ ಸಲಹೆ ಇದ್ದರೆ ಸ್ಪಷ್ಟವಾಗಿ ಹೇಳಿ.

ಶ್ರೀ ಡಿ. ಬಿ. ಚಂದ್ರೇಗೌಡ. — ನಾನು ಅದನ್ನು ಬಿಟ್ಟು ಏನೂ ಹೇಳಲಿಲ್ಲ. ನಾನು ಏನು ಹೇಳುತ್ತಿದ್ದೇನೆ. ಮೊದಲನೆಯದು ಮಾನ್ಯ ಪ್ರಧಾನಮಂತ್ರಿಗಳು ಮಾಡಿದಂಥ ಸಲಹೆ. ಕೌನ್ಸಿಲ್ ನಲ್ಲಿ ಚರ್ಚೆ ಮಾಡಿರತಕ್ಕಂಥಾದ್ದು, ಅವರು ಮಾಡಿದ ಸಲಹೆ ಆ ವೇದಿಕೆಯನ್ನು ಬಳಸಿಕೊಳ್ಳುವುದಕ್ಕೆ ಸಾಧ್ಯವಾದರೆ ಪ್ರಯತ್ನ ಮಾಡಿ. ಆ ವೇದಿಕೆಯನ್ನು ಬಳಸಿಕೊಳ್ಳುವುದು ಸಾಧ್ಯವಿಲ್ಲ ಎಂದರೆ, ಇದೇ ನಿರ್ಣಯ ಎಂದು ಹೇಳಿ. ಟ್ರಿಬ್ಯೂನಲ್‌ನಲ್ಲಿ ನ್ಯಾಯ ಸಿಗುತ್ತದೆಂದು ನೀವು ನಂಬಿಕೊಂಡಿದ್ದರೆ, ಆ ನಂಬಿಕೆ ನನಗೆ ಉಳಿದಿಲ್ಲ. ಅದಕ್ಕೆ ಕಾರಣಗಳು ಬೇರೆ ಇದ್ದಾವೆ, ಇವತ್ತು ಇರತಕ್ಕಂಥ ಶಾಸನ ಗೆಜೆಟ್‌ರ ಆಕ್ಟ್ ಕೆಳಗಡೆ ಇರತಕ್ಕಂಥಾದ್ದು ಅದು ಕೆಳಭಾಗದ ಅಚ್ಚುಕಟ್ಟಿನಲ್ಲಿರತಕ್ಕಂಥ ರೈತರ ಪರವಾಗಿ ಇದೆಯೇ ಹೊರತು, ನನ್ನ ತಿಳುವಳಿಕೆಯ ಪ್ರಕಾರ ಅದು ಮೇಲ್ಭಾಗದಲ್ಲಿ ಇರತಕ್ಕಂಥ ರೈತರ ಪರವಾಗಿ ಇಲ್ಲ. ಆದುದರಿಂದ ನಮಗೆ ನ್ಯಾಯ ಸಿಗುತ್ತದೆಂದು ಹೇಳಿ, ಸುಪ್ರೀಂ ಕೋರ್ಟಿನಲ್ಲಿ ಪ್ರಾರಂಭಿಕವಾದ ಅವರ ಬೇಡಿಕೆ ಏನಿದೆ ಆ ಬೇಡಿಕೆ ಕರ್ನಾಟಕದಲ್ಲಿ ಕಟ್ಟತಕ್ಕಂಥ ಎಲ್ಲಾ ಪ್ರಾಜೆಕ್ಟ್‌ಗಳನ್ನೂ ನೀರಾವರಿ ಯೋಜನೆಗಳನ್ನೂ ಸ್ಥಗಿತಗೊಳಿಸಿ ಎಂದು ಹೇಳಿ, ಏನು ಪ್ರಾರಂಭದಿಂದ ಅವರು ಹೇಳಿಕೊಂಡು ಬಂದಿದ್ದಾರೆ, ಆ ಪ್ರಸಂಗಕ್ಕೆ ಏನಾದರೂ ಟ್ರಿಬ್ಯೂನಲ್ ಅಥವಾ ಪಂಚಾಯತಿ ಹೋಗುವುದಾದರೆ, ನಾವು ಅದನ್ನು ಬಹಿಷ್ಕರಿಸದೆ ಬೇರೆ ವಿಧಿ ಇಲ್ಲ. ಆ ಕಾರಣದಿಂದ ನಾವು ಜನ ಹಿತವನ್ನು ಕಾಪಾಡಬೇಕೆಂದು ಆದರೆ, ಅಲ್ಲಿ ಒಂದು ವಿಧಾನಸಭೆಯು ತೀರ್ಮಾನ ಮಾಡುವುದು ಸಾಧ್ಯವಾದರೆ, ಆ ವಿಧಾನಸಭೆ ತೀರ್ಮಾನಕ್ಕೆ ಇಷ್ಟೊಂದು ಮಾನ್ಯತೆ ಬರುವುದಾದರೆ, ನಾವು ಕೂಡಾ ತೀರ್ಮಾನ ಮಾಡುವುದಕ್ಕೆ ಸಾಧ್ಯ ಇದೆ ಎಂಬುದನ್ನು, ನೀವು ಆ ಧೈರ್ಯ ಪ್ರದರ್ಶನ ಮಾಡಿ, ನಿಮ್ಮ ಜೊತೆಗೆ ನಾವು ಇದ್ದೇವೆ ಎಂಬ ಮಾತನ್ನು ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ — ಮಾನ್ಯ ವಿರೋಧಪಕ್ಷದ ನಾಯಕರೇ, ತಾವು ಭಾಷಣ ಮುಕ್ತಾಯ ಮಾಡುವಾಗ ಒಂದು ಸಲಹೆ ಮಾಡಿದ್ದೀರಿ. ಇಂಟರ್ ಸ್ಟೇಟ್ ಕೌನ್ಸಿಲ್ ಏನು ಇದೆಯಲ್ಲ ಅದು ಆಗಲೇ ಕಾನ್‌ಸ್ಟಿಟ್ಯೂಟ್ ಆಗಿದೆ. ಆ ಕೌನ್ಸಿಲ್‌ನಲ್ಲಿ ಪ್ರಧಾನ ಮಂತ್ರಿಗಳು ಇರುತ್ತಾರೆ. ಮುಖ್ಯ ಮಂತ್ರಿಗಳು ಇರುತ್ತಾರೆ. ಕೇಂದ್ರ ಸರ್ಕಾರದ ಇರಿಗೇಷನ್ ಖಾತೆಯವರು ಈ ಕೌನ್ಸಿಲ್‌ನ್ನು ರಚನೆ ಮಾಡುತ್ತಾರೆ. ತಾವೇನು ಸಲಹೆ ಕೊಟ್ಟಿದ್ದೀರಿ ಆ ಸಲಹೆಯನ್ನು ನಾವು ಸ್ವಾಗತ ಮಾಡುತ್ತೇವೆ. ಇಂಟರ್ ಸ್ಟೇಟ್ ಕೌನ್ಸಿಲ್‌ನಲ್ಲಿ ಎಲ್ಲಾ ರಾಜ್ಯಗಳ ಮುಖ್ಯ ಮಂತ್ರಿಗಳು ಸದಸ್ಯರಾಗಿರುತ್ತಾರೆ. ಇಂಟರ್ ಸ್ಟೇಟ್ ಕೌನ್ಸಿಲ್‌ನಲ್ಲಿ ಈ ವಿಷಯವನ್ನು ಚರ್ಚೆ ಮಾಡಬೇಕೆನ್ನುವ ಮಧ್ಯದಲ್ಲಿ ಸುಪ್ರೀಂ ಕೋರ್ಟ್ ಒಂದು ತೀರ್ಪು ಕೊಟ್ಟಿದೆ. ಅದೇನೆಂದರೆ ಮೂರು ಜನರ ಒಂದು ಟ್ರಿಬ್ಯೂನಲ್ ರಚನೆ ಮಾಡತಕ್ಕಂಥ ವಿಚಾರ ಈಗ ತಾವು ಹೇಳಿದಹಾಗೆ ಇಂಟರ್ ಸ್ಟೇಟ್ ಕೌನ್ಸಿಲ್‌ಗೆ ಇದನ್ನು ರೆಫರ್ ಮಾಡತಕ್ಕಂಥ ಸಲಹೆ ಬಂದಿರುವುದರಿಂದ, ತಮ್ಮ ಅಭಿಪ್ರಾಯದ ಪ್ರಕಾರ ನಾವು ಎರಡು ವಿಚಾರ ಗಳನ್ನು ಗಮನಿಸಬೇಕು. ಆದರೆ ಸುಪ್ರೀಂ ಕೋರ್ಟ್ ತೀರ್ಪು ಕೊಟ್ಟ ಪ್ರಕಾರ ಮೂರು ಜನ ಸದಸ್ಯರ ಟ್ರಿಬ್ಯುನಲ್‌ಗೆ ಈ ವಿಚಾರ ತೆಗೆದುಕೊಂಡು ಹೋಗಬೇಕೆ ಅಥವಾ ಇಂಟರ್ ಸ್ಟೇಟ್ ಕೌನ್ಸಿಲ್ ನಲ್ಲಿ ಈ ವಿಚಾರವನ್ನು ಇತ್ಯರ್ಥ ಪಡಿಸಬೇಕೇ ? ಇಂಟರ್‌ಸ್ಟೇಟ್ ಕೌನ್ಸಿಲ್‌ಗೆ ಅರ್ಜಿ ಹಾಕಿ ಎಂದು ತಾವೇನು ಹೇಳಿದಿರಿ ಅದನ್ನು ಸ್ವಾಗತ ಮಾಡುತ್ತೇನೆ. ಅದೇ ರೀತಿ ತಾವು ಪ್ರಧಾನ ಮಂತ್ರಿಗಳನ್ನು ಒಪ್ಪಿಸಿ ನಾವು ಸಹ ಪ್ರಧಾನ ಮಂತ್ರಿಗಳಿಗೆ ಹೇಳುತ್ತೇವೆ. Nothing wrong in it. ಈ ಮೂರು ಜನ ಸದಸ್ಯರಿರತಕ್ಕಂಥ ಟ್ರಿಬ್ಯುನಲ್‌ನ, ಕೆಲಸವನ್ನ ಸ್ಥಗಿತಗೊಳಿಸುವುದಕ್ಕೆ ಕೇಂದ್ರಸರ್ಕಾರ ಗಮನಹರಿಸಲಿ ಮುಂದೆ ನೋಡೋಣ. ಈ ಮಧ್ಯದಲ್ಲಿ ಇಂಟರ್ ಸ್ಟೇಟ್ ಕೌನ್ಸಿಲ್‌ನ ಇತ್ಯರ್ಥ ಮಾಡತಕ್ಕಂಥ ವಿಚಾರದಲ್ಲಿ ಮೊದಲು ಕೇಂದ್ರ ಸರ್ಕಾರ ಗಮನಹರಿಸುವಂತೆ ಪ್ರಧಾನ ಮಂತ್ರಿಗಳಿಗೆ ತಾವು ಹೇಳಿ. ಅವರು ಲಾ ಡಿಪಾರ್ಟ್‌ಮೆಂಟಿನವರಿಗೆ ಹೇಳಲಿ. ಸುಪ್ರೀಂ ಕೋರ್ಟ್‌ಗೆ ಅರ್ಜಿ ಅವರೇ ಹಾಕಲಿ. There is already a direction for constitution of a Tribunal. Accordingly the Tribunal is constituted. That has been done. ಟ್ರಿಬ್ಯುನಲ್ ಕೆಲಸ ಅಲ್ಲಿಯುವರೆವಿಗೆ ಬೇಡ. ಇಂಟರ್ ಸ್ಟೇಟ್ ಕೌನ್ಸಿಲ್‌ನಲ್ಲಿ ಮಾತುಕತೆಗೆ ಅರ್ಜಿ ಹಾಕಲಿ. ನಿಮ್ಮವರನ್ನು ಒಪ್ಪಿಸಿ. ಪ್ರಧಾನ ಮಂತ್ರಿಗಳನ್ನು ಒಪ್ಪಿಸುತ್ತೀರಾ ?

MR. SPEAKER — Could the same issue be discussed in two forms? One is Tribunal has already came into being and second is you are asking the Government to take it up in the Inter-State Council also. This has also to be looked into.

ಶ್ರೀ ಡಿ. ಬಿ. ಚಂದ್ರೇಗೌಡ.—ಪ್ರಧಾನ ಮಂತ್ರಿಗಳ ಸಲಹೆ ಅದು. ನಮ್ಮದು ಯಾವುದೂ ಅಲ್ಲ. ಇಂಟರ್ ಸ್ಟೇಟ್ ಕೌನ್ಸಿಲ್‌ನಲ್ಲಿ ಇಂತಹ ವಿಚಾರಗಳನ್ನು ಚರ್ಚೆ ಮಾಡುವುದಕ್ಕೆ ಸಲಹೆ ಅವರು ಕೊಟ್ಟಿದ್ದಾರೆ, ಆ ಸಲಹೆಯನ್ನು ನಾವು ಸ್ವಾಗತ ಮಾಡಿದ್ದೇವೆ. ಆದರೆ ಆ ದಿಸೆಯಲ್ಲಿ ನೀವು ನಿರ್ಣಯ ಮಾಡಿಲ್ಲ: ಇದರಿಂದ ಬಹುಶಃ We keep the option open. ನಾವು ಟ್ರಿಬ್ಯೂನಲ್ ರಚನೆ ಮಾಡಿದ್ದೇವೆ. ಸುಪ್ರೀಂ ಕೋರ್ಟ್ ಕೊಟ್ಟಂತಹ ಆದೇಶವನ್ನು ಪಾಲನೆ ಮಾಡಿದ್ದೇವೆ, ನಾವು ಅದನ್ನು ವಿರೋಧ ಮಾಡಲಿಲ್ಲ. ೩೦ ದಿವಸಗಳ ಒಳಗಾಗಿ ಟ್ರಿಬ್ಯುನಲ್ ಮಾಡಿ ಎಂದು ಹೇಳಿದ್ದರು ಮಾಡಿದ್ದೇವೆ. We had to respect the judgement of the Supreme Court. We did not go back. ಅದೇ ರೀತಿ ನೆಗೋಷಿಯೇಶನ್ಸ್ ಮುರಿದು ಬಿದ್ದು ಹೋಯಿತು ಎನ್ನುವ ನಿರ್ಣಯಕ್ಕೆ ನಾವು ಬಂದಿಲ್ಲ. ನೀವು ಏನು ಸಲಹೆ ಇಂಟರ್ ಸ್ಟೇಟ್ ಕೌನ್ಸಿಲ್‌ನಲ್ಲಿ ಇದನ್ನು ಚರ್ಚೆ ಮಾಡಬೇಕು ಎಂದು ಮಾಡಿದ್ದೀರಿ ಅದಕ್ಕೂ ನಾವೂ ಬದ್ಧರಾಗಿದ್ದೇವೆ. ಅದನ್ನು ಪುನಃ ರೀ ಓಪನ್ ಮಾಡಿ ಎಂದು ಪ್ರಧಾನ ಮಂತ್ರಿಗಳನ್ನು ಕೇಳೋಣ. ಅಂಥ ಸಂದರ್ಭ ಬಂದು ನಮಗೆ ಇನ್ನೊಂದು ವೇದಿಕೆಯನ್ನು ಒಳಸಿ ಎಂದು ಪ್ರಧಾನ ಮಂತ್ರಿಗಳನ್ನು ಕೇಳೋಣ. ಚರ್ಚೆಗೆ ಅವಕಾಶ ಇಲ್ಲ ಎಂದು ಬಂದಾಗ ಅದರಿಂದ ನಮಗೆ ನ್ಯಾಯ ದೊರೆಯುವುದಿಲ್ಲ, ಎಂದಾಗ ಈಗ ತಾವೇನು ನಿರ್ಣಯ ಮಾಡಿದ್ದೀರಿ ಅದು ನಮಗೆ ಪೂರಕವಾಗಿಲ್ಲದೆ ಇರುವುದರಿಂದ ಮತ್ತು ಅದರಿಂದ ನಮಗೆ ಅಂದರೆ ಟ್ರಿಬ್ಯೂನಲ್‌ನಿಂದ ನಮಗೆ ನ್ಯಾಯ ದೊರೆಯುತ್ತದೆ ಎನ್ನುವ ವಿಶ್ವಾಸವಿಲ್ಲ. ಆದ್ದರಿಂದ ಟ್ರಿಬ್ಯೂನಲ್‌ನ್ನು ಬಹಿಷ್ಕಾರ ಮಾಡುವ ನಿರ್ಣಯ ತೆಗೆದುಕೊಳ್ಳೋಣ. Probably I think I have made myself very clear on this issue.

ಶ್ರೀ ವೀರೇಂದ್ರಪಾಟೀಲ್.—ಮಾನ್ಯ ವಿರೋಧಪಕ್ಷದ ನಾಯಕರು ತಮ್ಮ ಭಾಷಣ ಮುಗಿಸುತ್ತಿದ್ದಾರೆ. ಅವರು ಸ್ವಲ್ಪ ಹೊತ್ತಿನ ಮುಂಚೆ ಒಂದು ವಿಚಾರ ಹೇಳಿದರು, ಅವರು ತಮ್ಮ ಪಕ್ಷದೊಂದಿಗೆ ವಿಚಾರ ಮಾಡಿ ಕ್ಲಾರಿಫೈ ಮಾಡಿಕೊಂಡು ಹೇಳಲಿ, ಅವರು ಹೇಳಿದ್ದಾರೆಂದು ನಾನು ಆತುರವಾಗಿ ಏನನ್ನೂ ಮಾಡಲಿಕ್ಕೆ ಹೋಗುವುದಿಲ್ಲ. ಒಂದು ವ್ಯತ್ಯಾಸ ಏನು ಎಂದರೆ Tribunal is a body constituted under the Statute under Inter-State Dispute Act. Government of India ಇದನ್ನು ರಚನೆ ಮಾಡಿರುತ್ತದೆ. ಇನ್ನೊಂದು ಅವರು ಏನು ರೆಫರ್ ಮಾಡಿದಾರೆಂದರೆ Inter-State Council it is not a statutory body. ಅದು ಇನ್ನು ರಚನೆ ಆಗಿಲ್ಲ. It is going to be an Executive Body and purely a recommendatory body. ಇಲ್ಲಿ ಏನಾಗಿದೆ ಎಂದರೆ, ಇಂಟರ್ ಸ್ಟೇಟ್ ಕೌನ್ಸಿಲ್‌ನಲ್ಲಿ ಎರಡೂ ಸ್ಟೇಟ್‌ಗಳು ಒಪ್ಪಿದರೆ ಆಗ ಹೋಗಬಹುದು. ಇಂಟರ್‌ಸ್ಟೇಟ್ ಕೌನ್ಸಿಲ್‌ಗೆ ಮದ್ರಾಸ್ ಸರ್ಕಾರ ಒಪ್ಪಿಕೊಳ್ಳಲಿಕ್ಕೆ ತಯಾರು ಇಲ್ಲ, ಆ ಏಂಗಲ್‌ನಲ್ಲಿ ವಿಚಾರ ಮಾಡಿ ಎಂದು ಹೇಳುತ್ತೇನೆ, ಈಗ ತಾವು ಏನೋ ಹೇಳಿದ್ದೀರಿ ಎಂದು ನಾನು ತಮ್ಮ ಕೈಕಟ್ಟುವುದಕ್ಕೆ ಹೋಗುವುದಿಲ್ಲ.

ಅಧ್ಯಕ್ಷರು.—ವಿರೋಧಪಕ್ಷದ ನಾಯಕರೇ ನಿಮಗೆ ಇನ್ನೂ ಸ್ವಲ್ಪ ಟೈಮ್ ಕೊಡಬೇಕೆಂದು ನನ್ನ ಇಚ್ಛೆ. ಅದಕ್ಕೋಸ್ಕರ ಈಗ ಸದನ ಮುಂದುವರೆದು ಮತ್ತೆ ೨ ಘಂಟೆ ೨೦ ನಿಮಿಷಕ್ಕೆ ಸಮಾವೇಶಗೊಳ್ಳುತ್ತದೆ.

(ಸದನವು ೧ ಘಂಟೆ ೨೨ ನಿಮಿಷಕ್ಕೆ ಮುಕ್ತಾಯಗೊಂಡು ಮತ್ತೆ ಪುನಃ ಮಧ್ಯಾಹ್ನ ೨ ಘಂಟೆ ೨೦ ನಿಮಿಷಕ್ಕೆ ಸೇರಲು ತೀರ್ಮಾನಿಸಿತು).

(ಸದನವು ೨-೪೫ ಗಂಟೆಗೆ ಪುನಃ ಸೇರಿತು)

† ಶ್ರೀ ಡಿ. ಬಿ. ಚಂದ್ರೇಗೌಡ (ವಿರೋಧ ಪಕ್ಷದ ನಾಯಕರು).—ಮಾನ್ಯ ಅಧ್ಯಕ್ಷರೇ ನಾನು ಈ ವಿಚಾರದಲ್ಲಿ ನನ್ನ ಸಲಹೆಯನ್ನು ಈಗಾಗಲೇ ಕೊಟ್ಟಿದ್ದೇನೆ. ಈಗ ಮುಖ್ಯವಾಗಿ ನಾವೆಲ್ಲರೂ ಒಟ್ಟಿಗೆ ಸೇರಿ ಮಾಡಬೇಕಾದಂತಹ ಎರಡು ಮೂರು ಕೆಲಸಗಳು ಇವೆ ಒಂದು ನದಿ ಪಾತ್ರದಲ್ಲಿರ ತಕ್ಕಂಥ ಕೆಳಗಿನವರು ಏನಾದರೂ ಮಾಡಿದರೆ ಅದು ಅಪಚಾರವಾಗಿ ಶಾಸನವಾಗುತ್ತದೆ. ಅದೇ ಮೇಲಿನವರು ಏನಾದರೂ ಮಾಡಿದರೆ ಅದು ಅಪರಾಧವಾಗುತ್ತದೆ. ಕರ್ನಾಟಕ ರಾಜ್ಯದ ಮೈಸೂರು ಭಾಗದಲ್ಲಿ ಹಲವಾರು ಪ್ರಾಜೆಕ್ಟ್‌ಗಳನ್ನು ನಾವು ಹಮ್ಮಿಕೊಂಡಿದ್ದೇವೆ. ಬಹಳ ಪ್ರಮುಖವಾದ ಈ

ಯೋಜನೆಗಳಲ್ಲಿ ಕಬಿನಿ, ಹಾರಂಗಿ, ಹೇಮಾವತಿ, ಯಗಚಿ ಅದೇ ರೀತಿ ಕೊಳ್ಳೇಗಾಲ ಪ್ರದೇಶದಲ್ಲಿ ಕೆಲವು ಸಣ್ಣಪುಟ್ಟ ಪ್ರಾಜೆಕ್ಟ್‌ಗಳನ್ನು ಹಮ್ಮಿಕೊಂಡಿದ್ದೇವೆ. ನಾವು ಇಲ್ಲಿ ಏನಾದರೂ ಮೇಲಿನವರು ಜಲಾಶಯಗಳನ್ನು ಕಟ್ಟುವುದಕ್ಕೆ ಪ್ರಯತ್ನ ಮಾಡಿದರೆ ಅದು ಒಂದು ಅಪರಾಧ ಎಂದು ಪರಿಗಣಿಸಿ ಕೇಂದ್ರ ಸರ್ಕಾರ ಅಥವಾ ಪ್ಲಾನಿಂಗ್ ಕಮಿಷನ್ ನಮಗೆ ಕ್ಲಿಯರೆನ್ಸ್ ಕೊಡುತ್ತಿಲ್ಲ. ೧೯೭೪ರಿಂದ ಇತ್ತೀಚೆಗೆ ಅದು ಪೂರ್ವಭಾವಿಯಾಗಿ ಮಾನ್ಯ ಮುಖ್ಯಮಂತ್ರಿಗಳು ಹಿಂದೆ ನೀರಾವರಿ ಮಂತ್ರಿಗಳಾಗಿದ್ದಾಗ ಧೈರ್ಯ ಮಾಡಿ ಕೆಲವು ಕಾಮಗಾರಿಗಳನ್ನು ಪ್ರಾರಂಭಿಸಿದ್ದರು. ದುರ್ದೈವದಿಂದ ಕೆಲವಕ್ಕೆ ೨೦ ವರ್ಷವಾಗಿದೆ. ಹೆಚ್ಚು ಸಮಯ ಕಳೆದರೂ ಅವುಗಳನ್ನು ಪೂರ್ಣ ಮಾಡುವುದಕ್ಕೆ ಸಾಧ್ಯವಾಗಿಲ್ಲ, ಈ ದೃಷ್ಟಿಯಿಂದ ನೀರಾವರಿಗೆ ಹೆಚ್ಚು ಹಣ ಕೊಡಬೇಕೆಂದು ಹೇಳಿ ವಾದ ಮಾಡುವುದು ಒಂದು ಭಾಗ. ಹಣ ಕೊಡತಕ್ಕಂಥದ್ದು ಮತ್ತೊಂದು ತರಹ. ಈ ಸಾರಿ ೧೦೦ ಕೋಟಿ ರೂಪಾಯಿಗಳನ್ನು ಕಾವೇರಿ ಜಲಾನಯನ ಯೋಜನೆಗೆ ಆಯವ್ಯಯದಲ್ಲಿ ಕೊಟ್ಟಿದ್ದಲ್ಲದೆ ಆಯವ್ಯಯದ ಹೊರಗೆ ೧೫೦ ಕೋಟಿ ರೂಪಾಯಿಗಳನ್ನು ಕೊಡತಕ್ಕಂಥ ಆಶ್ವಾಸನೆಯನ್ನು ರಾಜ್ಯದ ನೀರಾವರಿ ಸಚಿವರು ಈ ರಾಜ್ಯದ ಜನಕ್ಕೆ ತಿಳುವಳಿಕೆಗೆ ಹೇಳಿದ್ದಾರೆ. ಅದಕ್ಕಾಗಿ ನಾನು ಅವರನ್ನು ಮತ್ತು ಸರ್ಕಾರವನ್ನು ಅಭಿನಂದಿಸುತ್ತೇನೆ. ಹಣ ಕೊಡುವುದು ಸುಲಭ. ಖರ್ಚು ಮಾಡಿರುವ ರೀತಿ ನೋಡಿದರೆ, ನನಗೆ ಸಿಕ್ಕಿರತಕ್ಕಂಥ ಲೆಕ್ಕದ ಪ್ರಕಾರ ೧೦೦ ಕೋಟಿ ರೂಪಾಯಿ ಕೊಟ್ಟು ೫೮ ಕೋಟಿ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿದ್ದೇವೆ ಎನ್ನುವುದಕ್ಕಿಂತ ಒಟ್ಟು ಹಣವನ್ನು ವ್ಯಯ ಮಾಡುವುದಕ್ಕೆ ಸರಿಯಾದ ವ್ಯವಸ್ಥೆ ಮಾಡಿಕೊಳ್ಳಬೇಕು. ಮುಖ್ಯವಾಗಿ ನಾವು ಸ್ವಲ್ಪ ಮಟ್ಟಿಗೆ ಸಾರ್ವಜನಿಕ ಜೀವನದಲ್ಲಿ ಇರತಕ್ಕವರೆಲ್ಲರಿಗೂ ಈ Publicity mania ಇರುತ್ತದೆ. ಅದರಿಂದ ನೀರಾವರಿ ಮಂತ್ರಿಗಳು ಹೊರತಾಗಿರಬೇಕೆಂದು ನಾನು ಅಪೇಕ್ಷೆ ಪಡುವುದು ಅಪರಾಧವಾಗುತ್ತದೆ. ಬಹಿರಂಗ ಸಭೆಗಳಲ್ಲೋ, ಪತ್ರಿಕೆಗಳಲ್ಲೋ, ಹೇಳಿ ಪ್ರಚಾರಗಿಟ್ಟಿಸುವುದಕ್ಕಿಂತ ಹೆಚ್ಚಾಗಿ ಇಟ್ಟಿದ್ದ ಹಣವನ್ನೆಲ್ಲಾ ಖರ್ಚು ಮಾಡಿದ್ದೇವೆ ಎನ್ನುವ ಕೀರ್ತಿಗೆ ಭಾಜನರಾಗತಕ್ಕಂಥ ಕೆಲಸ ಮಾಡುವುದು ಬಹಳ ಮುಖ್ಯ. ಆ ಕಾರಣ ೨೫೦ ಕೋಟಿ ರೂಪಾಯಿಗಳನ್ನು ಈಗ ಖರ್ಚು ಮಾಡುವುದಕ್ಕೆ ಬೇಕಾಗಿರತಕ್ಕಂಥ ಇನ್‌ಫ್ರಾಸ್ಟ್ರಕ್ಚರ್‌ನ್ನು ಮಾಡಬೇಕು. ಇದು ಸಣ್ಣ ಹಣ ಅಲ್ಲ, ಇಷ್ಟು ದೊಡ್ಡ ಪ್ರಮಾಣದ ಹಣವನ್ನು ಖರ್ಚು ಮಾಡಬೇಕಾದರೆ ಅದಕ್ಕೆ ಬೇಕಾಗಿರತಕ್ಕಂಥ ಆಡಳಿತ ವ್ಯವಸ್ಥೆಯನ್ನು ಸಿಬ್ಬಂದಿ ಸಲಹೆಗಳನ್ನು ಮತ್ತು ಖರ್ಚು ಮಾಡತಕ್ಕಂಥ ರಾಜಕೀಯ ಇಚ್ಛಾಶಕ್ತಿಯನ್ನು ಈ ಸರ್ಕಾರ ಪ್ರದರ್ಶನ ಮಾಡಬೇಕಾಗಿದೆ, ಅದನ್ನು ಇವತ್ತೇ ನಾನು ಹೇಳುವುದಕ್ಕಾಗುವುದಿಲ್ಲ. ಆ ಕಾಲ ಬಂದಾಗ ನಾನು ಆ ವಿಚಾರದಲ್ಲಿ ಪ್ರಸ್ತಾಪ ಮಾಡುತ್ತೇನೆ. ಈಗ ಸಧ್ಯಕ್ಕೆ ಈಗ ಹಮ್ಮಿಕೊಂಡಿರತಕ್ಕ ಯೋಜನೆಗಳನ್ನು ಪೂರ್ಣಗೊಳಿಸಬೇಕು. ನೀರು ತುಂಬಿಸಿ ಇಟ್ಟುಕೊಂಡಿದ್ದೇವೆ. ಆದರೆ ಉಪಯೋಗಿಸುವುದಕ್ಕಾಗುವುದಿಲ್ಲ. ಯಾರ ಸಲುವಾಗಿ ನೀರನ್ನು ತುಂಬಿಸಿ ಇಟ್ಟುಕೊಂಡಿದ್ದೀರಿ. ತಮಿಳುನಾಡಿನವರು ಪ್ರತಿ ವರ್ಷವೂ ನೀರು ಕೇಳುವುದರಿಂದ ಅವರಿಗೆ ನೀರು ಕೊಡುವುದಕ್ಕೆ ತುಂಬಿಸಿಡಲಾಗಿದೆ ಎನ್ನುವುದೇ ಈಗ ಸಹಜ ಭಾವನೆಯಾಗಿದೆ. ನಮ್ಮ ಉಪಯೋಗಕ್ಕಾಗಿಯೇ ನೀರನ್ನು ತುಂಬಿಸಿ ಇಟ್ಟುಕೊಂಡಿದ್ದೇವೆ ಎನ್ನುವ ಭಾವನೆ ಬರಬೇಕಾದರೆ, ಅದಕ್ಕೆ ಬೇಕಾಗಿರತಕ್ಕಂಥ ಪ್ರಾಜೆಕ್ಟ್‌ಗಳನ್ನು ಮಾಡಿ ಎಲ್ಲೆಲ್ಲಿ ಕಾಲುವೆಗಳು ಬೇಕಾಗಿದೆಯೋ ಅಲ್ಲೆಲ್ಲಾ ಕಾಲುವೆಗಳನ್ನು ತ್ವರಿತಗತಿಯಿಂದ ಮಾಡಬೇಕೆಂದು ನಾನು ಒತ್ತಿ ಒತ್ತಿ ಈ ಮೂಲಕ ಹೇಳಬಯಸುತ್ತೇನೆ. ಇನ್ನು ಕಾವೇರಿ ನದಿ ವಿವಾದವನ್ನು ಬಗೆಹರಿಸುವುದಕ್ಕೆ ಒಂದು ಪಂಚಾಯಿತಿ ನೇಮಕಗೊಂಡಿದೆ. ಈ ನೇಮಕ ಸರಿಯೋ ತಪ್ಪೋ ಆದರೆ, ನಾನು ಅದನ್ನು ವಿರೋಧಿಸಬೇಕೆಂದು ಹೇಳಿದ್ದೇನೆ. ಸರ್ಕಾರ ಏನು ನಿರ್ಣಯ ಮಾಡುತ್ತದೆಯೋ ಆ ನಿರ್ಣಯದ ಜೊತೆ ನಾನು ಇರುತ್ತೇನೆ. ನಾನು ಹೊರತಾಗಿ ಉಳಿಯುವುದಿಲ್ಲ. ನನ್ನ ವಾದವನ್ನು ಮಂಡಿಸುವಾಗ ಕರ್ನಾಟಕದ ಜನತೆಗೆ ಆಗಿರತಕ್ಕ ಮಾನಸಿಕ ನೋವಿನ ಬಗ್ಗೆ ಒಂದೆರಡು ಮಾತನಾಡುವಾಗ ನಾನು ಕಹಿಯಾಗಿ ಮಾತನಾಡಿರಬಹುದು, ಅದನ್ನು ಅಪರಾಧವೆಂದು ಮಾನ್ಯ ಸಭಾನಾಯಕರು ಭಾವನೆ ಮಾಡಬಾರದು. ಆದರೆ ಇಲ್ಲಿ ಮುಖ್ಯವಾಗಿ ತೆಗೆದುಕೊಳ್ಳಬೇಕಾದುದು, ಒಂದು ಜಲಾನಯನ ಪ್ರದೇಶ, Basin as a Whole ಅದನ್ನು ಟ್ರಿಬ್ಯೂನಲ್ ತೀರ್ಮಾನ ಮಾಡುವುದಾದರೆ, ಚರ್ಚೆ ಮಾಡುವುದಾದರೆ, ಪರಿಹಾರ ಒದಗಿಸುವುದಾದರೆ, ನನ್ನ ಅಭ್ಯಂತರ ಇಲ್ಲ. ಏಕೆಂದರೆ, ಒಂದು ಬೇಸಿನ್‌ನ್ನು ಒಂದು ಆಸ್ತಿ ಎಂದು ಭಾವನೆ ಮಾಡಿದರೆ ತಮಿಳುನಾಡು, ಕರ್ನಾಟಕ, ಕೇರಳ ಮತ್ತು ಬೇರೆ ರಾಜ್ಯಗಳನ್ನು ಅಣ್ಣ ತಮ್ಮಂದಿರೆಂದು ಭಾವನೆ ಮಾಡಿ ಈಕ್ವಿಟಬಲ್ ಡಿಸ್ಟ್ರಿಬ್ಯೂಷನ್ ಮಾಡುವುದಕ್ಕೆ ಸಾಧ್ಯ ಇದೆಯೆನ್ನುವ ಭಾವನೆ ನಿಮಗೆ ಬಂದರೆ ನಾವು ಅದನ್ನು ವಿರೋಧ ಮಾಡುತ್ತೇವೆಂದು ಹೇಳುವುದಿಲ್ಲ. ಆದರೆ, ಬೇಸಿನ್ ಆ್ಯಸ್ ಎ ಹೋಲ್ ಮಾಡುವುದಿಲ್ಲ. ನಮಗೆ ೧೮೯೨ ರಿಂದ ೧೯೭೪ ರವರೆಗೆ ಆಗಿರತಕ್ಕಂಥ ಅನ್ಯಾಯದ ಕಾರಣಗಳನ್ನು ಈಗ ವಿಮರ್ಶೆ ಮಾಡುವುದಕ್ಕೆ ನಾನು ಹೋಗುವುದಿಲ್ಲ ಅನ್ಯಾಯವಾಗಿದೆಯೆಂದು ಈ ಇಡೀ ಸದನದ ಮತ್ತು ಈ ರಾಜ್ಯದ ಜನ ಒಪ್ಪಿಕೊಳ್ಳುತ್ತಾರೆ. ಆ ಅನ್ಯಾಯಗಳಿಗೆ ಸಿಕ್ಕಿ ಕೆಳಗಡೆ ಇರತಕ್ಕಂಥವರು ಬಳಸಿಕೊಂಡಿರತಕ್ಕ ನೀರು ನಮ್ಮ ಮಾಹಿತಿ ಪ್ರಕಾರ

ತಮಿಳುನಾಡಿನವರು ಇವತ್ತು ೩೨ ಲಕ್ಷ ಎಕರೆಯನ್ನು ದಾಟಿದ್ದರೆ ನಾವು ೧೧ ಲಕ್ಷ ಎಕರೆಗೆ ಮೀರದಿದ್ದರೆ ಇದಕ್ಕೆ ಏನು ಕಾರಣ? ಉಪಯೋಗಿಸಿಕೊಂಡಿರತಕ್ಕ ನೀರು ಮತ್ತು ಭೂಮಿಯನ್ನು ಆಧಾರವಾಗಿ ತೆಗೆದು ಕೊಂಡರೆ, ಅಲ್ಲಿ ವರ್ಷಕ್ಕೆ ಮೂರು ಬೆಳೆ ಬೆಳೆಯತಕ್ಕಂಥ ವ್ಯವಸ್ಥೆ ಇದ್ದರೆ, ನಾಳೆ ದಿವಸ ಟ್ರಿಬ್ಯೂನಲ್‌ನವರು ಅವರು ಮಾಡಿಕೊಂಡಿರುವುದೇ ಸರಿ ಎಂದು ತೀರ್ಮಾನಕ್ಕೆ ಬಂದರೆ ಆಗ ಪ್ರತಿಭಟನೆಗೆ ಮಾರ್ಗ ಉಳಿಯುವುದಿಲ್ಲ. ಆದ್ದರಿಂದ ಟರ್ಮ್ಸ್ ಆಫ್ ರೆಫರೆನ್ಸ್ ಎಂದು ಏನು ಹೇಳುತ್ತಾರೆ, ಇದು ಒಂದು ಸ್ಟ್ಯಾಟ್ಯೂಟರಿ ಆರ್ಗನೈಸೇಷನ್, ಕಮಿಷನ್ ಎನ್‌ಕ್ವೈಯರಿ ಎಂದು ಮಾಡಿದ್ದರೆ, ಟರ್ಮ್ಸ್ ಆಫ್ ರೆಫರೆನ್ಸ್‌ನಲ್ಲಿ ಚರ್ಚೆ ಮಾಡಬಹುದು. ಆದರೆ ಇಲ್ಲಿ ಅದಕ್ಕೆ ಚರ್ಚೆ ಮಾಡುವುದಕ್ಕೆ ಅವಕಾಶ ಇಲ್ಲ. ಹಾಗೆಯೇ ನಾವು ಟರ್ಮ್ಸ್ ಆಫ್ ರೆಫರೆನ್ಸ್ ಎಂದು ಏನು ಹೇಳುತ್ತೇವೆ., ಇದರಲ್ಲಿ ಬೇಸಿಸ್ ಆ್ಯಸ್ ಎ ಹೋಲ್ ತೆಗೆದುಕೊಂಡು ಅಣ್ಣ ತಮ್ಮಂದಿರಿಗೆ ಪಾಲುಗಾರಿಕೆ ಏನು ಮಾಡಬೇಕು ಹಾಗೆ ಮಾಡಬೇಕೆಂದು ಒಂದು ವ್ಯವಸ್ಥೆಗೆ, ಪ್ರಯೋಗಕ್ಕೆ, ಸಿದ್ಧತೆಗೆ, ಸರಕಾರ ಸಿದ್ಧವಾಗಬೇಕೆಂದು ಹೇಳಿ, ನಾನು ತಮ್ಮ ಮೂಲಕ ಸರಕಾರವನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಮೇಲಾಗಿ out of date ಬಚಾವತ್ ಅವಾರ್ಡ್‌ನಲ್ಲಿ ೧೯೬೯ರಲ್ಲಿ ಕೃಷ್ಣನದಿ ನೀರಿನ ವಿವಾದವನ್ನು ನಮ್ಮ ಸಭಾನಾಯಕರು ಅಂದಿನ ಮಂತ್ರಿಗಳಾಗಿದ್ದಾಗ ಇದನ್ನು ರೆಫರ್ ಮಾಡಿದಂಥ ಕಾಲದಲ್ಲಿ ಕಟ್‌ಆಫ್‌ಡೇಟ್ ಏನು ನಿರ್ಧಾರ ಆಯಿತು? ೧೯೭೨ರಲ್ಲಿ ನೀವು ಮೊದಲು ಇದನ್ನು ಟ್ರಿಬ್ಯುನಲ್‌ಗೆ ರೆಫರ್ ಮಾಡಿ ಎಂದು ಕೇಳಿದ್ದೀರಿ? ಆದ್ದರಿಂದ ಅದನ್ನು ಕಟ್‌ಆಫ್ ಡೇಟ್ ಎಂದು ಹೇಳಿ ನಿರ್ಣಯ ಮಾಡಿದರು ಎಂದು ನಾನು ತಿಳಿದುಕೊಂಡಿರುವುದು ಅದು ತಪ್ಪು ಕೂಡ ಇರಬಹುದು. ಅದನ್ನು ಮಾನ್ಯ ಮುಖ್ಯ ಮಂತ್ರಿಗಳು ಸರಿಪಡಿಸುತ್ತಾರೆಂದು ಭಾವಿಸುತ್ತೇನೆ. ಈಗ ೧೯೭೨ನೇ ಇಸವಿ ಕಟ್‌ಆಫ್‌ಡೇಟ್ ಆಗಿರುವುದು ಆದರೆ, ಈಗ ನಾವು ೧೯೭೧ ಎಂದು ಏನು ಕೇಳಿದ್ದೇವೆ. ಅದೇ ಆಗಲಿ ಎಂದು ತಮಿಳುನಾಡಿನವರು ವಾದ ಮಾಡಿದರೆ ನಮ್ಮ ಪರಿಸ್ಥಿತಿಯು ಏನು? ಅದಕ್ಕಾಗಿ ನಾನು I will go back to 1800 cut of date. ೧೮೦೦ ಕಟ್‌ಆಫ್‌ಡೇಟ್ ಎಂದು ಹೇಳಿ, ಇದರಿಂದ ಮುಂದಕ್ಕೆ ಏನು ಆಗಿದೆ ಅದನ್ನು ಗಣನೆಗೆ ತೆಗೆದುಕೊಳ್ಳದೆ ೧೮೦೦ನೇ ಇಸವಿಯನ್ನು ಕಟ್‌ಆಫ್‌ಡೇಟ್ ಎಂದು ಒಂದು ಪ್ರಯತ್ನವನ್ನು ಮಾಡಬೇಕು ಮತ್ತೆ ಸೆಂಟ್ರಲ್ ವಾಟರ್ ಕಮಿಶನ್ ಇದ್ದೇ ಇದೆ. Central Water Commission is only an advisory body to the concerned Ministry at the Centre. What type of advise it offers to the concerned ministry is to be decided by them. ಅವರು ರಾಷ್ಟ್ರೀಯ ನೀತಿಯನ್ನು ರೂಪಿಸತಕ್ಕಂಥ ಪ್ರಯತ್ನವನ್ನು ಮಾಡಿದ ಹಾಗೆ ನನಗೆ ಕಾಣಲಿಲ್ಲ. ಆ ಬಗ್ಗೆ ತಮಗೆ ಮಾಹಿತಿಯಿದೆಯೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ, ಇಂಥ ಒಂದು ರಾಷ್ಟ್ರೀಯ ನೀತಿ ನಿರೂಪಣೆ ಆಗದೇ ಹೋದರೆ ನಾವು ಪಂಚಾಯತಿ ರಿಪೋರ್ಟ್ ಮಾಡಿ ತೀರ್ಮಾನ ಕೊಡಿ ಎಂದು ಹೇಳುತ್ತೇವೆ, ಆ ತೀರ್ಮಾನಕ್ಕೆ ಯಾವ ಆಧಾರವೂ ಇಲ್ಲ. ಅದಕ್ಕೆ ಆಧಾರಗಳನ್ನು ಕೊಡತಕ್ಕಂಥ ಸ್ಟ್ಯಾಟಿಸ್ಟಿಕಲ್ ಡಾಟಾ ಯಾರು ಕೊಡಬೇಕು? ೧೯೭೧-೭೨ರ ಸುಮಾರಿನಲ್ಲಿ ಇ.ಸಿ. ಪಟೇಲ್ ಕಮಿಟಿ ಬಂತು. ಇವರು ಕೊಟ್ಟಿರತಕ್ಕಂಥ ಲೆಕ್ಕವನ್ನು ಇವರು ಒಪ್ಪಿಕೊಂಡ ಹಾಗೆ ಆಯಾಯಾ ರಾಜ್ಯಗಳು ಕೊಟ್ಟಿರತಕ್ಕಂಥ ಲೆಕ್ಕವನ್ನು ಕಂಪೈಲ್ ಮಾಡಿಕೊಟ್ಟಿದ್ದೇನೆ ಎಂದು ಹೇಳಿದ್ದಾರೆ. ಹಾಗಿದ್ದರೆ ಹೊಸ ಲೆಕ್ಕವನ್ನು ಕೇಳುವುದು ಹೇಗೆ? ಈ ಕೆಲಸವನ್ನು ಮುಂದೆ ಟ್ರಿಬ್ಯುನಲ್ ಮಾಡಬೇಕಾಗುತ್ತದೆ, ಈ ಲೆಕ್ಕ ನಮಗೆ ಸಿಕ್ಕದ ಹೊರತು, ನಮ್ಮ ಭಾಗವನ್ನು ನಾವೇನು ಅಪೇಕ್ಷೆ ಮಾಡುತ್ತೇವೆ, ಅಥವಾ ನಮ್ಮ ಅಗತ್ಯ ಏನಿದೆ ಅದಕ್ಕೆ ತಕ್ಕಂಥ ಪಾಲು ನಮಗೆ ದೊರೆಯುವುದಿಲ್ಲ ಎನ್ನುವಂಥ ಒಂದು ಶಂಕೆ ನಮಗೆಲ್ಲರಿಗೂ ಇದೆ ಎಂದು ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತಂದು, ಹೆಚ್ಚಿಗೆ ನನ್ನ ಮಾತನ್ನು ಅವಲಂಬಿಸದೆ ನಾವು ಆಡಿರತಕ್ಕಂಥ ಮಾತುಗಳಲ್ಲಿ ಬಹಳ ಸೂಕ್ಷ್ಮವಾದ ವಿಚಾರಗಳು ಇದೆ. ಅಂತೆಯೇ ಭಾವನಾತ್ಮಕವಾಗಿ ನಮಗೆ ಆಗಿರತಕ್ಕಂಥ ವೇದನೆಯನ್ನು ತಾವುಗಳು ಅರ್ಥ ಮಾಡಿಕೊಳ್ಳಬೇಕೆಂದು ಕೇಳಿಕೊಳ್ಳುತ್ತಾ ನನಗೆ ತುಂಬಾ ಸಂತೋಷ ತಂದಿರತಕ್ಕಂಥ ಒಂದು ವಿಚಾರವನ್ನು ಹೇಳಬಯಸುತ್ತೇನೆ, ನಮ್ಮ ಮುಖ್ಯಮಂತ್ರಿಯವರಿಗೆ ಸಿಟ್ಟು ಬರುತ್ತದೆ ಎಂಬುದನ್ನು ಇವೊತ್ತು ತಿಳಿದುಕೊಂಡಿದ್ದೇನೆ. ಇಂಥ ಸಿಟ್ಟು ಮಾನ್ಯರಿಗೆ ಎಲ್ಲಾ ಕಾಲಕ್ಕೂ ಬರಬೇಕು. ಈ ಸಿಟ್ಟು ಅವರಿಗೆ ಅಪರೂಪಕ್ಕೆ ಇವೊತ್ತು ಬಂದಿದೆ. ಇಂಥ ತರಹದ ಸಿಟ್ಟು ಅವರಿಗೆ ಬೇರೆ ಕಾಲಕ್ಕೂ ಬರುತ್ತಾ ಇದ್ದರೆ ನಮ್ಮ ಕೆಲಸಕಾರ್ಯಗಳ ಸಾಧನೆಯಾಗುತ್ತವೆ ಆ ಒಂದು ವಿಶ್ವಾಸ ನನ್ನಲ್ಲಿ ಇದೆ. ಆದುದರಿಂದ ಈ ವಿಚಾರದಲ್ಲಿ ಹೆಚ್ಚಿಗೆ ಸಿಟ್ಟು ಪದೆಪದೇ ಅವರಿಗೆ ಬರಲಿ ಎಂದು ಅಪೇಕ್ಷಿಸಿ, ನಾನು ಕೆಲವು ಸಲಹೆಗಳನ್ನು ಈ ಕುರಿತು ಏನು ಕೊಟ್ಟಿದ್ದೇನೆ, ಇದು ಕೇವಲ ಭಾವನಾತ್ಮಕವಾಗಿ ಮಾತ್ರ ನಾವು ಕೊಟ್ಟಂಥ ಸಲಹೆಗಳಲ್ಲಿ, ಹಿಂದಿನ ನೋವು, ನಂಜನ್ನು ಏನು ಉಂಡಿದ್ದೇವೆ, ಮತ್ತು ನಮ್ಮ ವೈಫಲ್ಯದ ಫಲವಾಗಿ ನಾವು ಏನು ಕಷ್ಟನಷ್ಟಗಳನ್ನು ಅನುಭವಿಸಿದ್ದೇವೆ, ಅದರಿಂದಾಗಿ ನೋವಿನಿಂದ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೇವೆ. ಇವುಗಳು ಯೋಗ್ಯ ಎಂದು ಕಂಡು ಬಂದರೆ ಎಲ್ಲರೂ ಕುಳಿತು ಚರ್ಚೆ ಮಾಡಿ ಸದನದ ಒಂದು

ಸಮಿತಿಯನ್ನು ರಚಿಸುವ ಮೂಲಕ ಅಥವಾ ಇನ್ನಾವುದೋ ರೂಪದಲ್ಲಿ ತಾವುಗಳು ಬಯಸುತ್ತೀರೋ ಆ ರೀತಿಯಲ್ಲಿ ಒಂದು ವ್ಯವಸ್ಥೆಯನ್ನು ತಾವುಗಳು ಮಾಡಬೇಕು ಕಳೆದ ೧೧ನೇ ತಾರೀಖಿನ ಮೀಟಿಂಗ್‌ನಲ್ಲಿ ತಾವು ಒಂದು ಮಾತನ್ನು ಕೊಟ್ಟಿದ್ದೀರಿ. ಈ ಬಗ್ಗೆ ನಾಲ್ಕು ಸಮಿತಿಗಳನ್ನು ರಚನೆ ಮಾಡುತ್ತೇನೆ ಎಂದು ಹೇಳಿದ್ದೀರಿ, ಅವುಗಳು ಯಾವುವು ಅಂದರೆ, (1) Legal Cell (2) Technical Cell (3) Resource Modilisation Committee (4) To Exhaust the legal avenues. ಈ ವಿಚಾರಗಳ ಬಗ್ಗೆ ಆಲೋಚನೆ ಮಾಡುವುದಕ್ಕೆ ಒಂದು ಸಮಿತಿಯನ್ನು ರಚನೆ ಮಾಡುತ್ತೇನೆ ಎಂದು ಹೇಳಿದ್ದೀರಿ ಆದರೆ ಇದುವರೆಗೂ ಆ ಬಗ್ಗೆ ನಮಗೆ ಯಾವ ಮಾಹಿತಿಯೂ ಇಲ್ಲ. ಆ ಸಮಿತಿಗಳು ಕೆಲಸ ಮಾಡುತ್ತಿವೆಯೋ, ಅವುಗಳು ಶಿಫಾರಸ್ಸು ಏನು ಎಂಬ ಬಗ್ಗೆ ದಯಮಾಡಿ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ. ಅಂತಹ ಸಮಿತಿಗಳು ಕೊಟ್ಟಿರುವ ಸಲಹೆಗಳು ಯೋಗ್ಯವಾಗಿದ್ದರೆ ಅವುಗಳನ್ನು ತೆಗೆದುಕೊಂಡು ಒಟ್ಟಾರೆ ರಾಜ್ಯದಲ್ಲಿ ಒಂದು ಕೋಟಿಗೂ ಮಿಕ್ಕಿದ ಜನಾಂಗದ ಭವಿಷ್ಯ ತಮ್ಮ ಜೀವನಾದ್ಯಂತ ನಾವು ಬದುಕಿರುತ್ತೇವೋ ಬಿಡುತ್ತೇವೋ ಎನ್ನುವ ಪ್ರಶ್ನೆಯಲ್ಲ. ಇಡೀ ಜನಾಂಗದ ಭವಿಷ್ಯದಲ್ಲಿ ಸೂರ್ಯಚಂದ್ರರಿರುವ ತನಕ ಅನುಭವಿಸಬೇಕಾದ ಭಾಗ್ಯದೆಯೋ ಅದನ್ನು ಕಳೆದುಕೊಳ್ಳುವುದನ್ನು ತಪ್ಪಿಸಲಂತೂ ಆಗುವುದಿಲ್ಲ ಕಡೇ ಪಕ್ಷ ನಷ್ಟವನ್ನು ಹಗುರ ಮಾಡುವ ಪ್ರಯತ್ನವನ್ನು ನಾವೂ ನೀವೂ ಸೇರಿ ಮಾಡೋಣ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎನ್ ಹುಚ್ಚ ಮಾಸ್ತಿಗೌಡ.—ಅಧ್ಯಕ್ಷರೇ, ಒಂದು ಸಲಹೆ ಕೊಡುತ್ತೇನೆ. ಮಾನ್ಯ ಚಂದ್ರೇಗೌಡರು ಹೇಳಿದ ಪ್ರಕಾರ ಈ ಶಾಸನಸಭೆಯನ್ನೇ ಒಂದು ಸಮಿತಿಯನ್ನಾಗಿ ರಚಿಸಿ ಪ್ರೇಕ್ಷಕರಾಗಲೀ ಪತ್ರಿಕೆಯವರಾಗಲೀ ಇರದಂತಹ ಸಭೆಯಲ್ಲಿ ಈ ಸದನದ ಪ್ರತಿ ಸದಸ್ಯರೂ ಮುನಃ ಪೂರ್ವಕವಾಗಿ ನಿರಾತಂಕವಾಗಿ ತಮ್ಮ ಅಭಿಪ್ರಾಯವನ್ನು ಹೇಳುವ ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ಸಲಹೆ ಮಾಡುತ್ತೇನೆ, ಈ ಬಗ್ಗೆ ತೀರ್ಮಾನ ಮಾಡಿದರೆ ಒಳ್ಳೆಯದು. ಹಿಂದೆ ಎಷ್ಟೋ ಸಲ ಹೀಗೆ ಚರ್ಚೆಯಾಗಿದೆ, ಪ್ರೇಕ್ಷಕರಾಗಲೀ ಪತ್ರಿಕೆಯವರಾಗಲೀ ಇರಬಾರದು ಅಷ್ಟೇ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಸನ್ಮಾನ್ಯ ಹುಚ್ಚಮಾಸ್ತಿಗೌಡರು ಸದಸ್ಯರ ಮನಸ್ಸಿನಲ್ಲಿ ಏನಿದೆ ಅದನ್ನು ನಿರಾಂತಕವಾಗಿ ಹೇಳಬೇಕೆಂದಿದ್ದಾರೆ. ಈಗಲೂ ಸದಸ್ಯರು ಮುಖ್ಯಮಂತ್ರಿಗಳಿಗೆ ಹೇಳುವುದಕ್ಕೆ ಅವಕಾಶ ಇದ್ದೇ ಇದೆ. ಲಕ್ಷಾಂತರ ಜನರೇತರ ಭವಿಷ್ಯದ ಬಗ್ಗೆ ಸರ್ಕಾರದ ನಿಲುವೇನು ಎಂದು ಯೋಚನೆ ಮಾಡಬೇಕಾದರೆ ಅದರ ಬಗ್ಗೆ ಇತಿಮಿತಿ ಇಟ್ಟುಕೊಂಡು ಮಾತನಾಡುವ ಹಕ್ಕು ಸದಸ್ಯರಿಗಿದೆ. ಅದನ್ನು ಯಾರೂ ಅಡ್ಡಿ ಮಾಡುತ್ತಿಲ್ಲ, ಜೊತೆಗೆ ಇದರಲ್ಲಿ ಗುಟ್ಟು ಏನೂ ಇಲ್ಲ. ನಮ್ಮ ರಾಜ್ಯದ ಹಿತದೃಷ್ಟಿಯಿಂದ ಹೇಳುವುದಕ್ಕೆ ನಮಗೆ ಅವಕಾಶ ಇದ್ದೇ ಇದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಅಧ್ಯಕ್ಷರೇ, ಹಿರಿಯರಾದಂಥ ಮಾನ್ಯ ಹುಚ್ಚಮಾಸ್ತಿ ಗೌಡರ ಮಾತಿನ ಹಿನ್ನೆಲೆ ಅಥವಾ ಕಳಕಳಿ ಏನಿದೆ ಎಂದರೆ ಈಗಾಗಲೇ ಟ್ರಿಬ್ಯೂನಲ್ ಸಂಸ್ಥಾಪನೆ ಮಾಡಿದ್ದಾರೆ, ಅದರ ಹಿನ್ನೆಲೆಯಲ್ಲಿ...

ಶ್ರೀ ವಾಟಾಳ್ ನಾಗರಾಜ್.—ಶವಸಂಸ್ಕಾರ ಮಾಡುವುದಕ್ಕೆ ಕದ್ದಾದರೂ ಏನು ಬಹಿರಂಗವಾದರೂ ಮಾಡಬಹುದು,

ಶ್ರೀ ಎಂ. ವೀರಪ್ಪ ಮೊಯಿಲಿ.—ನೋಡಿ, ಹುಚ್ಚಮಾಸ್ತಿಗೌಡರ ಕಳಕಳಿ ಇದೇ ಆಗಿದೆ. ಇಂತಹ ಮಾತುಗಳು ಎಲ್ಲಿಗೆ ನಿಲ್ಲುತ್ತವೆ ಗೊತ್ತಾಗುವುದಿಲ್ಲ. ನಮ್ಮಲ್ಲೇ ಸಂಯಮ ಮಾಡಿಕೊಂಡು ನಮಗೆ ಸಿಗುವ ವೈಯುಕ್ತಿಕ ಪ್ರಚಾರ, ವೈಯುಕ್ತಿಕ ಪ್ರತಿಷ್ಠೆಗಳು, ಮುಖ್ಯವಲ್ಲವೆಂದು ತಿಳಿದುಕೊಂಡು ವಿಚಾರ ಮಾಡುವ ಶಕ್ತಿಸಾಮರ್ಥ್ಯ ಸನ್ಮಾನ್ಯ ಸದಸ್ಯರಲ್ಲಿ ಖಂಡಿತವಾಗಿ ಇದೆ ಎಂದು ನನಗೆ ವಿಶ್ವಾಸ ಇದೆ. ಈಗ ಚರ್ಚೆ ಮುಂದುವರೆಸುವುದಕ್ಕೆ ನಮ್ಮದೂ ಸಹಮತ ಇದೆ. ಆದ್ದರಿಂದ ಸದಸ್ಯರು ಮಾತನಾಡುವಾಗ ಕರ್ನಾಟಕ ರಾಜ್ಯದ ರೈತರ ಹಿತಾಸಕ್ತಿಯನ್ನು ಸಂಪೂರ್ಣವಾಗಿ ಅರಿತು ಮಾತನಾಡಿದರೆ ಬಹಳ ಮೆಚ್ಚುತ್ತೇವೆ. ಈ ಸದನದಲ್ಲೇ ಅತ್ಯಂತ ಹಿರಿಯ ಸದಸ್ಯರಾದವರು ಎದ್ದು ಮಾತನಾಡಬೇಕಾದರೆ ಅವರಿಗೆ ಸ್ವಲ್ಪ ಪ್ರವೋಕೇಷನ್ ಸಿಕ್ಕಿರಬೇಕಾಗುತ್ತದೆ. ಇದು ಕೇವಲ ಇಲ್ಲಿರುವವರು ನೋವು ಮಾತ್ರವಲ್ಲ, ನಮ್ಮ ಹಿಂದೆ ಇರುವ ಲಕ್ಷಾಂತರ ಜನರ ನೋವನ್ನು ನಿವಾರಿಸಲು ನಾವು ಇಲ್ಲಿ ಕೂಡಿದ್ದೇವೆಯೋ ಹೊರತು ಅದನ್ನು ಹೆಚ್ಚು ಮಾಡಬೇಕೆಂದು ನಾವು ಕುಳಿತುಕೊಂಡಿಲ್ಲ. ಆ ಕೆಲಸ ಮಾಡುವಾಗ ಸಂಯಮ ಇಟ್ಟುಕೊಂಡು ಮುಂದೆ ಬರುವ ಟ್ರಿಬ್ಯೂನಲ್ಲನಲ್ಲಿ ವಾದಿಸಲು ಅನುಕೂಲವಾಗುವ ಹಾಗೆ ಸದಸ್ಯರು ಬಿಚ್ಚು ಮನಸಿನಿಂದ ಮಾತನಾಡಬೇಕು. ಸಂಯಮದಿಂದ ಮಾತನಾಡಿದರೆ ಅದರ ಉದ್ದೇಶ ಸಾರ್ಥಕವಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ).—ಮಾನ್ಯ ಅಧ್ಯಕ್ಷರೇ, ಈ ಸಭೆ ಬಹಳ ಸಾರ್ವಭೌಮತ್ವವನ್ನು ಪಡೆದಿರತಕ್ಕಂಥ ಸಭೆ. ಇಲ್ಲಿ ಗೌಪ್ಯವಾಗಿ ಕುಳಿತು ಚರ್ಚೆ ಮಾಡುವುದಕ್ಕಾಗುವುದಿಲ್ಲ. ಈ ಸಭೆಗೆ ಎಲ್ಲಾ ರೀತಿಯ ಹಕ್ಕು ಅಧಿಕಾರ ಪ್ರತಿಯೊಂದು ಇದೆ. ಈ ಸಭೆಯಲ್ಲಿ ಚರ್ಚೆ ಮಾಡತಕ್ಕಂಥದ್ದು ಬಹಳ ಗುರುತರವಾಗಿರತಕ್ಕಂಥದ್ದು ಮತ್ತು ನ್ಯಾಯವಾದದು. ಇದನ್ನು ಗುಟ್ಟಾಗಿ ಚರ್ಚೆ ಮಾಡಿದರೆ ಅದು ಸಭೆ ಎನಿಸಿಕೊಳ್ಳುವುದಿಲ್ಲ. ಆದಕ್ಕೋಸ್ಕರ ಗುಟ್ಟಾಗಿ ಏನು ಇಲ್ಲಿ ಮಾತನಾಡತಕ್ಕಂಥವರೆಲ್ಲರೂ ರೈತ ವಿರೋಧಿಗಳು ಎನ್ನುವ ಭಾವನೆಯಲ್ಲಿ ಮಾತನಾಡಬಾರದು. ಅವರಿಗೆ ಎಷ್ಟು ಕಳಕಳಿ ಇದೆಯೋ ರೈತರಬಗ್ಗೆ ಅಷ್ಟೇ ಕಳಕಳಿ ನಮಗೂ ಇದೆ. ಎಲ್ಲರೂ ಮಾತನಾಡುತ್ತಾರೆ. ಆದುದರಿಂದ ಬಿಚ್ಚು ಮನಸ್ಸಿನಿಂದ ಇಲ್ಲಿ ಇದರ ಬಗ್ಗೆ ಚರ್ಚೆ ನಡೆಯಲಿ ಈ ಒಂದು ಚರ್ಚೆಯ ಮೂಲಕ, ರಾಜ್ಯದ ಜನತೆಗೆ ದೇಶದ ಜನತೆಗೆ ಗೊತ್ತಾಗಲಿ. ಆದುದರಿಂದ ಪತ್ರಿಕೆಯವರನ್ನು ಹೊರಗಿಟ್ಟು, ಜನಗಳನ್ನು ಹೊರಗಿಟ್ಟು ನಾವು ನಾವೇ ಮಾತನಾಡಿದರೂ ಕೂಡಾ ಅದನ್ನು ಹೊರಗಡೆ ಹೇಳಿಯೇ ಹೇಳುತ್ತೇವೆ. ನಿನ್ನೆ ಏನು ಮಾತನಾಡಿದೆವು, ಈ ರೀತಿ ಆಯಿತು ಹಾಗೆ ಹೀಗೆ ಎಂದು ಹೇಳಿಯೇ ಹೇಳುತ್ತೇವೆ ಆದುದರಿಂದ ಇದನ್ನು ಗೌಪ್ಯವಾದಂಥ ಸಭೆಯನ್ನು ಮಾಡತಕ್ಕಂಥ ಪ್ರಶ್ನೆ ಏನೂ ಬರುವುದಿಲ್ಲ. ಆದುದರಿಂದ ಇವತ್ತು ನಾಳೆ ಇನ್ನು ಎರಡು ದಿವಸ ಆಗಲಿ, ಚರ್ಚೆ ಸಮಗ್ರವಾಗಿ ನಡೆಯಲಿ. ಆದುದರಿಂದ ಚರ್ಚೆಗೆ ತಾವು ಸಮಗ್ರವಾಗಿ ಎಲ್ಲರಿಗೂ ಅವಕಾಶ ಕೊಡಿ. ಎರಡೂ ಕಡೆಯವರಿಗೂ ಅವಕಾಶ ಕೊಡಿ. ಚರ್ಚೆಗೆ ಅಂತಿಮವಾಗಿ ಏನು ನಿರ್ಣಯವನ್ನು ತೆಗೆದುಕೊಳ್ಳಬೇಕು ಎನ್ನುವುದನ್ನು ಕುಳಿತು ಎಲ್ಲರೂ ವಿರೋಧ ಪಕ್ಷದ ಸದಸ್ಯರೂ ಸೇರಿ ನಿರ್ಣಯವನ್ನು ತೆಗೆದುಕೊಳ್ಳುವ ಮುಂಚೆ ಒಂದು ಸಾರಿ ತಮ್ಮ ಕಾರ್ಯಾಲಯದಲ್ಲಿ ಕುಳಿತು ಒಂದು ತೀರ್ಮಾನಕ್ಕೆ ಬರೋಣ.

ಶ್ರೀ ಕೆ. ಎಸ್. ಕಾಳಮ್ಮೇಗೌಡ (ಹುಣಸೂರು).—ಮಾನ್ಯ ಅಧ್ಯಕ್ಷರೆ, ಈಗ ನಮ್ಮ ಕಾವೇರಿ ಜಲಾನಯನದ ಬಗ್ಗೆ ಏನು ಒಂದು ಒಮ್ಮತದ ತೀರ್ಮಾನವನ್ನು ತೆಗೆದುಕೊಳ್ಳಬೇಕು ಎಂದು ಒಂದು ವಿಷಯ ಪ್ರಸ್ತಾಪವಾಗುತ್ತಿದೆ. ಈಗ ಕಾವೇರಿ ಜಲಾನಯನದ ವ್ಯಾಪ್ತಿಗೆ ಹೆಚ್ಚಾಗಿ ಮೈಸೂರು ಜಿಲ್ಲೆ, ಮಂಡ್ಯ ಜಿಲ್ಲೆ, ತುಮಕೂರು, ಹಾಸನ, ಬೆಂಗಳೂರು ಕೂಡಾ ಸೇರುತ್ತದೆ.

†ಶ್ರೀ ಸಿ. ಭೈರೇಗೌಡ (ವೇಮಗಲ್).—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಹುಚ್ಚಮಾಸ್ತಿಗೌಡರು ಹೇಳಿರತಕ್ಕಂಥದ್ದರಲ್ಲಿ ಖಂಡಿತವಾಗಿಯೂ ಅರ್ಥವಿದೆ. ಬಹುಶಃ ಪತ್ರಿಕೆಯಲ್ಲಿ ಬರಬೇಕು ಎನ್ನತಕ್ಕಂಥ ದೃಷ್ಟಿಯಿಂದ ನಾನು ಹೆಚ್ಚಿಗೆ ರೈತರ ಪರವಾಗಿ ಇದ್ದೇನೆ ಎಂದು ಹೇಳತಕ್ಕಂಥ ದೃಷ್ಟಿಯಿಂದ ಮಾತನಾಡತಕ್ಕಂಥ ಒಂದು ಆತುರದಲ್ಲಿ, ಆ ಭರದಲ್ಲಿ ಏನೇನೋ ಮಾತುಗಳ ನಮ್ಮ ಬಾಯಿಂದ ಬಂದರೆ ಅವೇ ನಾಳೆ ನಮ್ಮ ವಿರುದ್ಧ ಆಗತಕ್ಕಂಥ ಪರಿಸ್ಥಿತಿ ಖಂಡಿತವಾಗಲೂ ಉದ್ಭವವಾಗುತ್ತದೆ. ಅದು ಖಂಡಿತವಾಗಿಯೂ ಆಗುತ್ತದೆ, ಈಗಾಗಲೇ ಇಂಥ ಘಟನೆಗಳು ನಡೆದಿದೆ. ಸರ್ಕಾರದಿಂದ ಕೂಡಾ ಅಂಥ ಘಟನೆಗಳು ನಡೆದಿದೆ, ಆದುದರಿಂದ ಅದಕ್ಕೆ ಅವಕಾಶ ಕೊಡುವುದು ಬೇಡ ಎನ್ನತಕ್ಕಂಥದ್ದು ನನ್ನ ಅಭಿಪ್ರಾಯ ಕೂಡಾ ಹೌದು. ಇಲ್ಲಿ ಪ್ರೆಸ್‌ನವರನ್ನು ಮತ್ತು ಗ್ಯಾಲರಿಯಲ್ಲಿರತಕ್ಕಂಥವರನ್ನು ಹೊರಗಿಟ್ಟು ಮಾತನಾಡಿದರೆ ಕಾನೂನಿನ ಪ್ರಕಾರ ಇಲ್ಲಿ ದಾಖಲಾಗುತ್ತದೆ. ಅದು ರೆಕಾರ್ಡ್‌ಗೆ ಹೋಗುತ್ತದೆ ಇಲ್ಲಿ ಹೆಚ್ಚಾಗಿ ಮಾತನಾಡಿರತಕ್ಕಂಥ ಮಾನ್ಯ ವಿರೋಧ ಪಕ್ಷದ ನಾಯಕರು ಸೂಚಿಸಿದ ಹಾಗೆ ಒಂದು ಸದನದ ಸಮಿತಿಯನ್ನು ರಚನೆ ಮಾಡಿ ಅಲ್ಲಿಗೆ ಎಕ್ಸ್‌ಪರ್ಟ್ಸ್‌ನ್ನು ಕೂಡಾ ಕರೆಯಿಸುವುದಕ್ಕೆ ಅವಕಾಶ ಇದೆ. ಅವರ ಬಗ್ಗೆ ಏನು ಎಂದು ತಿಳಿದುಕೊಳ್ಳುವುದಕ್ಕೆ ಅವಕಾಶ ಇದೆ. ಈ ರೀತಿ ವ್ಯವಸ್ಥೆ ಮಾಡತಕ್ಕಂಥದ್ದು ಸೂಕ್ತ ಎಂದು ನನಗಾದರೂ ಅನಿಸುತ್ತದೆ. ಇದರ ಬಗ್ಗೆ ಮಾತನಾಡುವಾಗ ಕೆಲವು ವಿಚಾರಗಳನ್ನು ಹೇಳುತ್ತೇನೆ. ಸರ್ಕಾರದಲ್ಲಿಯೂ ಕೂಡಾ ನಮ್ಮ ಇಂಟರೆಸ್ಟ್‌ಗೆ ವಿರುದ್ಧವಾದಂಥ ಕೃತ್ಯಗಳು ನಡೆದಿದೆ. ಅದನ್ನು ಹೇಳುತ್ತೇನೆ. ಇವರಲ್ಲಿ ಅನೇಕ ಅಂಶಗಳು ಕೂಡಾ ಇದೆ. ನಮಗೇ ವಿರುದ್ಧ ಆಗತಕ್ಕಂಥ ಸಂದರ್ಭಗಳು ಕೂಡಾ ಬರುತ್ತವೆ. ಅದಕ್ಕೆ ಅವಕಾಶ ಕೊಡಬಾರದೆಂದು ತಮ್ಮ ಮೂಲಕ ನಾನು ವಿನಂತಿಸಿಕೊಳ್ಳುತ್ತೇನೆ.

(ಉಪಾಧ್ಯಕ್ಷರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು.)

ಬೆಂಗಳೂರಿನಲ್ಲಿ ಕುಡಿಯುವ ನೀರಿಗಾಗಿ ಇದನ್ನು ಉಪಯೋಗಿಸತಕ್ಕಂಥದ್ದು. ಅಚ್ಚುಕಟ್ಟು ಪ್ರದೇಶಕ್ಕೆ ಇರತಕ್ಕಂಥವು ಎಂದರೆ ಮೈಸೂರು, ಕೊಡಗು, ಹಾಸನ ಮತ್ತು ಮಂಡ್ಯ ಈ ರೀತಿ ನಾಲ್ಕೈದು ಜಿಲ್ಲೆಗಳು ಹಾಗೂ ಬೆಂಗಳೂರು ಜಿಲ್ಲೆಯೂ ಕೂಡಾ ಇದಕ್ಕೆ ಸೇರುತ್ತವೆ, ಒಟ್ಟಿನಲ್ಲಿ ಐದಾರೂ ಜಿಲ್ಲೆಗಳು ಈ ವ್ಯಾಪ್ತಿಯಲ್ಲಿ ಬರುತ್ತವೆ, ಇದಕ್ಕೆ ಈಗಾಗಲೇ ಅನೇಕ ಅಣೆಕಟ್ಟುಗಳನ್ನು ಕೂಡಾ ನಿರ್ಮಾಣ ಮಾಡಿದ್ದೇವೆ. ಇದರಲ್ಲಿ ಹೇಮಾವತಿ ಹಾಗೂ ಹಾರಂಗಿ, ಕಬಿನಿ ಅಣೆಕಟ್ಟುಗಳನ್ನು ಕೂಡಾ ಕಟ್ಟಿ ಆಗಿದೆ. ಈ ಅಣೆಕಟ್ಟುಗಳಿಂದ ಲಕ್ಷಾಂತರ ಎಕರೆಗಳಿಗೆ ನೀರನ್ನು ಬಹಳ ಜನ, ಬಹಳ ವರ್ಷಗಳಿಂದ ನಿರೀಕ್ಷಣೆ ಮಾಡಿದ್ದರು. ಹೇಮಾವತಿ ಮತ್ತು ಹಾರಂಗಿ ಕಟ್ಟೆ, ಕಬಿನಿ ಜಲಾನಯನಗಳಿಂದ

ರೈತರಿಗೆ ಸಾಕಷ್ಟು ಭೂಮಿ ಅಚ್ಚುಕಟ್ಟಿಗೆ ಬರುತ್ತದೆ ಎನ್ನತಕ್ಕಂಥದನ್ನು ಕೂಡಾ ನಿರೀಕ್ಷಣೆ ಮಾಡಿದ್ದರು.

ನಾವು ಏನು ನಿರೀಕ್ಷಣೆ ಮಾಡಿದ್ದೆವೋ ಅಷ್ಟು ಎಕರೆ ಈ ಅಚ್ಚುಕಟ್ಟುಗಳಿಂದ ನೀರಾವರಿ ಆಗಲಿಲ್ಲ. ಈಗ ಕಟ್ಟೆಯಂತೆ ಕಟ್ಟೆ ಆಗಿದೆ. ದೊಡ್ಡ ಕಾಲುವೆಗಳು, ಚಿಕ್ಕ ಕಾಲುವೆಗಳು ನಿರ್ಮಾಣ ಮಾಡತಕ್ಕದ್ದು ಇನ್ನೂ ಕೆಲವು ವರ್ಷಗಳು ಬೇಕಾಗುತ್ತದೆ. ಇನ್ನೂ ಒಂದು ಉದಾಹರಣೆ ಹೇಳುವುದಾದರೆ ಹಾರಂಗಿಯ ಎಡದಂಡೆ ಮತ್ತು ಬಲದಂಡೆ ಕಾಲುವೆಯಿಂದ ಒಂದು ಲಕ್ಷ ಚಿಲ್ಲರೆ ನೀರಾವರಿ ಆಗತಕ್ಕಂಥದ್ದು ಇದೆ. ಇದಕ್ಕೆ ಇನ್ನೂ ಅನೇಕ ಲಿಫ್ಟ್ ಇರಿಗೇಷನ್ ಪ್ರಾಜೆಕ್ಟ್‌ಗಳು ಆಗತಕ್ಕದ್ದು ಕೂಡ ಇದೆ. ಇದಕ್ಕೆ ಮಾನ್ಯ ಲೋಕೋಪಯೋಗಿ ಇಲಾಖಾ ಸಚಿವರು ಕೊಟ್ಟಿರತಕ್ಕಂಥಾದ್ದು ೧೨೦ ಕೋಟಿ ರೂಪಾಯಿ. ಇನ್ನೂ ಹೆಚ್ಚಿನ ಹಣ ಒದಗಿಸುತ್ತೇವೆ, ಇನ್ನೂ ೧೫೦ ಕೋಟಿ ರೂಪಾಯಿಗಳನ್ನು ಡಿಸೆಂಬರ್‌ನಲ್ಲಿ ಒದಗಿಸುತ್ತೇವೆ ಈ ಅಚ್ಚುಕಟ್ಟುಗಳು ಎಲ್ಲಿ ಆಗಬೇಕೋ ಅಲ್ಲಿ ಪೂರ್ಣಗೊಳಿಸುತ್ತೇವೆ ಎಂದು ಭರವಸೆಯನ್ನು ಕೊಟ್ಟಿದ್ದಾರೆ. ಈ ಒಂದು ಭರವಸೆ ೧೫೦ ಕೋಟಿ ರೂಪಾಯಿ ಹಣ ಮತ್ತೆ ಹಿಂದೆ ಒದಗಿಸಿರತಕ್ಕಂಥ ೧೭೦ ಕೋಟಿ ರೂಪಾಯಿಗಳನ್ನು ಒದಗಿಸಿದ್ದೇ ಆದರೆ ನಮ್ಮ ಪಾಲಿಗೆ ಬರತಕ್ಕಂಥ ಈ ಕಾವೇರಿ ಜಲಾನಯನದಿಂದ ೪-೫ ಲಕ್ಷ ಎಕರೆ ಜಮೀನಿಗೆ ನೀರಾವರಿಗೆ ಆಗಬೇಕಾಗಿತ್ತೋ ಅದನ್ನು ಸಂಪೂರ್ಣವಾಗಿ ಉಪಯೋಗಿಸಿಕೊಳ್ಳುವಂತಹ ಅವಕಾಶ ಆಗುತ್ತದೆ. ಅದನ್ನು ಉಪಯೋಗಿಸಿಕೊಳ್ಳಬೇಕಾಗುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಇದನ್ನು ಸುಪ್ರೀಂ ಕೋರ್ಟಿನಿಂದ ಟ್ರಿಬ್ಯೂನಲ್‌ಗೆ ವಹಿಸಿರತಕ್ಕ ಸಂದರ್ಭದಲ್ಲಿ ಎಲ್ಲರೂ ಕೂಡ ಮಾತನಾಡಿದ್ದಾರೆ. ಟ್ರಿಬ್ಯೂನಲ್‌ನಿಂದ ನಮಗೆ ಎಷ್ಟು ನ್ಯಾಯ ದೊರಕಬಹುದು ಅಥವಾ ದೊರಕದಿರಬಹುದು ಎಂಬ ವಿಚಾರ ಟ್ರಿಬ್ಯೂನಲ್ ಆಗತಕ್ಕ ವಿಚಾರ. ವಿರೋಧ ಪಕ್ಷದ ನಾಯಕರು ನಾವು ಎಲ್ಲಾ ಒಪ್ಪಿಗೆ ಕೊಟ್ಟಿದ್ದೇವೆ. ಇವೊತ್ತು ಕೌನ್ಸಿಲ್ ರಚನೆ ಮಾಡುವ ಅವಕಾಶ ಇದ್ದರೆ ಅದಕ್ಕೂ ಅವಕಾಶ ಇರತಕ್ಕಂಥದ್ದು ಹಾಗೂ ಇದನ್ನು ಟ್ರಿಬ್ಯೂನಲ್‌ನಲ್ಲಿ ನಿರ್ಮಾಣ ಮಾಡಿದ್ದರು ಅದನ್ನು ಧಿಕ್ಕರಿಸುವಂತಹ ಅವಕಾಶ ಇದ್ದರೂ ಕೂಡ ಅದಕ್ಕೂ ಒಗ್ಗಟ್ಟಿನಿಂದ ಕೆಲಸ ಮಾಡಬೇಕಾಗುತ್ತದೆ. ಇದು ಕನ್ನಡ ನಾಡಿನ ಸುಮಾರು ಒಂದು ಕೋಟಿ ಜನರ ಅಳಿವು ಮತ್ತು ಉಳಿವಿನ ಪ್ರಶ್ನೆ. ಟ್ರಿಬ್ಯೂನಲ್‌ನಿಂದ ಸರಿಪಡಿಸಿಕೊಳ್ಳಬೇಕಾಗುತ್ತದೆಯೋ ಅಥವಾ ಇದನ್ನು ಧಿಕ್ಕರಿಸಬೇಕಾಗುತ್ತದೋ ಎಂಬ ವಿಚಾರ ಈ ಮಾನ್ಯ ಸಭೆಯು ನಿರ್ಣಯ ಮಾಡಬೇಕಾಗುತ್ತದೆ. ನಮಗೆ ಯಾವುದರಿಂದ ಅನುಕೂಲವಾಗುತ್ತದೆ, ಇಲ್ಲ ಧಿಕ್ಕರಿಸುವುದರಿಂದ ಕರ್ನಾಟಕ ರಾಜ್ಯಕ್ಕೆ ಅನುಕೂಲ ಆಗುತ್ತದೆ, ಇಲ್ಲವೇ ಟ್ರಿಬ್ಯೂನಲ್ ಅನ್ನು ಹೊಂದಿಸಿಕೊಂಡರೆ ಅನುಕೂಲವಾಗುತ್ತದೆಯೋ ಎಂದು ನೋಡಬೇಕು. ವಾಟರ್ ರಿಸೋರ್ಸ್ ಕಮೀಷನ್ ನವರು ಏನು ಮಾಹಿತಿಯನ್ನು ಕೊಡುತ್ತಾರೆ. ಆ ಮಾಹಿತಿ ಆಧಾರದ ಮೇಲೆಯೋ ಅಥವಾ ಕರ್ನಾಟಕ ಸರ್ಕಾರ ಏನು ಮಾಹಿತಿ ಕೊಡುತ್ತದೆ, ಅದರಂತೆ, ಎಷ್ಟು ಅಚ್ಚುಕಟ್ಟು ಪ್ರದೇಶಕ್ಕೆ ಕರ್ನಾಟಕಕ್ಕೆ ಬರುತ್ತದೆ ಅದಕ್ಕಾಗಿ ನೀರನ್ನು ಪಡೆದುಕೊಳ್ಳಲು ಪ್ರಯತ್ನ ಮಾಡಬೇಕಾಗುತ್ತದೆ. ಎಷ್ಟು ನೀರನ್ನು ನಮಗೆ ಕೊಡಬೇಕಾಗುತ್ತದೆ ಎಷ್ಟು ನೀರನ್ನು ತಮಿಳುನಾಡಿಗೆ ಕೊಡಬೇಕಾಗುತ್ತದೆ ಎನ್ನುವುದು ಚರ್ಚೆ ಮಾಡತಕ್ಕಂಥದ್ದು ಇದೆ. ಕಾವೇರಿ ಹುಟ್ಟುವುದು ಕನ್ನಡ ನಾಡಿನಲ್ಲಿ. ಈ ಕನ್ನಡ ನಾಡಿನ ಜನರು ಕಾವೇರಿ ನೀರನ್ನು ಉಪಯೋಗಿಸಿಕೊಳ್ಳುವಂತಹ ಹಕ್ಕು ಹಾಗೂ ಜವಾಬ್ದಾರಿಯನ್ನು ಹೊಂದಿದ್ದಾರೆ. ಕನ್ನಡ ನಾಡಿನಲ್ಲಿ ಕಟ್ಟೆಗಳನ್ನು ಕಟ್ಟುವಂತ ಕೆಲಸ ನಿಧಾನ ಆಗಿರಬಹುದು. ತಮಿಳು ನಾಡಿನಲ್ಲಿ ಕಟ್ಟಿ ಅದರಿಂದ ಹೆಚ್ಚು ಅಚ್ಚುಕಟ್ಟು ಪ್ರದೇಶಗಳ ಉಪಯೋಗವನ್ನು ಮಾಡಿರತಕ್ಕದ್ದು ಇರಬಹುದು. ನಾವು ಅಣೆಕಟ್ಟನ್ನು ಕಟ್ಟಿ ನೀರನ್ನು ಉಪಯೋಗಿಸಿಕೊಂಡಿಲ್ಲ ಎಂದು ಹೇಳಿದ ಮಾತ್ರಕ್ಕೆ ನಮಗೆ ಹಕ್ಕು ಇಲ್ಲವೆಂದು ಕೇಂದ್ರ ಸರ್ಕಾರದ ಸಮಿತಿಯವರಾಗಲಿ ಅಥವಾ ಟ್ರಿಬ್ಯೂನಲ್ ನವರಾಗಲಿ ತೀರ್ಮಾನಕ್ಕೆ ಬರುವುದಕ್ಕೆ ಸಾಧ್ಯ ಇಲ್ಲ. ನಮಗೆ ಎಷ್ಟು ಅಚ್ಚುಕಟ್ಟು ಪ್ರದೇಶ ಬರುತ್ತದೆ ಎಷ್ಟು ಅಚ್ಚುಕಟ್ಟು ಪ್ರದೇಶಗಳಿಗೆ ನೀರನ್ನು ಉಪಯೋಗಿಸಿಕೊಳ್ಳಬೇಕು, ಎಷ್ಟು ರಿಸರ್ವ್ ಟಿ.ಎಂ.ಸಿ. ವಾಟರ್ ಅನ್ನು ಬಿಡಬೇಕಾಗುತ್ತದೆ ಎಂದು ವಿಚಾರ ಮಾಡಬೇಕು. ನಾವು ಉಪಯೋಗಿಸಿಕೊಳ್ಳಬೇಕಾಗಿರುವುದನ್ನು ಸಂಪೂರ್ಣವಾಗಿ ಉಪಯೋಗಿಸಿಕೊಳ್ಳಲೇಬೇಕು. ನಂತರ ನಾವೆಲ್ಲರೂ ಕೂಡ ಕೇಂದ್ರ ಸರ್ಕಾರಕ್ಕೆ ಒಂದು ಮನವಿಯನ್ನು ಮಾಡಬೇಕಾಗುತ್ತದೆ. ಕರ್ನಾಟಕಕ್ಕೆ ಸಿಗತಕ್ಕಂಥ ನೀರನ್ನು ಉಪಯೋಗಿಸಿಕೊಳ್ಳುತ್ತೇವೆ ಅದಕ್ಕೆ ಅವಕಾಶ ಕೊಡಬೇಕಾಗುತ್ತದೆ ಎನ್ನುವ ಮನವಿಯನ್ನು ನಾವು ಮಾಡಬೇಕಾಗುತ್ತದೆ. ಈಗ ಕೇಂದ್ರದವರು ಮೂರು ಜನ ಜಡ್ಜಸ್‌ರನ್ನು ನೇಮಿಸಿ ಒಂದು ಕಮಿಟಿಯನ್ನು ಮಾಡಿದ್ದಾರೆ. ಹೀಗೆ ಮಾಡುವಾಗ ಕನ್ನಡಿಗರ ಅಹವಾಲನ್ನು ಸಹ ಅವರು ಕೇಳಬೇಕಾಗಿತ್ತು. ರಾಜಿ ಮುಖಾಂತರ ಮಾಡತಕ್ಕದ್ದು ಆಗಲಿ ಅಥವಾ ನೆಗೋಷಿಯೇಷನ್ಸ್ ಮುಖಾಂತರ

ಮಾಡತಕ್ಕದ್ದು ಆಗಲಿ ಮಾಡಬಹುದಿತ್ತು. ಲೀಡರ್ ಆಫ್ ಅಪೋಸಿಷನ್ ಮತ್ತು ಸರ್ಕಾರದ ಪರವಾಗಿ ಎಲ್ಲರೂ ಮಾಡಿರತಕ್ಕ ಸಲಹೆಯನ್ನು ಕೇಂದ್ರ ಸರ್ಕಾರದ ಪ್ರಧಾನ ಮಂತ್ರಿಯವರು ಆಲೋಚಿಸಬೇಕಾಗಿತ್ತು. ಇದನ್ನು ನೆಗೋಷಿಯೇಷನ್ಸ್ ಮುಖಾಂತರ ಮಾಡಬಹುದಿತ್ತು ಎನ್ನುವ ಆಶಾಭಾವನೆಯನ್ನು ಅವರು ವ್ಯಕ್ತ ಮಾಡಿದ್ದರೆ ಕರ್ನಾಟಕದ ಜನತೆ ಬಹಳ ತೃಪ್ತಿಪಟ್ಟುಕೊಳ್ಳುತ್ತಿದ್ದರು. ಬಹಳ ಸಮಾಧಾನ ಪಡುತ್ತಿದ್ದರು. ಇವೊತ್ತು ನೇರವಾಗಿ ಟ್ರಿಬ್ಯೂನಲ್ ಅನ್ನು ರಚನೆ ಮಾಡಿ, ಅದರ ಮೂಲಕ ತೀರ್ಮಾನ ಆಗಬೇಕು ಎಂದು ಹೇಳಿರತಕ್ಕದ್ದು, ಇದು ಎಲ್ಲರಿಗೂ ಕೂಡ ಕರ್ನಾಟಕದ ಜನತೆಗೆ ಒಂದು ರೀತಿಯಾದಂತಹ ದಿಗ್ಭ್ರಾಂತಿ ಆಗಿದೆ ಈ ದಿಗ್ಭ್ರಾಂತಿ ನಿವಾರಣೆ ಆಗಬೇಕಾದಗೆ ಈಗಲೂ ಕೂಡ ಕೇಂದ್ರದವರು ಆಲೋಚನೆ ಮಾಡಬೇಕಾಗಿದೆ. ಎರಡೂ ರಾಜ್ಯಸರ್ಕಾರಗಳನ್ನು ಕರೆಯಿಸಿ ಕಾವೇರಿ ನೀರಿಗೆ ಸಂಬಂಧಪಟ್ಟಂತೆ ನೆಗೋಷಿಯೇಷನ್ಸ್ ಮುಖಾಂತರ, ರಾಜಿ ಮುಖಾಂತರ ಪರಿಹಾರ ಆಗತಕ್ಕದ್ದು ಕರ್ನಾಟಕ ರಾಜ್ಯದ ಹಿತದೃಷ್ಟಿಯಿಂದ ರಾಷ್ಟ್ರದ ಹಿತದೃಷ್ಟಿಯಿಂದ ಕೂಡ ಒಳ್ಳೆಯದಾಗುತ್ತದೆ ಎನ್ನುವ ಮಾತನ್ನು ಹೇಳುತ್ತೇನೆ. ಇದರ ಬಗ್ಗೆ ಎಲ್ಲರೂ ಕೂಡ ಒಂದು ಒಮ್ಮತದ ತೀರ್ಮಾನವನ್ನು ತೆಗೆದುಕೊಳ್ಳಬೇಕಾಗುತ್ತದೆ. ಈ ರಾಜ್ಯದ ಎರಡು ಕೋಟಿ ಜನತೆಯ ಭವಿಷ್ಯವನ್ನು ತೀರ್ಮಾನ ಮಾಡತಕ್ಕಂಥ ಪ್ರಶ್ನೆ ಇದು. ಮಾನ್ಯ ಮಂತ್ರಿಗಳು ೧೫೦ ಕೋಟಿ ರೂಪಾಯಿಗಳನ್ನು ಹೊಸದಾಗಿ ನೀರಾವರಿಗೆ ಒದಗಿಸಿರತಕ್ಕದ್ದು ಇವರಲ್ಲಿ ಬೇಕಾದಷ್ಟು ಪ್ರಾಜೆಕ್ಟ್‌ಗಳನ್ನು ಮಾಡತಕ್ಕದ್ದು ಇದೆ. ಕಾವೇರಿ ದಂಡೆಯಲ್ಲಿ ಆಗತಕ್ಕಂಥ ಅನೇಕ ಲಿಫ್ಟ್ ಇರಿಗೇಷನ್ಸ್‌ಗಳನ್ನು ಕೂಡ ಉಪಯೋಗಿಸಿಕೊಳ್ಳತಕ್ಕಂಥ ಅವಕಾಶ ಇದೆ. ಹಿಂದೆ ಶ್ರೀ ವೀರೇಂದ್ರ ಪಾಟೀಲರು ಮುಖ್ಯಮಂತ್ರಿಗಳು ಆದಂತಹ ಸಂದರ್ಭದಲ್ಲಿ ಹಾರಂಗಿ ಅಣೆಕಟ್ಟೆಗೆ ಶಂಕು ಸ್ಥಾಪನೆಯನ್ನು ಹಾಕತಕ್ಕಂಥ ಸಂದರ್ಭದಲ್ಲಿ ಕರಡಿ ಲಕ್ಕನ ಕೆರೆಯಲ್ಲಿ ಏತ ನೀರಾವರಿ ಯೋಜನೆಯಿಂದ ಮೂವತ್ತು ಸಾವಿರ ಎಕರೆಗೆ ನೀರು ಒಳಪಡುತ್ತದೆಂದು ಹಾಗೂ ಇದಕ್ಕೆ ಮೂವತ್ತು ಕೋಟಿ ರೂಪಾಯಿ ಖರ್ಚು ಆಗಬಹುದು ಎಂದು ಅಂದಾಜು ಮಾಡಿದರು. ಇದಕ್ಕಾಗಿ ಸುಮಾರು ಐದು ಟಿ.ಎಂ.ಸಿ. ವಾಟರ್ ನೀರನ್ನು ಹಾರಂಗಿ ಜಲಾಶಯದಿಂದ ಉಪಯೋಗಿಸಿಕೊಳ್ಳಬೇಕು ಎನ್ನುವಂತಹ ವಿಚಾರ ಕೂಡ ಇತ್ತು. ಇದು ಆಗುವುದರಿಂದ ಕೆ. ಆರ್. ನಗರ, ಪಿರಿಯಾ ಪಟ್ಟಣ, ಹುಣಸೂರು ತಾಲ್ಲೂಕಿನಲ್ಲಿ ಮುವತ್ತು ಸಾವಿರ ಎಕರೆಗೆ ನೀರು ಉಪಯೋಗವಾಗುತ್ತದೆ. ಇದಕ್ಕೆ ೪೦ ಕೋಟಿ ರೂಪಾಯಿ ಖರ್ಚು ಆಗತಕ್ಕಂಥದ್ದು ಇದೆ. ೧೫೦ ಕೋಟಿ ರೂಪಾಯಿಗಳನ್ನು ಯಾವ ರೀತಿ ಖರ್ಚು ಮಾಡಬೇಕು ಎನ್ನುವ ವಿಚಾರ ಇದ್ದರೆ, ಈ ಒಂದು ಯೋಜನೆಯನ್ನು ತೆಗೆದುಕೊಂಡರೆ ಇದಕ್ಕೆ ೪೦ ಕೋಟಿ ರೂಪಾಯಿ ಆಗುತ್ತದೆ ಹಾಗೂ ಇದರಿಂದ ೪೦ ಸಾವಿರ ಎಕರೆ ಜಮೀನು ಅಚ್ಚುಕಟ್ಟು ಪ್ರದೇಶಕ್ಕೆ ಬರುತ್ತದೆ. ಎಲೆಕ್ಟ್ರಿಸಿಟಿ ಅಭಾವ ಇರಬಹುದು. ನಾವು ಒಂದು ರಾಜ್ಯದ ಹಿತ ದೃಷ್ಟಿಯಿಂದ ಮುವತ್ತು ಸಾವಿರ ಎಕರೆಗೆ ಬಹಳ ಕಡಿಮೆ ಖರ್ಚಿನಲ್ಲಿ ಇಲ್ಲಿ ನೀರಾವರಿಯಾಗುತ್ತದೆ. ಅತಿ ಕಡಿಮೆ ಖರ್ಚಿನಲ್ಲಿ ಅತ್ಯಂತ ಹೆಚ್ಚಿನ ಪ್ರದೇಶಗಳು ಅಚ್ಚುಕಟ್ಟು ಆಗತಕ್ಕಂಥ ಕೆಲಸದ ಬಗ್ಗೆ ಸರ್ಕಾರ ಸಂಪೂರ್ಣವಾಗಿ ಗಮನ ತೆಗೆದುಕೊಂಡು ಕರಡಿನಲಕ್ಕನ ಕೆರೆಯಲ್ಲಿ ಈ ಒಂದು ಯೋಜನೆಯನ್ನು ಹಾಕಿಕೊಳ್ಳಲು ನಿರ್ಣಯ ಮಾಡಬೇಕು. ಈ ನಿರ್ಣಯವನ್ನು ತಕ್ಷಣದಲ್ಲಿ ತೆಗೆದುಕೊಳ್ಳಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಹೇಮಾವತಿ ಮತ್ತು ಹಾರಂಗಿ ಯೋಜನೆಯನ್ನು ತಾವು ತೆಗೆದುಕೊಳ್ಳಬೇಕು. ಇದಕೆ ಕೇಂದ್ರ ಸರ್ಕಾರದವರು ಹಣ ಕೊಡಲಿ ಅಥವಾ ಕೊಡದಿರಲಿ ಕರ್ನಾಟಕ ರಾಜ್ಯದ ಹಣವನ್ನು ಉಪಯೋಗಿಸಿಕೊಂಡು ಇದನ್ನು ಮಾಡಿರತಕ್ಕದ್ದು ಬಹಳ ಶ್ಲಾಘನೀಯವಾದುದು. ಶ್ರೀ ವೀರೇಂದ್ರ ಪಾಟೀಲರು ಹಿಂದೆ ಮುಖ್ಯಮಂತ್ರಿಗಳು ಆಗಿದ್ದ ಸಂದರ್ಭದಲ್ಲಿ ತೆಗೆದುಕೊಂಡಿದ್ದ ಹೇಮಾವತಿ ಮತ್ತು ಹಾರಂಗಿ ಯೋಜನೆಗಳು ಆಗಿವೆ. ಇವೊತ್ತು ಅವರ ಕಾಲದಲ್ಲಿ ಕಾವೇರಿ ಸಮಸ್ಯೆ ಉದ್ಭವ ಆಗಿರತಕ್ಕದ್ದು. ಇವರ ಕೈಯನ್ನು ನಾವೆಲ್ಲರೂ ಬಲಪಡಿಸಬೇಕಾಗಿದೆ. ನಾವು ನೀವು ಎಲ್ಲರೂ ಒಂದಾಗಿ ಕಾವೇರಿ ಜಲಾನಯನದ ಇತ್ಯರ್ಥಕ್ಕೆ, ಬೆಂಬಲ ನೀಡಬೇಕಾಗುತ್ತದೆ ಎಂತಹ ಹೋರಾಟಕ್ಕೂ ನಾವು ಸಿದ್ಧರಾಗಬೇಕಾಗುತ್ತದೆ ಎನ್ನುವ ಮಾತನ್ನು ಹೇಳುತ್ತೇನೆ. ನಾವೆಲ್ಲರೂ ಈ ವಿಷಯದಲ್ಲಿ ಒಮ್ಮತದ ನಿರ್ಣಯವನ್ನು ತೆಗೆದುಕೊಳ್ಳುತ್ತೇವೆ ಎಂದು ಹೇಳಿ ಸರ್ಕಾರ ತಂದಿರತಕ್ಕ ಈ ಒಂದು ಸೂಚನೆಗೆ ನಾವು ಎಲ್ಲರೂ ಸಂಪೂರ್ಣವಾದ ಬೆಂಬಲವನ್ನು ಕೊಡುತ್ತೇವೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ). — ಮಾನ್ಯ ಸಭಾಧ್ಯಕ್ಷಿಣಿಯವರೇ ಇದುವರೆಗೆ ಮಾನ್ಯ ಸಭಾ ನಾಯಕರು ಹಾಗೂ ವಿರೋಧ ಪಕ್ಷದ ನಾಯಕರು ಕಾವೇರಿ ಜಲ ವಿವಾದದ ಸಂದರ್ಭದಲ್ಲಿ ತ್ರಿಸದಸ್ಯ ನ್ಯಾಯ ಮಂಡಲಿ ರಚನೆ ಆದ ಮೇಲೆ ಆಗಿರುವಂತಹ ಪರಿಣಾಮಗಳು ಏನು; ಇದರಿಂದ ನಮ್ಮ ರಾಜ್ಯದ ರೈತರಿಗೆ ಯಾವ ರೀತಿ ಅನ್ಯಾಯ ಆಗಬಹುದು ಎನ್ನುವ ಮಾತನ್ನು ಹೇಳಿದ್ದಾರೆ. ನಾವು ಈ ಸಂದರ್ಭದಲ್ಲಿ ಯಾವ ನಿಲುವನ್ನು ತೆಗೆದುಕೊಳ್ಳಬೇಕು ಎನ್ನುವುದರ ಬಗ್ಗೆಯೂ ಸಹ

ಸಾಕಷ್ಟು ವಿಚಾರಗಳನ್ನು ಈ ಸದನದಲ್ಲಿ ಎಲ್ಲರಿಗೂ ತಿಳಿಸುವಂತಹ ಪ್ರಯತ್ನವನ್ನು ಮಾಡಿದ್ದಾರೆ ಹಾಗೂ ಬೆಳಕನ್ನು ಚೆಲ್ಲಿದ್ದಾರೆ. ನಾನು ಒಂದು ಮಾತನ್ನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ನಾನು ಇತ್ತೀಚೆಗೆ ಬೇರೆ ಬೇರೆ ಸಂದರ್ಭದಲ್ಲಿ ರಾಜ್ಯದಲ್ಲಿ ಪ್ರವಾಸವನ್ನು ಮಾಡಿದಾಗ ವಿಶೇಷವಾಗಿ ರೈತರಲ್ಲಿ ಈ ಮಾತುಕತೆಯ ಮುಖಾಂತರ ಕಾವೇರಿ ಸಮಸ್ಯೆ ಬಗೆಹರಿಯಬಹುದು ಎಂದು ಅವರು ತಿಳಿದುಕೊಂಡಿಲ್ಲ ಹಿಂದೆ ಕೂಡ ಕೇಂದ್ರ ಸರ್ಕಾರ ಇರಬಹುದು ಅಥವಾ ಈಗ ಇರತಕ್ಕಂಥ ಕೇಂದ್ರ ಸರ್ಕಾರ ಇರಬಹುದು, ಹಿಂದೆ ಇದ್ದ ರಾಜ್ಯ ಸರ್ಕಾರಗಳು, ಈಗ ಇರತಕ್ಕಂಥ ರಾಜ್ಯ ಸರ್ಕಾರ ಇರಬಹುದು ನಮ್ಮ ಪರವಾಗಿ ನ್ಯಾಯವಾಗಿ ಹೋರಾಟ ಮಾಡಲಿಲ್ಲ, ಇವರ ಹೇಳಿಕೆಗಳಿಂದ ಮುಂದೆ ಬರುವಂತಹ ದಿವಸಗಳಲ್ಲಿ ಒಂದು ಕೋಟಿ ರೈತರಿಗೆ ಅನ್ಯಾಯ ಆಗುತ್ತದೆ ಎಂಬ ಭಾವನೆ, ಆಕ್ರೋಶ ರೈತರಲ್ಲಿ ಇವೊತ್ತು ಕಾಣುತ್ತದೆ. ರಾಜ್ಯದ ರೈತರಲ್ಲಿ ಮೂಡಿದಂತಹ ಈ ಭಾವನೆ ಎಷ್ಟರ ಮಟ್ಟಿಗೆ ಸತ್ಯ, ಇದನ್ನು ಮನವರಿಕೆ ಮಾಡಿಕೊಳ್ಳುವ ಪ್ರಯತ್ನವನ್ನು ನಾವು ಎಲ್ಲರೂ ಮಾಡಬೇಕಾಗುತ್ತದೆ. ಒಂದು ಮಾತು ನಿಶ್ಚಯ. ಕಳೆದ ಅನೇಕ ವರ್ಷಗಳಿಂದ ಟ್ರಿಬ್ಯೂನಲ್ ಮೂಲಕ ಸಮಸ್ಯೆಗಳು ಬಗೆಹರಿಯಬೇಕು ಎಂದು ಪಕ್ಕದ ರಾಜ್ಯದವರು ಪ್ರಯತ್ನ ಮಾಡಿದ್ದಾರೆ. ಅವರು ಪ್ರಯತ್ನ ಮಾಡಿದಂತಹ ಸಂದರ್ಭದಲ್ಲಿ ಕೇಂದ್ರದಲ್ಲಿ ಸರ್ಕಾರ ಅಧಿಕಾರಕ್ಕೆ ಬಂದ ರಾಷ್ಟ್ರೀಯ ರಂಗ ಸರ್ಕಾರ ಈ ರೀತಿ ತೀರ್ಮಾನ ತೆಗೆದುಕೊಳ್ಳುವ ಹಾಗೆ ಸುಪ್ರೀಂ ಕೋರ್ಟಿನ ಮನ ಒಲಿಸುವಂಥದ್ದನ್ನು ಮಾಡಿದೆ. ಈ ರೀತಿ ಕೇಂದ್ರ ಸರ್ಕಾರ ಒಂದು ತರಹ ಮಲತಾಯಿ ಧೋರಣೆಯನ್ನು ಮಾಡಿದೆ ಈ ರಾಜ್ಯದ ರೈತರಿಗೆ ಅನ್ಯಾಯ ಮಾಡಿದೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ ಎಂದು ನಾನು ಭಾವಿಸಿದ್ದೇನೆ. ಇಲ್ಲಿ ಪ್ರಶ್ನೆ ಏನೆಂದರೆ, ಕಳೆದ ಅನೇಕ ವರ್ಷಗಳಿಂದ ಏನೇನಾಗಿದೆ ಎಂಬ ಅಂಕಿ ಅಂಶಗಳನ್ನು ಮಾನ್ಯ ಸಭಾ ನಾಯಕರು ತಿಳಿಸಿದರೆ ಸ್ವಲ್ಪ ಅನುಕೂಲವಾಗಬಹುದು. ಹಿಂದೆ ಇದ್ದಂಥ ರಾಜ್ಯ ಸರ್ಕಾರಗಳು ಈ ರೀತಿ ಅವಕಾಶ ಸಿಕ್ಕಾಗ ಈ ಒಂದು ಕಾವೇರಿ ಬೇಸಿನ್‌ನಲ್ಲಿ ಎಷ್ಟು ನೀರನ್ನು ಉಪಯೋಗ ಮಾಡಿಕೊಳ್ಳಬಹುದಾಗಿತ್ತು, ರೈತರಿಗೆ ಅನುಕೂಲ ಮಾಡಿಕೊಡಬಹುದಾಗಿತ್ತು, ಆ ಪ್ರಯತ್ನವನ್ನು ಮಾಡಿದಿದ್ದರೆ ಯಾವುದೇ ಅಡ್ಡಿ ಆತಂಕಗಳು ಇರಲಿಲ್ಲ, ತಮಗೆ ಗೊತ್ತಿರುವ ಹಾಗೆ ಮೇಲ್ಗಡೆ ನಾವಿದ್ದೇವೆ. ಈಗಾಗಲೇ ತೆಲುಗು ಗಂಗಾ ಯೋಜನೆ ಸಮಸ್ಯೆ ಪ್ರಾರಂಭವಾಗಿದೆ. ಕೆಳ ಭಾಗದಲ್ಲಿ ಹರಿದು ಹೋಗತಕ್ಕಂಥ ನೀರನ್ನು ತಡೆದು ನಾವು ಉಪಯೋಗ ಮಾಡಿಕೊಳ್ಳುತ್ತೇವೆ ಎಂಬ ನಿಲುವನ್ನು ಆಂಧ್ರ ಪ್ರದೇಶದ ಸರ್ಕಾರ ತೆಗೆದುಕೊಳ್ಳುತ್ತಾ ಇದೆ. ಇದರಿಂದ ಕೃಷ್ಣ ಬೇಸಿನ್‌ನಲ್ಲಿ ನಮಗೆ ಅನ್ಯಾಯವಾಗಿದೆ. ಇಂತಹ ಒಂದು ಸಂದರ್ಭದಲ್ಲಿ ಅಧಿಕಾರದಲ್ಲಿದ್ದಂಥ ರಾಜ್ಯ ಸರ್ಕಾರಗಳು ಈ ನೀರಾವರಿ ಯೋಜನೆಗೆ ಹೆಚ್ಚಿನ ಹಣವನ್ನು ತೆಗೆದಿಟ್ಟು, ಖರ್ಚು ಮಾಡಿ ಕೃಷ್ಣ ಬೇಸಿನ್‌ನಲ್ಲಿ ನಾವು ಸಂಪೂರ್ಣ ನೀರನ್ನು ಉಪಯೋಗ ಮಾಡಿಕೊಳ್ಳುವಂಥ ಪ್ರಯತ್ನ ಮಾಡಿದಿದ್ದರೆ, ಅದೇ ರೀತಿ ಕಾವೇರಿ ಬೇಸಿನ್‌ನಲ್ಲಿರತಕ್ಕ ನೀರನ್ನು ಸಂಪೂರ್ಣವಾಗಿ ಉಪಯೋಗ ಮಾಡಿಕೊಳ್ಳತಕ್ಕಂಥ ಪ್ರಯತ್ನ ಮಾಡಿದಿದ್ದರೆ ಇವತ್ತು ಈ ಸ್ಥಿತಿ ಬರುತ್ತಾ ಇರಲಿಲ್ಲ ಎಂದು ನಾನು ಭಾವಿಸಿದ್ದೇನೆ. ಇತ್ತೀಚೆಗೆ ಸನ್ಮಾನ್ಯ ಮುಖ್ಯಮಂತ್ರಿಗಳು ಒಂದು ಪತ್ರಿಕಾ ಹೇಳಿಕೆಯನ್ನು ಕೊಟ್ಟಿದ್ದಾರೆ. ಕೇಂದ್ರದ ದುಡುಕಿನ ಕ್ರಮದಿಂದ ಈ ರೀತಿಯಾಗಿದೆ. ಈಗಲೂ ಈ ವಿವಾದವನ್ನು ಸಂಧಾನದ ಮೂಲಕವೇ ಬಗೆಹರಿಸಿಕೊಳ್ಳಬಹುದು ಎಂಬ ದೃಢ ವಿಶ್ವಾಸ ನನಗೆ ಇದೆ. ಈ ನಿಟ್ಟಿನಲ್ಲಿ ದೇಶದ ಪ್ರಧಾನಿಯವರ ಜೊತೆಯಲ್ಲಿ ಮಾತುಕತೆ ಆಡುತ್ತೇನೆ ಎನ್ನುವಂಥ ಮಾತನ್ನು ಹೇಳಿದ್ದಾರೆ. ಜವಾಬ್ದಾರಿ ಸ್ಥಾನದಲ್ಲಿರುವಂಥ ಸನ್ಮಾನ್ಯ ಮುಖ್ಯಮಂತ್ರಿಗಳು ಈ ಒಂದು ಪತ್ರಿಕಾ ಹೇಳಿಕೆಯನ್ನು ಕೊಟ್ಟಿರಬೇಕಾದರೆ, ನನಗನ್ನಿಸುತ್ತದೆ, ನಮ್ಮ ಕಡೆಯಿಂದ ಪ್ರಾಮಾಣಿಕ ಪ್ರಯತ್ನ ಮಾಡಿದಿದ್ದರೆ, ಕೇಂದ್ರ ಸರ್ಕಾರದ ಮನ ಒಲಿಸುವಂಥ ಪ್ರಯತ್ನ ಮಾಡಿದಿದ್ದರೆ ಈಗಲೂ ಈ ರೀತಿ ಟ್ರಿಬ್ಯೂನಲ್‌ಗೆ ಕೊಡದೆ ನಾವು ಮಾತುಕತೆ ಮೂಲಕ ಬಗೆಹರಿಸಿಕೊಳ್ಳುವುದಕ್ಕೆ ಸಾಧ್ಯವಿದ್ದರೆ ಅದಕ್ಕೆ ಬೇಕಾದ ಎಲ್ಲಾ ಪ್ರಾಮಾಣಿಕ ಪ್ರಯತ್ನ ಮಾಡಲು ನಾವೆಲ್ಲಾ ಒಟ್ಟಿಗೆ ಸೇರಿ ಪಕ್ಷಾತೀತವಾಗಿ ಹೋರಾಟ ಮಾಡುವಂಥ ಅಗತ್ಯವಿದೆ ಎಂದು ನಾನಾದರೂ ಭಾವಿಸಿದ್ದೇನೆ. ಕೇಂದ್ರ ಸರ್ಕಾರದ ಬಗ್ಗೆ ನನಗೆ ಅರ್ಥವಾಗದೇ ಇರುವಂಥ ಒಂದು ಸಂಗತಿ ಇದೆ. ಅದೇನೆಂದರೆ, ರಾಜ್ಯ ಸರ್ಕಾರ ಈಗಾಗಲೇ ಸುಪ್ರೀಂ ಕೋರ್ಟ್ ಮುಂದೆ ರಿವಿಜನ್ ಪಿಟಿಷನ್ ಹಾಕಿದೆ. ಇವತ್ತು ಕೇಂದ್ರ ಸರ್ಕಾರದ ಪರವಾಗಿ ವಾದ ಮಾಡುತ್ತಾ ಇರುವಂಥ ಸಾಲಿಸಿಟರ್ ಜನರಲ್ ಮೂಲಕ ರಿವಿಜನ್ ಪಿಟಿಷನ್ ತೀರ್ಮಾನ ಆಗುವುದಕ್ಕೆ ಮುಂಚೆ ಟ್ರಿಬ್ಯೂನಲ್ ನೇಮಕ ಮಾಡದಂಥ ರೀತಿಯಲ್ಲಿ ಒತ್ತಡ ತಂದು ಅದನ್ನು ಮುಂದೂಡುವಂಥ ಪ್ರಾಮಾಣಿಕ ಪ್ರಯತ್ನ ಮಾಡಿದ್ದಿದ್ದರೆ ಇಷ್ಟು ಬೇಗ ಇಷ್ಟೊಂದು ದೊಡ್ಡ ಸಮಸ್ಯೆ ನಮಗೆ ಕಾಡುತ್ತಾ ಇರಲಿಲ್ಲ ಎನ್ನುವುದು ನನ್ನ ಸ್ಪಷ್ಟವಾದಂಥ ಅಭಿಪ್ರಾಯ. ಇದರ ಬಗ್ಗೆ ಈಗಾಗಲೇ ಸಾಕಷ್ಟು ಚರ್ಚೆಯಾಗಿದೆ. ಹಿರಿಯ ಸದಸ್ಯರಾದ ಸನ್ಮಾನ್ಯ ಹುಚ್ಚಮಾಸ್ತಿಗೌಡರು ತುಂಬ ಜವಾಬ್ದಾರಿ ಸ್ಥಾನದಲ್ಲಿದ್ದವರು, ಮಾಜಿ ಮಂತ್ರಿಗಳು, ಅವರು ಒಂದು ಸಲಹೆಯನ್ನು ಕೊಟ್ಟಿದ್ದಾರೆ. ಇದನ್ನು ಗಂಭೀರವಾಗಿ ಆಲೋಚನೆ ಮಾಡಬೇಕಾಗಿದೆ, ಯಾವುದನ್ನು ಎಷ್ಟು ಇತಿಮಿತಿಯೊಳಗೆ ಚರ್ಚೆ ಮಾಡ

ಬೇಕು ಎನ್ನುವುದು ಅದು. ಆದರೆ ಇದುವರೆಗೆ ಆಗಿರುವಂಥ ಚರ್ಚೆಗಳನ್ನು ನೋಡಿದಾಗ ಬಹುಶಃ ನಾವು ಏನೂ ಉಳಿಸಿಕೊಂಡಿಲ್ಲ, ಎಲ್ಲಾ ಬಿಚ್ಚು ಮನಸ್ಸಿನಿಂದ ಏನು ಮಾತನಾಡಬೇಕೋ ಅದನ್ನು ಮಾತನಾಡಿದ್ದೇವೆ. ಸರ್ಕಾರದ ಅಭಿಪ್ರಾಯಗಳನ್ನು ತಿಳಿಸುವಂಥ ಸಂದರ್ಭದಲ್ಲಿ ಅನೇಕ ವಿಷಯಗಳನ್ನು ಸ್ಪಷ್ಟವಾಗಿ ತಿಳಿಸುವಂಥದ್ದು ಅನಿವಾರ್ಯವಾಗಿದೆ. ಬಹುಶಃ ಈ ಕಡೆ ಇರುವಂಥ ಮಾನ್ಯ ಸದಸ್ಯರು ತಪ್ಪು ತಿಳಿದುಕೊಳ್ಳದೇ ಇದ್ದರೆ ನನಗೆ ಅರ್ಥವಾಗದೆ ಇರುವಂಥ ಒಂದು ಸಂಗತಿಯನ್ನು ಹೇಳುತ್ತೇನೆ. ಈ ಸದನದ ಒಬ್ಬ ಹಿರಿಯ ಸದಸ್ಯರು, ಮಾಜಿ ಮಂತ್ರಿಗಳು ಕೇಂದ್ರದಲ್ಲಿ ಅತ್ಯಂತ ಒಂದು ಉನ್ನತ ಸ್ಥಾನದಲ್ಲಿದ್ದಾರೆ. ಅವರು ಈ ರಾಜ್ಯದ ಮಾಜಿ ಮುಖ್ಯಮಂತ್ರಿಯಾಗಿ ಬಹುಶಃ ಈ ದೇಶದ ಪ್ರಧಾನಿಯವರ ಮೇಲೆ ತಮ್ಮ ಪ್ರಭಾವವನ್ನು ಬೀರಿ ರಾಜ್ಯದ ಹಿತವನ್ನು ಕಾಪಾಡುವುದರ ಬಗ್ಗೆ ವಿಶೇಷವಾದಂಥ ಪ್ರಯತ್ನ ಮಾಡಿದಿದ್ದರೆ, ಅನೇಕ ಕೆಲಸಗಳನ್ನು ಮಾಡುವುದಕ್ಕೆ ಸಾಧ್ಯವಿತ್ತು. ಈ ಒಂದು ಸದನದ ಸದಸ್ಯರೂ ಮಾಜಿ ಮುಖ್ಯಮಂತ್ರಿಗಳೂ ಆದಂಥ ಸನ್ಮಾನ್ಯ ರಾಮಕೃಷ್ಣ ಹೆಗಡೆಯವರು ಮನಸ್ಸು ಮಾಡಿದಿದ್ದರೆ ಬಹುಶ: ಇಷ್ಟು ಬೇಗ ಸುಪ್ರೀಂ ಕೋರ್ಟಿನ ಮೂಲಕ ಟ್ರಿಬ್ಯುನಲ್‌ನ್ನು ನೇಮಕ ಮಾಡುವಂಥ ಒಂದು ಆದೇಶ ಏನು ಬಂತು ಅದನ್ನು ತಡೆಯುವುದಕ್ಕೆ ಸಾಧ್ಯವಿತ್ತು. ಈ ರೀತಿಯಾಗಿ ಸುಪ್ರೀಂ ಕೋರ್ಟಿಗೆ ಒತ್ತಾಯವನ್ನು ಮಾಡಿ ಕೇಂದ್ರ ಸರ್ಕಾರದ ಮೂಲಕ ಸುಪ್ರೀಂ ಕೋರ್ಟ್‌ನ ಮನಸ್ಸು ಒಲಿಸುವಂಥ ಪ್ರಾಮಾಣಿಕ ಪ್ರಯತ್ನ ಮಾಡಬಹುದಾಗಿತ್ತೇನೋ ಎಂದು ನನಗನಿಸುತ್ತದೆ. ಆ ಒಂದು ದಿಕ್ಕಿನಲ್ಲಿ ಬಹುಶಃ ಮಾನ್ಯ ಸಭಾ ನಾಯಕರು ಹೇಳಬೇಕು. ನಮ್ಮ ಜೊತೆಗೆ ಮಾತುಕತೆಗೆ ಬರುವಂಥ ದಿಕ್ಕಿನಲ್ಲಿ ಎಷ್ಟರ ಮಟ್ಟಿಗೆ ಪ್ರಾಮಾಣಿಕ ಪ್ರಯತ್ನವಾಗಿದೆ, ಆಗಿದೆಯೇ ಎನ್ನುವಂಥ ಸಂಶಯ ನನಗೆ ಕಾಡುತ್ತಿದೆ. ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಾ ಹೇಳಿದಂತೆ ಇವತ್ತಿನ ಪರಿಸ್ಥಿತಿಯಲ್ಲಿ ಟ್ರಿಬ್ಯುನಲ್‌ನ್ನು ಬಾಯ್‌ಕಾಟ್ ಮಾಡುವುದರಿಂದ ಸಮಸ್ಯೆ ಬಗೆಹರಿಯುವುದಿಲ್ಲ. ಬಹುಶಃ ಅದು ಸಾಧುವಲ್ಲ ಎಂದು ನನ್ನ ಭಾವನೆ. ಈ ಒಂದು ರೆಸಲ್ಯೂಷನ್ ಮೂಲಕ ಎಲ್ಲರೂ ಸಹ ಒಕ್ಕೊರಲಿನಿಂದ ಈ ಒಂದು ತೀರ್ಮಾನ ತೆಗೆದುಕೊಳ್ಳುವಂಥ ಸಂದರ್ಭದಲ್ಲಿ ಬಹುಶಃ ಕೇಂದ್ರ ಸರ್ಕಾರಕ್ಕೆ ಈ ರೀತಿಯಾದ ಒಂದು ಒತ್ತಡ ತರುವುದಕ್ಕೆ ಸಾಧ್ಯವಿದೆ ಎಂದು ನಾನಾದರೂ ಭಾವಿಸುತ್ತೇನೆ. ಅದೇನೆಂದರೆ, ಇವತ್ತು ಸುಪ್ರೀಂ ಕೋರ್ಟಿನಲ್ಲಿ ರಿವಿಜನ್ ಪಿಟಿಷನ್ ಚರ್ಚೆ ಏನು ನಡೆಯುತ್ತಿದೆ ಆ ಒಂದು ತೀರ್ಮಾನ ಆಗುವುದಕ್ಕೆ ಮುಂಚೆ ಟ್ರಿಬ್ಯುನಲ್ ಕಾರ್ಯ ಪ್ರವೃತ್ತವಾಗಬಾರದು. ಈ ರೀತಿ ನಾವು ತೀರ್ಮಾನ ಮಾಡುವುದರ ಜೊತೆಗೆ ಕೇಂದ್ರ ಸರ್ಕಾರ ಸುಪ್ರೀಂ ಕೋರ್ಟ್ ಆದೇಶದಂತೆ ನ್ಯಾಯ ಮಂಡಲಿ ರಚಿಸಿರುವ ಬಗ್ಗೆ ಪುನರ್‌ಪರಿಶೀಲನೆ ಮಾಡಿ ಅದನ್ನು ರದ್ದುಪಡಿಸಿ ಮಾತುಕತೆ ಮೂಲಕವೇ ಬಗೆಹರಿಸುತ್ತೇವೆ ಎಂದು ಹೇಳಬೇಕು. ರಿವಿಜನ್ ಪಿಟಿಷನ್ ಬಗ್ಗೆ ಆರ್ಗ್ಯುಮೆಂಟ್ ಆಗುವಂಥ ಸಂದರ್ಭದಲ್ಲಿ ಕೇಂದ್ರ ಸರ್ಕಾರ ಸಹ ಆ ದಿಕ್ಕಿನಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಿದರೆ ಈ ಒಂದು ಟ್ರಿಬ್ಯುನಲ್ ಮೂಲಕ ಈ ರಾಜ್ಯದ ರೈತನ ಸಮಸ್ಯೆ ಬಗೆಹರಿಯುತ್ತದೋ ಇಲ್ಲವೋ ಎನ್ನುವ ಸಂಶಯ ನಮಗೆ ಏನು ಇದೆ ಆ ಸಂಶಯ ಸಹ ಬಗೆಹರಿಯಬಹುದು ಎಂದು ನನ್ನ ಭಾವನೆ ಇದೆ.

ನಾವು ಕೇಂದ್ರ ಸರ್ಕಾರಕ್ಕೆ ಮನವಿಯನ್ನು ಮಾಡಿದಮೇಲೂ ಸಹ ಟ್ರಿಬ್ಯೂನಲ್ ಮೂಲಕ ತೀರ್ಮಾನವಾಗುವ ಸಂದರ್ಭ ಒದಗಿಬಂದರೆ, ಆ ಸಂದರ್ಭದಲ್ಲಿ, ನನಗೆ ಇರತಕ್ಕ ಒಂದು ಅನುಮಾನವೇನೆಂದರೆ ಈಗ ಇರತಕ್ಕ ಆನ್‌ಗೋಯಿಂಗ್ ವರ್ಕ್ಸ್ ಹಾಗೂ ಫ್ರೆಷ್ ವರ್ಕ್ಸ್‌ಗಳನ್ನು ಏನು ತೆಗೆದುಕೊಳ್ಳಬೇಕು ಅವಕ್ಕೆ ಸ್ಟೇ ಸಿಗತಕ್ಕ ಭಯದ ವಾತಾವರಣ ನನಗೆ ಇದೆ. ನನಗೆ ತಿಳಿದ ಮಾಹಿತಿ ಪ್ರಕಾರ ಕೇಂದ್ರ ಸರ್ಕಾರ ಅನೇಕ ಸಂದರ್ಭಗಳಲ್ಲಿ ತಾವೇ ಒಂದು ಟ್ರಿಬ್ಯೂನಲ್ ಅನ್ನು ನೇಮಕ ಮಾಡಲು ಪ್ರಯತ್ನ ಮಾಡಿರುತ್ತಾರೆ. ಬಹುಶಃ ಈ ದೇಶದ ಇತಿಹಾಸದಲ್ಲಿ ಮೊದಲನೆಯ ಬಾರಿಗೆ ಸುಪ್ರೀಂ ಕೋರ್ಟಿನ ಆದೇಶದ ಮೂಲಕವಾಗಿ ಈರೀತಿ ಟ್ರಿಬ್ಯೂನಲ್ ನೇಮಕ ಮಾಡಿರತಕ್ಕ ಪ್ರಸಂಗ ಈಗ ನಮ್ಮ ಮುಂದೆ ಇದೆ. ಇದು ಒಂದು ಆಶ್ಚರ್ಯಕರವಾದ ಪ್ರಸಂಗವಾಗಿದೆ. ಇಂತಹ ಒಂದು ಪ್ರಸಂಗ ನಮ್ಮ ದೇಶದ ಇತಿಹಾಸದಲ್ಲಿ ಈವರೆಗೆ ಬಂದಿರಲಿಲ್ಲ. ಇವತ್ತು ಪಕ್ಷಾತೀತವಾಗಿ ಮಾತನಾಡುವ ಸಂದರ್ಭದಲ್ಲಿ ಒಂದು ಮಾತನ್ನು ಹೇಳಬೇಕಾಗುತ್ತದೆ. ಕಳೆದ 20 ವರ್ಷಗಳಿಂದ ಬೇರೆ ಬೇರೆ ಕಾರಣಕ್ಕೋಸ್ಕರ ಈ ಒಂದು ಟ್ರಿಬ್ಯುನಲ್ ಅನ್ನು ನೇಮಕಮಾಡಬೇಕೆಂದು ಪಕ್ಕದ ರಾಜ್ಯದವರು ಒತ್ತಾಯ ತಂದಿದ್ದರೂ ಸಹ, ಅದು ಆಗದೇ ಇದ್ದು ಈಗ ಕಳೆದ ಆರು ತಿಂಗಳುಗಳಲ್ಲಿ, ಇದು ಆಗಿರುವುದನ್ನು ನೋಡಿದರೆ ನಮ್ಮ ಪಕ್ಕದ ತಮಿಳುನಾಡು ಸರ್ಕಾರದವರು ಅವರ ಪ್ರಯತ್ನದಲ್ಲಿ ಯಶಸ್ವಿಯಾಗಿದ್ದಾರೆಂಬುದು ಗೊತ್ತಾಗುತ್ತದೆ. ಅವರ ನಿಲುವಿಗೆ ಕೇಂದ್ರ ಸರ್ಕಾರವೂ ಸಹ ಮನ್ನಣೆ ನೀಡಿರುವುದು ಗೊತ್ತಾಗುತ್ತದೆ, ಅವರ ಹಾಗೂ ಕೇಂದ್ರ ಸರ್ಕಾರದವರ ಸಂಬಂಧ ಉತ್ತಮವಾಗಿರುವುದನ್ನು ಉಪಯೋಗಿಸಿಕೊಂಡು ಅವರು ಈ ರೀತಿ ಮಾಡಿದ್ದಾರೆಂಬುದು ಗೊತ್ತಾಗುತ್ತದೆ. ಇದರಿಂದ ಇವತ್ತು ನಮ್ಮ ರಾಜ್ಯದ ರೈತರಿಗೆ ಕೇಂದ್ರ ಸರ್ಕಾರವು ಅನ್ಯಾಯ ಮಾಡಿದೆ ಎಂದು ಸ್ಪಷ್ಟವಾಗಿ ಹೇಳುತ್ತೇನೆ ಕಳೆದ ೩-೪ ಗಂಟೆಗಳ ಕಾಲ

ಸನ್ಮಾನ್ಯ ಮುಖ್ಯಮಂತ್ರಿಯವರು ಹಾಗೂ ವಿರೋಧಪಕ್ಷದ ನಾಯಕರು ಮಾತನಾಡಿದ್ದನ್ನು ಗಮನಿಸಿದ್ದೇನೆ. ಇವತ್ತು ಅನೇಕ ಪ್ರತಿಭಾವಂತ ಇಂಜಿನಿಯರ್‌ಗಳು ಹಾಗೂ ದೊಡ್ಡ ದೊಡ್ಡ ಹಿರಿಯರಾದ ಸದಸ್ಯರುಗಳು ಇರತಕ್ಕ ಈ ಸಭೆಯಲ್ಲಿ ಒಂದು ಮಾತನ್ನು ಹೇಳಬೇಕಾಗುತ್ತದೆ. ಕಳೆದ ೨೫–೩೦ ವರ್ಷಗಳಲ್ಲಿ ಅಧಿಕಾರದಲ್ಲಿದ್ದ ಜನ ಈಗಲೂ ಅಲ್ಲಿಯೇ ಇದ್ದಾರೆ. ಇವತ್ತು ಪ್ರಾಮಾಣಿಕವಾಗಿ ರಾಜ್ಯದ ಹಿತವನ್ನು ಗಮನದಲ್ಲಿಟ್ಟುಕೊಂಡು ನೀರಾವರಿ ಯೋಜನೆಗಳಿಗೆ ಬೇಕಾದಂಥ ಹಣವನ್ನು ಒದಗಿಸಿ ನಮ್ಮ ರಾಜ್ಯದ ರೈತರಿಗೆ ನೀರನ್ನು ಕೊಡಿಸುವ ಪ್ರಯತ್ನ ಮಾಡದಿದ್ದರೆ ಇವತ್ತು ಈ ರಾಜ್ಯದ ರೈತರಿಗೆ ಈ ಸ್ಥಿತಿ ಬರುತ್ತಿರಲಿಲ್ಲ. ಟ್ರಿಬ್ಯೂನಲ್ ಮೂಲಕ ನಾವು ಹೋರಾಟ ಮಾಡುತ್ತೇವೆಂದು ಹೇಳತಕ್ಕ ಸಂದರ್ಭ ಬರುತ್ತಿತ್ತು. ಇವತ್ತು ಟ್ರಿಬ್ಯೂನಲ್‌ಗೆ ಕೇಂದ್ರ ಸರ್ಕಾರದ ಟರ್ಮ್ಸ್ ಆಫ್ ರೆಫರೆನ್ಸ್ ಆಧಾರದಮೇಲೆ, ಒಂದು ತೀರ್ಮಾನ ತೆಗೆದುಕೊಳ್ಳುತ್ತಾರೆ. ಆ ಸಂದರ್ಭದಲ್ಲಿ ಆ ಟರ್ಮ್ಸ್ ಆಫ್ ರೆಫರೆನ್ಸ್‌ನಲ್ಲಿ ಏನೇನು ಇರಬೇಕು ಎಂಬುದರ ಬಗ್ಗೆ ಸಹಜವಾಗಿ ಎರಡು ರಾಜ್ಯದ ಮುಖ್ಯಮಂತ್ರಿಯವರೊಡನೆ ಚರ್ಚೆ ಮಾಡುತ್ತಾರೆ. ಅಂತಹ ಸಂದರ್ಭದಲ್ಲಿ ಯಾವ ಕಾರಣಕ್ಕಾಗಲಿ ಈಗ ಮಾಡುತ್ತಿರುವ ಆನ್–ಗೋಯಿಂಗ್ ಕೆಲಸಗಳಿಗೆ ಅಥವಾ ಹೊಸ ಕೆಲಸಗಳಿಗಾಗಲಿ, ಟ್ರಿಬ್ಯೂನಲ್‌ನಲ್ಲಿ ಸ್ಟೇ ಸಿಗದಂತೆ ನೋಡಿಕೊಳ್ಳಬೇಕು. ನಮಗೆ ಇರತಕ್ಕ ಭಯ ಏನೆಂದರೆ ಈ ಟ್ರಿಬ್ಯೂನಲ್ ಮೂಲಕ ಹಾಲಿ ಕೆಲಸಗಳಿಗೆ ಹಾಗೂ ಮುಂದೆ ಮಾಡತಕ್ಕ ಕೆಲಸಗಳಿಗೆ ಅಡ್ಡಿ ಆತಂಕಗಳು ಬರಬಹುದು ಹಾಗೂ ಸ್ಟೇ ತೆಗೆದುಕೊಳ್ಳುವುದರಲ್ಲಿ ಅವರು ಯಾವರೀತಿಯಲ್ಲಿ ಕೇಂದ್ರ ಸರ್ಕಾರದ ಮನಒಲಿಸಲು ಪ್ರಯತ್ನ ಮಾಡಬಹುದೆಂಬ ಭಯ ಸಹಜವಾಗಿ ಬಂದಿದೆ. ಇವತ್ತು ವಿರೋಧ ಪಕ್ಷದ ನಾಯಕರು ತಮ್ಮ ಪ್ರಭಾವವನ್ನು ಉಪಯೋಗ ಮಾಡಿಕೊಂಡು ಈ ರಾಜ್ಯದ ಮುಖ್ಯಮಂತ್ರಿಗಳು ಹಾಗೂ ಎಲ್ಲಾ ಹಿರಿಯರುಗಳ ಸಹಕಾರವನ್ನು ಪಡೆದು ನಮಗೆ ಅನ್ಯಾಯವಾಗದ ರೀತಿಯಲ್ಲಿ ನೋಡಿಕೊಳ್ಳಬೇಕು. ನಮ್ಮ ರಾಜ್ಯದಿಂದ ೨೭ ಜನ ಕಾಂಗ್ರೆಸ್ ಸದಸ್ಯರು ಲೋಕಸಭೆಗೆ ಆಯ್ಕೆಯಾಗಿ ಹೋಗಿದ್ದಾರೆ. ಅವರು ಎಷ್ಟರ ಮಟ್ಟಿಗೆ ಈ ಟ್ರಿಬ್ಯೂನಲ್ ಅನ್ನು ನೇಮಕ ಮಾಡುವುದನ್ನು ತಪ್ಪಿಸುವ ಸಲುವಾಗಿ ಪ್ರಭಾವ ಬೀರಿದ್ದಾರೆ, ಹಾಗೂ ಆಗಾಗ್ಗೆ ಕೇಂದ್ರ ಸರ್ಕಾರದ ನಿಲುವಿನ ಬಗ್ಗೆ ರಾಜ್ಯ ಸರ್ಕಾರಕ್ಕೆ ಮಾಹಿತಿಯನ್ನು ಕೊಡುವ ಪ್ರಯತ್ನ ಮಾಡಿದ್ದಾರೆಯೆ ? ಹಾಗೂ ಎಷ್ಟರ ಮಟ್ಟಿಗೆ ಅದರ ಉಪಯೋಗವನ್ನು ನಮ್ಮ ರಾಜ್ಯದ ಮುಖ್ಯಮಂತ್ರಿಗಳು ಈ ರಾಜ್ಯದ ರೈತರ ಹಿತವನ್ನು ಕಾಪಾಡುವುದರ ಸಲುವಾಗಿ ಮಾಡಿಕೊಂಡಿದ್ದಾರೆ ಎಂಬುದರ ಬಗ್ಗೆ ಸನ್ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವ ಸಂದರ್ಭದಲ್ಲಿ ತಿಳಿಸುತ್ತಾರೆಂದು ನಾನು ಭಾವಿಸುತ್ತೇನೆ. ಅದಕ್ಕೋಸ್ಕರ ಇವತ್ತು ನಮ್ಮ ರಾಜ್ಯದ ರೈತರಿಗೆ ನಿಶ್ಚಿತವಾಗಿ ಈ ಒಂದು ಟ್ರಿಬ್ಯೂನಲ್ ಮೂಲಕ ನ್ಯಾಯ ಸಿಗುತ್ತದೆಂಬ ನಂಬಿಕೆ ಇಲ್ಲ. ಇದು ಅನೇಕ ವರ್ಷಗಳು ಹಿಡಿಯಬಹುದು, ಟರ್ಮ್ಸ್ ಆಫ್ ರೆಫರೆನ್ಸ್ ಆಧಾರದ ಮೇಲೆ ರಾಜ್ಯ ಸರ್ಕಾರದ ಅಭಿಪ್ರಾಯವನ್ನು ಕೇಳಬಹುದು ಆಗ ನಮ್ಮ ನಿಲುವನ್ನು ನಾವು ವ್ಯಕ್ತಪಡಿಸಬೇಕಾಗುತ್ತದೆ. ಈಗಲೂ ಸಹ ವಿಶೇಷವಾಗಿ ಪ್ರಯತ್ನ ಮಾಡಿ ಒಂದು ಸರ್ವಾನುಮತದ ನಿರ್ಣಯದ ಮೂಲಕ ಕೇಂದ್ರ ಸರ್ಕಾರ ಯಾವ ಕಾರಣಕ್ಕೂ ಸಹ ಈ ರಾಜ್ಯದ ರೈತರ ಹಿತಕ್ಕೆ ಧಕ್ಕೆ ತರಕೂಡದೆಂಬ ಬಗ್ಗೆ ಆಗ್ರಹಪಡಿಸಬೇಕಾಗುತ್ತದೆ. ಹಾಗೂ ಸುಪ್ರೀಂ ಕೋರ್ಟ್‌ನಲ್ಲಿ ರಿವ್ಯೂ ಪಿಟಿಷನ್ ಇರತಕ್ಕ ಸಂದರ್ಭದಲ್ಲಿ ಅವರ ಮನಸ್ಸನ್ನು ಒಲಿಸಿ ಮಾತುಕತೆಯ ಮೂಲಕ ಬಗೆಹರಿಸುತ್ತೇವೆಂಬ ಆಶ್ವಾಸನೆಯನ್ನು ಸುಪ್ರೀಂಕೋರ್ಟಿಗೆ ಕೊಟ್ಟು ಪಕ್ಕದ ರಾಜ್ಯದವರ ಮನಸ್ಸನ್ನು ಒಲಿಸಿ ನಾವು ಇದನ್ನು ಮಾತುಕತೆಯ ಮೂಲಕ ಬಗೆಹರಿಸಬಹುದೆಂಬ ಒಂದು ಸರ್ವಾನುಮತದ ನಿರ್ಣಯವನ್ನು ಮಾಡುವುದು ಒಳ್ಳೆಯದು. ಇದಾದನಂತರವೂ ಸಹ ಈ ಸಮಸ್ಯೆ ಟ್ರಿಬ್ಯೂನಲ್ ಮೂಲಕವೇ ಬಗೆಹರಿಯಬೇಕೆಂದು ನಿರ್ಣಯವಾದರೆ ಆ ಸಂದರ್ಭದಲ್ಲಿ ನಾವು ಏನು ತೀರ್ಮಾನ ತೆಗೆದುಕೊಳ್ಳಬೇಕೆಂಬುದನ್ನು ಸಹ ಯೋಜನೆಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಈಗಾಗಲೆ ಮುಂದೆ ಬರುವಂಥ ದಿನಗಳಲ್ಲಿ ರಾಜ್ಯದ ರೈತರಿಗೆ ನೀರಾವರಿ ಅನುಕೂಲವನ್ನು ಮಾಡಿಕೊಡುವುದರಲ್ಲಿ ಸಂಪೂರ್ಣವಾಗಿ ವಿಫಲರಾಗಿದ್ದೇವೆಂದು ಸಂಶಯ ಮೂಡಿದೆ. ಈ ಸಾರಿ ಸರ್ಕಾರದವರು ಕೊಟ್ಟಿರುವ ಹಣಕಾಸಿನ ಜೊತೆಗೆ ೧೬೨ ಕೋಟಿಯನ್ನು ಜಾಸ್ತಿ ಕೊಟ್ಟಿದ್ದೇವೆಂದು ಹೇಳಿದ್ದಾರೆ. ಮಾನ್ಯ ಹುಚ್ಚಮಾಸ್ತಿಗೌಡರು ಹೇಳಿದಂತೆ ಈ ಸಂದರ್ಭದಲ್ಲಿ ಯಾವುದೇ ವಿಚಾರವನ್ನಾದರೂ ನೀರಾವರಿಗೆ ಸಂಬಂಧಪಟ್ಟಂತೆ ಬಹಿರಂಗವಾಗಿ ಚರ್ಚೆ ಮಾಡುವುದು ಸೂಕ್ತವಲ್ಲ. ಮಾನ್ಯ ಲೋಕೋಪಯೋಗಿ ಮಂತ್ರಿಗಳು ೧೬೨ ಕೋಟಿ ಕೊಡುತ್ತೇವೆಂದು ಹೇಳಿದ್ದಾರೆ. ಕಳೆದ ಅನೇಕ ವರ್ಷಗಳಿಂದ ನೀರಾವರಿ ಯೋಜನೆಗಳಿಗೆ ಹಣ ಖರ್ಚು ಮಾಡದೇ ಕೆಟ್ಟಿ ಕೊಂಡಿದ್ದು, ಈಗ ಏಕಾಏಕಿ ಖರ್ಚು ಮಾಡುತ್ತೇವೆಂದು ಹೇಳಿದರೆ, ಇದರಿಂದ ರೈತನ ಹಿತಕ್ಕೆ ಧಕ್ಕೆಯಾಗಬಹುದು, ಇವತ್ತು ಈ ಸದನದಲ್ಲಿ ನಿರ್ಣಯವನ್ನು ಸರ್ವಾನುಮತದಿಂದ ಅಂಗೀಕರಿಸಿ, ರಾಜ್ಯದ ಹಿತವನ್ನು ಕಾಪಾಡುವ ಪ್ರಯತ್ನ ಮಾಡೋಣ. ಈಗಾಗಲೇ ವಿರೋಧ ಪಕ್ಷದ ನಾಯಕರು, ಮಾನ್ಯ ಸಭಾನಾಯಕರು ಮಾತನಾಡಿರುವುದರಿಂದ ಮತ್ತೆ ನಾನು ಹೆಚ್ಚಿಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಈ ವಿಚಾರದಲ್ಲಿ

ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಪ್ರಾಮಾಣಿಕವಾಗಿ ಪ್ರಯತ್ನ ಮಾಡಿಲ್ಲ. ಇಂಥ ತೀರ್ಮಾನಗಳು ರಾಜಕೀಯ ತೀರ್ಮಾನವಾಗಬೇಕು. ನೀರಾವರಿಗೆ ಸಂಬಂಧಪಟ್ಟ ವಿಚಾರಗಳು ಸುಪ್ರೀಂಕೋರ್ಟ್‌ನಲ್ಲಿ, ಟ್ರಿಬ್ಯೂನಲ್‌ನಲ್ಲಿ ತೀರ್ಮಾನವಾಗಬೇಕಾಗಿಲ್ಲ. ಮಾತುಕತೆ ಮೂಲಕ ತೀರ್ಮಾನವಾಗುವುದು ಒಳಿತು. ಇವತ್ತು ಪ್ರಪ್ರಥಮವಾಗಿ ಸುಪ್ರೀಂಕೋರ್ಟ್ ಮಧ್ಯಪ್ರವೇಶಿಸಿ ಟ್ರಿಬ್ಯೂನಲ್ ಮಾಡುವಂಥ ಪರಿಸ್ಥಿತಿ ಬಂದಿದೆ. ಮಾನ್ಯ ಮುಖ್ಯಮಂತ್ರಿಗಳು ತಮಿಳುನಾಡಿನಲ್ಲಿ ನಡೆದ ಸಭೆಗೆ ಹೋದಾಗ ಆಡಿದಂಥ ಮಾತಿನಿಂದ ಟ್ರಿಬ್ಯೂನಲ್ ಮಾಡುವಂಥ ಒಂದು ವಾತಾವರಣ ಮಾಡಿತೇನು ಎನ್ನುವ ಮಾತನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದರು. ಮಾನ್ಯ ಮುಖ್ಯಮಂತ್ರಿಗಳು ಅಂಥ ಒಂದು ಶಬ್ದವನು ಉಪಯೋಗಿಸಬಾರದಿತ್ತು ಎಂದು ಭಾವಿಸಿ, ಒಮ್ಮತದಿಂದ ಸರ್ವಾನುಮತದಿಂದ ನಿರ್ಣಯವನ್ನು ಪಾಸು ಮಾಡಿಸಿ ಕಳುಹಿಸಿಕೊಡೋಣವೆಂದು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ಉಪಾಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಕೆ.ಎನ್. ಪುಟ್ಟು (ಕಿರುಗಾವಲು).—ಮಾನ್ಯ ಅಧ್ಯಕ್ಷರೆ, ಮಾನ್ಯ ಸಭಾನಾಯಕರು ಕಾವೇರಿ ಜಲಾನಯನ ಪ್ರದೇಶಕ್ಕೆ ಸಂಬಂಧಪಟ್ಟಂತೆ ಒಂದು ಠರಾವು ತಂದಿದ್ದಾರೆ. ಬೆಳಿಗ್ಗೆ ಇದ್ದಂಥ ವಾತಾವರಣ ಈಗ ಇಲ್ಲ. ೧೯೨೪ರಿಂದ ೭೪ರವರೆಗೆ ನಿಬಂಧನೆ ಏನಾಗಿತ್ತು ಅದು ೭೪ರ ನಂತರ ಪರಿಸರ, ಅಚ್ಚುಕಟ್ಟು, ನೀರಾವರಿ ಯಾಗಿರತಕ್ಕ ಪ್ರದೇಶ ಇವೆಲ್ಲವುಗಳನ್ನೂ ಪರಿಶೀಲನೆಗೆ ತೆಗೆದುಕೊಂಡು ತೀರ್ಮಾನ ಮಾಡಬೇಕಾಗಿತ್ತು. ನಮ್ಮ ಸಭಾನಾಯಕರು ಹಿಂದೆ ನೀರಾವರಿ ಮಂತ್ರಿಗಳಾಗಿದ್ದಾಗ, ಮುಖ್ಯಮಂತ್ರಿಗಳಾಗಿದ್ದಾಗ, ನೀರಾವರಿಗೆ ಸಂಬಂಧಪಟ್ಟ ಕೆಲಸಗಳನ್ನು ಕಾಲಕ್ಕೆ ಸರಿಯಾಗಿ ಮಾಡಿ ಮುಗಿಸುವ ಯೋಜಿತ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದರು. ಅದೇರೀತಿ ಹೇಮಾವತಿ, ಹಾರಂಗಿ ಯೋಜನೆಗಳನ್ನು ಒಳಕ್ಕೆ ಮುಂಚೆ ಕೈಗೆತ್ತಿಕೊಂಡು, ಕರ್ನಾಟಕವನ್ನು ಸಮೃದ್ಧಿ ನೀರಾವರಿ ರಾಜ್ಯವನ್ನಾಗಿ ಮಾಡುವ ಪ್ರಯತ್ನ ಮಾಡಿದ್ದರು. ಅನಂತರ ಬಂದವರು ನೀರಾವರಿಗೆ ಹೆಚ್ಚಿನ ಆದ್ಯತೆ ಕೊಡದೆ, ಮತ ಪೆಟ್ಟಿಗೆ ಆಧಾರದ ಮೇಲೆ ಚುನಾವಣೆ ನಡೆಸಿಕೊಂಡು, ಅಗ್ಗದ ಮತ್ತು ಪ್ರಚಾರದ ಕಾರ್ಯಕ್ರಮಗಳನ್ನು ಮಾಡಿಕೊಂಡು, ನಮ್ಮ ರೈತರಿಗೆ ಅನಾನುಕೂಲ ಮಾಡಿದರು. ಈ ನೀರಾವರಿ ವಿಚಾರ ನಾಲ್ಕು ರಾಜ್ಯಗಳಿಗೆ ಸೇರಿದೆ. ಎರಡು ರಾಜ್ಯಗಳ ಸಲಹೆ ಮತ್ತು ಸಮ್ಮತಿಯನ್ನು ತೆಗೆದುಕೊಳ್ಳದೆ. ಪ್ರಧಾನ ಮಂತ್ರಿಗಳು ಪಂಚಾಯಿತಿಯನ್ನು ರಚಿಸಿದ್ದಾರೆ. ಇದು ರಾಜಕೀಯ ದ್ವೇಷದಿಂದ ಮಾಡಿದ್ದಾರೋ, ರಾಜಕೀಯ ಅಪ್ಪುಗೆಯಿಂದ ಮಾಡಿದ್ದಾರೋ ಅರ್ಥವಾಗುತ್ತಿಲ್ಲ. ಏಕೆಂದರೆ, ೨೦ ವರ್ಷಗಳು ಸಂದರೂ ಸಹ, ಅಂದು ಕನ್ನಡ ನಾಡಿನಿಂದ ಹೋಗಿದ್ದಂಥ ಸಂಸತ್ ಸದಸ್ಯರು ಇದನ್ನು ಮಾತುಕತೆ ಮೂಲಕ, ಸಂಧಾನ ಮಾಡಿಕೊಳ್ಳಬೇಕೆಂದು ೨೦ ವರ್ಷಗಳಿಂದ ಒತ್ತಾಯ ತಂದರೂ ಸಹ ಕೇವಲ ೬ ತಿಂಗಳಲ್ಲಿ ಈ ಒಂದು ತೀರ್ಮಾನವನ್ನು ತೆಗೆದುಕೊಂಡಿದ್ದಾರೆ ಮೊನ್ನೆ ಪತ್ರಿಕೆಯಲ್ಲಿ ಓದಿದಾಗ ಮಾನ್ಯ ಮುಖ್ಯಮಂತ್ರಿಯವರು, ಪ್ರಧಾನ ಮಂತ್ರಿಯವರಿಗೆ ಬರೆದಿರುವ ಕಾಗದಕ್ಕೆ ಒಂದು ಲೈನ್‌ನಲ್ಲಿ ತಮ್ಮ ಉತ್ತರವನ್ನು ಕಳುಹಿಸಿದ್ದಾರೆ. ಇದರ ಅರ್ಥ ನನಗನಿಸುತ್ತದೆ, ದಕ್ಷಿಣ ಇಂಡಿಯಾದಲ್ಲಿ ಏನು ಶಾಂತಿ ಸುವ್ಯವಸ್ಥೆ ಇದೆ ಅದನ್ನು ಇಟ್ಟುಕೊಳ್ಳಬಾರದು ಎನ್ನುವ ಮನಸ್ಸು ಅವರಿಗೆ ಇದೆ ಎಂದು ನನಗೆ ಅನಿಸುತ್ತದೆ. ನಾವು ಅವರು ಸಹೋದರ, ಸಹೋದರಿಯರ ತರಹ ಬದುಕುತ್ತಿದ್ದೇವೆ. ಒಂದೇ ನೀರನ್ನು ಕುಡಿಯುತ್ತಿದ್ದೇವೆ ಒಂದೇ ಭೂಮಿಯಲ್ಲಿ ವಾಸವಾಗಿದ್ದೇವೆ. ಆದರೂ ಸಹ ಈ ತೀರ್ಮಾನ ಏನಾಗಿದೆ ಅಂದರೆ ಪರಸ್ಪರ ದ್ವೇಷ ಅಸೂಯೆಗೆ ಕಾರಣವೆನ್ನುವ ರೀತಿ ಬಂದಿದೆ. ಆಂಧ್ರದವರು ತಮ್ಮ ಎಲ್ಲಾ ಅಭಿವೃದ್ಧಿ ಕೆಲಸಗಳನ್ನು ಬದಿಗೊತ್ತಿ ಮೂರು ವರ್ಷಗಳಲ್ಲಿ ನಾಗಾರ್ಜುನಸಾಗರವನ್ನು ಕಟ್ಟಿದರು. ಆದರೆ ಕರ್ನಾಟಕದವರು ೧೯೭೦ ರಿಂದ ೧೯೯೦ರ ವರೆಗೆ ತಾವು ಪ್ರಾರಂಭ ಮಾಡಿದ ಕೆಲಸವನ್ನು ಮಾಡಲಿಕ್ಕೆ ಆಗಲಿಲ್ಲ. ಅಂದಾಜು ಮೂಲ ವೆಚ್ಚಕ್ಕಿಂತ ೫೦ ರಿಂದ ೧೦೦ ಪಟ್ಟು ಹಣವನ್ನು ಹೆಚ್ಚಿಗೆ ಖರ್ಚುಮಾಡಿ ಕಪ್ಪು ಹಣವನ್ನು ಪಟ್ಟಣ ವಾಸದಲ್ಲಿ ಸೇರಿಸಿದಂಥ ಒಂದು ವ್ಯವಸ್ಥೆ ಮಾಡಿಕೊಂಡು ಬಂದರೇ ವಿನಹ ಜನಸಾಮಾನ್ಯರ ಹಿತವನ್ನು ಕಾಪಾಡಲಿಕ್ಕೆ ಹೋಗಲಿಲ್ಲ. ಇನ್ನೊಂದು ವಿಷಯ ಅಂದರೆ ಈಗ ಆರು ವರ್ಷಗಳ ಹಿಂದೆ ಸರ್ವೋಚ್ಚ ನ್ಯಾಯಾಲಯದಲ್ಲಿ ತಮಿಳುನಾಡಿನವರು ಟ್ರಿಬ್ಯುನಲ್ ಬೇಕೆಂದು ವಾದವನ್ನು ರೈತರ ಪರವಾಗಿ ವಕಾಲತ್ತು ಹಾಕಿಸಿದರು. ಕರ್ನಾಟಕ ರಾಜ್ಯದವರು ಪಾಪ ರೈತರ ಪರವಾಗಿ ವಕಾಲತ್ತು ಹಾಕಿಸಲಿಕ್ಕೆ ಕಷ್ಟಪಡಲಿಲ್ಲ. ಇವರು ಸುಮ್ಮನಾದರು. ಈ ರೀತಿ ಮಾಡಿದ ಜನ ಬಹಿರಂಗಸಭೆಗಳಲ್ಲಿ ವೇದಿಕೆಗಳಲ್ಲಿ ಮಾತನಾಡುವುದನ್ನು ನೋಡಿದರೆ ನಾಚಿಕೆಪಡಬೇಕಾಗುತ್ತದೆ. ಏಕೆಂದರೆ ರೈತರು ಯಾರಾದರೂ ಅದಕ್ಕೆ ಹಣವನ್ನು ಕೊಡಬಹುದಾಗಿತ್ತು. ಸರ್ಕಾರ ಹಣವನ್ನು ಕೊಡಬಹುದಾಗಿತ್ತು, ರೈತರ ಪರವಾಗಿ ಯಾರಾದರೂ ಸರ್ವೋಚ್ಚ ನ್ಯಾಯಾಲಯದ ವಕೀಲರಿಗೆ ಹಣ ಕೊಡಬಹುದಾಗಿತ್ತು. ಆ ಒಂದು ಪ್ರಯತ್ನವನ್ನು ಯಾರೂ ಸಹ ಮಾಡಲಿಲ್ಲ. ಈಗ ಏಕಮುಖವಾಗಿ ತೀರ್ಮಾನವಾಗಿದೆ. ಈಗ ಅನೇಕ ಯೋಜನೆಗಳು, ಹೇಮಾವತಿ, ಹಾರಂಗಿ, ಕಬಿನಿ, ಕೆ.ಆರ್. ಸಾಗರ,

ಕಬಿನಿ, ಕಬದಕಡ ಇಂತಹ ಯೋಜನೆಗಳ ಅಣೆಕಟ್ಟುಗಳನ್ನು ಕಟ್ಟಿ ನೀರನ್ನು ಶೇಖರಣೆ ಮಾಡಿ, ತಮಿಳುನಾಡಿಗೋಸ್ಕರ ನೀರನ್ನು ಬಿಡುತ್ತಿದ್ದಾರೆ, ನಮ್ಮ ಹಣದಲ್ಲಿ ತಮಿಳುನಾಡನ್ನು ರಕ್ಷಣೆ ಮಾಡಿಕೊಡುತ್ತಿದ್ದಾರೆ. ಇದರಿಂದ ಏನಾಗುತ್ತಿದೆ ಎಂದರೆ ಕಳೆದ ೨೦ ವರ್ಷಗಳಿಂದ ನಮ್ಮ ಹಣ ಸಾವಿರಾರು ಕೋಟಿ ರೂಪಾಯಿ ತಮಿಳುನಾಡಿಗೋಸ್ಕರ ವಿನಿಯೋಗವಾಗುತ್ತಿದೆ ಎಂದು ಹೇಳಿದರೆ ತಪ್ಪಾಗಲಾರದು. ೧೯೭೪-೭೫ರಲ್ಲಿ ವರುಣಾ ನಾಲೆ ಗಲಾಟೆ ಆದಾಗ, ೧ ಲಕ್ಷ ೮೦ ಸಾವಿರ ಎಕರೆಗೆ, ಕೆರೆಗಳನ್ನು ಬಿಟ್ಟು, ಸೀಪೇಜ್ ವಾಟರನ್ನು ಬಿಟ್ಟು ಕೆ.ಆರ್.ಎಸ್. ನಿಂದ ನೇರವಾಗಿ ಹರಿಯುವಂಥ ನೀರನ್ನು ಸದಾ ೧೨ ತಿಂಗಳು ಕೊಡುತ್ತೇವೆಂದು ಗವರ್ನ್‌ಮೆಂಟ್ ಆರ್ಡರ್ ಆಗಿದೆ. ಆದರೆ ಈಗಿನ ಪರಿಸ್ಥಿತಿಯಲ್ಲಿ ೪೦ ಸಾವಿರ ಎಕರೆಗೆ ನೀರನ್ನು ಒದಗಿಸಲಾರರು. ಮೂಲ ಅಚ್ಚುಕಟ್ಟುದಾರರಾದ ಕೆ.ಆರ್.ಎಸ್.ನವರಿಗೆ ಇದರಿಂದ ತುಂಬಾ ತೊಂದರೆಯಾಗುತ್ತಿದೆ, ಅವರು ನಿರ್ಗತಿಕರಾಗುತ್ತಾರೆ. ಇದರಿಂದ, ರೈತರು ಚರಮಗೀತೆಯನ್ನು ಹಾಡಬೇಕಾಗುತ್ತದೆಂದು ಈ ಸಭೆಯಲ್ಲಿ ನಾನು ಹೇಳುತ್ತೇನೆ. ಈ ಎಲ್ಲವನ್ನು ಮನಗಂಡು, ೧೯೨೪ ರಿಂದ ೧೯೭೪ರ ಕರಾರಿಗೆ ಯಾವ ಭಾಗದಲ್ಲಿ ತಲಕಾವೇರಿ ಹುಟ್ಟಿತ್ತೋ, ಆ ಭಾಗ ಬೇರೆ ಸಂಸ್ಥಾನವಾಗಿತ್ತು. ಈ ಕರಾರಿಗೆ ಕೊಡಗು ಸಂಸ್ಥಾನ ಒಳಪಟ್ಟಿರುವುದಿಲ್ಲ ಆದುದರಿಂದ ಈ ಕರಾರು ಅಂದೇ ಅಪೂರ್ಣವಾಗಿತ್ತು. ಆ ಭಾಗ ಇವತ್ತು ವ್ಯಾಜದಲ್ಲಿ ಪಾರ್ಟಿಯಾಗಿಲ್ಲ. ಯಾವ ಒಂದು ಆಂಗ್ಲರ ಆಳ್ವಿಕೆಯಲ್ಲಿ ತಮ್ಮದೇ ಆದ ರೂಪುರೇಷೆಗಳನ್ನು ರೂಪಿಸಿಕೊಂಡು ತಮ್ಮದೇ ಆದ ರೀತಿನೀತಿಗಳ ಪ್ರಕಾರ ತೀರ್ಮಾನ ತೆಗೆದುಕೊಂಡು ನಿರ್ಬಂಧಗಳನ್ನು ಹಾಕಿ ೫೦ ವರ್ಷಗಳ ಕರಾರು ಹಾಕಿದರು. ಆಂಗ್ಲರು ಈ ದೇಶವನ್ನು ಬಿಟ್ಟು ಹೋದರೂ ಸಹ ಭಾರತೀಯರು ವಾಸವಾಗಿರುವ ಕಡೆ ಅವರ ಕಾನೂನು ಪರಿಪಾಲನೆ ಮಾಡುವುದು ಅಷ್ಟೊಂದು ಸಮಂಜಸವಾಗಿಲ್ಲವೆಂದು ನನಗನ್ನಿಸುತ್ತದೆ. ಮೇಲುಭಾಗದಿಂದ ಹರಿಯುವ ನೀರನ್ನು ಕೆಳಭಾಗದವರಿಗೆ ಕೊಡಬೇಕು, ೫೦ ವರ್ಷದ ಹಿಂದೆ ಆಗಿರುವಂಥಾದ್ದು ಎಂಬ ಭಾವನೆಯನ್ನು ರೂಪಿಸಿಕೊಳ್ಳುತ್ತಿದ್ದಾರೆ. ನಮ್ಮ ಪ್ರಧಾನ ಮಂತ್ರಿಗಳು ಬಹಳ ಎಚ್ಚರಿಕೆಯಿಂದ ಪಂಚಾಯಿತಿಯನ್ನು ರಚಿಸಬಹುದಾಗಿತ್ತು. ಮತ್ತೊಂದು ಅವಕಾಶವನ್ನು ಕೊಡಬಹುದಾಗಿತ್ತು, ಸಂಧಾನ ಮಾಡಬಹುದಾಗಿತ್ತು. ಇದು ಪ್ರಜಾಪ್ರಭುತ್ವ ದೇಶ, ದೊಡ್ಡ ದೇಶ ಎಲ್ಲರೂ ಕೂಡಿ ಬಾಳಬೇಕು ಎನ್ನುವ ಭಾವನೆ ಇರಬೇಕಾಗಿತ್ತು, ಅದು ಏತಕ್ಕೆ ಇರಲಿಲ್ಲ ಎನ್ನುವುದು ನಮಗೆ ಅರ್ಥವಾಗುತ್ತಿಲ್ಲ.

ಈಗ ಈ ವಿಷಯ ಕೌನ್ಸಿಲ್‌ನಲ್ಲಿದೆ ಎಂದು ಹೇಳುತ್ತಿದ್ದೀರಿ. ಮಾನ್ಯ ಸದಸ್ಯರಾದ ಯಡಿಯೂರಪ್ಪನವರು ಮಾತನಾಡುವಾಗ ಇದಕ್ಕೆ ತಡೆಯಾಜ್ಞೆ ತರಬಹುದಾದ ಸಂಭವ ಇದೆಯೆಂದು ಹೇಳಿದರು. ಈ ಸಮಸ್ಯೆ ನಮ್ಮ ರಾಜ್ಯದ ಜನರ ರೈತರ ಜೀವನ್ಮರಣಕ್ಕೆ ಸಂಬಂಧಪಟ್ಟಿದ್ದಾಗಿದೆ. ಆದ್ದರಿಂದ ನಾನು ಹೇಳುವುದೇನೆಂದರೆ, ನಮ್ಮ ರಾಜ್ಯದ ಅಭಿವೃದ್ಧಿ ಕೆಲಸಗಳನ್ನು ಕೆಲವುಕಾಲ ನಿಲ್ಲಿಸಿದರೂ ಪರವಾಗಿಲ್ಲ, ನಮ್ಮ ಪಾಲಿನ ಕಾವೇರಿ ನೀರನ್ನು ಸಂಪೂರ್ಣವಾಗಿ ಉಪಯೋಗ ಮಾಡಿಕೊಳ್ಳಲು ಅಗತ್ಯ ಕೆಲಸಗಳನ್ನು ಏನು ಮಾಡಬೇಕೋ ಮಾಡಿ ಅದಕ್ಕೆ ಹೆಚ್ಚಿನ ಹಣವನ್ನೊದಗಿಸಬೇಕು. ನೀವು ಟ್ರಿಬ್ಯುನಲ್‌ನ ಮುಂದೆ ಹೋಗಬೇಕಾದರೆ ಮೊದಲು ವರ್ಕಿಂಗ್ ಟೇಬಲ್‌ನ್ನು ಆದಷ್ಟು ಬೇಗ ಮಾಡಿಕೊಳ್ಳಿ. ಅದು ಹೇಮಾವತಿಗೆ ಸಂಬಂಧಪಟ್ಟಂತಿರಬಹುದು, ಕಬದಗಡಕ್ಕೆ ಸಂಬಂಧಪಟ್ಟಂತಿರಬಹುದು, ಹಾರಂಗಿಗೆ ಸಂಬಂಧಪಟ್ಟಂತಿರಬಹುದು, ನಾವು ಎಷ್ಟು ಡ್ಯಾಂಗಳನ್ನು ಕಟ್ಟಿಸಬೇಕು, ಎಷ್ಟು ನಾಲೆಗಳನ್ನು ನಿರ್ಮಾಣ ಮಾಡಬೇಕು, ಎಷ್ಟು ಪ್ರದೇಶವನ್ನು ನೀರಾವರಿಗೆ ಒಳಪಡಿಸಬೇಕೆಂಬುದನ್ನು ಗಮನದಲ್ಲಿ ಇಟ್ಟುಕೊಂಡು ಕೆಲಸ ಮಾಡಬೇಕು. ಲಿಫ್ಟ್ ಇರಿಗೇಷನ್ ಕೆಲಸವನ್ನು ಕೈಗೆತ್ತಿಕೊಂಡು ನಿರುದ್ಯೋಗಿಗಳಿಗೆ ಕೆಲಸವನ್ನು ಕೊಟ್ಟುಕೊಂಡು ನಮ್ಮ ರಾಜ್ಯವನ್ನು ಸಮೃದ್ಧಿಯತ್ತ ಒಯ್ಯಬಹುದಿತ್ತು, ನೀರಾವರಿ ಸಮಸ್ಯೆಯನ್ನು ಸರ್ಕಾರದವರು ಬಗೆಹರಿಸಬಹುದಿತ್ತು, ವಿದ್ಯುಚ್ಛಕ್ತಿ ಸಮಸ್ಯೆಯನ್ನು ಬಗೆಹರಿಸಬಹುದಿತ್ತು, ಆದರೆ ಇದು ಯಾವುದನ್ನೂ ಮಾಡದೆ ಯಾರ್ಯಾರಿಗೋ ಅನುಕೂಲ ಮಾಡಿಕೊಡುವುದಕ್ಕೋಸ್ಕರ, ನಮ್ಮ ರಾಜ್ಯದ ಜನರಿಗೆ ಅನ್ಯಾಯವನ್ನು ಮಾಡುವುದಕ್ಕೋಸ್ಕರ, ಪ್ರಯತ್ನ ನಡೆದಂತಾಗಿದೆ. ಈ ಸರ್ಕಾರವನ್ನು ಭಿಕಾರಿಯನ್ನಾಗಿ ಮಾಡುವುದಕ್ಕಾಗಿ ನಾವು ಹೋಗುವುದು ಬೇಡ. ಈ ಪರಿಸ್ಥಿತಿಗೆ ಯಾರ್ಯಾರು ಕಾರಣ ಎಂಬುದನ್ನು ತಾವು ನೋಡಬೇಕು. ನಾವು ಟ್ರಿಬ್ಯುನಲ್‌ಗೆ ಹೋಗಬೇಕಾದರೆ ಮೊದಲು ವರ್ಕಿಂಗ್ ಟೇಬಲ್‌ನ್ನು ಮಾಡಿಕೊಳ್ಳಬೇಕು, ಯಾವ ಯಾವ ಡ್ಯಾಂಗಳ ಕೆಲಸ ಆಗಬೇಕು, ನಾಲೆಗಳನ್ನು ಎಷ್ಟೆಷ್ಟು ಮಾಡುವುದಕ್ಕೆ ಸಾಧ್ಯವಾಗುತ್ತದೆ, ಎಷ್ಟು ಪ್ರದೇಶ ನೀರಾವರಿಗೆ ಒಳಪಡುತ್ತದೆ. ಎನ್ನುವ ಬಗ್ಗೆ ಒಂದು ವರ್ಕಿಂಗ್ ಟೇಬಲ್‌ನ್ನು ರೂಪಿಸಿಕೊಳ್ಳಬೇಕು. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ನಮ್ಮಲ್ಲಿ ನೀರಾವರಿಯ ಬಗ್ಗೆ ಬಹಳ ಅನುಭವ ಉಳ್ಳಂಥ ತಜ್ಞರಿದ್ದಾರೆ, ಅವರ ಸಲಹೆಗಳನ್ನು ತೆಗೆದುಕೊಂಡು ವರ್ಕಿಂಗ್ ಟೇಬಲ್‌ನ್ನು ತಯಾರಿಸಿದರೆ ಅನುಕೂಲವಾಗುತ್ತದೆ. ಈಗ ತಾವು ಇಲ್ಲಿ ಒಂದು ಸರ್ವಾನುಮತದ ನಿರ್ಣಯವನ್ನು ಕೈಗೊಳ್ಳಬೇಕೆಂದು ಏನು ನಿರ್ಧಾರ ಮಾಡಿದ್ದೀರಿ

ಇದು ನಿಜಕ್ಕೂ ನಮ್ಮ ಕರ್ನಾಟಕ ರಾಜ್ಯದ ವಿಧಾನ ಸಭೆಯ ಇತಿಹಾಸದಲ್ಲೇ ಒಂದು ಮಹತ್ವಪೂರ್ಣವಾದ ಸಾಧನೆ ಎಂದು ಹೇಳಬಹುದು. ನಮ್ಮ ಕರ್ನಾಟಕ ರಾಜ್ಯದ ಯಾವುದೇ ಒಂದು ಭಾಗಕ್ಕೆ ಅನ್ಯಾಯವಾದರೂ ಅದು ಇಡೀ ಕರ್ನಾಟಕಕ್ಕೆ ಅನ್ಯಾಯ ಆದಂತಾಗುತ್ತದೆ. ನಮಗೆ ಈ ಕೌನ್ಸಿಲ್‌ನಿಂದ ಅನುಕೂಲವಾಗುತ್ತದೋ ಅಥವಾ ಟ್ರಿಬ್ಯುನಲ್‌ನ್ನು ಪ್ರತಿಭಟನೆ ಮಾಡುವುದರಿಂದ ಅನುಕೂಲವಾಗುತ್ತದೋ ಎಂಬುದನ್ನು ಈ ಸದನದ ಸಭಾ ಮುಖಂಡರು ಯೋಚನೆ ಮಾಡಬೇಕು. ರಾಜ್ಯಕ್ಕೆ ಅನುಕೂಲವಾಗುವುದಾದರೆ ನಮ್ಮ ಕೆಲವು ಅಭಿವೃದ್ಧಿ ಕಾರ್ಯಗಳು ಸ್ವಲ್ಪಮಟ್ಟಿಗೆ ಕುಂಠಿತಗೊಂಡರೂ ಪರವಾಗಿಲ್ಲ, ಮುಂದಿನ ನಮ್ಮ ಪೀಳಿಗೆಯವರು ನಮ್ಮನ್ನು ಶಪಿಸುವಂತಾಗಬಾರದೆಂದು ಹೇಳಿ ಇಷ್ಟು ಮಾತನಾಡಲು ನನಗೆ ಅವಕಾಶವನ್ನು ಕೊಟ್ಟಂಥ ಮಾನ್ಯ ಉಪಾಧ್ಯಕ್ಷಿಣಿಯವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀಮತಿ ಚಂದ್ರಪ್ರಭ ಅರಸ್ (ಹುಣಸೂರು).—ಸನ್ಮಾನ್ಯ ಉಪ ಸಭಾಧ್ಯಕ್ಷಿಣಿಯವರೆ, ಇವತ್ತು ಈ ಸದನದಲ್ಲಿ ಕಾವೇರಿ ಜಲವಿವಾದದ ಬಗ್ಗೆ ಏನು ಚರ್ಚೆ ನಡೆಯುತ್ತಿದೆ ಇದು ಇಡೀ ರಾಜ್ಯಕ್ಕೆ ತಿಳಿಸಿರುವಂತೆ ಮಾನ್ಯ ಮುಖ್ಯ ಮಂತ್ರಿಗಳ ನೇತೃತ್ವದಲ್ಲಿ ಒಂದು ನಿಯೋಗ ದೆಹಲಿಗೆ ಹೋಗಿ ಮಾನ್ಯ ಪ್ರಧಾನ ಮಂತ್ರಿಗಳಿಗೆ ಮತ್ತು ಕೇಂದ್ರ ಸರ್ಕಾರದ ಸಂಬಂಧಪಟ್ಟ ನೀರಾವರಿ ಸಚಿವರಿಗೆ ವಿಚಾರವನ್ನು ಮನವರಿಕೆ ಮಾಡಿಕೊಡಲು ಎಲ್ಲಾ ವಿರೋಧಪಕ್ಷಗಳ ನಾಯಕರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಅನೇಕ ಸುತ್ತಿನ ಮಾತುಕತೆಯನ್ನು ಅವರೊಡನೆ ನಡೆಸಿ ನಮ್ಮ ಸ್ಪಷ್ಟ ನಿಲುವನ್ನು ತಿಳಿಸಲು ನಮ್ಮನ್ನು ಕರೆದುಕೊಂಡು ಹೋಗತಕ್ಕ ಅವಕಾಶವನ್ನು ಮಾಡಿಕೊಟ್ಟಿದ್ದಕ್ಕಾಗಿ ನಾನು ಮಾನ್ಯ ಮುಖ್ಯ ಮಂತ್ರಿಗಳಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ನಾವು ಯಾವ ಉದ್ದೇಶಕ್ಕಾಗಿ ಹೋಗಿದ್ದೆವೋ ಅದರ ಬಗ್ಗೆ ಸ್ಪಷ್ಟ ಭರವಸೆಯನ್ನು ಕೇಂದ್ರದ ಸಂಬಂಧಪಟ್ಟ ನೀರಾವರಿ ಮಂತ್ರಿಗಳು ಮತ್ತು ಪ್ರಧಾನ ಮಂತ್ರಿಗಳೂ ಕೊಟ್ಟಿದ್ದರು. ಅವರ ಭರವಸೆಯ ಮೇರೆಗೆ ನಾವು ಬಹಳ ಆಶಾ ಭಾವನೆಯಿಂದ, ಒಳ್ಳೆಯ ನಿರೀಕ್ಷೆಯಿಂದ ವಾಪಸು ಬಂದೆವು. ನಮ್ಮ ದೇಶದಲ್ಲಿ ಅನೇಕ ಜಲಾನಯನ ಪ್ರದೇಶಗಳಿರುವುದರಿಂದ ಅನೇಕ ಅಂತರ್ ರಾಜ್ಯ ಜಲವಿವಾದಗಳಿವೆ. ಈ ಸಮಸ್ಯೆ ಕೇವಲ ನಮ್ಮ ರಾಜ್ಯಕ್ಕೆ ಮಾತ್ರ ಸೀಮಿತವಾಗಿಲ್ಲ. ನರ್ಮದಾ ಕಾವೇರಿ, ಇನ್ನೂ ಮುಂತಾದುವುಗಳ ಬಗ್ಗೆ ಜಲವಿವಾದಗಳಿವೆ. ಅವುಗಳನ್ನು ಬಗೆಹರಿಸಲು ಸೂಕ್ತವಾದ ಒಂದು ನ್ಯಾಷನಲ್ ಕೌನ್ಸಿಲ್‌ನ್ನು ರಚಿಸುವುದರ ಮೂಲಕ ಬಗೆಹರಿಸುತ್ತೇವೆಂದು ಹೇಳಿದ್ದರು. ಇದಕ್ಕೆ ಸಂಬಂಧಪಟ್ಟಂತೆ ಮಾತುಕತೆ ನಡೆಸಿ ವಿಚಾರವಿನಿಮಯ ಮಾಡಿ ಸಮಸ್ಯೆಯನ್ನು ಬಗೆಹರಿಸುತ್ತಾರೆಂಬ ಭರವಸೆಯನ್ನು ನಾವು ಇಟ್ಟುಕೊಂಡಿದ್ದೆವು.

೩-೪೫ ಪಿ. ಎಂ.

ಅದು ನಾವು ನಮ್ಮ ರಾಜ್ಯಕ್ಕೆ ವಾಪಸ್ ಆದ ಕೆಲವೇ ದಿವಸಗಳಲ್ಲಿ ಹುಸಿಯಾಯಿತು. ಈಗ ನ್ಯಾಯಮಂಡಳಿಗೆ ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ಈ ಒಂದು ವಾದವನ್ನು ಒಪ್ಪಿಸಿದ್ದಾರೆ. ಯಾವ ಒಂದು ಸಮಸ್ಯೆಯನ್ನು ಪರಸ್ಪರ ಒಡಂಬಡಿಕೆಯಿಂದ ಪರಸ್ಪರ ಒಂದು ಸಹಕಾರದಿಂದ ತಿಳಿಗೊಳಿಸಬಹುದಾಗಿತ್ತೋ ಆ ಸಮಸ್ಯೆಯನ್ನು ಬೃಹದಾಕಾರವಾಗಿ ಮಾಡಿ ಪರಸ್ಪರ ಅಕ್ಕಪಕ್ಕದ ರಾಜ್ಯಗಳು ಮಾತುಕತೆಗೂ ಬಾರದಂಥ ಪರಿಸ್ಥಿತಿಯನ್ನು ಸೃಷ್ಟಿಮಾಡಿರತಕ್ಕಂಥದ್ದು ಬಹಳ ಶೋಚನೀಯವಾದದಾಗಿದೆ ಅದರಲ್ಲೂ ನಮ್ಮ ವಿರೋಧ ಪಕ್ಷದ ನಾಯಕರ ನಿಲುವು ಏನಿದೆ ಅದನ್ನು ನಾವು ಯಾರೂ ಒಪ್ಪುವುದಕ್ಕಾಗುವುದಿಲ್ಲ. ಏತಕ್ಕೆಂದರೆ ಸ್ನೇಹಹಸ್ತವನ್ನು ಕೊಟ್ಟು ತೆಗೆದುಕೊಳ್ಳುವುದಕ್ಕೆ ಎರಡು ಕಡೆಯವರು ಸಿದ್ಧವಾಗಿರಬೇಕು. ಪಕ್ಕದ ರಾಜ್ಯ ತಮಿಳುನಾಡು ಸರ್ಕಾರ ತನ್ನ ನಿಲುವನ್ನು ಒಂದು ವರ್ಷದ ಹಿಂದೆ ಏನು ಹೇಳಿತ್ತೋ ಅದಕ್ಕೆ ಸಾಕಷ್ಟು ಆಧಾರಗಳು ಇವೆ. ತಾವು ನೋಡಿರಬಹುದು. ಹಿಂದಿನ ಅನೇಕ ಸರ್ಕಾರಗಳಲ್ಲಿ ಇದ್ದಂಥ ಮಾನ್ಯ ಮುಖ್ಯಮಂತ್ರಿಗಳೂ ಕೂಡ ಅಲ್ಲಿ ಚರ್ಚೆಗೆ ಹೋದಾಗ ಒಂದು ಸೌಹಾರ್ದಯುತವಾದ ವಾತಾವರಣದಿಂದ ಈ ಸಮಸ್ಯೆಯನ್ನು ಬಗೆಹರಿಸಿಕೊಳ್ಳಬಹುದು ಎನ್ನುವ ಒಂದು ವಿಶ್ವಾಸವನ್ನು ವ್ಯಕ್ತಪಡಿಸಿದ್ದರು. ಅದಕ್ಕೆ ತದ್‌ವಿರುದ್ಧವಾಗಿ ಆತುರ ಆತುರವಾಗಿ ಸರ್ವೋಚ್ಚನ್ಯಾಯಾಲಯದ ಒಂದು ವ್ಯಾಪ್ತಿಗೆ ಬಿಟ್ಟು ಅವರು ಹೇಳಿದಂತೆ ಕೇಳುವುದಕ್ಕೆ ನಾವು ತಯಾರಿದ್ದೇವೆನ್ನುವ ನಿಲುವನ್ನು ಕೇಂದ್ರ ಸರ್ಕಾರ ತೆಗೆದುಕೊಂಡದ್ದು ಬಹಳ ಆಶ್ಚರ್ಯಕರವಾದ ಸಂಗತಿಯಾಗಿದೆ, ಮತ್ತು ಅಷ್ಟೇ ಅನಿರೀಕ್ಷಿತವಾಗಿದೆ, ಈಗ ಟ್ರಿಬ್ಯುನಲ್ ರಚನೆ ಮಾಡಿದ್ದು ಆಗಿದೆ. ಅದರ ಪುನರ್ ವಿಮರ್ಶೆಗೆ ಅರ್ಜಿ ಅವರ ಮುಂದೆ ಇರತಕ್ಕಂಥ ಸಂದರ್ಭದಲ್ಲಿ ಅದೂ ಕೂಡ ನಮ್ಮ ಎಲ್ಲಾ ವಿರೋಧಪಕ್ಷದ ನಾಯಕರು ಇದನ್ನು ಪುನರ್ ವಿಮರ್ಶೆ ಮಾಡುವುದಕ್ಕೆ ಒಂದು ಅವಕಾಶವನ್ನು ಕೊಟ್ಟಿದ್ದರೆ ಚೆನ್ನಾಗಿರುತ್ತಿತ್ತು. ನಾವು ನಮ್ಮ ಕರ್ನಾಟಕದ ಜನತೆಯ ಪರವಾಗಿ ಅದಕ್ಕೆ ರಿವ್ಯೂ ಪಿಟೀಷನ್ ಹಾಕಬೇಕು ಎನ್ನುವ ಮಾತನ್ನು ಹೇಳಿದಾಗ ಅದಕ್ಕೂ ಕೂಡ ಒಮ್ಮತವಾಗಿ ನಾವೆಲ್ಲರೂ

ಕೂಡ ಸಮ್ಮತಿ ಕೊಟ್ಟು ರಾಜ್ಯ ಸರ್ಕಾರ ಕೇಂದ್ರ ಸರ್ವೋಚ್ಚ ನ್ಯಾಯಾಲಯದ ಮುಂದೆ ಪುನರ್ ವಿಮರ್ಶೆಗೆ ಮಾಡತಕ್ಕಂಥ ಅರ್ಜಿಯನ್ನು ಸಲ್ಲಿಸಿದ್ದೇವೆ. ಅದರ ಬಗ್ಗೆ ಇನ್ನು ಏನೂ ಆಗಿಲ್ಲ. ನ್ಯಾಯಾಲಯಕ್ಕೆ ವೆಕೇಶನ್ ಇದೆ. ಅದಕ್ಕೆ ಮೊದಲನೆಯದಾಗಿ ನ್ಯಾಯಮಂಡಲಿಯನ್ನು ರಚನೆ ಮಾಡಿದ್ದಾರೆ. ನ್ಯಾಯ ಮಂಡಲಿಯನ್ನು ರಚನೆ ಮಾಡಿದಾಕ್ಷಣ ನಮಗೆ ನ್ಯಾಯ ಆಗುತ್ತದೆ, ಅಥವಾ ನಾವು ಹೇಳಿದಂತೆ ವಿಚಾರಕ್ಕೆ ಒತ್ತು ಸಿಗುತ್ತದೆ ಎನ್ನುವ ಭಾವನೆ ಇಲ್ಲ. ಆದರೆ ಅದು ಅನೇಕರೀತಿಯಲ್ಲಿ ಮುಂದುವರಿದುಕೊಂಡು ಹೋಗಿ ಅನಾವಶ್ಯಕವಾದ ವಿಳಂಬನೀತಿಯಾಗುತ್ತದೆನ್ನುವ ಒಂದು ಭಾವನೆಯಿಂದ ನಾವು ಏನು ಒಂದು ನ್ಯಾಷನಲ್ ಕೌನ್ಸಿಲ್‌ಗೆ ಇದನ್ನು ವಹಿಸಬೇಕು, ಪರಸ್ಪರ ಕುಳಿತು ಚರ್ಚೆ ಮಾಡಬೇಕೆನ್ನುವ ಒಂದು ಸದುದ್ದೇಶವನ್ನು ಇಟ್ಟುಕೊಂಡಿದ್ದೇವೆ ಅದಕ್ಕೆ ಪಕ್ಕದ ರಾಜ್ಯ ಅಂತಿಮವಾದ ಒಂದು ಮಟ್ಟದಲ್ಲಿ ಗೆರೆಯನ್ನು ಎಳೆದಿವೆ. ಇನ್ನು ಯಾವ ಚರ್ಚೆಗೆ ಅವಕಾಶವಿಲ್ಲ ನಮ್ಮ ನಿಮ್ಮ ಮಧ್ಯೆ ಸಾಧ್ಯವಾಗುವುದಿಲ್ಲವೆನ್ನುವುದು ಕೇವಲ ಏಕಪಕ್ಷೀಯವಾಗುತ್ತದೆ ವಿನಹ ಬಹುಶಃ ಮಾತಿನಿಂದ ಉಪಯೋಗವಾಗುವುದಿಲ್ಲ ಎನ್ನುವುದು ನಿಶ್ಚಯವಾಗಿದೆ. ಅದು ಏನೇ ಇರಲಿ ಈವತ್ತು ಕೂಡ ಮನಸ್ಸು ಮಾಡಿದರೆ ನಮ್ಮ ವಿರೋಧಪಕ್ಷದ ನಾಯಕರು ಕೇಂದ್ರ ಸರ್ಕಾರದ ಮೇಲೆ ಎಲ್ಲಿ ಒತ್ತಡ ತರಬೇಕು. ಅದಕ್ಕೆ ನಾವು ಕೂಡ ಭಾಗಿಗಳಾಗುತ್ತೇವೆ. ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ಈ ಸದನದಲ್ಲಿ ಸ್ಪಷ್ಟವಾಗಿ ವ್ಯಕ್ತಪಡಿಸಿದ್ದಾರೆ, ಕೇಂದ್ರಕ್ಕೆ ಹೋಗಿ ಅವರ ಮನವನ್ನು ಒಲಿಸಿದರೆ ಇನ್ನೂ ಕೂಡ ಚರ್ಚೆಗೆ ಅವಕಾಶವಿದೆ. ಇದು ಇನ್ನೂ ಹೆಚ್ಚಿನ ಸಮಯ ತೆಗೆದುಕೊಳ್ಳಬಹುದೆಂದು ಹೇಳಿ ಮಾಡತಕ್ಕಂಥ ಪ್ರಯತ್ನಕ್ಕೆ ನಾವೆಲ್ಲರೂ ಪ್ರಯತ್ನ ಮಾಡಿದರೆ ಒಳ್ಳೆಯದೆಂದು ಹೇಳಿನಮಗನ್ನಿಸುತ್ತದೆ. ಟ್ರಿಬ್ಯೂನಲ್ ಆಗುತ್ತದೆ ಆನಂತರ ನಮ್ಮ ರಾಜ್ಯದ ನಿಲುವು ಏನು, ನಮ್ಮ ಪಾಲುಗಾರಿಕೆ ಏನು, ನಮ್ಮ ಹಕ್ಕು ಭಾದ್ಯತೆ ಏನು ಎನ್ನುವ ಬಗ್ಗೆ ಸವಿವರವಾಗಿ ಅವರ ಫ್ಯಾಕ್ಟ್ ಅಂಡ್ ಫಿಗರ್ಸ್ ಏನು ಇದೆ ನಮ್ಮ ರಾಜ್ಯದ ರೈತರು ಈಗಾಗಲೇ ಎಷ್ಟು ನೀರನ್ನು ಉಪಯೋಗಿಸುತ್ತಾರೆ. ಜಲಾನಯನ ಪ್ರದೇಶ ಎಷ್ಟಿದೆ ಮತ್ತು ರೈತರು ಎಷ್ಟು ನೀರನ್ನು ಉಪಯೋಗಿಸುತ್ತಾರೆ ಎನ್ನುವ ವಿಷಯ ಮುಂದಿನ ಮಾತಾಗುತ್ತದೆ. ಆದರೆ ಈಗ ತಕ್ಷಣದಲ್ಲಿ ನೋಡುವುದಾದರೆ ಸದನದ ಮೂಲಕ ನಮ್ಮ ಕರ್ನಾಟಕ ರಾಜ್ಯದ ಜನತೆಗೆ ಸ್ಪಷ್ಟೀಕರಣ ಕೊಡಬೇಕು. ಈಗಲೂ ಕೂಡ ತಡ ಏನೂ ಆಗಲಿಲ್ಲ. ನ್ಯಾಷನಲ್ ಕೌನ್ಸಿಲ್ ಮೂಲಕ ನಾವು ಚರ್ಚೆಯನ್ನು ಪರಸ್ಪರ ಮುಂದುವರಿಸಿದರೆ ಖಂಡಿತವಾಗಿಯೂ ಒಂದು ಉತ್ತಮವಾದ ವಾತಾವರಣದಲ್ಲಿ ಈ ಸಮಸ್ಯೆಯನ್ನು ಬಗೆಹರಿಸಿಕೊಳ್ಳಬಹುದು. ಏತಕ್ಕೆಂದರೆ ತಮಿಳುನಾಡು ರೈತರು ಕೂಡ ನಮ್ಮ ರಾಷ್ಟ್ರದ ರೈತರು. ಕರ್ನಾಟಕ ರಾಜ್ಯದ ರೈತರೂ ಕೂಡ ನಮ್ಮ ರಾಷ್ಟ್ರದ ರೈತರು. ಆದರೆ ರೈತರ ಜನಸಂಖ್ಯೆ ಯಾವ ಒಂದು ಪ್ರದೇಶದಲ್ಲಿ ಹೆಚ್ಚು ಇದ್ದು ನ್ಯಾಯ ದೊರಕಬೇಕಾಗಿತ್ತೋ ಅದನ್ನು ಬದಲಿಸುವಂಥ ಪರಿಸ್ಥಿತಿಯಲ್ಲಿ ಇವತ್ತು ಇದ್ದು, ಏನೂ ಇಲ್ಲದ ಅವರ ಎಲ್ಲಾ ಪ್ರದೇಶಗಳಿಗೂ ಅನುಕೂಲತೆಗಳನ್ನು ಮಾಡಿಕೊಂಡಿದ್ದಾರೆ.

ನಮ್ಮಲ್ಲಿ ಕೆಲವಾರು ವರ್ಷಗಳಿಂದ ನೀರಾವರಿಗೆ ಆದ್ಯತೆ ಕಡಿಮೆಯಾಗಿರುವುದು ಕೂಡ ಅದಕ್ಕೆ ಒಂದು ಕಾರಣವೆಂದು ಕಾಣುತ್ತದೆ. ಆದ್ಯತೆ ಮೇರೆಗೆ ನೀರಾವರಿ ಕೆಲಸವನ್ನು ಮುಂದುವರಿಸಿಕೊಂಡು ಹೋಗಿದ್ದರೆ ಹೆಚ್ಚಿನ ಜಮೀನನ್ನು ನೀರಾವರಿಗೆ ಒಳಪಡಿಸಬಹುದಾಗಿತ್ತು. ಆದರೆ ಈಗ ಅದು ಸಾಧ್ಯವಾಗಿಲ್ಲ. ಇನ್ನು ಮುಂದೆ ಅತಿ ಶೀಘ್ರದಲ್ಲಿ ಮಾಡುತ್ತೇವೆಂದರೂ ವರ್ಷ ಬೇಕಾಗುತ್ತದೆ, ಒಂದೆರಡು ತಿಂಗಳಲ್ಲಿ ಮಾಡುವುದಕ್ಕೆ ಸಾಧ್ಯವಾಗಲಾರದೆಂದು ತಿಳಿದುಕೊಂಡು, ಈಗ ಹೆಚ್ಚಿನ ಆದ್ಯತೆಯನ್ನು ಸರ್ಕಾರ ಮತ್ತು ಮುಖ್ಯ ಮಂತ್ರಿಗಳು ಈ ಬಂದು ಕೆಲಸಕ್ಕೆ ಆಸಕ್ತಿ ವಹಿಸಿದ್ದಾರೆಂದು ನಾನು ಭಾವಿಸಿದ್ದೇನೆ. ಜಲಾನಯನ ಪ್ರದೇಶದ ನೀರಾವರಿ ಕಾಮಗಾರಿ ಕೆಲಸಗಳಿಗೆ ಹೆಚ್ಚಿನ ಹಣಕಾಸನ್ನು ಬಿಡುಗಡೆ ಮಾಡಬೇಕು, ಆದ್ಯತೆ ಕೊಡಬೇಕೆಂದು ಪ್ರಕಟ ಮಾಡಿದ್ದಾರೆ. ಅದರ ಬಗ್ಗೆ ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಈ ದಿಸೆಯಲ್ಲಿ ಕೇಂದ್ರದವರ ಪಾತ್ರ ಏನೂ ಇಲ್ಲವೆಂದು ಅವರು ಅಂದುಕೊಂಡಿದ್ದಾರೆ. ಸರ್ವೋಚ್ಚ ನ್ಯಾಯಾಲಯಕ್ಕೆ ಬಿಟ್ಟಿದ್ದೇವೆಂದು ಹೇಳುತ್ತಾರೆ. ಸರ್ವೋಚ್ಚ ನ್ಯಾಯಾಲಯ ನಾವೆಲ್ಲರೂ ಗೌರವ ಇಟ್ಟುಕೊಂಡಿರತಕ್ಕ ನ್ಯಾಯಾಲಯ, ನಿಜ. ಅವರ ಆದೇಶಕ್ಕೆ ಎಲ್ಲರೂ ತಲೆಬಾಗಬೇಕು. ಆದರೆ ಆ ಒಂದು ಸಂದರ್ಭವನ್ನು ಸೃಷ್ಟಿ ಮಾಡುವುದಕ್ಕೆ ಅವಕಾಶ ಕೊಡದೆ ಕೇಂದ್ರ ಸರ್ಕಾರದವರು ಪೂರ್ವಭಾವಿಯಾಗಿ ತಮ್ಮ ಪಾತ್ರವನ್ನು ಅರಿತು ನಡೆದುಕೊಂಡಿದ್ದರೆ ಖಂಡಿತವಾಗಿ ಕೇಂದ್ರ ಸರ್ಕಾರಕ್ಕೆ ಹೆಚ್ಚಿನ ಜವಾಬ್ದಾರಿ ಇದೆ ಎಂದು ನಾವೆಲ್ಲ ಮೆಚ್ಚಿಗೆ ವ್ಯಕ್ತ ಮಾಡುತ್ತಿದ್ದೆವು. ಜಲ ವಿವಾದ ಕೇವಲ ಒಂದು ರಾಜ್ಯಕ್ಕೆ ಸೀಮಿತವಾಗಿಲ್ಲ, ಅನೇಕ ರಾಜ್ಯಗಳಿಗೆ ಸೇರಿದ್ದಾಗಿದೆ. ನ್ಯಾಷನಲ್ ಕೌನ್ಸಿಲ್ ಎಂದು ಏನು ಹೇಳಿದ್ದಾರೆ ಅದಕ್ಕೆ ಕಾರ್ಯತಃ ಒತ್ತುಕೊಟ್ಟು ಮಾಡಿ ಅದರ ನೇತೃತ್ವವನ್ನು ಕೇಂದ್ರ ಸರ್ಕಾರ ವಹಿಸಿದ್ದರೆ ಸ್ವಾಗತಾರ್ಹವಾಗುತ್ತಿತ್ತು. ಆದರೆ ಅದು ಆಗಿಲ್ಲ. ಸಾಮಾನ್ಯವಾಗಿ ನೋಡಿದಾಗ ಏಕಪಕ್ಷೀಯವಾಗಿ ಮತ್ತು ಕೇವಲ ರಾಜಕೀಯ

ಪಕ್ಷವನ್ನು ದೃಷ್ಟಿಯಲ್ಲಿಟ್ಟುಕೊಂಡು ಕೆಲಸವಾಗಿದೆಯೋ ಹೊರತು ಯಾವುದೇ ರಾಜ್ಯದ ರೈತರ ಹಿತದೃಷ್ಟಿಯಿಂದ ಇದು ಆಗಿಲ್ಲವೆಂದು ಕಾಣುತ್ತದೆ. ಆದುದರಿಂದ ನಾನು ಈ ಸದನದ ಮೂಲಕ ಹೇಳುವುದಾದರೂ ಇಷ್ಟೆ. ಇನ್ನೂ ತಡವಾಗಿಲ್ಲ. ಇದಕ್ಕೆ ಹೆಚ್ಚಿನ ಒತ್ತು ಕೊಡುವುದಾದರೆ, ಹೆಚ್ಚಿನ ಒತ್ತಡವನ್ನು ವಿರೋಧ ಪಕ್ಷದ ನಾಯಕರು ತರುವುದಾದರೆ ಎಲ್ಲರೂ ಕೇಂದ್ರ ಸರ್ಕಾರಕ್ಕೆ ಮತ್ತೊಮ್ಮೆ ಮನದಟ್ಟು ಮಾಡಿಕೊಟ್ಟು ಸಂಬಂಧಪಟ್ಟ ಸಚಿವರಲ್ಲಿ ಮತ್ತು ಪ್ರಧಾನ ಮಂತ್ರಿಗಳಲ್ಲಿ ಮಾತುಕತೆಗೆ ಅವಕಾಶ ಮಾಡಿಕೊಂಡರೆ ಈ ದಿಸೆಯಲ್ಲಿ ಇನ್ನೂ ಒಂದು ಅವಕಾಶ ಇರಬಹುದೆಂದು ನಾನು ಆಶಿಸುತ್ತೇನೆ. ಇನ್ನೂ ಹೆಚ್ಚಿನ ಟೆಕ್ನಿಕಲ್ ಮ್ಯಾಟರ್ಸ್‌ಗೆ ಸಂಬಂಧಪಟ್ಟ ಮಂತ್ರಿಗಳು ಇದ್ದಾರೆ. ಫ್ಯಾಕ್ಟ್ಸ್ ಅಂಡ್ ಫೈಂಡಿಂಗ್ಸ್ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಎಲ್ಲಾ ಹೇಳಿದ್ದಾರೆ. ಮಾನ್ಯ ವಿರೋಧ ಪಕ್ಷದ ನಾಯಕರಿಂದಲೂ ಸಲಹೆ ತೆಗೆದುಕೊಂಡಿದ್ದಾರೆ. ಆದ್ದರಿಂದ ಇದರ ಬಗ್ಗೆ ಇನ್ನು ಹೆಚ್ಚಿಗೆ ಹೇಳುವುದಕ್ಕೆ ಹೋಗದೆ ನನಗೆ ಇಷ್ಟು ಕಾಲ ಮಾತನಾಡುವುದಕ್ಕೆ ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎನ್. ಮಹಾದೇವ (ನಂಜನಗೂಡು).— ಮಾನ್ಯ ಉಪಾಧ್ಯಕ್ಷಿಣಿಯವರೆ, ಕಾವೇರಿ ಜಲಾನಯನ ಪ್ರದೇಶದ ವಿಚಾರವಾಗಿ ಸದನದಲ್ಲಿ ಸಾಕಷ್ಟು ಚರ್ಚೆಯಾಗಿದೆ. ಇದು ಕರ್ನಾಟಕದ ರೈತರ ಭವಿಷ್ಯದ ವಿಚಾರವಾಗಿದೆ. ಈ ಬಗ್ಗೆ ಪಕ್ಷಭೇದ ಮರೆತು ನಾವೆಲ್ಲರೂ ಸಹ ರೈತರ ಪ್ರಗತಿಗಾಗಿ ರೈತರ ಕಲ್ಯಾಣಕ್ಕಾಗಿ, ರೈತರ ಭವಿಷ್ಯದೃಷ್ಟಿಯಿಂದ ಏನು ಅನ್ಯಾಯವಾಗಿದೆ ಅದನ್ನು ಒಕ್ಕೊರಲಿನಿಂದ ಖಂಡಿಸಿ ಹೋರಾಟ ಮಾಡುವ ಪರಿಸ್ಥಿತಿ ಬಂದಿದೆ. ಈಗ ಏನು ಟ್ರಿಬ್ಯುನಲ್ ರಚನೆಯಾಗಿದೆ. ಅದು ರಚನೆಯಾಗಿದ್ದರೂ ಸಹ ಅದರಿಂದ ನಾವು ನಿರೀಕ್ಷಣೆ ಮಾಡಿದಂತಹ ನ್ಯಾಯ ನಮಗೆ ದೊರೆಯುತ್ತದೆಂಬ ಒಂದು ನಂಬಿಕೆ ನನಗೆ ಇಲ್ಲ. ಕಾರಣ ನಾವು ಸಾಕಾದಷ್ಟು ಸಂಯಮವನ್ನು ತೋರಿಸಿದ್ದೇವೆ. ತಮಿಳುನಾಡು ಸರ್ಕಾರದ ಜೊತೆಯಲ್ಲಿ ಕರ್ನಾಟಕ ಸರ್ಕಾರ ಸಹಕಾರ ಹಸ್ತವನ್ನು ಚಾಚಿ ಸಂಧಾನದ ಮೂಲಕ ಸಮಸ್ಯೆಯನ್ನು ಬಗೆಹರಿಸಿಕೊಳ್ಳಬೇಕೆಂದು ನಾವು ನಮ್ಮ ಸೌಜನ್ಯದ ಎಲ್ಲೆ ಮೀರಿ ವ್ಯವಹರಿಸಿದಾಗಲೂ ಕೂಡ ಅದಕ್ಕೆ ಅವರು ಗಮನ ಕೊಡದೆ ಹಿಡಿದ ಹಠವನ್ನು ಸಾಧನೆ ಮಾಡಿಕೊಂಡು ಅವರು ಏನು ಮಾಡಬೇಕೆಂದು ಉದ್ದೇಶ ಇಟ್ಟುಕೊಂಡಿದ್ದರೋ ಅದರಂತೆ ಕೋರ್ಟಿಗೆ ಹೋಗಿ ಟ್ರಿಬ್ಯುನಲ್ ಕಾನ್‌ಸ್ಟಿಟ್ಯೂಟ್ ಮಾಡಿ ಫಲ ಸಾಧಿಸುತ್ತೇವೆ. ಎಂದು ಹೊರಟಿದ್ದಾರೆ. ಈ ಸಂದರ್ಭದಲ್ಲಿ ನ್ಯಾಷನಲ್ ಫ್ರಂಟ್ ಗೌರ್ನಮೆಂಟನ್ನೂ ದೂಷಣೆ ಮಾಡಬೇಕಾಗುತ್ತದೆ. ಕರ್ನಾಟಕ ರಾಜ್ಯ ಕಾಂಗ್ರೆಸ್ ಸರ್ಕಾರದ ಆಡಳಿತದಲ್ಲಿದೆ. ಸನ್ಮಾನ್ಯ ಮುಖ್ಯಮಂತ್ರಿಗಳು ಈ ವಿಚಾರದಲ್ಲಿ ಶಕ್ತಿಮೀರಿ ಪ್ರಯತ್ನ ಮಾಡಿದ್ದಾರೆ. ಸಂಧಾನದ ಮೂಲಕ ಸಮಸ್ಯೆ ಬಗೆಹರಿಸಿಕೊಳ್ಳಬೇಕೆಂದು ಪ್ರಯತ್ನ ಮಾಡಿ ತಮಿಳುನಾಡು ಸರ್ಕಾರದ ಮನಸ್ಸನ್ನು, ಕೇಂದ್ರಸರ್ಕಾರದ ಮನಸ್ಸನ್ನು ಒಲಿಸಿಕೊಳ್ಳುವುದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಬಹಳ ಪ್ರಯತ್ನ ಮಾಡಿದ್ದಾರೆ. ಈ ಸರ್ಕಾರ ಅಧಿಕಾರಕ್ಕೆ ಬಂದು ಕೇವಲ ೬ ತಿಂಗಳಾಗಿದೆ. ೬ ತಿಂಗಳಿಂದ ಇದುವರೆಗೂ ನೀರಾವರಿಗೆ ಆದ್ಯತೆ ಕೊಡಬೇಕೆಂದು ಮೂಲಭೂತವಾದ ತತ್ವವನ್ನು ಅವರು ಇಟ್ಟುಕೊಂಡಿರುವುದರಿಂದ ಈ ವಿಚಾರದಲ್ಲಿ ಅನ್ಯಾಯವಾಗಬಾರದೆಂದು ಈ ಕಡೆ ಹೆಚ್ಚಿಗೆ ಗಮನ ಕೊಟ್ಟು ಸತತವಾಗಿ ಪ್ರಯತ್ನ ಮಾಡಿದ್ದಾರೆ. ಅದನ್ನು ನಾವು ಶ್ಲಾಘನೆ ಮಾಡಬೇಕಾಗಿದೆ. ಈಗಿನ ಲೋಕೋಪಯೋಗಿ ಮಂತ್ರಿಗಳೂ ಸಹ ಆ ವಿಚಾರದಲ್ಲಿ ಸಾಕಷ್ಟು ಮುತುವರ್ಜಿ ವಹಿಸಿದ್ದಾರೆ. ಕಳೆದ ಐದಾರು ವರ್ಷಗಳಲ್ಲಿ ಹಿಂದಿನ ಸರ್ಕಾರ ಈ ನೀರಾವರಿಯ ವಿಷಯದಲ್ಲಿ ಆಸಕ್ತಿ ವಹಿಸಿ ಕಾವೇರಿ ಜಲಾನಯನ ಪ್ರದೇಶ ಏನಿದೆ ಅದರಲ್ಲಿ ಸಾಕಷ್ಟು ಪ್ರಮಾಣದಲ್ಲಿ ಅಚ್ಚುಕಟ್ಟನ್ನು ಹೆಚ್ಚಿಗೆ ಮಾಡಿಕೊಂಡು ನೀರನ್ನು ಉಪಯೋಗಿಸಿಕೊಂಡಿದ್ದರೆ ಈ ಸಮಸ್ಯೆ ಹೆಚ್ಚಿಗೆ ಬರುತ್ತಾ ಇರಲಿಲ್ಲ ಎಂದು ನನ್ನ ಭಾವನೆ. ಹಿಂದಿನ ಸರ್ಕಾರದವರು ಅಚ್ಚುಕಟ್ಟನ್ನೇ ಉಪಯೋಗಿಸಿಕೊಂಡಿಲ್ಲ. ಸಮಸ್ಯೆಯನ್ನು ಹಿಂದಿನ ಸರ್ಕಾರ ಮುಂದಕ್ಕೆ ಹಾಕಿಕೊಂಡು ಬಂದಿದೆಯೇ ಹೊರತು ಈ ನೀರಾವರಿ ಯೋಜನೆಗಳಿಗೆ ಸಾಕಾದಷ್ಟು ಹಣವನ್ನು ಖರ್ಚು ಮಾಡಿ ಅಚ್ಚುಕಟ್ಟನ್ನು ಹೆಚ್ಚಿಗೆ ವಿಸ್ತರಣೆ ಮಾಡಿ ನೀರನ್ನು ಸರಿಯಾಗಿ ಉಪಯೋಗಿಸಿಕೊಂಡು ಬಂದಿದ್ದರೆ ಸಮಸ್ಯೆಯನ್ನು ಎದುರಿಸುವುದಕ್ಕೆ ಸಾಧ್ಯವಾಗುತ್ತಿತ್ತು. ಈಗ ಬೃಹದಾಕಾರವಾಗಿ ಈ ಸಮಸ್ಯೆ ಬೆಳೆದು ನಮ್ಮ ಭವಿಷ್ಯಕ್ಕೇ ಧಕ್ಕೆಯಾಗುವಂಥ ಪರಿಸ್ಥಿತಿ ಬಂದಿದೆ. ಈ ಸಂದರ್ಭದಲ್ಲಿ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಏನು ನಿಲುವು ತೆಗೆದುಕೊಂಡಿದ್ದಾರೆ ಅದಕ್ಕೆ ಪೂರ್ಣ ಬೆಂಬಲವಾಗಿ ನಿಂತುಕೊಳ್ಳಬೇಕು. ಮತ್ತು ಈ ವಿಚಾರದಲ್ಲಿ ಕೇಂದ್ರ ಸರ್ಕಾರ ನಮಗೆ ಅನ್ಯಾಯ ಮಾಡಿದೆ ಎಂದು ನೇರವಾಗಿ ನಾನು ಆಪಾದನೆ ಮಾಡುತ್ತೇನೆ. ಈ ಅನ್ಯಾಯವನ್ನು ಮುಂದುವರೆಸಿಕೊಂಡು ಹೋದರೆ ಇದಕ್ಕೆ ಎಲ್ಲೆಯೇ ಇಲ್ಲ. ಇಲ್ಲಿಯವರೆಗೆ ಸಂಯಮ, ಸಂಧಾನ, ಸೌಜನ್ಯ ಸಹಕಾರ ಎಂದು ಸಹಕಾರದ ಹಸ್ತವನ್ನು ಚಾಚಿದರೂ ಅದಕ್ಕೆ ಮನ್ನಣೆ ದೊರೆತಿಲ್ಲ. ಇವೊತ್ತು ಕ್ರಾಂತಿಯನ್ನೇ ನಾವು ಮಾಡಬೇಕಾಗುತ್ತದೆ. ರೈತರ ಬುಡಕ್ಕೆ ಧಕ್ಕೆಯಾಗುವ ಸಂದರ್ಭ ಬಂದಾಗ

ರೈತರ ಪರವಾಗಿ ಜನ ಕ್ರಾಂತಿಯನ್ನು ಮಾಡಿ ತಮ್ಮ ಹಕ್ಕನ್ನು ಉಳಿಸಿಕೊಳ್ಳಬೇಕಾಗಿದೆ. ನಮ್ಮ ಹಕ್ಕಿಗಾಗಿ ಹೋರಾಟ ಮಾಡಬೇಕಾಗಿದೆ. ನಮ್ಮ ಸರ್ಕಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ವೀರೇಂದ್ರ ಪಾಟೀಲರು ಈ ವಿಚಾರದಲ್ಲಿ ಏನು ನಿರ್ಣಯ ತೆಗೆದುಕೊಂಡಿದ್ದಾರೆ ಅದಕ್ಕೆ ನಾವೆಲ್ಲರೂ ಪೂರ್ಣ ಬೆಂಬಲವನ್ನು ನೀಡುತ್ತೇವೆ. ಸಂಪನ್ಮೂಲವನ್ನು ಹೆಚ್ಚಿಸಬೇಕಾದರೆ ನಾನ್‌ಪ್ಲಾನ್ ಎಕ್ಸ್‌ಪೆಂಡಿಚರ್ ಏನಿದೆ ಅದನ್ನು ಕಟ್ ಮಾಡಬೇಕಾಗಿದೆ. ಹೀಗೆ ಮಾಡಿ ಜಲಸಂಪನ್ಮೂಲವನ್ನು ಹೆಚ್ಚಿಸಬೇಕಾಗಿದೆ. ಇದಕ್ಕಾಗಿ ಹೆಚ್ಚು ಹಣವನ್ನು ಕೊಡಬೇಕಾಗಿದೆ. ಮತ್ತು ಈಗ ಹಾಲಿ ಅಪೂರ್ಣವಾಗಿರುವ ಯೋಜನೆಗಳನ್ನು ಪೂರ್ಣಪ್ರಮಾಣದಲ್ಲಿ ಮಾಡಬೇಕಾದರೆ ಸಾಕಷ್ಟು ಸಂಪನ್ಮೂಲವನ್ನು ಕ್ರೋಢೀಕರಿಸಿ ಹಣವನ್ನು ಮಂಜೂರು ಮಾಡಿಕೊಳ್ಳಬೇಕು. ಹೆಚ್ಚಿನ ಹಣವನ್ನು ಮಂಜೂರು ಮಾಡಿ ಕಬಿನಿ ಎರಡನೇ ಹಂತದ ಯೋಜನೆಯನ್ನು ಮೊದಲೇ ಮುಗಿಸಿದ್ದರೆ ರೈತರಿಗೆ ಸಾಕಷ್ಟು ಪ್ರಮಾಣದಲ್ಲಿ ಅನುಕೂಲವಾಗುತ್ತಿತ್ತು. ಇದರಿಂದ ೧ ಲಕ್ಷದ ೩೦ ಸಾವಿರ ಹೆಕ್ಟೇರ್ ನೀರಾವರಿ ಆಗುತ್ತಾ ಇತ್ತು. ಕಳೆದ ೫--೬ ವರ್ಷಗಳಲ್ಲಿ ಈ ಯೋಜನೆ ಬಗ್ಗೆ ಗಮನಹರಿಸದೇ ಸರ್ಕಾರ ಕೇವಲಾ ನಾನ್‌ಪ್ಲಾನ್ ಎಕ್ಸ್‌ಪೆಂಡೀಚರ್ ಹೆಚ್ಚು ಮಾಡಿತು. ಹೀಗೆ ಹೇಳುವಾಗ ೨೦ ವರ್ಷ ಕಾಲ ನೀವು ಏನು ಮಾಡಿದಿರಿ ಎಂದು ಕೇಳಬಹುದು. ನಮ್ಮ ಕಾಲದಲ್ಲಿ, ಸಾಕಷ್ಟು ಕೆಲಸಕಾರ್ಯಗಳು ಆಗಿವೆ. ಹಾಗೂ ಆಗ ಅರ್ಧಂಬರ್ಧ ಆದ ಯೋಜನೆಗಳಿಗೆ ಹಣ ಒದಗಿಸಿದ್ದರೆ ಇಷ್ಟು ಹೊತ್ತಿಗೆ ಅವೆಲ್ಲಾ ಪೂರ್ತಿ ಆಗುತ್ತಿದ್ದವು. ಇವತ್ತು ಕಬಿನಿ ಎರಡನೇ ಹಂತ ಪೂರ್ಣಗೊಳ್ಳಬೇಕಾದರೆ ಅದಕ್ಕೆ ಹೆಚ್ಚು ಹಣವನ್ನು ಒದಗಿಸಬೇಕು. ಈ ವಿಚಾರವಲ್ಲಿ ಸರ್ಕಾರ ಯಾವ ಯಾವ ರೀತಿಯ ಅಂದಾಜುಗಳನ್ನು ಹಾಕಿಕೊಳ್ಳಬೇಕೋ ಅವನ್ನು ಹಾಕಿಕೊಳ್ಳಲಿ ಎಂದು ಹೇಳುತ್ತೇನೆ. ಕೇಂದ್ರದಲ್ಲಿನ ಸರ್ಕಾರ ತಮಿಳುನಾಡಿನ ಸರ್ಕಾರದ ಒಂದು ಅಂಗವಾಗಿದೆ. ಕಾವೇರಿ ಜಲಾನಯನದ ವಿವಾದದ ಬಗ್ಗೆ ನಾವು ಏನು ಮಾಡಿದರೂ ನಡೆಯುತ್ತದೆನ್ನುವ ಮನಸ್ಸನ್ನು ತಮಿಳುನಾಡಿನ ಸರ್ಕಾರ ಹೊಂದಿದೆ. ಇದಕ್ಕೆ ಕೇಂದ್ರ ಇವತ್ತು ಬೆಂಬಲ ಕೊಟ್ಟಿದೆ. ಕೇಂದ್ರದಲ್ಲಿ ಯಾವುದೇ ಸರ್ಕಾರ ಇದ್ದರೂ ಈ ರೀತಿ ನಡೆದುಕೊಳ್ಳುತ್ತಿರಲಿಲ್ಲ, ಆದರೆ ಈಗಿನ ಸರ್ಕಾರ ನಡೆದುಕೊಂಡಿರುವ ರೀತಿ ಸರಿಯಿಲ್ಲ. ಇವತ್ತು ಕೇಂದ್ರ ಸರ್ಕಾರ ನಮಗೆ ಅನ್ಯಾಯ ಮಾಡಿದೆ. ಇದನ್ನು ನಾವು ಸಾರ್ವಜನಿಕವಾಗಿ ಖಂಡಿಸಬೇಕಾಗಿದೆ. ಹೋರಾಟವನ್ನು ಸಹಾ ನಾವು ಮಾಡಬೇಕಾಗಿದೆ ಇದಕ್ಕಾಗಿ ನಾವು ನಮ್ಮ ಮುಖ್ಯಮಂತ್ರಿಗಳ ಕೈ ಬಲಪಡಿಸಬೇಕಾಗಿದೆ. ಈ ಅನ್ಯಾಯವನ್ನು ಖಂಡಿಸಿ ಮುಂದೆ ಸರ್ಕಾರ ಏನು ನಿರ್ಣಯ ತೆಗೆದುಕೊಳ್ಳುತ್ತದೋ ಅದಕ್ಕೆ ನಾವು ಪೂರ್ಣ ಬೆಂಬಲವನ್ನು ಕೊಡುತ್ತೇವೆ. ನೀರಾವರಿ ಯೋಜನೆಗಳ ಬಗ್ಗೆ ನಾವು ಸಂಪನ್ಮೂಲಗಳನ್ನು ಕ್ರೋಢೀಕರಿಸಿಕೊಳ್ಳಬೇಕಾಗಿದೆ. ನಾವು ಹೆಚ್ಚು ನೀರಾವರಿಗೆ ಆದ್ಯತೆ ಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ತಮಗೆ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ).— ಸನ್ಮಾನ್ಯ ಅಧ್ಯಕ್ಷಿಣಿಯವರೇ, ಇವತ್ತಿನ ದಿವಸ ಮಾನ್ಯ ಮುಖ್ಯಮಂತ್ರಿಯವರು ಕಾವೇರಿ ನೀರಿನ ಹಂಚಿಕೆ ವಿಷಯದಲ್ಲಿ ಒಂದು ನಿರ್ಣಯವನ್ನು ಮಂಡಿಸಿದ್ದಾರೆ. ಈ ನಿರ್ಣಯದ ಬಗ್ಗೆ ಮಾತನಾಡುವ ಸಂದರ್ಭದಲ್ಲಿ ಸುಪ್ರೀಂ ಕೋರ್ಟ್‌ನಲ್ಲಿ ಈ ವಿಷಯದ ಬಗ್ಗೆ ವಾದ ವಿವಾದಗಳು ನಡೆದ ಸಂದರ್ಭದಲ್ಲಿ ನಮ್ಮ ಕರ್ನಾಟಕ ಸರ್ಕಾರ ವಿಫಲಗೊಂಡಿದೆ ಎಂದು ಹೇಳಿದರೆ ತಪ್ಪಾಗಲಾರದು. ಮೊದಲನೆಯದಾಗಿ ನಮ್ಮ ಸರ್ಕಾರ ಒಳ್ಳೆಯ ಲಾಯರ್ ಇಟ್ಟುಕೊಂಡು ಸುಪ್ರೀಮ್ ಕೋರ್ಟ್‌ನಲ್ಲಿ ಕೇಸ್ ನಡೆಸಲಿಲ್ಲ. ಮತ್ತೆ ಅಲ್ಲಿ ಚರ್ಚೆಯ ಕಾಲದಲ್ಲಿ ನಮ್ಮ ಕಳಕಳಿಯನ್ನು ತಿಳಿಸಿ ಅಡ್ಜರ್ನ್‌ಮೆಂಟ್ ತೆಗೆದುಕೊಳ್ಳಬೇಕಾಗಿತ್ತು. ಅದನ್ನೂ ಕೂಡಾ ತೆಗೆದುಕೊಂಡಿಲ್ಲ. ಸೆಂಟ್ರಲ್ ಮಿನಿಸ್ಟರ್ ಜೊತೆ ಮೀಟಿಂಗ್‌ನಲ್ಲೂ ಕೂಡಾ ಸಕ್ರಿಯವಾಗಿ ರಾಜ್ಯ ಸರ್ಕಾರದ ಅಹವಾಲನ್ನು ಮಂಡಿಸಲಿಲ್ಲ. ಇದನ್ನೆಲ್ಲಾ ನಮ್ಮ ಲಾಯರ್ ಅವರೇ ಒಪ್ಪಿಕೊಂಡಿದ್ದಾರೆ. ಮತ್ತೊಮ್ಮೆ ಅಡ್ಜರ್ನ್‌ಮೆಂಟ್ ತೆಗೆದುಕೊಳ್ಳಬೇಕಾಗಿತ್ತು ಎಂದು ಹೇಳಿದ್ದಾರೆ. ಇವತ್ತಿನದಿವಸ ಸುಪ್ರೀಮ್ ಕೋರ್ಟ್‌ನಲ್ಲಿ ಎಲ್ಲಾ ರೀತಿಯ ಮಾಹಿತಿಯನ್ನು ನಮ್ಮ ಸರ್ಕಾರದವರೂ ಕೂಡಾ ಕೊಟ್ಟಿರುವುದಿಲ್ಲ. ಆದುದರಿಂದಲೇ ನ್ಯಾಯಮಂಡಲಿ ರಚಿಸುವ ಬಗ್ಗೆ ಸುಪ್ರೀಮ್ ಕೋರ್ಟ್ ಒಲವು ತೋರಿಸಿತು ಎಂದು ಹೇಳಬಹುದು. ಸುಪ್ರೀಮ್ ಕೋರ್ಟ್ ಒಂದು ತಿಂಗಳ ಕಾಲಾವಕಾಶವನ್ನು ಕೊಟ್ಟಿದ್ದು ಕೊನೆಯ ಗಳಿಗೆಯಲ್ಲಿ ಕೇಂದ್ರ ಸರ್ಕಾರ ೩ ಜನ ಜಡ್ಜಸ್ ಒಳಗೊಂಡ ಟ್ರಿಬ್ಯೂನಲ್ ರಚಿಸಿತು. ೩ ಜನ ನ್ಯಾಯಾಧೀಶರ ಟ್ರಿಬ್ಯೂನಲ್ ನೇಮಿಸಿದಾಗ ಕರ್ನಾಟಕ ಸರ್ಕಾರ ಮತ್ತೆ ಕೇಂದ್ರ ಸರ್ಕಾರದ ಮೇಲೆ ಹೆಚ್ಚಿನ ಒತ್ತಾಯ ತಂದು ಚರ್ಚೆಯ ಮುಖಾಂತರ ಈ ಕೆಲಸ ಮಾಡಬಹುದಾಗಿತ್ತು. ಅದನ್ನೂ ಕೂಡಾ ನಮ್ಮ ಸರ್ಕಾರ ಮಾಡಿಲ್ಲ. ಟ್ರಿಬ್ಯೂನಲ್ ನೇಮಿಸುವುದಕ್ಕಿಂತ ಮೊದಲು ಅಥವಾ ಆ ನಂತರ ಕೂಡ ನಮ್ಮ ಮುಖ್ಯಮಂತ್ರಿಗಳು ಯಾವುದೇ ನಿರ್ಣಯ ಮಾಡಿಲ್ಲ ಎಂದು ನಾನು

ಹೇಳುತ್ತೇನೆ. ಈ ಸದನದ ಸಮಿತಿ ಮಾಡಿ ಅದರ ಮುಖಾಂತರ ಚರ್ಚೆಗಳು ನಡೆದು ಒಂದು ಒಳ್ಳೆಯ ನಿರ್ಣಯಕ್ಕೆ ಬರಬೇಕೆಂದು ನಮ್ಮ ವಿರೋಧ ಪಕ್ಷದ ನಾಯಕರು ಸಲಹೆ ಮಾಡಿದ್ದಾರೆ. ಅವರು ಹೇಳಿದ್ದುದು ಬಹಳ ಸೂಕ್ತ ಇದೆ. ಈ ಬಗ್ಗೆ ಈ ಸದನದ ಸಮಿತಿ ಮಾಡಬೇಕು. ಸಮಿತಿಯಲ್ಲಿ ಎಲ್ಲಾ ಪಕ್ಷದ ಶಾಸಕರು ಹಾಗೂ ಅಧಿಕಾರಿಗಳನ್ನು ಕರೆಯಿಸಿ ಚರ್ಚಿಸಿ ಒಂದು ನಿರ್ಣಯವನ್ನು ತೆಗೆದು ಕೊಳ್ಳಬೇಕೆಂದು ನಾನು ತಮ್ಮ ಮುಖಾಂತರ ಹೇಳುತ್ತೇನೆ.

ಅದೂ ಅಲ್ಲದೆ ಈ ವಿಷಯ ಬಹಳ ಸೂಕ್ಷ್ಮ. ಮೊನ್ನೆ ಸುಪ್ರೀಂಕೋರ್ಟ್ ಜಡ್ಜ್‌ಮೆಂಟ್ ಆದಮೇಲೆ ನಮ್ಮ ಸರ್ಕಾರದವರು ಕೂಡಲೇ ಶಾಸನಸಭೆಯನ್ನು ಕರೆದು ಯಾವ ಪ್ರಕಾರವಾಗಿ ಕರುಣಾನಿಧಿಯವರು ರೆಸಲ್ಯೂಷನ್ ಪಾಸ್ ಮಾಡಿದರು ಆ ಕೆಲಸವನ್ನು ಟ್ರಿಬ್ಯೂನಲ್ ನೇಮಿಸುವುದಕ್ಕೆ ಮೊದಲು ಮಾಡಬೇಕಾಗಿತ್ತು. ಕರ್ನಾಟಕ ಸರ್ಕಾರ ಕಾವೇರಿ ನೀರಿನ ವಿಷಯದಲ್ಲಿ ಹಾದಿ ತಪ್ಪಿದೆ. ಇನ್ನು ಮುಂದಾದರೂ ಹಾದಿ ತಪ್ಪಬಾರದು. ನಮ್ಮ ರಾಜ್ಯದ ರೈತರಿಗೆ ಅನ್ಯಾಯವಾಗದ ಹಾಗೆ ಸರ್ಕಾರ ನೋಡಿಕೊಳ್ಳಬೇಕಾಗುತ್ತದೆಂದು ಹೇಳಿ ಇವತ್ತು ನಾನು ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಉಪಾಧ್ಯಕ್ಷಿಣಿಯವರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಡಾ. ಎನ್ ಬಿ. ನಂಜಪ್ಪ (ಶ್ರವಣಬೆಳಗೊಳ).—ಮಾನ್ಯ ಉಪಾಧ್ಯಕ್ಷಿಣೀಯವರೆ, ಈ ದಿವಸ ನಾವು ಕಾವೇರಿ ನೀರಿನ ಎರಡೂ ರಾಜ್ಯಗಳ ಒಂದು ವಿವಾದ ಅದು ಸಂದಿಗ್ಧ ಪರಿಸ್ಥಿತಿಗೆ ಹೋಗಿರತಕ್ಕ ವಿಚಾರವನ್ನು ನಾವೆಲ್ಲರೂ ಚಿಂತನೆ ಮಾಡತಕ್ಕ ಸಂದರ್ಭ ಈಗ ಬಂದಿದೆ. ಕಾವೇರಿ ಜಲಾನಯನ ಪ್ರದೇಶದಲ್ಲಿ ನದಿಗಳು, ನಮ್ಮ ರಾಜ್ಯದಲ್ಲಿ ಭೂಮಿ ಹುಟ್ಟಿದಾಗಿನಿಂದ ಹರಿಯುತ್ತಿವೆ. ಕಾವೇರಿ ನದಿ ಹರಿಯತಕ್ಕ ಜಾಗದಲ್ಲಿ ಮೆಟ್ಟೂರು ಡ್ಯಾಮ್‌ನ್ನು ತಮಿಳುನಾಡಿನವರು ಕಟ್ಟಿಕೊಂಡರು. ನಾವು ಕೃಷ್ಣರಾಜಸಾಗರ ಜಲಾಶಯವನ್ನು ಹಳೇ ಮೈಸೂರು ಭಾಗದಲ್ಲಿ ನಾವು ಕಟ್ಟಿಕೊಂಡಿದ್ದೇವೆ ನಾವು ಕಟ್ಟಿಕೊಂಡ ಮೇಲೆ ೧೯೨೪ರಲ್ಲಿ ಆದಂತಹ ಅಗ್ರಿಮೆಂಟ್ ಏನಿತ್ತು ಆ ಪ್ರಕಾರ ಮೆಟ್ಟೂರು ಡ್ಯಾಮಿಗೆ ನೀರು ಹೋಗುತ್ತಿತ್ತು. ಇಷ್ಟು ನೀರಿಗೆ ಇಷ್ಟು ಎಕರೆ ಅಚ್ಚುಕಟ್ಟು ಎಂದು ಹೇಳಿ ಡ್ಯಾಮ್‌ನ್ನು ಕಟ್ಟಿದ್ದಾರೆ. ದುರದೃಷ್ಟವಶಾತ್ ನಮ್ಮ ಕರ್ನಾಟಕರಾಜ್ಯದಲ್ಲಿ ಸ್ವಾತಂತ್ರ್ಯ ಬಂದಮೇಲೂ ಸಹ ಜಲಾನಯನ ಪ್ರದೇಶಗಳಲ್ಲಿ ಅಣೆಕಟ್ಟುಗಳನ್ನು ಕಟ್ಟದೇ ಹೋದುದರಿಂದ ಮತ್ತು ವಿಳಂಬ ಮಾಡಿರುವುದರಿಂದ ನೀರು ಯಥೇಚ್ಛವಾಗಿ ಒಂದು ಡ್ಯಾಮ್ ಬಿಟ್ಟು, ಮೆಟ್ಟೂರು ಡ್ಯಾಮಿಗೆ ನೀರು ಸಿಗುತ್ತಿತ್ತು. ಆ ಸಂದರ್ಭದಲ್ಲಿ ಅವರು ಏನು ಅಗ್ರಿಮೆಂಟ್ ಮಾಡಿಕೊಂಡಿದ್ದರು, ಇಷ್ಟು ಎಕರೆ ಅಚ್ಚುಕಟ್ಟು ಇರಬೇಕೆಂದು ಏನು ಅಗ್ರಿಮೆಂಟ್ ಇತ್ತು ಅದರ ಎರಡು–ಮೂರರಷ್ಟು ಅಚ್ಚುಕಟ್ಟನ್ನು ಅವರು ವಿಸ್ತರಣೆ ಮಾಡುತ್ತಾ ಹೋದರು. ಅದು ನಮ್ಮ ತಪ್ಪಲ್ಲ. ನಮ್ಮ ದೇಶದಲ್ಲಿ ನಮ್ಮ ರಾಜ್ಯದಲ್ಲಿ ನದಿಗಳು ಹುಟ್ಟುತ್ತವೆ. ನಮ್ಮ ರಾಜ್ಯ ಕೂಡ ಇಂಡಿಯಾ ದೇಶದ ಒಂದು ಅವಿಭಾಜ್ಯ ಅಂಗ. ನಮ್ಮ ದೇಶದಲ್ಲಿ ಹರಿಯತಕ್ಕ ನದಿಗಳ ನೀರನ್ನು ಉಪಯೋಗಿಸತಕ್ಕ ಹಕ್ಕು ಅವರಿಗೆ ಎಷ್ಟಿದೆ ಅಷ್ಟೆ ಹಕ್ಕು ನಮಗೂ ಇದೆ. ಇವತ್ತು ಇದನ್ನು ಅವರು ಅರಿತುಕೊಳ್ಳಬೇಕು. ಈಗ ಮುಖ್ಯಮಂತ್ರಿಗಳಾಗಿರತಕ್ಕ ಮಾನ್ಯ ವೀರೇಂದ್ರಪಾಟೀಲರವರ ಮುಂದಾಳತ್ವದಲ್ಲಿ ಅನೇಕ ಅಣೆಕಟ್ಟುಗಳನ್ನು ಕೇಂದ್ರ ಸರ್ಕಾರ ತನ್ನ ಅನುಮೋದನೆಯನ್ನು ಕೊಡದಿದ್ದರೂ ಕೂಡ ಅನೇಕ ಜಲಾಶಯಗಳನ್ನು ಕಟ್ಟುವುದಕ್ಕೆ ನಾವು ಪ್ರಯತ್ನ ಮಾಡಿದ್ದೇವೆ. ಈಗಾಗಲೇ ಹೇಮಾವತಿ ಅಣೆಕಟ್ಟು ಕಂಪ್ಲೀಟ್ ಆಗಿದೆ. ಕಬಿನಿ ಅಣೆಕಟ್ಟು ಕಂಪ್ಲೀಟ್ ಆಗಿದೆ. ಅದರ ಜೊತೆಗೆ ಯಗಚಿ ಅಣೆಕಟ್ಟಿನ ಕೆಲಸ ನಡೆಯುತ್ತಿದೆ. ನಮ್ಮ ರಾಜ್ಯದಲ್ಲಿ ಭೂಮಿ ಇದೆ ನಮ್ಮ ಕರ್ನಾಟಕ ರಾಜ್ಯದಲ್ಲಿ ಬೀಳತಕ್ಕ ಮಳೆಯ ನೀರನ್ನು ಉಪಯೋಗಿಸತಕ್ಕ ಅಧಿಕಾರ ಅವರಿಗೆ ಎಷ್ಟು ಇದೆ ನಮಗೂ ಅಷ್ಟೇ ಇದೆ. ತಮಿಳುನಾಡಿನವರಾಗಲೀ ಸೆಂಟ್ರಲ್‌ಗೌರ್ನಮೆಂಟ್‌ನವರಾಗಲೀ ಟ್ರಿಬ್ಯೂನಲ್‌ನವರಾಗಲೀ, ಸುಪ್ರೀಂಕೋರ್ಟ್‌ನವರಾಗಲೀ ಇದನ್ನು ಅರ್ಥ ಮಾಡಿಕೊಂಡು ಇದು ಎಲ್ಲರಿಗೂ ಸೇರತಕ್ಕದ್ದು ಎಂದು ತಿಳಿದುಕೊಳ್ಳಬೇಕು ಎಂದು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ನಾವು ಈ ವಿಚಾರವನ್ನು ಸೈಂಟಿಫಿಕ್ ಆಗಿ ಅನಾಲಿಸಿಸ್ ಮಾಡಿದ್ದೇವೆಯೇ? ೧೯೨೪ರಲ್ಲಿ ಮಲೆನಾಡಿನಲ್ಲಿ ಎಷ್ಟು ಇಂಚು ಮಳೆಯಾಗುತ್ತಿತ್ತು? ೧೯೬೦ರಲ್ಲಿ ಮಳೆ ಬೀಳತಕ್ಕ ಪ್ರಮಾಣ ಹೇಗೆ ಕಡಿಮೆ ಇದೆ ಎನ್ನುವುದು ಎಲ್ಲರಿಗೂ ಗೊತ್ತಿರತಕ್ಕದ್ದು. ಮಳೆಯಾಗಲೀ ಮಳೆಯಾಗದಿರಲಿ ನಮಗೆ ಕೊಡತಕ್ಕ ನೀರನ್ನು ಕೊಡಿ, ನಾವು ಡ್ಯಾಮ್ ಕಟ್ಟಿದ್ದೇವೆ ತಳಗಡೆ ಇದ್ದೇವೆಂದು ವಾದ ಮಾಡುವುದರಲ್ಲಿ ಯಾವ ಟ್ರಿಬ್ಯೂನಲ್ ಆಗಲಿ, ಸುಪ್ರೀಂಕೋರ್ಟ್ ಆಗಲಿ ಇದನ್ನು ಒಪ್ಪಿಕೊಳ್ಳುವುದಿಲ್ಲ. ಆದಕ್ಕೆ ಮಿಗಿಲಾಗಿ ನಮ್ಮ ಜನತೆ ಒಪ್ಪಿಕೊಳ್ಳುವುದಿಲ್ಲ ಇದನ್ನು ಕೇಂದ್ರಸರ್ಕಾರ ಮತ್ತು ತಮಿಳುನಾಡು ಸರ್ಕಾರಕ್ಕೆ ಮನದಟ್ಟು ಮಾಡಿ ಕೊಡುವುದು ನಮ್ಮ ಕರ್ತವ್ಯ.

ನಮ್ಮ ರೈತರನ್ನು ಅಥವಾ ನಮ್ಮ ಜನಾಂಗವನ್ನು ನಾವು ಬಲಿಕೊಟ್ಟು ನಮ್ಮ ರೈತರನ್ನು ಹಾಳು ಮಾಡಿ, ಅವರ ಜೀವನವನ್ನು ಹಾಳುಮಾಡಿ ನಮ್ಮ ದೇಶದಲ್ಲಿ ಬೀಳತಕ್ಕ ನೀರನ್ನು ಅವರು ನಮಗೇ

ಕೊಡಬೇಕು. ನೀವು ಉಪಯೋಗಿಸಿಕೊಳ್ಳಕೂಡದು ಎಂದು ಹೇಳತಕ್ಕ ಅಧಿಕಾರ ಯಾರಿಗೂ ಇಲ್ಲ ಎನ್ನುವುದನ್ನು ಅವರೆಲ್ಲರೂ ಗಮನದಲ್ಲಿಟ್ಟುಕೊಳ್ಳಬೇಕು. ಏಕೆಂದರೆ ಅವರಿಗೆ ಎಷ್ಟು ರೈಟ್ಸ್ ಇದೆಯೋ ಅಷ್ಟೇ ರೈಟ್ಸ್ ನಮಗೆಲ್ಲರಿಗೂ ಕೂಡ ಇದೆ ಇದನ್ನು ಪ್ರತಿಯೊಬ್ಬರೂ ಕೂಡ ತಿಳಿದು ಕೊಳ್ಳಬೇಕು. ತಮಿಳುನಾಡಿನವರು ಯಾವ ಅಗ್ರಿಮೆಂಟ್ ಆಗಲಿ, ನ್ಯಾಯನೀತಿಗಳಾಗಲೀ, ಎಲ್ಲಾ ರೀತಿಯಿಂದಲೂ ಇವತ್ತಿನವರೆಗೆ ಅವರು ಅನುಸರಿಸಿಲ್ಲ. ಹೆಚ್ಚು ಅಚ್ಚುಕಟ್ಟು ಮಾಡಿಕೊಂಡಿರಬಹುದು. ತಮಿಳುನಾಡಿನಲ್ಲಿ ಈಗ ಮಾನ್‌ಸೂನ್ ಬಂತು, ಡಿಪ್ರೆಶನ್ ಬಂತು, ಬೇಕಾದಷ್ಟು ಮಳೆ ಸುರಿಯಿತು. ಆ ನೀರನ್ನು ಅವರು ನಮಗೆ ಕೊಡುತ್ತಾರೆಯೇ ? ಇವತ್ತು ಸರಾಸರಿ ೧೬೦ ಕ್ಯೂಸೆಕ್ಸ್ ನೀರು ಮೆಟ್ಟೂರು ಡ್ಯಾಮ್‌ನ್ನು ತಲುಪುತ್ತಿದೆ. ನಮಗೆ ಈಗ ಆಗಿರತಕ್ಕಂಥ ಅಚ್ಚುಕಟ್ಟಿನಲ್ಲಿ ಉಪಯೋಗಿಸಿ ಕೊಂಡು, ನಮ್ಮ ಕಾಲುವೆಗಳು ಇನ್ನೂ ಕಂಪ್ಲೀಟ್ ಆಗದೇ ಇದ್ದರೂ ಕೂಡ, ಒಂದು ಆವರೇಜ್‌ನಲ್ಲಿ ಅವರು ಕೇಳುತ್ತಿರುವುದು ಸುಮಾರು ೨೫೦–೨೦೦ ಕ್ಯೂಸೆಕ್ಸ್ ನೀರು. ಇದನ್ನು ಅವರು ನಿರೀಕ್ಷಣೆ ಮಾಡುತ್ತಾರೆ. ನಮ್ಮ ಮಲೆನಾಡಿನಲ್ಲಿ ಸಾಕಾದಷ್ಟು ಮಳೆಬಿದ್ದು ನಮ್ಮ ಡ್ಯಾಮ್‌ಗಳು ತುಂಬಿ, ನಮ್ಮ ರೈತರ ಕಾಲುವೆಗಳಲ್ಲಿ ನೀರು ಹರಿದು ಉಳಿದುದನ್ನು ಅವರಿಗೆ ಕೊಡಬೇಕೇ ವಿನಹ ನೀವು ಎಲ್ಲವನ್ನೂ ಹಾಳುಬಿಟ್ಟುಕೊಂಡು, ಬರಡು ಭೂಮಿಯನ್ನು ಇಟ್ಟುಕೊಂಡು ನಮಗೆ ನೀರನ್ನು ಕೊಡ ಬೇಕು ಎಂದು ಹೇಳುವುದರಲ್ಲಿ ಅರ್ಥ ಇಲ್ಲ. ಅದು ಕೊಡುವುದಕ್ಕೆ ಆಗುವುದಿಲ್ಲ ಎಂಬ ಮಾತನ್ನು ನಾವೆಲ್ಲರೂ ಹೇಳಬೇಕಾಗುತ್ತದೆ. ಇದು ಯಾವುದೇ ಟ್ರಿಬ್ಯುನಲ್ ಆಗಬಹುದು ಅಥವಾ ಸುಪ್ರೀಂ ಕೋರ್ಟ್ ಆಗಬಹುದು, ಅವರಿಗೆ ಎಷ್ಟು ರೈಟ್ಸ್ ಇದೆಯೋ, ನಮಗೆ ಕೂಡ ಅಷ್ಟೇ ರೈಟ್ಸ್ ಇದೆ. ಆದ್ದರಿಂದ ನಿರ್ದಿಷ್ಟವಾಗಿ ರೇನ್‌ಫಾಲ್ ಎಷ್ಟು, ಕ್ಯಾಚ್‌ಮೆಂಟ್ ಏರಿಯಾದಲ್ಲಿ ಒಂದು ಡ್ಯಾಮ್ ಕಟ್ಟಿದರೆ ನೀರು ಎಷ್ಟು ಬರುತ್ತದೆ, ಎಕ್ಸಸ್ ಆಫ್ ವಾಟರ್ ಕಾವೇರಿ ನದಿಯಲ್ಲಿ ಎಷ್ಟು ಹರಿಯುತ್ತದೆ. ಇದರಲ್ಲಿ ಇವರಿಗೆ ೧೫೦ ಕ್ಯೂಸೆಕ್ಸ್ ಈಗಾಗಲೇ ಹೋಗುತ್ತಿದೆ. ಅದರಲ್ಲಿ ಇನ್ನು ೧೦-೨೦ ಕ್ಯೂಸೆಕ್ಸ್ ಆಫ್ ವಾಟರ್ ಕಡಿಮೆಯಾಗಬಹುದು. ಕಡಿಮೆ ಆದಂಥ ನೀರನ್ನು ಇಲ್ಲಿಯ ರೈನ್‌ಫಾಲ್‌ಗೆ ಅನುಗುಣ ವಾಗಿ ಅವರು ತೆಗೆದುಕೊಳ್ಳಬೇಕೇ ವಿನಹ, ಮಳೆಯಾಗಲಿ, ಆಗದೇ ಹೋಗಲಿ, ಕಟ್ಟೆ ತುಂಬಲಿ ತುಂಬದೇ ಹೋಗಲಿ, ನಮಗೆ ಕೊಡತಕ್ಕಂಥ ನೀರನ್ನು ಕೊಟ್ಟುಬಿಡಬೇಕು ಎಂದು ಹೇಳುವುದಕ್ಕೆ ಅವರಿಗೆ ಅಧಿಕಾರ ಇಲ್ಲ. ಈಗ ನನ್ನ ಗದ್ದೆ ಕೆಳಗಡೆ ಇದ್ದು, ಮುಖ್ಯಮಂತ್ರಿಗಳ ಗದ್ದೆ ಮೇಲ್ಗಡೆ ಇದ್ದರೆ ಅವರ ಗದ್ದೆಗೆ ಮೊದಲು ನೀರು ಬಿಟ್ಟುಕೊಂಡು ಆಮೇಲೆ ನನ್ನ ಗದ್ದೆಗೆ ನೀರು ಬಿಡುತ್ತಾರೆ. ಇಲ್ಲ, ನನ್ನ ಗದ್ದೆ ಮೇಲಗಡೆ ಇದ್ದು, ಮುಖ್ಯಮಂತ್ರಿಗಳ ಗದ್ದೆ ಕೆಳಗಡೆ ಇದ್ದರೆ ಅಥವಾ ಪ್ರೆಸಿಡೆಂಟ್ ಆಫ್ ಇಂಡಿಯಾ ಅವರ ಗದ್ದೆ ಕೆಳಗಡೆ ಇದ್ದರೆ ಅವರು ಯಾವರೀತಿ ಬಿಟ್ಟುಕೊಡುತ್ತಾರೆ ? ಮೇಲಗಡೆ ಇದ್ದವರು ಮೊದಲು ಉಪಯೋಗಿಸಿಕೊಂಡು ನಂತರ ಕೆಳಗಡೆ ಬಿಡುತ್ತಾರೆ. ಇದು ನ್ಯಾಯಸಮ್ಮತ ವಾದಂಥಾದ್ದು. ಕಾಲಾನುಕಾಲದಿಂದ, ಸಾವಿರಾರು ವರ್ಷಗಳಿಂದ ನಡೆದುಕೊಂಡು ಬಂದಿರತಕ್ಕಂಥಾದ್ದು. ಆದ್ದರಿಂದ ನಮ್ಮ ಕರ್ನಾಟಕ ರಾಜ್ಯದಲ್ಲಿ ನಾವು ಈಗ ಕಟ್ಟಿರತಕ್ಕಂಥ ಡ್ಯಾಮ್‌ಗಳು ತುಂಬಿ, ನಮ್ಮ ಕಾಲುವೆಗಳಲ್ಲಿ ನೀರು ಹರಿದು ನಮ್ಮ ಸೀಪೇಜ್ ವಾಟರ್ ನಮ್ಮಲ್ಲಿರತಕ್ಕಂಥ ನದಿಗಳಲ್ಲಿ ಕೆಳಗಡೆ ಹರಿದು ಹೋದರೆ ಅವರು ಅದನ್ನು ಉಪಯೋಗಿಸಿಕೊಳ್ಳಬೇಕು. ತಮಗೆ ಗೊತ್ತಿರುವ ಹಾಗೆ ಮದ್ರಾಸ್ ರಾಜ್ಯದಲ್ಲಿ ಒಂದು ವರ್ಷದಲ್ಲಿ ಮೂರು ಸಾರಿ ಸೈಕ್ಲೋನ್ ಬರುತ್ತದೆ. ಇದರಿಂದ ಅಲ್ಲಿ ಹೆಚ್ಚು ಮಳೆ ಬೀಳುತ್ತದೆ ಈ ನೀರನ್ನು ಅವರು ಉಪಯೋಗಿಸಿಕೊಳ್ಳುವುದಿಲ್ಲವೇನು ? ಈ ಮಳೆ ನೀರನ್ನು ಅಥವಾ ಸಬ್‌ಸಾಯಿಲ್ ವಾಟರ್ ಕಾವೇರಿ ಬೇಸಿನ್‌ನಲ್ಲಿ ಏನಿದೆ ಅದನ್ನು ಉಪಯೋಗಿಸಿಕೊಳ್ಳಲಿ. ಬೋರ್‌ವೆಲ್‌ಗಳನ್ನು ಕೊರೆಸಲಿ. ಲಿಫ್ಟ್ ಇರಿಗೇಶನ್ ಮಾಡಿಕೊಂಡು ಅದನ್ನು ಉಪಯೋಗಿಸಿ ಕೊಳ್ಳಲಿ. ಅವರು ಇದನ್ನು ಅರಿತುಕೊಳ್ಳಬೇಕು. ಜಾಸ್ತಿ ಅಚ್ಚುಕಟ್ಟು ಇದೆಯೆಂದರೆ ನಾವು ನೀರು ಕೊಡುವುದಕ್ಕೆ ಹೇಗೆ ಆಗುತ್ತದೆ ? ಇದನ್ನು ಚಿಂತನೆ ಮಾಡತಕ್ಕದ್ದು ನಮ್ಮೆಲ್ಲರ ಕರ್ತವ್ಯ, ಟ್ರಿಬ್ಯುನಲ್ ಇರಬಹುದು, ರೂಲ್ಸ್ ರೆಗ್ಯುಲೇಶನ್ಸ್ ಇರಬಹುದು, ಕೊಡಬೇಕಾದ ಧರ್ಮ ಇರಬಹುದು. ಧರ್ಮ ಯಾವಾಗ ಎಂದರೆ ನಾವು ಉಪಯೋಗಿಸಿಕೊಂಡು, ನಮ್ಮ ರೈತರು ಬೆಳೆದ ನಂತರ ಅವರು ಪಡೆಯಬೇಕೇ ವಿನಹ, ಎಲ್ಲಾ ನಮಗೆ ಬೇಕು ಎಂದರೆ ಅದು ಯಾವ ಧರ್ಮವೂ ಅಲ್ಲ, ನೀತಿಯೂ ಅಲ್ಲ, ನ್ಯಾಯವೂ ಅಲ್ಲ. ಯಾರೇ ಆದರೂ ಕೂಡ ಇದನ್ನು ಒಪ್ಪುವುದಿಲ್ಲ, ನಾವು ಇದನ್ನು ಪ್ರತಿಭಟಿಸಬೇಕಾಗುತ್ತದೆ ಎಷ್ಟೇ ಆಂದೋಳನ ಆದರೂ ಕೂಡ ನಾವು ಇದನ್ನು ಪ್ರತಿಭಟಿಸಿ ನಮ್ಮ ರೈತರಿಗೆ ನೀರನ್ನು ಉಪಯೋಗಿಸಿಕೊಂಡು ಉಳಿದುದನು ಅವರು ಉಪಯೋಗಿಸಿಕೊಳ್ಳಬೇಕು ಎಂದು ಹೇಳಬೇಕಾಗುತ್ತದೆ ಇದೇ ಸಂದರ್ಭದಲ್ಲಿ ನಮಗೆಲ್ಲರಿಗೂ ಕೂಡ ಗೊತ್ತಿದೆ ಕೆಲವರು ಸುಪ್ರೀಂಕೋರ್ಟಿ ನವರ ಮನವೊಲಿಸಬೇಕಾಗಿತ್ತು, ಪ್ರಧಾನಮಂತ್ರಿಗಳ ಮನವೊಲಿಸಬೇಕಾಗಿತ್ತು ಎಂದು ಹೇಳಿದರು. ಇದರ ಅರ್ಥ ಏನು ? ಯಾರಾದರೂ ಸುಪ್ರೀಂ ಕೋರ್ಟಿನ ಮನವೊಲಿಸುತ್ತಾರೆಯೇ ? ಸುಪ್ರೀಂ ಕೋರ್ಟಿಗೆ ಯಾರೋ ಅರ್ಜಿ ಹಾಕಿದರೆ ನಮ್ಮವರು ನಾಳೆ ಒಂದು ಅರ್ಜಿ ಹಾಕುತ್ತಾರೆ. ಇಷ್ಟು

ಎಕರೆ ಗದ್ದೆ ಮಾಡಿಕೊಂಡಿದ್ದೇವೆ. ಇಂಥ ಕಡೆ ಕಾಲುವೆ ಹರಿದಿದೆ, ನಮಗೆ ನೀರು ಕೊಡಿಸಿಬಿಡಿ ಎಂದು ಅರ್ಜಿ ಹಾಕುತ್ತಾರೆ. ಸುಪ್ರೀಂ ಕೋರ್ಟ್ ಡಿನೈಡ್ ಮಾಡಲಿ. ಇದು ಅವರಿಗೆ ಗೊತ್ತಿರುವ ಹೊತ್ತಿಗೆ ಸುಪ್ರೀಂ ಕೋರ್ಟ್ ಏನು ಹೇಳಿದೆ ? ಟ್ರಿಬ್ಯುನಲ್‌ನಲ್ಲಿ ತೀರ್ಮಾನ ಮಾಡಿಕೊಳ್ಳಿ ಎಂದು ಹೇಳಿದ್ದಾರೆ. ಟ್ರಿಬ್ಯುನಲ್‌ನಲ್ಲೇ ತೀರ್ಮಾನ ಮಾಡಿದರೂ ಕೂಡ ನಮ್ಮ ರೈತರು, ಈಗ ಇರತಕ್ಕಂಥ ನಾಲ್ಕು ಕೋಟಿ ಜನ ಏಕೆ ಒಪ್ಪಿಕೊಳ್ಳುತ್ತೇವೆ ?

೪-೧೫ ಪಿ.ಎಂ.

ನಾವೂ ಕೂಡ ಒಪ್ಪಿಕೊಳ್ಳುವುದಿಲ್ಲ. ಆದ್ದರಿಂದ, ಇದನ್ನು ನಾವು ದೀರ್ಘವಾಗಿ ಯೋಚನೆ ಮಾಡಬೇಕಾಗುತ್ತದೆ. ಇದರ ಮೇಲೆ ರಾಜಕೀಯ ಬೆರೆಸುವುದರಲ್ಲಿ ಅರ್ಥ ಇಲ್ಲ. ನಾವು ವಿಳಂಬ ಮಾಡಿದ್ದೇವೆ, ಅವರು ವಿಳಂಬ ಮಾಡಿದ್ದಾರೆ ಎಂದಲ್ಲ. ನಾರ್ತ್ ಇಂಡಿಯಾದಲ್ಲಿ ದಾಮೋದರ್ ಪ್ರಾಜೆಕ್ಟ್, ಹಿರಾಕುಡ್ ಮತ್ತು ಭಕ್ರಾನಂಗಲ್ ಪ್ರಾಜೆಕ್ಟ್‌ಗಳನ್ನು ಕಟ್ಟಿದ್ದಾರೆ. ನಮಗೆ, ಈ ಕಾವೇರಿ ನದಿ ಒಂದೇ ಜೀವ ನದಿಯಾಗಿರುತ್ತದೆ. ಸೆಂಟ್ರಲ್‌ನವರು ಇದಕ್ಕೂ ಸಾಕಷ್ಟು ಹಣ ಕೊಟ್ಟಿದ್ದರೆ, ನಾವೂ ಕೂಡ ಡ್ಯಾಮ್ ಕಟ್ಟಿಕೊಳ್ಳುತ್ತಿದ್ದೆವು, ಏತಕ್ಕೋಸ್ಕರ ಕೊಟ್ಟಿಲ್ಲ ? ಕೇಂದ್ರ ಸರ್ಕಾರ ಯಾವುದೇ ಇದ್ದರೂ ಕೂಡ. ಅವರ ತಪ್ಪಿಗೆ ನಮ್ಮ ಕರ್ನಾಟಕದ ಜನತೆ ಬಲಿ ಹೋಗುವುದನ್ನು ಒಪ್ಪುವುದಕ್ಕೆ ಸಿದ್ಧವಿಲ್ಲ. ಕಾವೇರಿ ಬೇಸಿನ್ ಪ್ರದೇಶದಲ್ಲಿ ಹಾಗೂ ಶಿಂಶಾ ನದಿ ಪ್ರದೇಶದಲ್ಲಿ ಇರತಕ್ಕ ನಾವೆಲ್ಲರೂ ಇದರ ಬಗ್ಗೆ ಪ್ರತಿಭಟಿಸುತ್ತೇವೆ. ನಮಗೆ ಆಗಿ, ಉಳಿದ ನೀರನ್ನು ನಾವು ಉಪಯೋಗಿಸದೇ ಇದ್ದರೆ, ಅಂತಹ ನೀರನ್ನು ಅಥವಾ ಮಳೆಗಾಲದಲ್ಲಿ ಹೆಚ್ಚಿಗೆ ನೀರು ಬಂದು ಉಳಿದಿದ್ದರೆ ಆ ನೀರನ್ನು ಅವರು ಉಪಯೋಗಿಸಿಕೊಳ್ಳಬೇಕೇ ಹೊರತು ನಮ್ಮ ನೀರನ್ನು ಉಪಯೋಗಿಸಿಕೊಳ್ಳಬಾರದು. ಮೆಟ್ಟೂರು ಡ್ಯಾಮ್‌ನಲ್ಲಿ, ನನಗೆ ಗೊತ್ತಿರುವ ಹಾಗೆ, ನೀರನ್ನು ತುಂಬಿಕೊಳ್ಳುವುದರಲ್ಲಿ ಏನಾದರೂ ಅರ್ಥ ಇದೆಯೇ? ಒಂದು ಸಾರಿ ಡ್ಯಾಮ್ ತುಂಬಿದರೆ, ಆ ನೀರನ್ನು ಉಪಯೋಗಿಸಿಕೊಳ್ಳುವುದು ಅವರ ಕರ್ತವ್ಯ. ನಮ್ಮ ಊರಿನ ಕೆರೆ ತುಂಬಿದರೆ, ನಾವು ಆ ನೀರನ್ನು ಗದ್ದೆಗೆ ಉಪಯೋಗಿಸಬಹುದು. ಇಲ್ಲದೇಹೋದರೆ, ಸರ್ಕಾರವನ್ನು ನಾವು ನೀರು ತಂದುಕೊಡಿ ಎಂದು ಕೇಳುವುದಕ್ಕಾಗುತ್ತದೆಯೇ ? ಮೆಟ್ಟೂರು ಡ್ಯಾಮ್ ತುಂಬಿಕೊಳ್ಳುವುದಕ್ಕೆ ನೀರನ್ನು ಕೊಡೋಣ, ದೇವೇಂದ್ರ ಕೊಡುತ್ತಾನೆ. ಆದರೆ ಈ ನೀರು ಮುಗಿದುಹೋದರೆ, ಮತ್ತೆ ಕೊಡಿ ಎಂದು ಹೇಳಿದರೆ, ಇದನ್ನು ನಾವು ಒಪ್ಪುವುದಕ್ಕಾಗುವುದಿಲ್ಲ. ನಾವು ಇದರ ಬಗ್ಗೆ ಪ್ರತಿಭಟಿಸಬೇಕಾಗುತ್ತದೆ, ಚಳುವಳಿ ಪ್ರಾರಂಭ ಮಾಡಬೇಕಾಗುತ್ತದೆ. ಆದ್ದರಿಂದ ಈ ಸದನದಲ್ಲಿ ರಾಜಕೀಯ ಮಾತನಾಡುವ ಬದಲು ನಮಗೆ ಬರತಕ್ಕ ಅವಿಭಾಗ ಏನಿದೆಯೋ, ದೇವೇಂದ್ರ ಏನು ಕೊಟ್ಟಿದ್ದಾನೋ ಅದನ್ನು ಸದುಪಯೋಗ ಮಾಡಿಕೊಂಡು, ಉಳಿದು ಹೋಗತಕ್ಕ ನೀರು ಹೋಗಲಿ ಎನ್ನುವ ತೀರ್ಮಾನಕ್ಕೆ ಬರಬೇಕೇ ವಿನಹ ಬೇರೆ ರೀತಿ ಮಾತನಾಡಿ ಪ್ರಯೋಜನವಿಲ್ಲ ಎಂದು ಹೇಳುತ್ತೇನೆ. ಒಬ್ಬ ಸದಸ್ಯರು ಹೇಳಿದರು, ಈ ಸಂದರ್ಭದಲ್ಲಿ ಮಾನ್ಯ ಪುಟ್ಟಸ್ವಾಮಿಗೌಡರು ೧೫೦ ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದ್ದಾರೆ ಎಂದು ಈ ರೀತಿ ಏಕೆ ಹೇಳಿದರು ಎಂದರೆ, ಉಳಿದಿರತಕ್ಕಂಥ ಕಾಲುವೆಗಳು ಈ ಡಿಸ್‌ಪ್ಯೂಟ್ ಮುಗಿಯುವುದರೊಳಗಾಗಿ ಕಂಪ್ಲೀಟ್ ಆದರೆ ನಮ್ಮ ಅಚ್ಚುಕಟ್ಟು ಪ್ರದೇಶಗಳಿಗೆ ಸ್ವಲ್ಪ ಹೆಚ್ಚಿನ ಪ್ರಯೋಜನವಾಗುತ್ತದೆ ಎಂದು ಕಾವೇರಿ ಬೇಸಿನ್‌ಗೆ ಈ ಹಣವನ್ನು ಕೊಟ್ಟಿದ್ದಾರೆ. ಆದ್ದರಿಂದ, ಇದರಲ್ಲಿ ನಾವು ಯಾವುದೇ ರೀತಿಯ ರಾಜಕೀಯ ಮಾತನಾಡದೇ ರಾಜಕೀಯ ಬೆರೆಸದೇ ನಾವೆಲ್ಲರೂ ಒಮ್ಮತದಿಂದ ನಾಲ್ಕು ಕೋಟಿ ಜನಗಳು ಏನಿದ್ದೇವೆ, ಈ ಜನಗಳ ಆಗುಹೋಗುಗಳನ್ನು ಗಮನದಲ್ಲಿಟ್ಟುಕೊಂಡು, ಒಳ್ಳೆಯದನ್ನು ಮಾಡುವುದಕ್ಕೋಸ್ಕರ ಪ್ರಯತ್ನ ಮಾಡಬೇಕು. ಕಾವೇರಿ ಮತ್ತು ಹೇಮಾವತಿ ಜಲಾಶಯಗಳ ಪ್ರತಿಯೊಂದು ಹನಿ ನೀರನ್ನೂ ಉಪಯೋಗಿಸಿಕೊಳ್ಳಲು ಸತತ ಪ್ರಯತ್ನ ಮಾಡಬೇಕೆಂದು ಹೇಳಿ, ಈ ಸಂದರ್ಭದಲ್ಲಿ ಮಾತನಾಡಲು ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ಹಾಗೂ ಎಲ್ಲಾ ಸದಸ್ಯರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ).—ಸನ್ಮಾನ್ಯ ಅಧ್ಯಕ್ಷಿಣಿಯರೇ, ಸದನದಲ್ಲಿ ನಮ್ಮ ರಾಜ್ಯದ ಮುಖ್ಯಮಂತ್ರಿಗಳು ಮಂಡಿಸಿರುವ ಕಾವೇರಿ ನದಿ ನೀರಿನ ಹಂಚಿಕೆಯ ಬಗ್ಗೆ ಕೆಲವು ವಿಚಾರಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ಈಗಾಗಲೇ ಈ ಮನೆಯ ಅನೇಕ ಹಿರಿಯ ಸದಸ್ಯರು, ಮಾಜಿ ಮಂತ್ರಿಗಳು, ಹಲವಾರು ಜನ ಸದಸ್ಯರು ಸಾಕಷ್ಟು ಪ್ರಾಮುಖ್ಯವಾದ ಈ ಕಾವೇರಿ ನದಿ ನೀರಿನ ಹಂಚಿಕೆಯ ವಿವಾದದ ಬಗ್ಗೆ, ಸಾಕಷ್ಟು ವಿವರವಾದ ವಿಚಾರಗಳನ್ನು ಸದನದ ಮುಂದೆ ಇಡುವುದಕ್ಕೆ ಪ್ರಯತ್ನಪಟ್ಟಿದ್ದಾರೆ. ನಾನೂ ಕೂಡ ಕೆಲವು ವಿಚಾರಗಳನ್ನು ಈ ಸಂದರ್ಭದಲ್ಲಿ, ಈ ಕಾವೇರಿ ನದಿ ನೀರಿನ ಹಂಚಿಕೆಯ ಬಗ್ಗೆ ಹೇಳುವುದಕ್ಕೆ ಬಯಸುತ್ತೇನೆ. ಇದು ನಮ್ಮ ರಾಜ್ಯದ

ಬಹಳ ಮಹತ್ವಪೂರ್ಣವಾದ ಒಂದು ನೀರಾವರಿ ಯೋಜನೆ ಆಗಿದ್ದು, ಸುಮಾರು ವರ್ಷಗಳಿಂದಲೂ ಕಾವೇರಿ ನದಿ ನೀರಿನ ಹಂಚಿಕೆ ತೀರ್ಮಾನವಾಗಿಲ್ಲ. ಹಿಂದೆ ಇದ್ದ ಸರ್ಕಾರದವರು, ಮುಖ್ಯಮಂತ್ರಿಗಳೂ ಸಾಕಷ್ಟು ಪ್ರಯತ್ನಪಟ್ಟರೂ ಕೂಡ ಇದರ ಬಗ್ಗೆ ಒಂದು ನಿರ್ಣಯಕ್ಕೆ ಬರುವುದಕ್ಕೆ ಆಗಲಿಲ್ಲ.

ಈ ಒಂದು ಸಂದರ್ಭದಲ್ಲಿ ಹಿಂದೆ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಗಳಾಗಿದ್ದಾಗ ನಾನು ನೀರಾವರಿ ಸಚಿವನಾಗಿ ಕೆಲಸ ಮಾಡುವ ಸಂದರ್ಭದಲ್ಲಿ ಎರಡು ಸಲ ನಮ್ಮ ಸರಕಾರದವರು ಈ ಕಾವೇರಿ ನದಿ ನೀರಿನ ಹಂಚಿಕೆಯ ಬಗ್ಗೆ ಕುರಿತು ನಿರ್ಣಯ ತೆಗೆದುಕೊಳ್ಳಬೇಕೆಂದು ವಿಚಾರ ಮಾಡಿಕೊಂಡು ಬೆಂಗಳೂರಿನಲ್ಲಿ ಒಂದು ಸಭೆ ಸೇರಿಸಿದ್ದರು. ಅದಕ್ಕೆ ತಮಿಳುನಾಡು ಹಾಗೂ ಕೇರಳ ರಾಜ್ಯದ ಮುಖ್ಯಮಂತ್ರಿಗಳು ಬಂದಿದ್ದರು, ಕರ್ನಾಟಕದ ಮುಖ್ಯಮಂತ್ರಿಗಳು ಹಾಗೂ ಹಲವಾರು ಪ್ರತಿನಿಧಿಗಳು ಭಾಗವಹಿಸಿದ್ದನ್ನು ನಾನು ಕಣ್ಣಾರೆ ಕಂಡಿದ್ದೇನೆ. ಅಲ್ಲೂ ಕೂಡಾ ಯಾವ ನಿರ್ಣಯವನ್ನೂ ತೆಗೆದುಕೊಳ್ಳುವುದಕ್ಕೆ ಆಗಲಿಲ್ಲ, ಇದು ಆದಮೇಲೆ ದಕ್ಷಿಣ ರಾಜ್ಯಗಳ ನೀರಾವರಿ ಮಂತ್ರಿಗಳ ಸಭೆಯನ್ನು ಮದ್ರಾಸ್‌ನಲ್ಲಿ ನಡೆಯಿತು. ಎಲ್ಲಾ ದಕ್ಷಿಣ ರಾಜ್ಯಗಳ ನೀರಾವರಿ ಮಂತ್ರಿಗಳು ಆ ಸಭೆಯಲ್ಲಿ ಭಾಗವಹಿಸಿದ್ದರು. ಅಲ್ಲಿ ಈ ನೀರಾವರಿಗೆ ಸಂಬಂಧಪಟ್ಟ ವಿಷಯಗಳ ಸುದೀರ್ಘವಾದ ಚರ್ಚೆ ಆಯಿತು. ಕಾವೇರಿ ವಿಷಯದ ಬಗ್ಗೆ ಸಾಕಷ್ಟು ಚರ್ಚೆ ಮಾಡಿದರೂ ಕೂಡಾ ಈ ಸಮಸ್ಯೆ ಇತ್ಯರ್ಥ ಆಗುವುದಕ್ಕೆ ಸಾಧ್ಯವಾಗಲಿಲ್ಲ. ನಾವು ಇಲ್ಲಿ ಒಬ್ಬರ ಮೇಲೊಬ್ಬರು ದೋಷಾರೋಪಣೆ ಮಾಡಿಕೊಂಡು ಹೋಗುವುದು ಸರಿಯಲ್ಲ. ಇದು ನಮ್ಮ ರಾಜ್ಯಕ್ಕೆ ಸಂಬಂಧಪಟ್ಟ ಮಹತ್ವಪೂರ್ಣವಾದ ವಿಷಯ. ಈ ವಿಷಯದ ಘನತೆ ಗಾಂಭೀರ್ಯಗಳನ್ನು ಅರ್ಥಮಾಡಿಕೊಂಡು ನಮ್ಮ ರಾಜ್ಯಕ್ಕೆ ಬರಬೇಕಾದ ನೀರಿನ ಪಾಲನ್ನು ಯಾವರೀತಿ ನಾವು ತೆಗೆದುಕೊಳ್ಳಬೇಕು ಅದರ ಸಲುವಾಗಿ ನಾವು ಯಾವರೀತಿ ಪ್ರಯತ್ನಗಳನ್ನು ಮಾಡಬೇಕು ಎಂಬುದು ಅಗತ್ಯವಾಗಿದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇವತ್ತು ನನ್ನ ಮನಸ್ಸಿನಲ್ಲಿ ಒಂದು ಭಾವನೆ ಇದೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ಬಹಳ ಮೇಧಾವಿಗಳಾದ ಎಂಜಿನಿಯರುಗಳು ಇದ್ದಾರೆ. ಮಹಾರಾಷ್ಟ್ರ ಹಾಗೂ ತಮಿಳುನಾಡಿಗೆ ಹೋದಂಥ ಕಾಲದಲ್ಲಿ ನಮ್ಮ ಭಾಗದ ಎಂಜಿನಿಯರುಗಳು ಅಲ್ಲಿ ಹೆಚ್ಚಾಗಿ ಕಾಣುತ್ತಾರೆ. ಸರ್. ಎಂ. ವಿಶ್ವೇಶ್ವರಯ್ಯನವರಂತಹವರು ನಮ್ಮ ರಾಜ್ಯದಲ್ಲಿ ಹುಟ್ಟಿದ್ದನ್ನು ನಾವು ಜ್ಞಾಪಿಸಿಕೊಳ್ಳಬಹುದು. ನಮ್ಮ ರಾಜ್ಯದಲ್ಲಿ ಸಾಕಷ್ಟು ಮೇಧಾವಿಗಳು ಹಾಗೂ ತಾಂತ್ರಿಕ ಜ್ಞಾನ ಇರುವಂತಹ ಎಂಜಿನಿಯರುಗಳು ಇದ್ದು ಅವರ ಶಕ್ತಿಯನ್ನು ನಾವು ಉಪಯೋಗಮಾಡಿಕೊಂಡು ಹೆಚ್ಚು ಪ್ರದೇಶಗಳಿಗೆ ನೀರಾವರಿ ಅನುಕೂಲ ಮಾಡಿಕೊಡಬೇಕಾದಂತಹ ಪ್ರಯತ್ನವನ್ನು ನಾವೆಲ್ಲರೂ ಕೂಡಿಕೊಂಡು ಮಾಡಬೇಕಾದ ಅಗತ್ಯ ಇದೆ. ಎರಡು ವಿಚಾರಗಳನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ನಮ್ಮ ರಾಜ್ಯದಲ್ಲಿರತಕ್ಕಂಥ ಪ್ರಮುಖ ನೀರಾವರಿಯೋಜನೆಗಳಿಗೆ ಹೆಚ್ಚಿನ ಹಣಕಾಸಿನ ಆದ್ಯತೆಯನ್ನು ಕೊಡಬೇಕಾದುದು ನಮ್ಮ ಸರಕಾರದ ಕರ್ತವ್ಯ. ನಾವು ಎಲ್ಲಿ ತಪ್ಪುತ್ತಿದ್ದೇವೆ ಎಂದರೆ, ಅದು ನಮ್ಮ ಸರಕಾರ ಇರಬಹುದು, ಬೇರೆ ಸರಕಾರ ಇರಬಹುದು, ಯಾವುದೇ ಸರಕಾರ ಇದ್ದರೂ ಸಹ ಮಹಾರಾಷ್ಟ್ರದ ಮಾದರಿಯಲ್ಲಿ ಒಂದು ಕಾರ್ಯಕ್ರಮ ತರಬೇಕು. ಮಹಾರಾಷ್ಟ್ರದಲ್ಲಿ ನೀರಾವರಿ ಯೋಜನೆಗಳ ಬಗ್ಗೆ ಒಂದು ಟೈಮ್ ಬೌಂಡ್ ಪ್ರೋಗ್ರಾಂ ಫಿಕ್ಸ್ ಮಾಡಿ, ನೀರಾವರಿಗೆ ಎಷ್ಟು ಬೇಕೋ ಅಷ್ಟು ಬಜೆಟ್‌ನ್ನು ಇಟ್ಟು ಹಣಕಾಸಿನ ಮಂಜೂರಾತಿ ಕೊಟ್ಟು ಅಗತ್ಯವಾದ ಹಣವನ್ನು ಬಿಡುಗಡೆ ಮಾಡುತ್ತಾರೆ. ಕರ್ನಾಟಕ ರಾಜ್ಯದ ಪರಿಸ್ಥಿತಿಯನ್ನು ಅವಲೋಕನ ಮಾಡಿದಾಗ, ಉದಾಹರಣೆಗೆ ಕಾರಂಜಾ ನೀರಾವರಿ ಯೋಜನೆ ಬಗ್ಗೆ ಹೇಳುವುದಾದರೆ, ಆ ಯೋಜನೆಗೆ ಪ್ರತಿ ವರ್ಷ ಬಜೆಟ್‌ನಲ್ಲಿ ೧೫-೨೦ ಕೋಟಿ ರೂಪಾಯಿ ಬೇಕಾದಂಥ ಸಂದರ್ಭದಲ್ಲಿ ಕೇವಲ ಒಂದೆರಡು ಕೋಟಿ ರೂಪಾಯಿಗಳನ್ನು ಕೊಟ್ಟರೆ, ನೀರಾವರಿ ಯೋಜನೆ ಆಗುವುದು ಹೇಗೆ ಎಂಬುದನ್ನು ನಾವೂ ನೀವೂ ಕುರಿತು ವಿಚಾರ ಮಾಡಬೇಕಾಗಿದೆ. ನಮ್ಮ ರಾಜ್ಯದಲ್ಲಿ ಸಾಕಷ್ಟು ನೀರಾವರಿ ಪ್ರದೇಶಗಳು ಇದ್ದು ಅದಕ್ಕೆ ಎಷ್ಟು ಹಣಕಾಸಿನ ಅಗತ್ಯ ಇದೆ ಎಂಬ ಬಗ್ಗೆ ನಾವೂ ಸಾಕಷ್ಟು ವಿಚಾರ ವಿನಿಮಯ ಮಾಡಿಕೊಂಡು, ಪ್ರತಿ ವರ್ಷವೂ ಎಷ್ಟು ಬೇಕೋ ಅಷ್ಟು ಹಣವನ್ನು ಟೈಮ್ ಬೌಂಡ್ ಪ್ರೋಗ್ರಾಂ ಫಿಕ್ಸ್ ಮಾಡಿ ಹೆಚ್ಚಿನ ಹಣಕಾಸಿನ ನೆರವನ್ನು ಒದಗಿಸುವುದು ಅಗತ್ಯ ಇದೆ. ಮಾನ್ಯ ಲೋಕೋಪಯೋಗಿ ಮಂತ್ರಿಗಳಲ್ಲಿ ನಾನು ವಿನಂತಿ ಮಾಡಿಕೊಳ್ಳುವುದೆಂದರೆ, ಇನ್ನು ಮುಂದಾದರೂ ಟೈಮ್ ಬೌಂಡ್ ಪ್ರೋಗ್ರಾಂ ಫಿಕ್ಸ್ ಮಾಡಿಕೊಂಡು ಅತಿ ಶೀಘ್ರದಲ್ಲಿ ನೀರಾವರಿ ಯೋಜನೆಗಳನ್ನು ಮುಗಿಸಬೇಕೆಂದು ನಾನು ಹೇಳುತ್ತೇನೆ. ಎರಡನೆಯದಾಗಿ ಬಹಳ ಮಹತ್ವಪೂರ್ಣವಾದ ವಿಚಾರವನ್ನು ಈ ಸದನದಲ್ಲಿ ಮಾತನಾಡುತ್ತಿದ್ದೇವೆ. ಕಾವೇರಿ ನದಿ ನೀರಿನ ವಿಚಾರದಲ್ಲಿ ಸುಪ್ರೀಂ ಕೋರ್ಟಿನಿಂದ ಆದೇಶ ಬಂದಿದ್ದು ಆ ಆದೇಶದ ಪ್ರಕಾರ ಟ್ರಿಬ್ಯೂನಲ್ ರಚನೆ ಮಾಡಲಾಗಿದೆ. ಈ ಟ್ರಿಬ್ಯೂನಲ್‌ನಲ್ಲಿ ನಿಯಮಗಳನ್ನು ಮಾಡುವಂತಹ ವಿಚಾರದಲ್ಲಿ ನಮ್ಮ ರಾಜ್ಯಕ್ಕೆ ಅನ್ಯಾಯವಾಗುತ್ತದೆ ಎಂಬ ಶಂಕೆಯಿಂದ ನಾವೆಲ್ಲಾ ಇಲ್ಲಿ ಕುರಿತು ಚರ್ಚೆ ಮಾಡುತ್ತಿದ್ದೇವೆ.

ಈ ಸಂದರ್ಭದಲ್ಲಿ ನಾವು ಪಕ್ಷಾತೀತವಾಗಿ ಒಂದು ನಿರ್ಣಯವನ್ನು ತೆಗೆದುಕೊಳ್ಳಬೇಕಾಗುತ್ತದೆ. ಪಕ್ಷಕ್ಕೂ ಇದಕ್ಕೂ ಯಾವುದೇ ರೀತಿಯ ಸಂಬಂಧ ಇಲ್ಲದೆ ಇರುವಂತಹ ರೀತಿಯಲ್ಲಿ ನಿರ್ಣಯ ತೆಗೆದುಕೊಳ್ಳಬೇಕಾಗುತ್ತದೆ. ನಮ್ಮ ರಾಜ್ಯಕ್ಕೆ ಯಾವ ರೀತಿಯಲ್ಲೂ ಅನ್ಯಾಯವಾಗದಂತೆ, ನಮ್ಮ ರಾಜ್ಯಕ್ಕೆ ರಾಜ್ಯದ ಜನತೆಯ ಹಿತಕ್ಕೆ ಧಕ್ಕೆ ಬರದಂತೆ ನಾವು ನೀವು ಕುಳಿತುಕೊಂಡು ಉತ್ತಮವಾದಂತಹ ಒಂದು ನಿರ್ಣಯವನ್ನು ಮಾಡಿದರೆ ಅನುಕೂಲವಾಗಬಹುದು ಎನ್ನುವ ಆಸೆಯನ್ನು ನಾನು ಈ ಸಂದರ್ಭದಲ್ಲಿ ವ್ಯಕ್ತಪಡಿಸುತ್ತೇನೆ. ಟ್ರಿಬ್ಯುನಲ್ ವಿಚಾರದಲ್ಲಿ ಹೇಳುವುದಾದರೆ ನಮ್ಮ ರಾಜ್ಯಕ್ಕೆ ಅದರಿಂದ ಅನ್ಯಾಯವಾಗಬಹುದು ಎನ್ನುವ ಸಂಶಯವನ್ನು ನಾನು ವ್ಯಕ್ತಪಡಿಸುತ್ತೇನೆ. ಈ ಒಂದು ಜಲವಿವಾದವನ್ನು ಇತ್ಯರ್ಥ ಮಾಡಲು ಎಷ್ಟು ಪ್ರಯತ್ನ ಪಟ್ಟರೂ ಅದು ಆಗಲಿಲ್ಲ. ಈ ಬಗ್ಗೆ ಎರಡು ಮೂರು ಸಲ ಪ್ರಯತ್ನ ಮಾಡಿದರೂ ಆಗಲಿಲ್ಲ. ಅದು ನಿಮ್ಮ ಸರ್ಕಾರ ಇರಬಹುದು, ಅಥವಾ ನಮ್ಮ ಸರ್ಕಾರ ಇರಬಹುದು, ಆದರೂ ಇವತ್ತಿನವರೆಗೂ ಕೂಡ ಒಂದು ಇತ್ಯರ್ಥಕ್ಕೆ ಬರಲಿಲ್ಲ. ಈ ಸಂದರ್ಭದಲ್ಲಿ ಒಂದು ನಿರ್ಣಯವನ್ನು ನಾವು ಮಾಡಲು ಹೊರಟ್ಟಿದ್ದೇವೆ, ನೀರಿನ ಹಂಚಿಕೆಗೆ ಸಂಬಂಧಪಟ್ಟಂತೆ ಎಲ್ಲಾ ಪ್ರಮುಖರು ಕೂಡಿಕೊಂಡು ಸದನದ ಸಮಿತಿ ರಚನೆ ಮಾಡಿ ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಿ ಅವರ ಮೇಲೆ ಯಾವುದೇ ದೃಷ್ಟಿಕೋನದಿಂದ ಆಗಲಿ ಒತ್ತಾಯ ತಂದು ನಮ್ಮ ರಾಜ್ಯಕ್ಕೆ ಎಷ್ಟು ನೀರು ಬರಬೇಕೋ ಅಷ್ಟು ನೀರನ್ನು ಪಡೆಯುವುದಕ್ಕೆ ಪ್ರಯತ್ನ ಮಾಡಿದರೆ ಅನುಕೂಲವಾಗುತ್ತದೆನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ಎರಡನೆಯದಾಗಿ ಆ ಭಾಗದಲ್ಲಿ ಬರುವಂತಹ ಎಲ್ಲಾ ನೀರಾವರಿ ಯೋಜನೆಗಳಿಗೆ ಹೆಚ್ಚಿನ ಹಣಕಾಸಿನ ವ್ಯವಸ್ಥೆ ಮಾಡಿ ಯೋಜನೆಗಳನ್ನು ಬೇಗ ಪೂರೈಸಬೇಕೆಂದು ನಾನು ಹೇಳುತ್ತೇನೆ. ಈ ದಿಸೆಯಲ್ಲಿ ನಮ್ಮ ಸರ್ಕಾರ ಪ್ರಯತ್ನ ಮಾಡಬೇಕು. ಕನ್ನಡ ನಾಡಿನ ಜನ ಸೌಮ್ಯ ಸ್ವಭಾವದವರು. ಮೃದು ಸ್ವಭಾವದವರು, ಅಂತಹದ್ದರಲ್ಲಿ ಇಂತಹ ಮಹತ್ವಪೂರ್ಣವಾದ ಘಟನೆ ನಮ್ಮ ರಾಜ್ಯದಲ್ಲಿ ನಡೆಯುತ್ತಿದೆ. ನಾವು ಈ ಸಂದರ್ಭದಲ್ಲಿ ಒಂದು ಕಠೋರವಾದ ನಿರ್ಣಯವನ್ನು ಒಮ್ಮತದಿಂದ ತೆಗೆದುಕೊಳ್ಳಬೇಕಾಗುತ್ತದೆ. ನಮ್ಮ ರಾಜ್ಯಕ್ಕೆ ನ್ಯಾಯವಾಗಿ ಸಿಗಬೇಕಾದಂತಹ ನೀರಿನ ಪಾಲನ್ನು ನಾವು ಪಡೆದುಕೊಳ್ಳಬೇಕಾಗುತ್ತದೆ. ಈ ವಿಚಾರದಲ್ಲಿ ನಾನು ಹೆಚ್ಚು ಮಾತನಾಡಲಿಕ್ಕೆ ಹೋಗದೆ ಇಂತಹ ಒಂದು ಮಹತ್ವಪೂರ್ಣವಾದ ನಿರ್ಣಯವನ್ನು ನಮ್ಮ ಮಾನ್ಯ ಮುಖ್ಯಮಂತ್ರಿಗಳು ಮಂಡನೆ ಮಾಡಿದ್ದಾರೆ. ಆ ಬಗ್ಗೆ ವಿರೋಧಪಕ್ಷದ ನಾಯಕರಾದ ಶ್ರೀಮಾನ್ ಚಂದ್ರೇಗೌಡರು ಮಾತನಾಡಿದ್ದಾರೆ ಹಿಂದಿನ ಕಾಮಗಾರಿ ಸಚಿವರಾದ ಶ್ರೀಮಾನ್ ದೇವೇಗೌಡರು ಸಹ ಈ ವಿಚಾರದಲ್ಲಿ ಸಾಕಷ್ಟು ಕೆಲಸ ಮಾಡಿದ್ದಾರೆ. ಅಂತಹ ಗಣ್ಯ ವ್ಯಕ್ತಿಗಳ, ಮೇಧಾವಿಗಳ ವಿಚಾರಗಳನ್ನು ಸರ್ಕಾರ ಗಣನೆಗೆ ತೆಗೆದುಕೊಂಡು, ಒಂದು ನಿರ್ಣಯ ಮಾಡಿ ಕೇಂದ್ರ ಸರ್ಕಾರದ ಮೇಲೆ ಒತ್ತಡ ತರಲು ಪ್ರಯತ್ನ ಮಾಡಬೇಕೆಂದು, ಕಾವೇರಿ ಜಲವಿವಾದದ ಬಗ್ಗೆ ಸರ್ಕಾರ ಹೆಚ್ಚಿನ ಆಸಕ್ತಿ ವಹಿಸಿ ಕೆಲಸ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಿ ನಾನು ಇದುವರೆವಿಗೂ ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷಿಣೀಯವರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಸಿ. ಎಂ. ಲಿಂಗಪ್ಪ (ರಾಮನಗರ).—ಮಾನ್ಯ ಅಧ್ಯಕ್ಷಿಣೀಯವರೇ ಕರ್ನಾಟಕ ರಾಜ್ಯದ ಮೊದಲನೆಯ ಭಾಗ ಮೈಸೂರು ರಾಜ್ಯ. ಅಲ್ಲಿನ ಬಹು ಮುಖ್ಯವಾದ ನದಿ ಕಾವೇರಿ ನದಿ. ಬಹಳ ಹಿಂದಿನಿಂದಲೂ ಈ ಜಲಾನಯನ ಪ್ರದೇಶವನ್ನು ನಿರ್ಮಾಣ ಮಾಡಬೇಕೆಂದು ಹೇಳಿ ಕನ್ನಾಂಬಾಡಿ ಅಣೆಕಟ್ಟು ಹಾಗೂ ಇತರೆ ಅನೇಕ ಅಣೆಕಟ್ಟುಗಳನ್ನು ಕಟ್ಟಿಸಿ ಅದರಿಂದ ಲಕ್ಷಾಂತರ ಕುಟುಂಬಗಳು ಈಗ ಒಳ್ಳೆಯ ಬೆಳೆ ಬೆಳೆಯಲಿಕ್ಕೆ ಆಗತ್ಯವಾಗಿದೆ. ಈ ಕಾವೇರಿ ನದಿ ಆಸರೆಯಿಂದ ಬಹಳ ಉಪಯೋಗವನ್ನು ಪಡೆದುಕೊಂಡು ಬೆಳೆ ಬೆಳೆದು ಕರ್ನಾಟಕ ರಾಜ್ಯದ ಹಿಂದಿನ ಮೈಸೂರು ರಾಜ್ಯ ಸಂಪತ್ತು ಭರಿತವಾದ ನಾಡು ಆಗುವುದಕ್ಕೆ ಕಾರಣವಾಯಿತು ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ಸ್ಮರಿಸಿಕೊಳ್ಳಬೇಕಾಗುತ್ತದೆ. ಇಡೀ ದೇಶದಲ್ಲಿ ಮೊಟ್ಟಮೊದಲನೆಯದಾಗಿ ವಿದ್ಯುತ್ ಉತ್ಪಾದನೆ ಶಿವನಸಮುದ್ರದಲ್ಲಿ ಆಯಿತು. ಹೆಚ್ಚಿನ ನೀರಾವರಿ ಆಸರೆ ಹೊಂದಿದ ಪ್ರದೇಶ ಮೈಸೂರು, ನಾಲ್ಕಾರು ಅಣೆಕಟ್ಟುಗಳನ್ನು ನಿರ್ಮಾಣ ಮಾಡಿ ಕರ್ನಾಟಕ ರಾಜ್ಯದ ಬಹು ಹೆಚ್ಚಿನ ಆಸರೆ ಹೊಂದಿರುವ ನದಿ ಕಾವೇರಿ ನದಿ. ಈ ನದಿಯ ನೀರಿನ ಸಮಸ್ಯೆ ಇವತ್ತು ಇಡೀ ಕರ್ನಾಟಕ ರಾಜ್ಯದ ಜನತೆಯ ಒಂದು ಬೃಹತ್ ಸಮಸ್ಯೆಯಾಗಿ ರೂಪುಗೊಳ್ಳುತ್ತಿದೆ. ಇದನ್ನು ನಾವು ರಾಜಕೀಯ ಪ್ರಶ್ನೆಯಾಗಿ ಪರಿಗಣಿಸದೆ ಕರ್ನಾಟಕ ರಾಜ್ಯದ ಸುಮಾರು ಒಂದು ಕೋಟಿ ಜನರ ಉಪಯೋಗಕ್ಕೆ ಈ ಜಲಾನಯನ ಪ್ರದೇಶದ ಅಭಿವೃದ್ಧಿ ದೃಷ್ಟಿಯಿಂದ, ಲಕ್ಷಾಂತರ ಕುಟುಂಬಗಳು ಹೊಂದಿರುವ ಆಸರೆಯ ದೃಷ್ಟಿಯಿಂದ ನಾವು ತೀವ್ರವಾದ ಕಳಕಳಿಯನ್ನು ವ್ಯಕ್ತಪಡಿಸಬೇಕಾಗುತ್ತದೆ. ದುರಾದೃಷ್ಟವಶಾತ್ ಇವತ್ತು ಒಂದು ಮೂರು ಜನ ಸದಸ್ಯರಿಂದ ಕೂಡಿರತಕ್ಕ ಪಂಚಾಯಂತಿ ರಚನೆಯಾಗಿದೆ. ಇದು ಬಹುಶಃ ಕರ್ನಾಟಕಕ್ಕೆ ಶುಭವಲ್ಲ

ವೇನೋ ಎನ್ನತಕ್ಕ ರೀತಿಯಲ್ಲಾಗಿದೆ. ಆದ್ದರೆ ಇದರ ಬಗ್ಗೆ ಎಲ್ಲರೂ ಆಶಾವಾದಿಯಾಗಿರಬೇಕು, ನಾನೂ ಆಶಾವಾದಿಯಾಗಿದ್ದೇನೆ. ಕರ್ನಾಟಕದ ಪಾಲಿನ ನೀರನ್ನು ಮತ್ತು ನಮ್ಮ ಹಕ್ಕಿನ ನೀರನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ಅಂಕಿ ಅಂಶಗಳನ್ನು ಸಮರ್ಥನೀಯವಾಗಿ ಪಂಚಾಯಿತಿ ಮುಂದೆ ಮಂಡಿಸಿ ಕರ್ನಾಟಕಕ್ಕೆ ನ್ಯಾಯಬದ್ಧವಾಗಿ ಸಿಗಬೇಕಾಗಿರತಕ್ಕ ನೀರಿನ ಪಾಲನ್ನು ಒದಗಿಸಿ ಕೊಡುವುದರಲ್ಲಿ ವಕೀಲರುಗಳು ಪ್ರಯತ್ನ ಮಾಡಬೇಕು. ಈ ಪ್ರಯತ್ನದಲ್ಲಿ ಯಶಸ್ವಿಯಾಗುತ್ತಾರೆನ್ನುವ ಆಶಾಭಾವನೆಯನ್ನು ಈ ಮೂಲಕ ವ್ಯಕ್ತಪಡಿಸುತ್ತೇನೆ. ನಮ್ಮ ವಾದವನ್ನು ಸಮರ್ಥನೀಯವಾಗಿ ಮಾಡದೇ ಇದ್ದರೆ ಅಥವಾ ಒಂದು ವೇಳೆ ಟ್ರಿಬ್ಯೂನಲ್‌ನಲ್ಲಿ ನಾವು ಸೋತರೆ ಎಂಥಾ ಪರಿಸ್ಥಿತಿ ಉಂಟಾಗಬಹುದು ಎಂದು ನಾವು ಯೋಚನೆ ಮಾಡಬೇಕಾಗುತ್ತದೆ. ನಮ್ಮ ರಾಜ್ಯದಲ್ಲಿರುವ ಕಾವೇರಿ ನದಿ ನೀರನ್ನು ನಮ್ಮ ಭೂಮಿಗೆ ಉಪಯೋಗಿಸಬೇಕಾದರೆ ತಮಿಳುನಾಡಿನವರ ಒಪ್ಪಿಗೆ ಪಡೆಯುವಂಥ ಪರಿಸ್ಥಿತಿ ಬಂದರೂ ಬರಬಹುದು. ತಮಿಳುನಾಡಿನ ಸರ್ಕಾರದ ಕಡೆಯಿಂದ ಬರುವ ಸಚಿವರುಗಳು ಯಾವ ರೀತಿ ಬಂದು ನಮ್ಮ ಭೂಮಿಗೆ ನೀರು ಕೊಡಿ ಎಂದು ಕೇಳುತ್ತಿದ್ದಾರೋ ಅದೇ ರೀತಿ ನಮ್ಮ ರಾಜ್ಯದ ಸಚಿವರುಗಳು ಹೋಗಿ ನೀರನ್ನು ನಾವೂ ಉಪಯೋಗಿಸುವುದಕ್ಕೆ ಬಿಡಿ ಎಂದು ಕೇಳುವ ಹಾಗೆ ಆಗಬಹುದು. ನಮ್ಮ ಕಾವೇರಿ ನದಿ ನೀರನ್ನು ಅವರಿಗೆ ಬಿಡುತ್ತಾ ಹೋದರೆ ಕೊನೆಗೆ ಬೆಂಗಳೂರು ನಗರಕ್ಕೆ ಬೇಕಾಗಿರುವಷ್ಟು ಕುಡಿಯುವುದಕ್ಕೆ ನೀರನ್ನಾದರೂ ಬಿಡಿ ಎಂದು ನಮ್ಮ ರಾಜ್ಯದ ಮಂತ್ರಿಗಳು ತಮಿಳುನಾಡು ರಾಜ್ಯಕ್ಕೆ ಹೋಗಿ ಕೇಳುವ ಪರಿಸ್ಥಿತಿಗೆ ಉಂಟಾಗಬಹುದು ಎನ್ನುವ ಭೀತಿ ಬಂದಿದೆ. ತಮಿಳುನಾಡಿನ ಜನ ನಮ್ಮಷ್ಟು ಅನುಕಂಪ ಹೊಂದಿದ ಜನರಲ್ಲ. ಅವರುಗಳಿಗೆ ಕಠಿಣ ಹೃದಯ ಇದೆ. ಇವತ್ತು ಪಂಚಾಯಿತಿ ಮುಂದೆ ಹೋಗಿ ಪ್ರಭಲವಾಗಿ ಪ್ರತಿಭಟನೆ ಮಾಡಿ ನಮಗೆ ಬರಬೇಕಾದ ನ್ಯಾಯಬದ್ಧವಾದ ನೀರನ್ನು ಪಡೆಯದೇ ಹೋದರೆ ಮುಂದಿನ ನಮ್ಮ ಕರ್ನಾಟಕದ ಜನರು ತಮಿಳುನಾಡಿಗೆ ಹೋಗಿ ತಮಿಳು ರಾಜ್ಯ ಸರ್ಕಾರದಲ್ಲಿ ಬೇಡಿಕೊಂಡು ಹೆಚ್ಚು ನೀರು ಪಡೆಯುತ್ತಾರೆ ಎನ್ನುವ ವಿಶ್ವಾಸ ನನಗೆ ಇಲ್ಲ. ಆದ್ದರಿಂದ ಇದು ಎಲ್ಲರಿಗೂ ಇರತಕ್ಕಂಥ ಒಂದು ಕಳಕಳಿ ಎಂದು ನಾನು ಭಾವನೆ ಮಾಡುತ್ತೇನೆ. ಇದು ಕೇವಲ ದಕ್ಷಿಣ ಕರ್ನಾಟಕಕ್ಕೆ ಸಂಬಂಧಿಸಿದ ಪ್ರಶ್ನೆ ಉತ್ತರ ಕರ್ನಾಟಕದವರಿಗಲ್ಲ ಎನ್ನತಕ್ಕ ಪ್ರಶ್ನೆ ಅಲ್ಲ. ಇದುವರೆಗೆ ಮಾತನಾಡಿದಂಥ ಕರ್ನಾಟಕ ರಾಜ್ಯದ ಎಲ್ಲಾ ಸನ್ಮಾನ್ಯ ಸದಸ್ಯರುಗಳು ಮತ್ತು ಮಾನ್ಯ ವಿರೋಧಪಕ್ಷದ ನಾಯಕರು ಹೆಚ್ಚಿನ ಕಳಕಳಿ, ಆಸಕ್ತಿ, ತೋರಿಸಿದ್ದಾರೆ.
ತಮ್ಮ ಮೂಲಕ ಮತ್ತೊಮ್ಮೆ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ಈ ಒಂದು ಪಂಚಾಯಿತಿ ಏನು ರಚನೆ ಮಾಡಿದ್ದಾರೆ, ಅಲ್ಲಿ ಕರ್ನಾಟಕದ ಹಕ್ಕಿನ ಬಗ್ಗೆ ವಾದವನ್ನು ಬಹಳ ಪ್ರಭಲವಾಗಿ, ಸಮರ್ಥನೀಯವಾಗಿ ಮಂಡನೆ ಮಾಡಿ ಕರ್ನಾಟಕದ ಇಡೀ ಜನತೆಯ ಹಿತದೃಷ್ಟಿಯಿಂದ ನ್ಯಾಯಯುತವಾಗಿ ಸಲ್ಲಬೇಕಾದ ನೀರಿನ ಪಾಲನ್ನು ಪಡೆಯುವುದರಲ್ಲಿ ಮತ್ತು ಈ ದಿಸೆಯಲ್ಲಿ ಬಹಳ ತೀವ್ರವಾಗಿ ಆಲೋಚನೆ ಮಾಡಬೇಕೆನ್ನುವ ಮಾತನ್ನು ಹೇಳಿ ಮಾನ್ಯ ಮುಖ್ಯಮಂತ್ರಿಗಳು ಏನು ಈ ಬಗ್ಗೆ ವಿಷಯವನ್ನು ಮಂಡನೆ ಮಾಡಿದ್ದಾರೋ ಈ ಸಭೆಯು ಅವರ ನಿಲುವಿಗೆ, ಅವರು ತೆಗೆದುಕೊಳ್ಳುತಕ್ಕಂಥ ತೀರ್ಮಾನಕ್ಕೆ ನಾವೆಲ್ಲರೂ ಬದ್ಧರಾಗಿದ್ದೇವೆಂದು ಬೆಂಬಲ ಸೂಚಿಸಿ ಈ ಬಗ್ಗೆ ಎರಡು ಮಾತುಗಳನ್ನು ಆಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕೆ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಕೆ. ಶಿವಮೂರ್ತಿ (ಭರಮಸಾಗರ).—ಮಾನ್ಯ ಸಭಾಧ್ಯಕ್ಷಿಣಿಯವರೇ, ಈ ಸದನದಲ್ಲಿ ಮಾನ್ಯ ಮುಖ್ಯಮಂತ್ರಿಯವರು ಮಂಡಿಸಿರತಕ್ಕಂಥ ನಿಲುವಳಿ ಸೂಚನೆಗೆ ನನ್ನ ಬೆಂಬಲವನ್ನು ವ್ಯಕ್ತ ಮಾಡಿ ಕೆಲವು ಮಾತುಗಳನ್ನು ಆಡಲು ತಮ್ಮ ಅನುಮತಿ ಕೋರುತ್ತೇನೆ.

ನಾವು ಕರ್ನಾಟಕ ರಾಜ್ಯದವರು ಮೊದಲಿನಿಂದಲೂ ಬಹಳವಾಗಿ ಎಲ್ಲಾ ವಿಷಯಗಳಲ್ಲಿಯೂ ಧಾರಾಳ ಮನೋಭಾವವನ್ನು ತಾಳಿದ್ದರಿಂದಾಗಿಯೂ, ಸ್ವಲ್ಪ ಬಿಗಿಯಾಗಿ ಇರಲಿಲ್ಲವಾದುದರಿಂದಾಗಿ ಬಹಳಷ್ಟು ವಿಚಾರಗಳಲ್ಲಿ ಸೋಲನ್ನು ಒಪ್ಪಿಕೊಂಡು ಬಂದಿರತಕ್ಕಂಥ ಜನರಾಗಿದ್ದೇವೆ. ಪ್ರಸ್ತುತ ಕಾವೇರಿ ನೀರಿನ ವಿವಾದದ ಕುರಿತು ಬಹಳ ಹಿಂದಿನಿಂದಲೂ ಪತ್ರಿಕಾ ಹೇಳಿಕೆಗಳನ್ನು, ಗಣ್ಯರ ಹೇಳಿಕೆಗಳನ್ನು ರಾಜ್ಯಮಟ್ಟದಲ್ಲಿ ಮತ್ತು ರಾಷ್ಟ್ರಮಟ್ಟದಲ್ಲಿ ಕೇಳಿಕೊಂಡು ಬಂದಿದ್ದೇವೆ. ಈ ಕುರಿತು ಸಂಧಾನದ ಮಾತುಕತೆಗಳನ್ನು ಕೂಡ ಪತ್ರಿಕೆಗಳಲ್ಲಿ ಓದಿದ್ದೇವೆ. ಮಾನ್ಯ ಸಭಾ ನಾಯಕರು ಬೆಳಿಗ್ಗೆ ಮಾತನಾಡುತ್ತಾ ನಮ್ಮ ಸರಕಾರ ಈ ಬಗ್ಗೆ ಏನೇನು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ ಎಂಬ ಬಗ್ಗೆ ಹೇಳಿದ್ದಾರೆ. ಈ ವಿಚಾರದ ಬಗ್ಗೆ ಕೇವಲ ಜಲಾನಯನ ಪ್ರದೇಶದಲ್ಲಿರತಕ್ಕಂಥವರಿಗೆ ಮಾತ್ರ ಕಾತುರವಲ್ಲ, ಇಡೀ ಕರ್ನಾಟಕ ರಾಜ್ಯದ ಜನತೆಗೆ ಕಾತುರತೆ ಇದೆ. ಕಾವೇರಿ ನದಿ ನೀರನ್ನು ರಾಜ್ಯದ ಜನರು ಒಂದಲ್ಲ ಒಂದು ರೀತಿಯಲ್ಲಿ ಉಪಯೋಗ ಮಾಡಿಕೊಂಡು ಬಂದಿದ್ದಾರೆ. ಆದರೆ ಅದು

ಇವೊತ್ತು ಒಂದು ರೀತಿಯಲ್ಲಿ ನಮ್ಮ ಪಾಲಿನ ನೀರನ್ನು ಇತರರಿಗೆ ಬಿಟ್ಟು ಕೊಡುವ ಹಂತದಲ್ಲಿ ಸಮಸ್ಯೆಯಾಗಿ ಬಂದಿದೆ. ನಮ್ಮ ರಾಜ್ಯದ ಈ ಸಂಪತ್ತನ್ನು ನಾವು ಮೊದಲಿನಿಂದಲೂ ಕಾಯ್ದುಕೊಂಡು ಬಂದಿದ್ದರೆ ಈ ಸಮಸ್ಯೆಯು ಉದ್ಭವವಾಗುತ್ತಿರಲಿಲ್ಲ. ನಮ್ಮ ದಾರಾಳತನದಿಂದಾಗಿ ನೆರೆ ರಾಜ್ಯಗಳು ನಮ್ಮ ಪಾಲನ್ನು ಉಪಯೋಗಿಸಿಕೊಳ್ಳುತ್ತಿದ್ದಾರೆ. ನಮ್ಮ ಧಾರಾಳತನದಿಂದಾಗಿ ಬೇರೆ ರಾಜ್ಯದವರು ಅನುಕೂಲ ಮಾಡಿಕೊಂಡಿದ್ದಾರೆ. ನಾವು ನಮ್ಮ ಧಾರಾಳತನದ ನೀತಿಯಿಂದ ಬೇರೆಯವರಿಗೆ ಸಾಕಷ್ಟು ಸಹಾಯವನ್ನು ಮಾಡಿಕೊಟ್ಟಿದ್ದೇವೆ. ನಮ್ಮ ನೀರನ್ನು ಸೂಕ್ತವಾಗಿ ಉಪಯೋಗಿಸಿಕೊಳ್ಳದಿದ್ದ ಕಾರಣ, ಅವರು ಇದನ್ನು ಅನುಕೂಲ ಎಂದು ಪರಿಗಣಿಸಿಕೊಂಡು ಉಪಯೋಗಮಾಡಿಕೊಳ್ಳುವುದರಲ್ಲಿ ಯಶಸ್ವಿಯಾಗಿದ್ದಾರೆ. ನಮ್ಮಲ್ಲಿ ಬೇರೆ ಬೇರೆ ಕಾರಣಗಳಿಂದಾಗಿ ಮತ್ತು ಹಣಕಾಸಿನ ಕೊರತೆಯಿಂದಾಗಿ ಹಾಗೂ ಟೈಮ್‌ಬಾಂಡ್ ಕಾರ್ಯಕ್ರಮಗಳು ಇಲ್ಲದೆ ಇಂಥ ವಿವಾದಕ್ಕೆ ಎಡೆ ಮಾಡಿ ಕೊಟ್ಟಂತಾಗಿದೆ. ಆ ಕಾರಣದಿಂದಾಗಿಯೇ ಕಾವೇರಿ ನದಿ ಜಲವಿವಾದವು ಈಗ ಟ್ರಿಬ್ಯುನಲ್ ರಚನೆಯಾಗುವಷ್ಟು ಹಂತಕ್ಕೆ ಬಂದು ಮುಟ್ಟಿದೆ. ಬೆಳಿಗ್ಗೆ ಮಾನ್ಯ ಸಭಾನಾಯಕರು ಮತ್ತು ವಿರೋಧ ಪಕ್ಷದ ನಾಯಕರು ಹೇಳಿದ ಮಾತನ್ನು ಕೇಳಿದ್ದೇನೆ. ಅದನ್ನು ಕೇಳಿದಾಗ ನಮ್ಮ ರಾಜ್ಯದ ರೈತರಿಗೆ ನಾವು ಈ ಪರಿಸ್ಥಿತಿಯಲ್ಲಿ ಏನು ಮಾಡಬೇಕು ಎಂಬುದನ್ನು ಯೋಚಿಸಬೇಕಾಗಿದೆ ತಮಿಳುನಾಡಿನ ರೈತರು ಈಗ ಒಕ್ಕೊರಲಿನಿಂದ ಹೇಳುತ್ತಾ ಇದ್ದಾರೆ. ನಮ್ಮ ಪಾಲಿನ ನೀರು ಇಷ್ಟು, ಅದನ್ನು ಕೊಡಬೇಕೆಂದು ಆಗ್ರಹ ಪಡಿಸುತ್ತಾ ಇದ್ದಾರೆ. ಅವರು ಸದನದಲ್ಲಿ ಒಂದು ನಿರ್ಣಯವನ್ನು ಕೂಡ ಮಾಡಿಬಿಟ್ಟಿದ್ದಾರೆ. ಪಕ್ಕದ ರಾಜ್ಯಗಳು ನಮ್ಮ ಈ ಸಂಪತ್ತನ್ನು ಧಾರಾಳವಾಗಿ ತೆಗೆದುಕೊಂಡು ಹೋಗಿದ್ದಾರೆ. ಆದರೆ ನಾವು ಈಗ ತಕರಾರು ಮಾಡುವ ಪರಿಸ್ಥಿತಿಯಲ್ಲಿ ಇದ್ದೇವೆ. ಈಗ ತಕರಾರು ಮಾಡಬೇಕಾಗಿದೆ ಕಾನೂನು ರೀತ್ಯಾ ತಕರಾರು ಮಾಡಬೇಕಾದ ಪರಿಸ್ಥಿತಿ ಇದೆ. ಆದರೆ ಈ ವಿಚಾರದಲ್ಲಿ ಕೇಂದ್ರ ಸರಕಾರದವರು ಮೀನಮೇಷ ಮಾಡುತ್ತಿದ್ದಾರೋ ಏನೋ ಎಂಬ ಅನುಮಾನ ಬಂದುಬಿಟ್ಟಿದೆ. ತಮಿಳುನಾಡಿನ ಮುಖ್ಯಮಂತ್ರಿಯವರು ಇಲ್ಲಿ ಮಾನ್ಯ ಬೊಮ್ಮಾಯಿಯವರು ಮುಖ್ಯ ಮಂತ್ರಿಗಳಾಗಿದ್ದಾಗ ಈ ಸಮಸ್ಯೆಯನ್ನು ಬಹಳ ಸೌಹಾರ್ದಯುತವಾಗಿ ಬಗೆಹರಿಸೋಣ ಎಂಬ ಮಾತನ್ನು ಹೇಳಿದುದನ್ನು ಗಮನಿಸಿದಾಗ ಆಗಿನ ನಿಲುವು ಈಗ ಏಕೆ ಬದಲಾವಣೆಯಾಯಿತು ಎಂದು ನಾವು ಪ್ರಶ್ನಿಸಬೇಕಾಗುತ್ತದೆ. ಈಗ ನಮ್ಮ ರಾಜ್ಯದಲ್ಲಿ ಕಾಂಗ್ರೆಸ್ ಆಡಳಿತದಲ್ಲಿದೆ. ಕೇಂದ್ರದಲ್ಲಿ ನ್ಯಾಷನಲ್‌ಫ್ರಂಟ್ ಸರಕಾರವಿದೆ. ಹಾಗಾಗಿ ತಮಿಳುನಾಡಿನವರು ತಮ್ಮ ನಿಲುವನ್ನು ಬದಲಾಯಿಸಿದ್ದಾರೋ ಎಂದು ಅನುಮಾನ ಬರುತ್ತದೆ. ಈ ಕುರಿತು ಬೆಳಿಗ್ಗೆ ನಮ್ಮ ಮಾನ್ಯ ಸದಸ್ಯರಾದ ಡಾ. ನಂಜಪ್ಪನವರು ಹೇಳಿದರು, ಟ್ರಿಬ್ಯುನಲ್ ವಿರುದ್ಧ ಮಾತನಾಡಿದರೆ ಅದು ಕೋರ್ಟ್ ಕಂಟೆಂಪ್ಟ್ ಮಾಡಿದ ಹಾಗೆ ಆಗುತ್ತದೆ, ಅಸೆಂಬ್ಲಿಯಲ್ಲಿ ಎಲ್ಲರೂ ಒಂದು ನಿರ್ಣಯವನ್ನು ಬೆಂಬಲ ಪೂರ್ಣವಾಗಿ ಮಾಡುತ್ತೇವೆ. ಅದಕ್ಕೂ ಆಗದಿದ್ದರೆ ಮುಂದೆ ನಾವು ಏನು ಮಾಡಬೇಕು ಮತ್ತು ಯಾವ ನಿಲುವನ್ನು ತಾಳಬೇಕು ಎಂಬುದು ಮುಖ್ಯವಾದುದು. ನಮ್ಮ ಪಾಲನ್ನು ಪಡೆದುಕೊಳ್ಳಲು ನಾವು ಪ್ರತಿಭಟನೆ ಮಾಡಬೇಕಾಗುತ್ತದೆ. ಆ ಪ್ರತಿಭಟನೆಯನ್ನು ಯಾವ ರೀತಿಯಲ್ಲಿ ಮಾಡಬೇಕು? ಈಗ ಟ್ರಿಬ್ಯುನಲ್ ರಚನೆಯಾಗಿದೆ. ಅದರ ವಿರುದ್ಧ ಏನಾದರೂ ಮಾಡಿದರೆ ಅದು ಕಂಟೆಂಪ್ಟ್ ಆಗುತ್ತದೆ ಎನ್ನುವ ಮಾತನ್ನು ಹೇಳುತ್ತಾರೆ, ಆದರೆ ಪ್ರಜಾಪ್ರಭುತ್ವದಲ್ಲಿ ಪ್ರತಿಭಟನೆಯನ್ನು ಬಿಟ್ಟರೆ ಬೇರೆ ಮಾರ್ಗವಿಲ್ಲ. ಕೇಂದ್ರ ಸರಕಾರದವರು ಈಗ ಈ ವಿಷಯದ ಬಗ್ಗೆ ಸುಮ್ಮನೆ ಕುಳಿತ ಕೊಳ್ಳಬಾರದು. ಪ್ರಧಾನ ಮಂತ್ರಿಯವರು, ಕೇಂದ್ರ ಸರಕಾರದವರು ನಮಗೆ ಮತ್ತು ತಮಿಳುನಾಡಿನವರಿಗೆ ಜಗಳ ಹಚ್ಚಿ ಸುಮ್ಮನೇ ನೋಡುತ್ತಾ ಕುಳಿತುಕೊಳ್ಳಬಾರದು ಇದು ಜಲವಿವಾದ, ಇದೊಂದು ರಾಷ್ಟ್ರೀಯ ಸಮಸ್ಯೆ ಎಂದು ತಿಳಿದುಕೊಂಡು ಇಬ್ಬರನ್ನೂ ಕರೆಯಿಸಿ ಒಂದು ತೀರ್ಮಾನ ಆಗುವಂತೆ ನೋಡಬೇಕು. ಇದನ್ನು ತೀರ್ಮಾನ ಮಾಡದೇ ಹೋದರೆ ನಾರ್ತ್‌ನಲ್ಲಿ ಕೆಲವೊಂದು ಸಮಸ್ಯೆಗಳು ಹೇಗೆ ಉದ್ಭವವಾದುವೋ ಹಾಗೆಯೇ ಸೌತ್‌ನಲ್ಲಿಯೂ ಆಗಬಹುದು ಎಂಬ ಊಹೆ ಎದುರಾಗುತ್ತದೆ. ಆದ್ದರಿಂದ ಈ ಸಮಸ್ಯೆಗೆ ಅವಕಾಶ ಕೊಡದೆ ಕಾವೇರಿ ಜಲಾನಯನ ಪ್ರದೇಶದವರ ವಾದ ಏನಿದೆ ಅದಕ್ಕೆ ನಾವೆಲ್ಲರೂ ಒಕ್ಕೊರಲಿನಿಂದ ಕರ್ನಾಟಕದ ರೈತರ ಪರವಾಗಿ ಒಂದು ಯುನಾನಿಮಸ್ ರೆಸಲ್ಯೂಷನನ್ನು ಮಾಡಿ ಕೇಂದ್ರಕ್ಕೆ ಸಲ್ಲಿಸಬೇಕು. ಅವರು ಇದರಲ್ಲಿ ಮಧ್ಯಸ್ಥಿಕೆ ವಹಿಸಿ ಕರ್ನಾಟಕಕ್ಕೆ ಅದರ ಸಂಪತ್ತು ಏನಿದೆಯೋ ಅದು ನಮಗೇ ಸಲ್ಲುವ ಹಾಗೆ ಮಾಡಿಕೊಡಬೇಕೆಂದು ಏನು ನಿಲುವಳಿ ಸೂಚನೆ ಇವತ್ತು ಇದೆಯೋ ಅದಕ್ಕೆ ಬೆಂಬಲ ಕೊಡುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಹೆಚ್. ಹನುಮೇಗೌಡ (ಹಾಸನ).—ಅಧ್ಯಕ್ಷರೇ, ಕಾವೇರಿ ಜಲಾನಯನ ಪ್ರದೇಶದ ನೀರಿನ ಹಂಚಿಕೆ ಬಗ್ಗೆ ಕೇಂದ್ರವು ಸುಪ್ರಿಂ ಕೋರ್ಟ್ ಆದೇಶಿಸಿದಂತೆ ಟ್ರಿಬ್ಯೂನಲ್ ಏನು ರಚನೆ ಮಾಡಿದೆ ಅದರ ಬಗ್ಗೆ ಸಾಧಕಬಾಧಕಗಳನ್ನು ಚರ್ಚೆ ಮಾಡುವ ಸಲುವಾಗಿ ವಿಫಲವಾಗಿ ಇಲ್ಲಿ ಚರ್ಚೆಯಾಗಿದೆ.

ಕೆಲವರ ಅಭಿಪ್ರಾಯದಲ್ಲಿ ಟ್ರಿಬ್ಯೂನಲ್ ಅನ್ನು ಬಹಿಷ್ಕಾರ ಮಾಡುವುದೇ ಉತ್ತಮ ಎನ್ನುವ ಸಲಹೆ ಬಂದಿದೆ ಇನ್ನು ಕೆಲವರ ಅಭಿಪ್ರಾಯದಲ್ಲಿ ಟ್ರಿಬ್ಯೂನಲ್ ಬಹಿಷ್ಕಾರ ಮಾಡದೆ ಈ ರಾಜ್ಯದ ಹಕ್ಕು ಏನಿದೆ ರೈತರ ಕುಂದುಕೊರತೆ ಏನಿದೆ ಅದನ್ನು ಟ್ರಿಬ್ಯೂನಲ್ ಮುಂದೆ ಪ್ರತಿಪಾದನೆ ಮಾಡಿ ನ್ಯಾಯ ಪಡೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುವುದು. ನನಗೇನೋ ಎರಡನೇ ವಾದವೇ ಸರಿ ಎನ್ನಿಸುತ್ತದೆ. ಟ್ರಿಬ್ಯೂನಲ್‌ನ್ನು ಬಹಿಷ್ಕಾರ ಮಾಡುವ ಬದಲು ರಾಜ್ಯದ ಅತ್ಯುತ್ತಮ ನ್ಯಾಯವಾದಿಗಳ, ವಿಚಾರವಂತರ, ರಾಜಕೀಯ ವ್ಯಕ್ತಿಗಳ ಮುಖಾಂತರ ಟ್ರಿಬ್ಯೂನಲ್ ಮುಂದೆ ಹಾಜರಾಗಿ ರಾಜ್ಯದ ಹಕ್ಕನ್ನು ಪ್ರತಿಪಾದನೆ ಮಾಡುವುದು ಸೂಕ್ತವಾದದ್ದು, ಬಹಿಷ್ಕರಿಸುವುದು ಸೂಕ್ತವಲ್ಲವೆಂದು ಹೇಳುತ್ತೇನೆ. ಟ್ರಿಬ್ಯೂನಲ್ ಆದ ತಕ್ಷಣ ರಾಜ್ಯಕ್ಕೆ ಅನ್ಯಾಯವಾಗುತ್ತದೆ ಎಂದು ತಿಳಿದುಕೊಳ್ಳುವುದು ಸೂಕ್ತವಲ್ಲ. ಕರ್ನಾಟಕ ಮತ್ತು ತಮಿಳುನಾಡುಗಳ ಮಧ್ಯೆ ನೀರಾವರಿ ಸೌಕರ್ಯದ ಬಗ್ಗೆ ಹೋಲಿಕೆ ಮಾಡಿ ನೋಡಿದರೆ ಟ್ರಿಬ್ಯೂನಲ್‌ನವರು ಕರ್ನಾಟಕಕ್ಕೆ ಅನ್ಯಾಯಮಾಡಬಾರದೆಂದು ಭರವಸೆ ನನಗಿದೆ. ೧೯೨೪ನೇ ಇಸವಿಯಲ್ಲಿ ಕಾವೇರಿ ಬೇಸಿನ್, ವಾಟರ್ ಅಗ್ರಿಮೆಂಟಾದಾಗ ೧,೧೪,೦೦೦ ಎಕರೆ ಕರ್ನಾಟಕದವರು, ೩,೧೦,೦೦೦ ಚಿಲ್ಲರೆ ಎಕರೆ ಮದ್ರಾಸ್‌ನವರು ಉಪಯೋಗಿಸಿಕೊಳ್ಳಬಹುದೆಂದು ಒಂದು ಅಗ್ರಿಮೆಂಟಾಯಿತು ಆದನಂತರ ಬಹುಶಃ ತಮಿಳುನಾಡಿನವರು ಯಶಸ್ವಿಯಾಗಿ ನೀರನ್ನು ಉಪಯೋಗಿಸಿಕೊಂಡು ನೀರಾವರಿ ಪ್ರದೇಶವನ್ನು ಅಭಿವೃದ್ಧಿ ಮಾಡಿಕೊಂಡಿದ್ದಾರೆ, ಅವರ ಹಕ್ಕನ್ನು ನಾವು ಕಡೆಗಣಿಸುವುದಿಲ್ಲ ಎಂಬ ವಾದವನ್ನು ಏರ್ ಕಂಡೀಷನ್ಡ್ ರೂಮಿನಲ್ಲಿ ಕುಳಿತುಕೊಂಡಿರುವವರ ವಾದವಾದರೆ ಅದನ್ನು ಒಪ್ಪಬೇಕಾಗಿಲ್ಲ ಕಾವೇರಿ ಬೇಸಿನ್‌ನಲ್ಲಿರುವ ಒಂದು ಕೋಟಿ ರೈತರ ಭೂಮಿ ಮುಕ್ಕಾಲು ಪಾಲು ಒಣಭೂಮಿ. ನಾಲ್ಕು ವರ್ಷಕ್ಕೊಮ್ಮೆ ಬೆಳೆ ತೆಗೆಯುತ್ತಾರೆ ಆದರೆ ತಮಿಳುನಾಡಿನವರಾದರೆ ಹೇಳದೆ ಕೇಳದೆ ನೀರನ್ನು ಬಳಸಿ ನೀರಾವರಿ ಮಾಡಿಕೊಂಡುಬಿಟ್ಟರು ಅವರ ಹಕ್ಕನ್ನು ಡಿನೈ ಮಾಡುವುದಕ್ಕಾಗುವುದಿಲ್ಲವೆಂದು ಹೇಳುವವರ ಮಾತಿಗೆ ಕವಡೆ ಬೆಲೆ ಕೊಡಬೇಕಾಗಿಲ್ಲವೆಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಆ ರೈತರಿಗೆ ಅನ್ಯಾಯವಾಗುತ್ತದೆ ಎಂದು ಹೇಳುವ, ತಿಂಗಳಿಗೆ ೧೫ ಸಾವಿರ ಟಿ.ಎ. ಡಿ.ಎ. ತೆಗೆದುಕೊಳ್ಳುವವರ ಮಾತಿಗೆ ಬೆಲೆ ಕೊಡುವ ಅವಶ್ಯಕತೆ ಇಲ್ಲ. ಟ್ರಿಬ್ಯೂನಲ್‌ನವರ ಮಾತನ್ನು ಕೇಳಿಕೊಂಡು ಗ್ರಾಮೀಣ ಜನಗಳ ಬಾಯಿಗೆ ಮಣ್ಣು ಹಾಕುವುದಕ್ಕೆ ನಾವು ಸಿದ್ಧರಿಲ್ಲವೆಂದು ಹೇಳುವುದಕ್ಕೆ ಇಷ್ಟಪಡುತ್ತೇವೆ. ಕೇಂದ್ರ ಸರ್ಕಾರದ ಜವಾಬ್ದಾರಿ ಏನಾಗಿರಬೇಕಾಗಿತ್ತೆಂದರೆ ಜಲಾನಯನ ಪ್ರದೇಶದ ರೈತರ ಕಷ್ಟಸುಖಗಳನ್ನು ಅರಿತುಕೊಂಡು ನ್ಯಾಯವಾದ ಹಂಚಿಕೆ ಮಾಡಬೇಕಾಗಿತ್ತು. ಕೇಂದ್ರದ ರಾಷ್ಟ್ರೀಯ ರಂಗ ಸರ್ಕಾರಕ್ಕೆ ಅಧಿಕಾರ ಬಂತು ಎಂದು ತಮಿಳುನಾಡಿನವರಿಗೆ ಸಹಾಯ ಮಾಡಿದರು ಎಂದರೆ ನಾನು ಹೇಳುತ್ತೇನೆ ದಕ್ಷಿಣ ಭಾರತದಲ್ಲಿ ಇನ್ನೊಂದು ಪಂಜಾಬನ್ನು ಸೃಷ್ಟಿ ಮಾಡುವುದಕ್ಕೆ ಹೊರಟಿದ್ದಾರೆಂದು ತಿಳಿಸುತ್ತೇನೆ.

೪-೪೫ ಪಿ.ಎಂ.

ಕೋಟ್ಯಾಂತರ ಜನ ರೈತರು ಇದ್ದೇವೆ. ರೈತರ ಮಕ್ಕಳು ಇದ್ದೇವೆ. ಪ್ರಾಣದ ಹಂಗನ್ನಾದರೂ ತೊರೆದು ನೂರಾರು, ಸಾವಿರಾರು ಜನರನ್ನು ಬಲಿದಾನ ಕೊಟ್ಟಾದರೂ ನಮ್ಮ ಹಕ್ಕನ್ನು ನಾವು ಉಳಿಸಿಕೊಳ್ಳುತ್ತೇವೆ. ಅಂಥ ಚೈತನ್ಯ ಶಕ್ತಿ, ಒಂದು ಕೆಚ್ಚೆದೆ ಕರ್ನಾಟಕದ ಜನರಿಗೆ, ರೈತರಿಗೆ ಇದೆ. ಇದೇ ಮಾತನ್ನು ಕೇಂದ್ರ ಸರ್ಕಾರಕ್ಕೂ ಕೂಡಾ ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಅದೇ ರೀತಿ ಗಾಜಿನ ಮನೆಯಲ್ಲಿ ಕುಳಿತು ಹದಿನೈದು ಇಪ್ಪತ್ತು ಸಾವಿರ ರೂಪಾಯಿ ಸಂಬಳವನ್ನು ಪಡೆಯುವಂಥ ಅಧಿಕಾರಿಗಳಿಗೂ ಕೂಡ ಈ ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಕರ್ನಾಟಕದಲ್ಲಿ ಒಂದು ಕೋಟಿ ಜನರ ಜೀವದ ಪ್ರಶ್ನೆಯ ಮೇಲೆ ಚೆಲ್ಲಾಟವಾಡಿದರೆ ಬಹುಶ: ಬಹು ತೆರನಾದ ತೆರಿಗೆಯನ್ನು ತೆರಬೇಕಾಗುತ್ತದೆ ಎನ್ನುವ ಮಾತನ್ನು ಎಚ್ಚರಿಕೆಯ ಮೂಲಕ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಕರ್ನಾಟಕದಲ್ಲಿ ಕಾವೇರಿ ಬೇಸಿನ್‌ನಲ್ಲಿರತಕ್ಕಂಥ ಒಟ್ಟು ಪ್ರದೇಶಗಳಲ್ಲಿ ಮುಕ್ಕಾಲು ಭಾಗ ಬರಗಾಲಕ್ಕೆ ತುತ್ತಾಗಿ ಒಣ ಪ್ರದೇಶವಾಗಿದೆ. ಕಾವೇರಿ ಬೇಸಿನ್‌ನಲ್ಲಿ ತಮಿಳುನಾಡಿನಲ್ಲಿ ಸುಮಾರು ಮೂರನೇಯ ಒಂದು ಭಾಗ ಬರಗಾಲಕ್ಕೆ ತುತ್ತಾಗತಕ್ಕಂಥ ಪ್ರದೇಶ. ಕರ್ನಾಟಕದಲ್ಲಿ ೪೪ ಭಾಗ ಕಾವೇರಿ ಬೇಸಿನ್ ಪ್ರದೇಶ ಇದೆ. ತಮಿಳುನಾಡಿನಲ್ಲಿ ೫೪ ಭಾಗ ಪ್ರದೇಶ ಇದೆ, ಮಾನ್ಯ ಸದಸ್ಯರೊಬ್ಬರು ಹೇಳಿದರು. ತಮಿಳುನಾಡಿನಲ್ಲಿ ಸೈಕ್ಲೋನ್ ಮಳೆ ಆಗುತ್ತದೆ ಎಂದು. ಅದು ನಿಜವಾದ ವಿಚಾರ. ಸೈಕ್ಲೋನ್ ಮಳೆ ಬಂದರೆ ಕೆರೆಕಟ್ಟೆಗಳೆಲ್ಲಾ ನದಿಗಳೆಲ್ಲಾ ತುಂಬಿ ಹರಿದಾಗ ಒಂದೇ ಸಾರಿಗೆ ಎರಡು-ಮೂರು ತಿಂಗಳು ಆ ಭಾಗದ ಗದ್ದೆಗಳಲ್ಲಿ ಆಗುವಷ್ಟು ನೀರು ಸೈಕ್ಲೋನ್‌ನಿಂದ ಬರುತ್ತದೆ. ದುರದೃಷ್ಟವೆಂದರೆ ಕರ್ನಾಟಕದಲ್ಲಿ ಸೈಕ್ಲೋನ್ ಮಳೆ ಬರುವುದೇ ಬಹಳ ಅಪರೂಪ. ೩-೪ ವರ್ಷಕ್ಕೆ ಒಂದು ಸಾರಿ ಸೈಕ್ಲೋನ್ ಮಳೆ ಬಂದರೆ ಬಂತು, ಬರದಿದ್ದರೆ ಇಲ್ಲ, ಇಂಥ ಒಂದು ಪರಿಸ್ಥಿತಿ ನಮ್ಮ

ಕರ್ನಾಟಕದಲ್ಲಿದೆ. ಎರಡನೇ ವಿಚಾರ, ತಜ್ಞರ ಅಭಿಪ್ರಾಯದ ಪ್ರಕಾರ ತಮಿಳುನಾಡಿನಲ್ಲಿ ಸುಮಾರು ನೂರು ಟಿ. ಎಂ. ಸಿ. ಅಂಡರ್‌ಗ್ರೌಂಡ್ ವಾಟರ್ ಇದೆ. ಅದನ್ನು ಉಪಯೋಗಿಸಿಕೊಂಡರೆ ಲಕ್ಷಾಂತರ ಎಕರೆ ನೀರಾವರಿ ಪ್ರದೇಶ ಅವರಿಗೆ ಆಗುತ್ತದೆ. ಸುಮಾರು ೫೦ ಭಾಗ ತಮಿಳುನಾಡಿನಲ್ಲಿ ನೀರಾವರಿ ಪ್ರದೇಶ ಇದೆ. ಆದರೆ ಕರ್ನಾಟಕದಲ್ಲಿ ಇರತಕ್ಕಂಥ ಎಲ್ಲಾ ಪ್ರಾಜೆಕ್ಟ್‌ಗಳನ್ನು ಕಂಪ್ಲೀಟ್ ಮಾಡಿದರೂ ಕರ್ನಾಟಕದಲ್ಲಿ ಸುಮಾರು ೧೮-೧೯ ಭಾಗ ನೀರಾವರಿಯಾಗುತ್ತದೆ. ನಮ್ಮಲ್ಲಿ ಇಷ್ಟೊಂದು ತಾರತಮ್ಯ ಇದ್ದರೂ ಕೂಡಾ ಇದನ್ನೆಲ್ಲಾ ಮರೆಮಾಚಿ ಕರ್ನಾಟಕದವರು ಏನೂ ಮಾಡಲಾರರು ಎಂದು ಏನಾದರೂ ಕೆಟ್ಟ ಹುಚ್ಚು ತೀರ್ಮಾನವನ್ನು ಅವರು ತೆಗೆದುಕೊಂಡರೆ ಯಾರೇ ಬಂದರೂ ಯಾರೇ ಹೇಳಿದರೂ ಲಕ್ಷಗಟ್ಟಲೇ ಸೈನ್ಯ ತಂದು ಅಲ್ಲಿ ನಿಲ್ಲಿಸಿದರೂ ಕೂಡಾ ತೃಣಮಾತ್ರವಾಗಿ ಹೋಗುತ್ತದೆ. ಈ ಒಂದು ಕೋಟಿ ಜನ ಎಲ್ಲಾ ತ್ಯಾಗಕ್ಕೂ ಸಿದ್ಧರಾಗುತ್ತೇವೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಪ್ರಾಜೆಕ್ಟ್‌ಗಳನ್ನು ಮೊದಲೇ ಮಾಡಬೇಕಾಗಿತ್ತು, ಅಧಿಕಾರದಲ್ಲಿ ಇದ್ದಂಥ ಮಂತ್ರಿಗಳು ಮತ್ತು ಇತರೆಯವರು ಮೆಚ್ಚಿಗೆಯನ್ನು ಪಡೆದುಕೊಳ್ಳುವುದಕ್ಕೋಸ್ಕರ ಅನೇಕ ಸಾರಿ ಅವರಿಗೆ ನೀರನ್ನು ಬಿಟ್ಟರು. ಒದೊಂದುಸಾರಿ ಹತ್ತು ಟಿ.ಎಂ.ಸಿ, ಇಪ್ಪತ್ತು ಟಿ.ಎಂ.ಸಿ. ನೀರನ್ನು ಬಿಟ್ಟರು. ನಾನು ಕೇಳುತ್ತೇನೆ ಯಾರ ಮನೆ ನೀರು ಎಂದು ಬಿಟ್ಟರು? ಯಾರ ದಾಕ್ಷಿಣ್ಯಕ್ಕಾಗಿ ನೀರನ್ನು ಬಿಟ್ಟರು? ಅದಕ್ಕಾಗಿ ಅವರಿಗೆ ರೈಪೇರಿಯನ್ ರೈಟ್ಸ್ ಬಂದಿದೆ. ನಮಗೂ ಹಕ್ಕು ಬಂದಿದೆ ಎಂದು ಹೇಳುತ್ತಾರೆ. ಆ ರೀತಿ ಹೇಳುವುದಕ್ಕೆ ಅವಕಾಶ ಮಾಡಿಕೊಟ್ಟವರು ಕರ್ನಾಟಕದ ಅನೇಕ ಜನ ಮಂತ್ರಿಗಳು. ಮೊದಲಿನಿಂದಲೂ ಇವರು ಸ್ಟ್ರಿಕ್ಟ್ ಆಗಿ ನಡೆದುಕೊಂಡಿದ್ದರೆ ಇಂಥ ಒಂದು ಅನ್ಯಾಯ ವಾಗುತ್ತಿರಲಿಲ್ಲ. ಮಾನ್ಯ ಮಾಜಿ ಮುಖ್ಯಮಂತ್ರಿಯಾದ ಬೊಮ್ಮಾಯಿಯವರು ತಂಜಾವೂರಿಗೆ ಚುನಾವಣಾ ಸಮಯದಲ್ಲಿ ಹೋಗಿದ್ದರು. ಕಾವೇರಿ ಬೇಸಿನ್‌ನಲ್ಲಿ ಉದಾರತೆಯಿಂದ ಹತ್ತು ಟಿ.ಎಂ.ಸಿ. ನೀರನ್ನು ಕೊಡುತ್ತೇವೆ ಎಂದು ಹೇಳಿ ಷೇಕ್‌ಹ್ಯಾಂಡ್ ಕೊಟ್ಟು ಬಂದರು. ಈ ರೀತಿ ಅನೇಕ ಅನೇಕ ಉದಾಹರಣೆಗಳು ಇವೆ. ನಾನು ೧೯೭೨ ರಿಂದ ೧೯೮೨ ರವರೆಗೆ ಎಂ.ಎಲ್.ಎ. ಆಗಿದ್ದೆ. ಬೆಳೆ ಒಣಗುತ್ತಿದೆ ಎಂದು ಹೇಳಿ ಟೆಲಿಗ್ರಾಂನ್ನು ಕೊಡುವುದು, ಇಲ್ಲಿಗೆ ಬಂದು ಷೇಕ್‌ಹ್ಯಾಂಡ್‌ನ್ನು ತೆಗದುಕೊಂಡು ನೀರನ್ನು ಬಿಡುವುದು ಅವರು ಇವರನ್ನು ದೊಡ್ಡ ಮನುಷ್ಯರು ಎಂದು ಹೊಗಳುವುದು, ನೀರನ್ನು ಬಿಟ್ಟುಬಿಡುವುದು. ಹೀಗೆ ಮಾಡಿ ರೈಪೇರಿಯನ್ ರೈಟ್ಸ್‌ನ್ನು ಜಾಸ್ತಿ ಮಾಡಿ ಈ ಭಾಗದ ರೈತರಿಗೆ ದ್ರೋಹ ಮಾಡಿದ್ದಾರೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮಾತು ಮಾತು ಎತ್ತಿದರೂ ಕೂಡ ತಮಿಳುನಾಡಿಗೆ ಅನುಕೂಲವಾಯಿತು ಎಂದು ಹೇಳಿದರೆ ಏತಕ್ಕೆ ಅನುಕೂಲವಾಯಿತು? ನಮ್ಮಲ್ಲಿ ಇಂಜಿನಿಯರ್‌ಗಳು ಇರಲಿಲ್ಲವೇ? ನಮ್ಮಲ್ಲಿ ಲಾಯರುಗಳು ಇರಲಿಲ್ಲವೇ? ನಮ್ಮಲ್ಲಿ ತಜ್ಞರು ಇರಲಿಲ್ಲವೇ? ಏನು ಮಾಡುತ್ತಿದ್ದೀರಿ ನೀವು? ನಾನು ಒಬ್ಬ ರೈತನ ಮಗನಾಗಿ ಈ ಮಾತನ್ನು ಕೇಳುತ್ತಿದ್ದೇನೆ, ಈ ದೇಶದ ಜನ ತೆರಿಗೆಯನ್ನು ಕೊಡುತ್ತಿರಲಿಲ್ಲವೇ? ಏನು ಕಡಿಮೆ ಇತ್ತು ಇವರಿಗೆ? ದುಡ್ಡು ಕೊಡುವುದಿಲ್ಲ ಎಂದು ಹೇಳುತ್ತಿದ್ದರೇನು? ಯಾರೋ ಮಾಡಿದ್ದಾರೆ, ಅವರು ಯಾರೋ ರೈತರು? ಅವರು ಇದ್ದರೆಷ್ಟು ಹೋದರೆಷ್ಟು? ಬೆಳೆದರೆಷ್ಟು ಬಿಟ್ಟರೆಷ್ಟು ಎನ್ನುವ ಉದಾಸಿನದಲ್ಲಿ ದ್ರೋಹ ಮಾಡಿ ಈ ಭಾಗದ ಜನರಿಗೆ ಟ್ರಿಬ್ಯೂನಲ್‌ನ್ನು ಮಾಡಿದ್ದಾರೆ, ಏನು ಮಾಡುವುದು ಎಂದು ಹೇಳಿದರೆ ಜನರು ಕೇಳುತ್ತಾರೆಯೇ?

ನ್ಯಾಯವಾಗಿ ಮಾಡಬೇಕಾದ್ದನ್ನು ಮಾಡಿ ಎಂಬ ಪ್ರಶ್ನೆಯನ್ನು ನಾವು ಕೇಳೇ ಕೇಳುತ್ತೇವೆ. ಅದಕ್ಕೆ ತಕ್ಕಂಥ ಹೋರಾಟವನ್ನು ಮಾಡುತ್ತೇವೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ, ಮಾನ್ಯ ವೀರೇಂದ್ರ ಪಾಟೀಲರು ೧೯೬೨ನೇ ಇಸವಿಯಲ್ಲಿ ಶ್ರೀ ಎಸ್. ನಿಜಲಿಂಗಪ್ಪನವರು ಮುಖ್ಯಮಂತ್ರಿಗಳಾಗಿದ್ದರು ಎಂದು ಕಾಣುತ್ತದೆ, ಆಗ ಇವರು ಲೋಕೋಪಯೋಗಿ ಸಚಿವರು ಆಗಿದ್ದರು. ಆ ಸಂದರ್ಭದಲ್ಲಿ ಹಾರಂಗಿ, ಕಬಿನಿ ಹೇಮಾವತಿ ಪ್ರಾಜೆಕ್ಟ್‌ಗಳನ್ನು ಬಹುಶಃ ದೊಡ್ಡ ಮನಸ್ಸು ಮಾಡಿ ಮಾಡದೇ ಇದ್ದಿದ್ದರೆ ನಾವು ನೀರಿನ ಹಕ್ಕನ್ನು ಕಳೆದುಕೊಳ್ಳುತ್ತಿದ್ದೆವು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ನೆನೆಸಿಕೊಂಡರೆ ಭಯ ಆಗುತ್ತದೆ. ಈ ಒಂದು ಅನ್ಯಾಯ ಆಗಿರುವಾಗ ಈಗಲಾದರೂ ಕೂಡ ಅಧಿಕಾರವನ್ನು ಮಾಡುತ್ತಾ ಇರತಕ್ಕಂಥ ಜನ ಎಚ್ಚೆತ್ತು ಯಾವ ದಾಕ್ಷಿಣ್ಯಕ್ಕೂ ಒಳಗಾಗದೆ ನ್ಯಾಯವಾದ ನೀರಿನ ಹಕ್ಕಿಗೋಸ್ಕರವಾಗಿ ಹೋರಾಟವನ್ನು ಮಾಡಬೇಕು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅಪ್ಪರ್ ಕೃಷ್ಣಾ ಪ್ರಾಜೆಕ್ಟ್ ಅನ್ನು ಎರಡು ಸಾವಿರದ ಇಸವಿಯೊಳಗೆ ಮುಗಿಸಬೇಕು ಎಂದು ಹೇಳಿ ವರ್ಲ್ಡ್ ಬ್ಯಾಂಕ್‌ನಿಂದ ಲೋನ್ ತೆಗೆದುಕೊಂಡು ಪ್ರಾಜೆಕ್ಟ್‌ಗಳನ್ನು ಕಂಪ್ಲೀಟ್ ಮಾಡುತ್ತೇವೆಂದು ಹೇಳಿದ್ದಾರೆ ಸಂತೋಷ. ಆ ಭಾಗದ ಜನರಿಗೆ ಅನುಕೂಲ ಆಗುತ್ತದೆ. ಆದರೆ ಕಾವೇರಿ ಬೇಸಿನ್‌ನಲ್ಲಿರತಕ್ಕ ಪ್ರಾಜೆಕ್ಟ್‌ಗಳಿಗೆ ವರ್ಲ್ಡ್ ಬ್ಯಾಂಕ್‌ನಿಂದಾಗಲೀ ಅಥವಾ ಬೇರೆ ಯಾವುದಾದರೂ ದೇಶದಿಂದಾಗಲೀ, ಸಾಲವನ್ನು ತಂದು ಈ ಡ್ಯಾಮ್‌ಗಳನ್ನು ಕಂಪ್ಲೀಟ್ ಮಾಡುತ್ತಾ ಇದರ ಒಳೆ ಯಾದಿತ್ತು. ಮಾಡಬೇಕು ಎನ್ನುವ ವಿಚಾರ ಇದ್ದಿದ್ದರೆ ಅಥವಾ ದೊಡ್ಡ

ಮನಸ್ಸು ಇದ್ದಿದ್ದರೆ ಅದಕ್ಕೆ ಅಡಚಣೆ ಯಾರೂ ಬರುತ್ತಾ ಇರಲಿಲ್ಲ. ಏಕೆ ಈ ರೀತಿ ಮಾಡಲಿಲ್ಲ ಎಂದು ಕೇಳಲಿಕ್ಕೆ ಇಚ್ಛೆಪಡುತ್ತೇನೆ. ಹಿಂದೆ ಆದುದ್ದು ಆಯಿತು, ಮುಂದಾದರೂ ತಕ್ಷಣ ಎಚ್ಚೆತ್ತು ಪ್ರಾಜೆಕ್ಟ್‌ಗಳಿಗೆ ಬೇಕಾದಂತಹ ಹಣವನ್ನು ಫಾರೀನ್ ಕಂಟ್ರಿಯಿಂದ ಲೋನ್ ತಂದು ಅಥವಾ ವರ್ಲ್ಡ್ ಬ್ಯಾಂಕ್‌ನಿಂದ ಲೋನ್ ತಂದು ಪ್ರಾಜೆಕ್ಟ್‌ಗಳನ್ನು ಆದಷ್ಟು ಜಾಗ್ರತೆ ಮುಗಿಸಿ ರೈತರ ಕಣ್ಣೀರಿನ ಶಾಪ ಏನು ಇದೆ ಅದರಿಂದ ಬಿಡುಗಡೆ ಆಗುವಂತೆ ಮಾಡಬೇಕೆಂದು ಎಂದು ಬಹಳ ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ ಎಲ್ಲೆಲ್ಲಿ ಸಾಧ್ಯವೋ ಅಲ್ಲಿ ಲಿಫ್ಟ್ ಇರಿಗೇಷನ್ ಮಾಡಿ ತಕ್ಷಣ ನೀರು ಕೊಡಬಹುದು. ಸಾವಿರಾರು ಲಿಫ್ಟ್ ಇರಿಗೇಷನ್ ಮಾಡಿದರೆ ಲಕ್ಷಾಂತರ ಎಕರೆಗೆ ನೀರಾವರಿ ಕೊಡುವುದಕ್ಕೆ ಅವಕಾಶ ಇದೆ. ತಕ್ಷಣ ಸರ್ಕಾರದವರು ಇದಕ್ಕೆ ಗಮನ ಕೊಡಬೇಕೆಂದು ಈ ಸಂದರ್ಭದಲ್ಲಿ ತಿಳಿಸಲು ಇಚ್ಛೆಪಡುತ್ತೇನೆ. ಕೊನೆಯದಾಗಿ ಟ್ರಿಬ್ಯೂನಲ್‌ಗೆ ನಾವು ಖಂಡಿತವಾಗಿ ಹೆದರುವ ಅವಶ್ಯಕತೆ ಇಲ್ಲ. ಟ್ರಿಬ್ಯೂನಲ್‌ಗೆ ಎಷ್ಟು ಸಾಧ್ಯವೋ ಅಷ್ಟು ಎಲ್ಲಾ ರೀತಿಯ ಮಾಹಿತಿಗಳನ್ನು ಕೊಟ್ಟು ಕಠಿಣ ಪದದಲ್ಲಿ ಹೇಳುವುದಾದರೆ ಏನಾದರೂ ಒಂದು ಚೂರು ಅನ್ಯಾಯ ಆದರೆ ಕರ್ನಾಟಕವು ಸಹ ಪಂಜಾಬ್ ಆಗುತ್ತದೆ ಅದಕ್ಕೂ ಕೂಡ ರಾಜ್ಯದ ರೈತರು ತಯಾರು ಇದ್ದಾರೆ ಎನ್ನುವ ಮಾತನ್ನು ತಿಳಿಸಿ ನ್ಯಾಯವಾದ ನೀರಿನ ಹಕ್ಕಿಗೋಸ್ಕರ ಹೋರಾಟ ಮಾಡಬೇಕೆಂದು ಹೇಳುತ್ತೇನೆ. ಇಂತಹ ಒಂದು ಶಕ್ತಿಯನ್ನು ಶ್ರೀಮಾನ್ ವೀರೇಂದ್ರ ಪಾಟೀಲರು ಪ್ರದರ್ಶನ ಮಾಡಿ ಕರ್ನಾಟಕದಲ್ಲಿ ಮುಖ್ಯವಾಗಿ ಕಾವೇರಿ ಬೇಸಿನ್‌ನ ರೈತರ ಹಕ್ಕಿನ ರಕ್ಷಣೆ ಮಾಡುತ್ತಾರೆ ಎಂದು ಹೇಳುತ್ತೇನೆ. ಹಿಂದೆ ಅವರ ಕಾಲದಲ್ಲಿ ಮೂರು ನಾಲ್ಕು ಡ್ಯಾಮ್‌ಗಳು ಆಯಿತು. ಕಂಪ್ಲೀಟ್ ಆಗದಿರುವ ಪ್ರಾಜೆಕ್ಟ್‌ಗಳನ್ನು ಕಂಪ್ಲೀಟ್ ಮಾಡಬೇಕು. ಯಾವ ವಿಧವಾದಂತಹ ದಾಕ್ಷಿಣ್ಯಕ್ಕೂ ಇನ್ನು ಮೇಲಾದರೂ ಒಳಗಾಗಕೂಡದು. ಇನ್ನು ಎರಡು ಮೂರು ತಿಂಗಳು ಕಳೆದರೆ ಬೆಳೆ ಒಣಗಿ ಹೋಗುತ್ತಿದೆ ನೀರು ಕೊಡಿ ಎಂದು ಆ ಕಡೆಯಿಂದ ಬೇಡಿಕೆ ಬರುತ್ತದೆ. ಈ ಕಡೆಯಿಂದ ಒಂದು ಹನಿ ನೀರನ್ನು ಬಿಟ್ಟು ಕೊಟ್ಟರೂ ಕೂಡ ಕರ್ನಾಟಕದ ರೈತರಿಗೆ ದ್ರೋಹ ಮಾಡಿದ ಹಾಗೆ ಆಗುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಇವರು ಬಿಟ್ಟ ಬಿಟ್ಟ ಹಾಗೆ ಅವರು ಏರಿಯ ಜಾಸ್ತಿ ಮಾಡಿಕೊಳ್ಳುತ್ತಿದ್ದಾರೆ. ರೈಪೇರಿಯನ್ ರೈಟ್ಸ್ ಎಂದು ಹೇಳುತ್ತಾರೆ. ರೈಟ್ಸ್ ಅಥವಾ ಪ್ರೈಟ್ ಎಂದರೆ ನಾವು ಕೇಳುವುದಿಲ್ಲ. ರೈಟ್ ಇದ್ದರೆ ಅವರ ಮನೆಯ ಹತ್ತಿರ ಇಟ್ಟುಕೊಳ್ಳಲಿ. ಇಲ್ಲಿ ನಮಗೆ ನ್ಯಾಯವಾಗಿ ಬರಬೇಕಾದ್ದನ್ನು ಬಿಟ್ಟು ಉಳಿದುದನ್ನು ಅವರು ಉಪಯೋಗಿಸಿಕೊಳ್ಳಲಿ ಎಂದು ಈ ಸಂದರ್ಭದಲ್ಲಿ ತಿಳಿಸುತ್ತೇನೆ. ಕರ್ನಾಟಕದ ಜನತೆಗೆ ಅನ್ಯಾಯ ಆಗದ ಹಾಗೆ ಏನೇ ಕಾರ್ಯಕ್ರಮಗಳನ್ನು ತೆಗೆದುಕೊಂಡರೂ ಸಹ ೧೦೦ಕ್ಕೆ ೧೦೦ ಭಾಗ ಈ ಸದನದಲ್ಲಿ ಸರ್ಕಾರದ ಹಿಂದೆ ಇದೆ, ಮುಖ್ಯ ಮಂತ್ರಿಗಳ ಹಿಂದೆ ಇದೆ ಎಂದು ಹೇಳುತ್ತೇನೆ. ಹಾಗೆಯೇ ನಾಲ್ಕು ಕೋಟಿ ಕರ್ನಾಟಕದ ಜನ ಹಿಂದೆ ಇದ್ದಾರೆ. ಒಂದು ದೃಢವಾದ ನಿಲುವನ್ನು ತೆಗೆದುಕೊಂಡು ಕಾವೇರಿ ಬೇಸಿನ್‌ನಲ್ಲಿನ ರೈತರಿಗೆ ಆಗತಕ್ಕ ಅನ್ಯಾಯವನ್ನು ಹೋಗಲಾಡಿಸಬೇಕೆಂದೂ ಹಾಗೂ ಅವರಿಗೆ ಆಗತಕ್ಕ ಅನುಕೂಲತೆ ಬಗ್ಗೆ ಸರ್ವ ಪ್ರಯತ್ನವನ್ನು ಮಾಡಬೇಕೆಂದು ತಿಳಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಪ್ರಕಟಣೆ ೧

ಉಪಾಧ್ಯಕ್ಷರು.—ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ೯ ನೇ ನಿಯಮದ ಮೇರೆಗೆ ಈ ಕೆಳಕಂಡ ಸದಸ್ಯರುಗಳನ್ನು ಪ್ರಸ್ತುತ ಅಧಿವೇಶನದ ಸಮಯದಲ್ಲಿ ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಗೈರು ಹಾಜರಿಯಲ್ಲಿ ಅಧ್ಯಕ್ಷತೆಯನ್ನು ವಹಿಸಿಕೊಳ್ಳಲು ನಾನು ನಿರ್ದೇಶನ ಮಾಡಿದ್ದೇನೆ.

೧. ಶ್ರೀಮತಿ ರೇಣುಕಾ ರಾಜೇಂದ್ರನ್

೨. ಶ್ರೀ ಜಿ.ಎಸ್. ಆಚಾರ್

೩. ಶ್ರೀ ಬಿ. ಸ್ವಾಮಿ ರಾವ್

೪. ಶ್ರೀ ಬಸವರಾಜ ಪಾಟೀಲ್ ಅಟ್ಟೂರ್

೫. ಶ್ರೀ ಟಿ.ಬಿ. ಜಯಚಂದ್ರ

೬. ಶ್ರೀ ಎಸ್.ಹೆಚ್. ಕೌಜಲಗಿ

ಹಾಗೆಯೇ ವಿಧಾನ ಪರಿಷತ್ತಿನ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿದೆ.

ಕರ್ನಾಟಕ ವಿಧಾನ ಸಭೆಯಿಂದ ವಿಧಾನ ಪರಿಷತ್ತಿನ ಅನುಮೋದನೆಗಾಗಿ ಕಳುಹಿಸಲಾದ ಕೆಳಕಂಡ ವಿಧೇಯಕಗಳಿಗೆ ದಿನಾಂಕ ೪ನೇ ಏಪ್ರಿಲ್ ೧೯೯೦ ರಂದು ವಿಧಾನ ಪರಿಷತ್ತು ಅನುಮೋದನೆ ನೀಡಲಿಲ್ಲವೆಂದು ತಿಳಿಸಿರುತ್ತಾರೆ.

೧. ೧೯೯೦ನೇ ಇಸವಿಯ ಕರ್ನಾಟಕ ಮಹಾ ನಗರ ಪಾಲಿಕೆಗಳ (ತಿದ್ದುಪಡಿ) ವಿಧೇಯಕ.

೨. ೧೯೯೦ನೇ ಇಸವಿಯ ಕರ್ನಾಟಕ ಜಿಲ್ಲಾ ಪರಿಷತ್ತುಗಳು, ತಾಲ್ಲೂಕು ಪಂಚಾಯತ್, ಮಂಡಲ ಪಂಚಾಯುತಿಗಳ ಮತ್ತು ನ್ಯಾಯ ಪಂಚಾಯುತಿಗಳ (ತಿದ್ದುಪಡಿ) ವಿಧೇಯಕ.

ಕಾವೇರಿ ಜಲವಿವಾದದ ಬಗ್ಗೆ ಚರ್ಚೆ (ಮು.ವ.)

† ಶ್ರೀ ಕೆ. ಲಕ್ಕಪ್ಪ (ಕುಣಿಗಲ್) —ಮಾನ್ಯ ಅಧ್ಯಕ್ಷರೆ, ಈ ಕಾವೇರಿ ನದಿ ನೀರಿನ ವಿವಾದದ ಬಗ್ಗೆ ಈ ರಾಜ್ಯದಲ್ಲಿ ಮತ್ತು ರಾಜ್ಯಮಟ್ಟದಲ್ಲಿ ಅನೇಕ ಚರ್ಚೆಗಳು ನಡೆದಿವೆ. ಈ ರಾಜ್ಯದ ಹಸಿರು ಕ್ರಾಂತಿಗೆ ಅತಿಮುಖ್ಯವಾದಂಥ ನೀರಿನ ಉಪಯೋಗ ಮಾಡತಕ್ಕಂಥ ಬಹಳ ಗಮನಾರ್ಹವಾದಂಥ ವಿಚಾರದ ಬಗ್ಗೆ ಚರ್ಚೆ ನಡೆದಿದೆ. ಈ ರಾಷ್ಟ್ರದಲ್ಲಿರತಕ್ಕಂಥ ನೀರಿನ ವಿಚಾರಗಳು ಅನೇಕ ರಾಜ್ಯಗಳಲ್ಲಿ ಗೊಂದಲವನ್ನುಂಟುಮಾಡಿ ಈ ರಾಷ್ಟ್ರದ ಅನೇಕ ಭಾಗಗಳು ಈ ದಿವಸ ನೀರಾವರಿಯಿಲ್ಲದೆ ಈ ರಾಷ್ಟ್ರದಲ್ಲಿ ಅನೇಕ ರಾಜ್ಯಗಳು ತೊಂದರೆಗೆ ಈಡಾಗಿರತಕ್ಕಂಥ ವಿಚಾರವನ್ನು ನಾನು ಹೆಚ್ಚಿಗೆ ಹೇಳಬೇಕಾಗಿಲ್ಲ. ಅದೇರೀತಿಯಾಗಿ ಈ ರಾಜ್ಯದ ಮತ್ತು ನೆರೆ ರಾಜ್ಯಗಳ ನೀರಿನ ಹಂಚಿಕೆ ವಿವಾದ ರಾಷ್ಟ್ರದ ಗಮನವನ್ನು ಸೆಳೆದು ಅನೇಕ ಚರ್ಚೆಗಳು ಸಂಸತ್ತಿನಲ್ಲಿ ಮತ್ತು ರಾಜ್ಯಗಳ ವಿಧಾನಸಭೆಗಳಲ್ಲೂ ಕೂಡ ನಡೆದಿವೆ. ಸುಮಾರು ೧೯೬೭ ರಿಂದ, ೧೯೭೭ ರಿಂದ ಈ ವಿಧಾನ ಸಭೆಯಲ್ಲಿ ಮತ್ತು ಈ ರಾಷ್ಟ್ರದ ಸಂಸತ್ತಿನಲ್ಲಿ ವಿರೋಧಪಕ್ಷದ ಸದಸ್ಯನಾಗಿ ಮತ್ತು ಆಡಳಿತ ಪಕ್ಷದ ಸದಸ್ಯನಾಗಿ ಕೂಡ ನಾನು ಅನೇಕ ಸಾರಿ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದೇನೆ. ಈಗ ಮುಖ್ಯಮಂತ್ರಿಗಳಾಗಿರತಕ್ಕಂಥ ಮಾನ್ಯ ವೀರೇಂದ್ರ ಪಾಟೀಲರು ಹಿಂದೆ ಮುಖ್ಯ ಮಂತ್ರಿಗಳಾಗಿದ್ದಂಥ ಕಾಲದಲ್ಲಿ ಮತ್ತು ಅದಕ್ಕಿಂತ ಹಿಂದೆ ಶ್ರೀಮಾನ್ ನಿಜಲಿಂಗಪ್ಪನವರು ಮುಖ್ಯ ಮಂತ್ರಿಗಳಾಗಿದ್ದಂಥ ಕಾಲದಲ್ಲೂ ಕೂಡ ಈ ಬಗ್ಗೆ ಚರ್ಚೆ ನಡೆದಿದೆ. ೧೯೧೧ ರಲ್ಲೋ ಏನೋ ಈ ಕಾವೇರಿ ನೀರಿನ ವಿವಾದ ಪ್ರಾರಂಭವಾಗಿದ್ದು ಅನೇಕ ಲೇಖನಗಳು ಮತ್ತು ಬರವಣಿಗೆಗಳು ಪ್ರತಿಕೆಗಳ ಮೂಲಕ ಬಂದಿವೆ ಮತ್ತು ಚರ್ಚೆಗಳ ಮೂಲಕ ವಿಚಾರ ಗೊತ್ತಾಗಿದೆ, ೧೯೧೧ ರಲ್ಲಿ ಕೆ ಆರ್. ಎಸ್. ಡ್ಯಾಮನ್ನು ಕಟ್ಟಿದಾಗ ಎಲ್ಲಿ ೮೦ ಅಡಿ ಎತ್ತರ ಕಟ್ಟಬೇಕು ಮತ್ತು ಅಲ್ಲಿರತಕ್ಕಂಥ ೧೧ ಕ್ಯೂಬಿಕ್ ನೀರನ್ನು ಉಪಯೋಗಿಸತಕ್ಕಂಥ ಕಾಲದಲ್ಲಿ ಸರ್. ಎಂ. ವಿಶ್ವೇಶ್ವರಯ್ಯನವರನ್ನು ಮದ್ರಾಸ್ ಸರ್ಕಾರ ವಿರೋಧಮಾಡಿದೆ. ಅದೇರೀತಿ ಪುನಃ ೧೨೪ ಅಡಿ ಎತ್ತಿಸಿದಂಥ ಕಾಲದಲ್ಲಿ ಅವರು ೪೮ ಟಿಎಂಸಿಎಫ್‌ಟಿ ವಾಟರನ್ನು ಉಪಯೋಗಿಸಬೇಕು ಎಂಬವಿವಾದ ಎದ್ದಾಗಲೂ ಕೂಡ ಎರಡೂ ರಾಜ್ಯಗಳಿಗೂ ಕೂಡ ವ್ಯವಹಾರ ಆಗಿದ್ದುದು ಎಲ್ಲರಿಗೂ ಕೂಡ ಗೊತ್ತಿದೆ. ೧೯೨೪ರಲ್ಲಿ ಅಗ್ರಿಮೆಂಟ್ ಆಗಿ ಆಮೇಲೆ ೧೯೭೪ರಲ್ಲಿ ಆಗಿ, ಹೀಗೆ ಅಗ್ರಿಮೆಂಟ್‌ಗಳ ಬಗ್ಗೆ ಅನೇಕ ರೀತಿಯಲ್ಲಿ ವಿವಾದಗಳು ಎದ್ದು ಯಾವ ರಾಜ್ಯಗಳೂ ಕೂಡ ಸಮರ್ಪಕವಾದಂಥ ಒಂದು ತೀರ್ಮಾನಕ್ಕೆ ಬರದೆ ರಾಷ್ಟ್ರಮಟ್ಟದಲ್ಲಿ ಇದನ್ನು ಗೊಂದಲವಾಗಿ ಮಾಡಿಬಿಟ್ಟರು. ಎಲ್ಲಾ ಗೊಂದಲಮಯವಾಗಿದೆ, ಈ ರಾಜ್ಯದ ನೀರಿನ ವಿವಾದದ ಬಗ್ಗೆ ಅನೇಕ ತಜ್ಞರು ಹೇಳಿದ್ದಾರೆ. ಈ ಒಂದು ನೀರಿನ ವಿವಾದವನ್ನು ನಾವು ತೀರ್ಮಾನ ಮಾಡದಿದ್ದರೆ, ರಾಜ್ಯ ಮಟ್ಟದಲ್ಲಿ ತೀರ್ಮಾನ ಮಾಡಿ, ಎಲ್ಲಾ ನೀರಿನ ಹಂಚಿಕೆಯನ್ನು ರಾಷ್ಟ್ರೀಕರಣ ಮಾಡಿ, ಈ ರಾಷ್ಟ್ರದ ಸಂಪನ್ಮೂಲವನ್ನು ಎಲ್ಲಾ ರಾಜ್ಯಗಳಿಗೂ, ಯಾವ ರಾಜ್ಯದಲ್ಲಿ ನೀರು ಇದೆ, ಯಾವ ರಾಜ್ಯದಲ್ಲಿ ಅಭಾವ ಇದೆ, ರಾಜ್ಯಗಳ ಬೆಳವಣಿಗೆ ಹಾಗೂ ಬಡತನ ಮತ್ತು ಆರ್ಥಿಕ ಸಾಮಾಜಿಕ ಪರಿಸ್ಥಿತಿಯನ್ನು ನೋಡಿಕೊಂಡು, ಸಮಾನತೆಯ ದೃಷ್ಟಿಯಿಂದ ನೀರನ್ನು ಹಂಚಿಕೆ ಮಾಡಿದರೆ, ರಾಷ್ಟ್ರ ಸಮೃದ್ಧವಾಗಿ ಆಗುತ್ತದೆ. ಎಲ್ಲಾ ಕಡೆಯಲ್ಲಿಯೂ ಏಕರೀತಿಯಿಂದ ರಾಜ್ಯದ ಅಭಿವೃದ್ಧಿಗೆ ಕಾರಣವಾಗುತ್ತದೆ. ಈ ದೃಷ್ಟಿಯಿಂದ ನದಿ ನೀರನ್ನು ರಾಷ್ಟ್ರೀಕರಣ ಮಾಡಬೇಕೆನ್ನುವ ಮಾತನ್ನು ರಾಷ್ಟ್ರಮಟ್ಟದಲ್ಲಿ ಸಂಸತ್ತಿನಲ್ಲಿ ಈ ವಿಚಾರ ಬಂದಾಗ ಅನೇಕ ಸದಸ್ಯರುಗಳು ಹೇಳಿದ್ದಾರೆ. ಕೊನೆಗೆ ಏನಾಯಿತೆಂದರೆ, ಈ ವಿವಾದವನ್ನು ರಾಜ್ಯಮಟ್ಟಕ್ಕೆ ತಂದರು. ರಾಜ್ಯಗಳ ತೀರ್ಮಾನಕ್ಕೆ ಬಿಡದೇ ಇರುವುದಕ್ಕೆ ಕೇಂದ್ರ ಸರ್ಕಾರದ ಒಂದು ನೀತಿ ಕಾರಣವಾಗಿದೆ. ಈ ಒಂದು ನದಿ ನೀರಿನ ವಿವಾದಲ್ಲಿ ಮದ್ರಾಸ್ ಕೇರಳ ಪಾಂಡಿಚೇರಿ ಹಾಗೂ ಕರ್ನಾಟಕ ರಾಜ್ಯಗಳು ಸಿಕ್ಕಿವೆ. ಮದ್ರಾಸ್ ರಾಜ್ಯದವರು ಬಹುಮಟ್ಟಿಗೆ ನಮಗೆ ಸೇರಿಸಬೇಕಾದ ಹೆಚ್ಚಿನ ಭಾಗದ ನೀರನ್ನು ಉಪಯೋಗಿಸಿದರೂ. ಕರ್ನಾಟಕದಲ್ಲಿ ಬಂದಂಥ ಇಂದಿನ ಸರ್ಕಾರ ಇರಬಹುದು, ಹಿಂದಿನ ಸರ್ಕಾರಗಳಿರಬಹುದು, ಅದಕ್ಕೂ ಹಿಂದೆ ಇದ್ದಂಥ ಸರ್ಕಾರಗಳು ಇರಬಹುದು ತಮ್ಮ ಪ್ರತಿಭಟನೆಯನ್ನು ಲಿಖಿತ ಮೂಲಕ ಈ ಸಭೆಯ ಹಾಗೂ ಸಂವಿಧಾನ ಒಂದು ಆಶ್ರಯದಲ್ಲಿ ಸಹನೆ ಸಹಕಾರದ ಮೂಲಕ ಇತ್ಯರ್ಥ ಮಾಡತಕ್ಕ ಮಾತುಗಳನ್ನು ಆಡಲಾಯಿತೇ

ಪೊರತು. ಯಾವ ಸರ್ಕಾರವು ಕೂಡ ಸರಿಯಾದ ರೀತಿಯಲ್ಲಿ ತನ್ನ ಪಾಲಿನ ನೀರನ್ನು ಪೂರ್ಣ ಪ್ರಮಾಣದಲ್ಲಿ ಉಪಯೋಗಿಸುವುದಕ್ಕೆ ಏರ್ಪಾಡು ಮಾಡಲಿಲ್ಲ. ಪ್ರತಿಯೊಂದು ಸರ್ಕಾರಗಳೂ ಆರ್ಥಿಕತೆಂದರೆ ಎನ್ನತಕ್ಕ ಮಾತುಗಳನ್ನು ಹೇಳುತ್ತಲೆ ಬಂದಿವೆ. ನಮ್ಮ ಪಾಲಿನ ನೀರನ್ನು ಉಪಯೋಗಿಸದೇ ಬಿಟ್ಟದ್ದು ನಾವು ಮಾಡಿದ ಮೊದಲನೆಯ ತಪ್ಪು. ಮದ್ರಾಸ್ ರಾಜ್ಯದವರು ಏನು ಮಾಡಿದರು ಅಂದರೆ. ೧.೬ ಮಿಲಿಯನ್ ಲಕ್ಷ ಎಕರೆಗೆ ನೀರನ್ನು ಕೊಡತಕ್ಕ ವ್ಯವಸ್ಥೆ ಇದ್ದರೂ ಕರ್ನಾಟಕದ ಪಾಲನ್ನು ಉಪಯೋಗಿಸಿಕೊಂಡು, ೨.೮೨ ಮಿಲಿಯನ್ ಎಕರೆಗೆ ಆಗತಕ್ಕಂಥ ತಮ್ಮ ಒಳಗೆ ಉಪಯೋಗಿಸಿಕೊಂಡರು. ಕೇಂದ್ರದಲ್ಲಿ ನಮ್ಮ ಕೆ. ಎಲ್. ರಾವ್ ಇದ್ದಂತ ಸಂದರ್ಭದಲ್ಲಿ, ಸಂಸತ್ತಿನಲ್ಲಿ ಈ ವಿಚಾರ ಚರ್ಚೆಗೆ ಬಂದಾಗಲೂ ಕೂಡ ನಮ್ಮ ರಾಜ್ಯ ಸರ್ಕಾರ ಧೈರ್ಯವಾದ ನಿಲುವನ್ನು ತೆಗೆದುಕೊಳ್ಳಲಿಲ್ಲ.

ಹಿಂದಿನ ರಾಜ್ಯ ಸರ್ಕಾರಗಳು ಸರಿಯಾದ ರೀತಿಯಲ್ಲಿ ಧೈರ್ಯವಾಗಿ ಕೆಲಸ ಮಾಡಲಿಲ್ಲ. ಅದ್ದರಿಂದ ಕರ್ನಾಟಕ ರಾಜ್ಯದ ಸಹನೆಯನ್ನು, ಕರ್ನಾಟಕ ರಾಜ್ಯದ ದುರ್ಬಲತೆಯನ್ನು ದುರುಪಯೋಗಪಡಿಸಿಕೊಂಡಂಥ ತಮಿಳುನಾಡು ಸರ್ಕಾರ ತಮ್ಮ ಅಚ್ಚುಕಟ್ಟುಗಳ ಜಮೀನುಗಳಿಗೆ ನೀರನ್ನು ಬಳಸಿಕೊಳ್ಳತಕ್ಕದ್ದನ್ನು ಅವರು ಉಪಯೋಗಿಸಿ ಕೊಂಡಿದ್ದಾರೆ. ಈಗ ನಮ್ಮ ಪಾಲಿನ ನೀರನ್ನು ಇನ್ನೂ ಕಬಳಿಸುವುದಕ್ಕೆ ಪ್ರಯತ್ನ ನಡೆಸಿ, ತಮಿಳುನಾಡು ರಾಜ್ಯ ಸರ್ಕಾರ ಕೇಂದ್ರ ಸರಕಾರ ದ ಮೇಲೆ ತಮ್ಮ ಪ್ರಭಾವ ಬೀರತಕ್ಕ ಒಂದು ವ್ಯವಸ್ಥೆ ತವಾದುತಹ ಒಂದು ರಾಜಕೀಯ ಕುತಂತ್ರವನ್ನು ನಡೆಸಿ ಈಗಿನ ಕೇಂದ್ರ ಸರ್ಕಾರವನ್ನು ಮಣಿಯತಕ್ಕ ರೀತಿಯಲ್ಲಿ ಮಾಡಿರತಕ್ಕದ್ದು ಬಹಳ ವಿಷಾದನೀಯ. ಈ ಮಾತನ್ನು ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ ಹಿಂದೆ ಮುಖ್ಯಮಂತ್ರಿಯಾದ ವೀರೇಂದ್ರ ಪಾಟೀಲರು ಇದ್ದಾಗಲೂ ಕೂಡ ಇದೇ ತೀರ್ಮಾನವನ್ನು ವಿಧಾನಸಭೆಯಲ್ಲಿ ತೆಗೆದುಕೊಂಡಿದ್ದೇವೆ. ವಿರೋಧ ಪಕ್ಷದ, ಆಡಳಿತ ಪಕ್ಷದ ಎಲ್ಲಾ ಜನರಿಗೂ ಸಹ ಕರ್ನಾಟಕ ರಾಜ್ಯದ ಹಿತದೃಷ್ಟಿ ಮುಖ್ಯವಾದದ್ದು. ವಿರೋಧ ಪಕ್ಷದವರನ್ನು ಕೂಡ ನಾವು ಟೀಕೆ ಮಾಡತಕ್ಕದು ಅಲ್ಲ. ಏಕೆಂದರೆ ಆಡಳಿತ ಸೂತ್ರ ಹಿಡಿದಿರುವ ನಾವು ಈ ರಾಜ್ಯದ ನೀರಿನ ಪಾಲಿನ ಬಗ್ಗೆ ಸರಿಯಾದ ರೀತಿಯಲ್ಲಿ ನಿರ್ಧಾರ ಮಾಡಬೇಕಾದ್ದು ನಮ್ಮ ಕರ್ತವ್ಯ. ನಮ್ಮ ರಾಜ್ಯಕ್ಕೂ ಅವರ ರಾಜ್ಯಕ್ಕೂ ಸಂಬಂಧಪಟ್ಟ ಸುಮಾರು ೨೪ ವಿವಾದಗಳು ನಡೆದಿದೆ. ಬಹುಶಃ ಚೆನ್ನಬಸಪ್ಪನವರು ಕಮಿಟಿಯಲ್ಲಿ ನಾವು ಸಂಸತ್ ಸದಸ್ಯರಾಗಿ ಸುಮಾರು ೫೦–೬೦ ಕಮಿಟಿಗಳಿಗೆ ಅಟೆಂಡ್ ಮಾಡಿದ್ದೇವೆ. ಈ ಕಮಿಟಿಗಳಲ್ಲಿ ಚರ್ಚೆ ನಡೆಸಿ, ಆ ಚರ್ಚೆಯಲ್ಲಿ ನಡೆದಂತಹ ತೀರ್ಮಾನಗಳು, ನಾವು ಬಹಿರಂಗವಾಗಿ ಬರೆದಂತಹ ಕಾಗದ ಪತ್ರಗಳು, ನಾವು ಕೇಂದ್ರ ಸರ್ಕಾರದ ಮೇಲೆ ಹೇರಿದಂಥ ಎಲ್ಲಾ ಒತ್ತಾಯಗಳೂ ಕೂಡ ಕೇಂದ್ರ ಸರ್ಕಾರದ ಕಿವಿಗೆ ಮುಟ್ಟಿಲ್ಲವೆಂಬ ಪರಿಸ್ಥಿತಿ ನಮಗೆ ಬಂದಿದೆ. ಇಂತಹ ಪರಿಸ್ಥಿತಿಗೆ ಕಾರಣ ಈ ರಾಜ್ಯದ ಹತೋಟಿ ಸೂತ್ರವನ್ನು ಹಿಡಿದಿರತಕ್ಕ ಸರ್ಕಾರಗಳು ಯಾವ ರೀತಿಯಲ್ಲೂ ಸರಿಯಾಗಿ ಕೆಲಸ ಮಾಡಿಲ್ಲ. ಕಾವೇರಿ ನೀರು ನಮ್ಮ ಕಡೆಯಿಂದ ಮದರಾಸಿನ ಕಡೆಗೆ ಹರಿಯುತ್ತಿದೆ. ಅವರು ನಮ್ಮ ನೀರನ್ನು ಉಪಯೋಗಿಸಲು ನಾವು ಸಹನೆ ತೋರಿಸಿದ್ದೇವೆ. ನಮ್ಮ ಕಡೆ ಹರಿಯತಕ್ಕ ನೀರನ್ನು ನಾವು ಬಳಸಿಕೊಳ್ಳತಕ್ಕ ಧೈರ್ಯ ಸಾಹಸವನ್ನು ಮಾಡದೇ ಇರುವುದರಿಂದ ಹಾಗೂ ಅದಕ್ಕೆ ಹಣ ಖರ್ಚು ಮಾಡುವುದನ್ನು ನಿಲ್ಲಿಸಿದ್ದರಿಂದ ಈ ದಿವಸ ನಾವು ಕಷ್ಟಕ್ಕೆ ಸಿಕ್ಕಿದ್ದೇವೆ. ಬಹುಶಃ ನಮ್ಮ ರಾಜ್ಯದ ಆರ್ಥಿಕ ಪರಿಸ್ಥಿತಿಯನ್ನು ನೋಡಿದರೆ ಬಹಳ ಹಿಂದೆ ಇದ್ದೇವೆ. ಬಹಳ ಕಷ್ಟದಲ್ಲಿದ್ದೇವೆ. ನೀರಾವರಿ ಕೆಲಸಗಳಿಗೆ ಸಂಪೂರ್ಣವಾಗಿ ಹಣಖರ್ಚು ಮಾಡತಕ್ಕ ಧೈರ್ಯ ನಮಗೆ ಇದೆಯೋ ಇಲ್ಲವೋ ಎಂದು ನಮ್ಮ ಸರ್ಕಾರವನ್ನು ಹೇಳಬೇಕಾಗಿದೆ. ಏಕೆಂದರೆ ಕೇಂದ್ರ ಸರ್ಕಾರದ ಮೇಲೆ ಪ್ರಭಾವ ಬೀರತಕ್ಕ ಅವಕಾಶ ತಮಿಳುನಾಡು ಸರ್ಕಾರಕ್ಕೆ ಈ ದಿವಸ ಇದೆ, ಮಾನ್ಯ ವಿರೋಧ ಪಕ್ಷದ ಸರ್ಕಾರ ಕೇಂದ್ರದಲ್ಲಿದೆ. ನಮಗೆ ಬಹಳ ಸಂತೋಷ. ವಿರೋಧ ಪಕ್ಷದವರು ನಮ್ಮ ರಾಜ್ಯದ ಒಂದು ಪ್ರಮುಖ ವಿಚಾರದ ಬಗ್ಗೆ ಸಹಕಾರ ಕೊಟ್ಟು ಕೆಲಸ ಮಾಡುತ್ತಿದ್ದಾರೆ. ಅವರನ್ನು ನಾವು ದೂರಬೇಕಾದದ್ದು ಇಲ್ಲ, ಆದರೆ ಆ ಸಹಕಾರದಿಂದ ನಮಗೆ ಇದುವರೆಗೂ ಯಾವ ಅನುಕೂಲ ಕಂಡುಬಂದಿಲ್ಲ. ಕೇಂದ್ರ ಸರ್ಕಾರದವರು ಯಾವ ರೀತಿಯಲ್ಲೂ ಕೂಡ ಈ ಕರ್ನಾಟಕ ರಾಜ್ಯ ಸರ್ಕಾರನೀರಿನ ಬಗ್ಗೆ ತ್ವರಿತ ಗತಿಯಿಂದ ತೀರ್ಮಾನ ತೆಗೆದುಕೊಳ್ಳಲಿಲ್ಲ. ಶ್ರೀ ಜಗಜೀವನರಾಂರವರು ನೀರಾವರಿ ಮಂತ್ರಿಯಾಗಿದ್ದ ಕಾಲದಲ್ಲಿ ಕಾವೇರಿ ಡಿಸ್ಪ್ಯೂಟಿನ್ ಬಗ್ಗೆ ಒಂದು ನಿಲುವನ್ನು ತೆಗೆದುಕೊಂಡಿದ್ದರು. ಎರಡು ರಾಜ್ಯದವರೂ ಸೇರಿ Gauvery Valle Authority ಎಂದು ಮಾಡಬೇಕೆಂದು ತೀರ್ಮಾನ ತೆಗೆದುಕೊಂಡರು. ಆಗ ತಮಿಳುನಾಡಿನಲ್ಲಿ ಸರ್ಕಾರ ಇರಲಿಲ್ಲ. ಆಗ ಅಲ್ಲಿ ಪ್ರಿಸಿಡೆಂಟ್ ರೂಲ್ ಇತ್ತು. ಆದ್ದರಿಂದ ತೀರ್ಮಾನವನ್ನು ತೆಗೆದುಕೊಳ್ಳಲಿಕ್ಕೆ ಆಗಲಿಲ್ಲ. ಈ ಒಂದು ನಿರ್ಧಾರಕ್ಕೆ ಅವರು ಶೆಲ್ವ್ ಮಾಡಿದರು. ಆ ತೀರ್ಮಾನದ ಬಗ್ಗೆ ಮುಂದೆ ಏನಾಯಿತೂ ನಮಗೆ ಗೊತ್ತಿಲ್ಲ. ಕಾವೇರಿ ನೀರಿನ ಹಂಚಿಕೆ ಬಗ್ಗೆ ಆಗಿರತಕ್ಕ ಕೆಲವು ಘಟನೆಗಳು ಇವು.

ನಾನು ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಈಗ ನಾವು ಹಿಂದಿನ ವಿಚಾರಗಳನ್ನೆಲ್ಲಾ ನೆನೆಸಿಕೊಂಡು ಪುನಃ ಅದನ್ನು ಪ್ರಸ್ತಾಪ ಮಾಡುವ ಬದಲು ನಾವು ಇತ್ತೀಚಿನ ಘಟನೆಗಳನ್ನು ನೋಡಿದರೆ ಕೇಂದ್ರ ಸರ್ಕಾರ ನಮಗೆ ವಿರೋಧವಾಗಿದೆ. ನಮ್ಮ ಮುಖ್ಯಮಂತ್ರಿಗಳು ಎರಡು ಮೂರು ಮೀಟಿಂಗ್‌ಗಳಲ್ಲಿಯೂ ಕೂಡ ಆ ಸಭೆಗಳನ್ನು ನಡೆಸುವಂಥ ಕಾಲದಲ್ಲಿ ಅವರು ನಮಗೆ ಅನುಮಾನವಾಗಿದೆ ಕೇಂದ್ರ ಸರ್ಕಾರದವರು ಈ ಒಂದು ಸುಪ್ರೀಂ ಕೋರ್ಟಿನ ತೀರ್ಮಾನ ಮತ್ತು ಅದರ ರೀತಿಯಲ್ಲಿ ಟ್ರಿಬ್ಯುನಲ್ ಮಾಡುತ್ತಾರೆ ಎನ್ನತಕ್ಕದ್ದನ್ನು ತಿಳಿದು ಈ ಟ್ರಿಬ್ಯುನಲ್ ಮಾಡಲಿಕ್ಕೆ ನಾವು ಅಡ್ಡಿ ಮಾಡಬೇಕು, ಅಡಚಣೆಗಳನ್ನೊಡ್ಡಬೇಕು, ಕಾನೂನು ಮೂಲಕ ಅದನ್ನು ತೀರ್ಮಾನ ಮಾಡಲಿಕ್ಕೆ ಕೆಲಸ ಮಾಡಬೇಕೆಂದು ಏನು ಹೇಳಿದರೋ ಅದನ್ನು ಮಾಡುವ ಮೊದಲೇ ತೀರ್ಮಾನವನ್ನು ತೆಗೆದುಕೊಂಡು ಟ್ರಿಬ್ಯುನಲ್ ಅಪಾಯಿಂಟ್ ಮಾಡಿ ನಮಗೆ ತುಂಬಾ ಅಘಾತವನ್ನು ಮಾಡಿದ್ದಾರೆ.

ಉಪಾಧ್ಯಕ್ಷರು.—ಮಾನ್ಯ ಸದಸ್ಯರು ಇನ್ನು ೫ ನಿಮಿಷದಲ್ಲಿ ತಮ್ಮ ಭಾಷಣವನ್ನು ಮುಗಿಸಬೇಕು.

ಶ್ರೀ ಕೆ. ಲಕ್ಕಪ್ಪ.—ಇವೊತ್ತು ಕರ್ನಾಟಕ ರಾಜ್ಯದ ಜನರ ಸಹನೆ ಮೀರಿದೆ. ಕರ್ನಾಟಕ ರಾಜ್ಯದ ಜನರು ಹಸಿದಿದ್ದಾರೆ. ಕರ್ನಾಟಕ ರಾಜ್ಯದ ಜನರಿಗೆ ಸಿಕ್ಕಬೇಕಾಗಿರತಕ್ಕ ನೀರಿನ ಸಿಂಹಪಾಲು ಸಿಕ್ಕಿಲ್ಲ. ಈ ದಿವಸ ಸರ್ಕಾರ ಸಹನೆ ಮೀರಿ ಕೆಲಸ ಮಾಡತಕ್ಕ ಪರಿಸ್ಥಿತಿಗೆ ಬಂದು ಆ ಕೆಲಸವನ್ನು ಮಾಡಬೇಕಾಗಿದೆ. ಏಕೆಂದರೆ ಈ ಅಸೆಂಬ್ಲಿ ನಿರ್ಣಯಗಳನ್ನು ಗಾಳಿಗೆ ತೂರಿದ್ದಾರೆ. ಈ ಒಂದು ನಿರ್ಣಯಗಳಿಗೆ ಯಾವುದೇ ಗೌರವವನ್ನಾಗಲಿ ಬೆಲೆಯನ್ನಾಗಲಿ ಕೇಂದ್ರ ಸರ್ಕಾರ ಕೊಡುತ್ತಿಲ್ಲ. ಕೇಂದ್ರ ಸರ್ಕಾರಕ್ಕೆ ನಾವು ಇವೊತ್ತಿನ ದಿವಸ ಪ್ರತಿಭಟನೆ ಮಾಡತಕ್ಕ ಕಾರ್ಯಕ್ರಮ ಹಾಕಿಕೊಂಡು ನಾವು ಕೆಲಸ ಮಾಡದೇ ಹೋದರೆ ಕಷ್ಟವಾಗುತ್ತದೆ. ನಮ್ಮ ಪಕ್ಷದವರಾಗಲಿ ಆ ಪಕ್ಷದವರಾಗಲಿ, ಎಲ್ಲರೂ ಸೇರಿ ಈ ನೀರಿನ ಹಂಚಿಕೆ ಬಗ್ಗೆ ಆಗಿರತಕ್ಕ ಅನ್ಯಾಯದ ಬಗ್ಗೆ ಪ್ರತಿಭಟನೆ ಮಾಡಬೇಕು. ಇದಕ್ಕೆ ರಾಜಕೀಯ ಒತ್ತಡ ಬೇಕು. ಪೊಲಿಟಿಕಲ್ ಕಂಪಲ್ಷನ್ ಮಾಡದೇ ಹೋದರೆ ನಾವು ಈ ರಾಜ್ಯಕ್ಕೆ ಅನ್ಯಾಯ ಮಾಡಿದಂತಾಗುತ್ತದೆ. ನಮ್ಮ ಮುಂದಿನ ಪೀಳಿಗೆ ಈ ಒಂದು ಪ್ರಜಾಪ್ರಭುತ್ವದ ಮತ್ತು ನಮ್ಮ ಸಾರ್ವಭೌಮತ್ವವನ್ನು, ಈ ರಾಜ್ಯದ ವಿಧಾನಸಭೆಯ ಶಕ್ತಿಯನ್ನು ಅಲ್ಲಗಳೆಯುವುದಕ್ಕೆ ಪ್ರಾರಂಭವಾಗಬಹುದು ಎಂದು ನಾನು ಭಾವಿಸಿದ್ದೇನೆ. ಆದ್ದರಿಂದ, ಈಗ ನಮ್ಮ ನ್ಯಾಯದ ಬಗ್ಗೆ, ನಮ್ಮ ಪ್ರಾಮಾಣಿಕತೆಯ ಬಗ್ಗೆ ಯಾವ ರಾಜ್ಯದಲ್ಲಾಗಲಿ, ರಾಷ್ಟ್ರದಲ್ಲಿಯಾಗಲಿ, ಯಾರೂ ಪ್ರಶ್ನೆ ಮಾಡಬೇಕಾಗಿಲ್ಲ. ಇದರಲ್ಲಿ ತಮಿಳುನಾಡಿನ ಪ್ರಭಾವ ಜಾಸ್ತಿಯಾಗಿದೆ, Political compulsions of Mr. Karuna-Nidhi has created the situation and also the Central Goverdment has yielded and they have taken a decision to refer the matter to the tribunal. Therefore, unless you protest this with a political compulsion and we can create a situation and to yield the Central Government. The Central Government is also elected by the people of this country and they cannot do justice because Karnataka is also part and parcel of this country and distribution of water is a natural Juttice that every citizens of this country demands this. Therefore, Deputy Speaker. Sir, I strongly say that the present Government......

ಶ್ರೀ ಸಿ. ಬೈರೇಗೌಡ.—ಮಾನ್ಯ ಸದಸ್ಯರು ಒಂದು ನಿಮಿಷ ಯೀಲ್ಡ್ ಆಗುವುದಾದರೆ ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರುತ್ತೇನೆ. ಇದು ಸುಪ್ರೀಂ ಕೋರ್ಟ್ ತೀರ್ಪು. ಟ್ರಿಬ್ಯುನಲ್ ಅಪಾಯಿಂಟ್ ಮಾಡಬೇಕೆಂದು ಕೇಂದ್ರ ಸರ್ಕಾರಕ್ಕೆ ಈ ತೀರ್ಪಿನಲ್ಲಿ ಒಂದು ಅಂಶವನ್ನು ನ್ಯಾಯಾಧೀಶರು ಹೇಳಿದ್ದಾರೆ.

> "There was a time after the dispute arose, when the Governments in the States of Karnataka and Tamil Nadu as also at the Centre were run by one common political party. perhaps if the Centre has intervened in an effective way during that period there was considerable chance of settlement by negotiation"

9-15 P.M.

ಶ್ರೀ ಎಂ. ವೈ. ಘೋರ್ಪಡೆ.—ಅದನ್ನು ಈಗಾಗಲೇ ಓದಿ ಹೇಳಿದ್ದಾರೆ.

SRI M. VEERAPPA MOILY.—Of cou se, not with any disrespect to the Supreme Court Judge, I say that again it is factually incorrect ಆಗ ಮದ್ರಾಸ್‌ನಲ್ಲಿ ಇದ್ದುದು ಡಿ.ಎಂ.ಕೆ. ಎ.ಡಿ.ಎಂ ಕೆ. ಸರ್ಕಾರ, ಕೇಂದ್ರದಲ್ಲಿ ಕಾಂಗ್ರೆಸ್ ಸರ್ಕಾರ ಇತ್ತು. ಇಲ್ಲಿ ಜನತಾ ಸರ್ಕಾರ, ಅಥವಾ ಕಾಂಗ್ರೆಸ್ ಸರ್ಕಾರ...

SRI C. BYRE GOWDA.—But it does not refer to the whole period. It does not confine to the whole period, ಈ ಡಿಸ್‌ಪ್ಯೂಟ್ ಯಾವಾಗ ಪ್ರಾರಂಭವಾಯಿತು

ಶ್ರೀ ಎಂ. ವೀರಪ್ಪ ಮೊಯಿಲಿ.—೭೨-೭೩ರಲ್ಲಿ ತಮಿಳ್ನಾಡಿನಲ್ಲಿ ಕಾಂಗ್ರೆಸ್ ಸರಕಾರ ಇರಲಿಲ್ಲ.

ಶ್ರೀ ಸಿ. ಬೈರೇಗೌಡ.—ತಮಿಳುನಾಡಿನಲ್ಲಿ ಡಿ ಎಂ.ಕೆ. ಆಗಲಿ, ಎ.ಡಿ.ಎಂ.ಕೆ. ಸರ್ಕಾರ ಏನಿತ್ತು ಅದರಲ್ಲಿ ಸಹಭಾಗಿತ್ವ ಇತ್ತು. ಆವತ್ತೇ ಈ ವಿಚಾರದಲ್ಲಿ ಸರಿಯಾದ ರೀತಿಯಲ್ಲಿ ವ್ಯವಹಾರವನ್ನು ನಡೆಸಿದ್ದಿದ್ದರೆ ಇದು ಆವತ್ತೇ ತೀರ್ಮಾನವಾಗುತ್ತಿತ್ತು. ಅದನ್ನು ನ್ಯಾಯಾಧೀಶರು ಹೇಳುತ್ತಿದ್ದಾರೆ.

ಶ್ರೀ ಕೆ. ಲಕ್ಕಪ್ಪ —ರಾಜಕೀಯ ಒತ್ತಡವನ್ನು ಮಾಡತಕ್ಕ ವಿಚಾರದ ಬಗ್ಗೆ ನಮಗೆ ಅನ್ಯಾಯವಾಗಿದೆ. There is a forum even in the constitution, Negotiations, mediations probably the co-operation and everything we have to exaust all the remedies. The Central Government today has taken a wrong step, despite the states representation. But I am told that even your Government or our Government, the State Government has not strongly pleaded. with the Centre. It is not that I am defending my Government and betraying your Government. We all unitedly stand for this cause. The only remedy is, that we can create a political situation and a political decision to fight against the Centre. That decision has gone against the interest of Karnataka, If you are represented by the people of this State, because State's interest is more than the interest of the party. Therefore I am telling you that a situation has created today by your Government. There was no such-situation during previous years. When there was Government in the Centre our Congress party, and when Mr Jagjivan Ram was the Irrigation Minister, he has created this Cauvery Valley Authority and which provided for these two States to have negotiations. So, in that negotiation you can create a situation where you can get your rights. But, unfortunately even the investment of money on every basin of our disputed area has not been made by successive Governments. Therefore, we lost that right. I say that even your previous Government has totally failed and they have never utilised the money for this cauvery basin in which your leader also resigned, you know that.

ಶ್ರೀ ಸಿ. ಬೈರೇಗೌಡ.—ನೀವು ಒಪ್ಪಿಕೊಂಡಿದ್ದೀರಿ ಸಂತೋಷ.

SRI K. LAKKAPPA.—It is not that I fail or you fail but today the Karnataka is losing everything. Therefore, you must act. Today, unless you create a political compulsion and see that the Centre is yielded for the State's commitments; we will lose every thing. Therefore, I request and demend Mr. Veerendra Patil to see

that there is no co-operation with the Centre and the Centre should yield to the passions of the people who are losing the riperian rights. I, therefore request the Hon. Deputy Speaker, to see that this Government should act accordingly.

Otherwise. I think. we will lose the right to utilise the Cauvery Water. We should create political compulsions from all the parties put together and pressurise the Centre. The Centre and the State are dependent on each other. The Centre do not exist without the States and the States cannot exist without the Centre. The Centre must come to know that the State is not co-operating then naturally they will come down. The Centre is intoxicated with power but it cannot do injustice to a State. Our Resolutions, negotiations and co-operation has been taken very lightly by the Centre. Therefore, we must discuss about the political compulsions among all the Parties concerned to safeguard the interest of the State.

† ಶ್ರೀ ಜಿ. ರಾಜೂಗೌಡ (ಹನೂರು).—ಸನ್ಮಾನ್ಯ ಸಭಾಧ್ಯಕ್ಷಣಿಯವರೇ ೧೯೭೪ರಿಂದ ಇದುವರೆವಿಗೂ ಸಹ ಕಾವೇರಿ ಜಲಾನಯನದ ಬಗ್ಗೆ ಒಮ್ಮತಕ್ಕೆ ಬರತಕ್ಕ ಆಸಕ್ತಿಯನ್ನು ಕರ್ನಾಟಕ ಸರ್ಕಾರದವರು ಪ್ರತಿಯೊಂದು ಹಂತದಲ್ಲೂ ತೋರಿಸಿದಂಥ ಒಲವಿನ ಬಗ್ಗೆ ತಮಿಳುನಾಡು ಸರ್ಕಾರ ತಮ್ಮ ಒಲವನ್ನು ತೋರಿಸದಿರತಕ್ಕಂಥದ್ದು ಬಹಳ ವಿಷಾದಕರವಾಗಿದೆ ಎಂದು ಹೇಳಬೇಕಾಗುತ್ತದೆ. ತರಾತುರಿಯಿಂದ ಕೇಂದ್ರ ಸರ್ಕಾರ ಇಬ್ಬರು ಸದಸ್ಯರ ಆಯೋಗವನ್ನು ನೇಮಿಸಿ ಈ ವಿವಾದವನ್ನು ಒಪ್ಪಿಸಿ ಎರಡು ರಾಜ್ಯಗಳ ವಿಚಾರ ವಿನಿಮಯಕ್ಕೆ ಒಂದು ರೀತಿಯಾದ ಗೆರೆಯನ್ನು ಎಳೆದಿದ್ದಾರೆಂದು ನಾನಾದರೂ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ತಮಿಳುನಾಡು ರೈತರು ಈ ವಿವಾದವನ್ನು ವರಿಷ್ಠ ನ್ಯಾಯಾಲಯಕ್ಕೆ ಮನವಿಯಮೂಲಕ ಸಲ್ಲಿಸಿದಾಗ ಕೇಂದ್ರ ಸರ್ಕಾರದವರು ಮಧ್ಯೆ ಪ್ರವೇಶಮಾಡಿ ಆ ಮನವಿಯ ವಿಚಾರಣೆಯನ್ನು ಪೆಂಡಿಂಗ್ ಇಟ್ಟು ಎರಡು ರಾಜ್ಯಗಳ ಹಿತಾಸಕ್ತಿಯನ್ನು ಬಯಸತಕ್ಕಂಥ ಉದ್ದೇಶದಿಂದ ಅಥವಾ ಎರಡು ರಾಜ್ಯಗಳು ಕೂಡ ಒಂದು ಶಾಂತಿಯುತವಾದ ಪರಸ್ಪರದಿಂದಿರಲು ಒಂದು ಒಳ್ಳೆಯ ವಾತಾವರಣವನ್ನು ನಿರ್ಮಾಣ ಮಾಡಬೇಕೆಂದು, ಇವರಿಬ್ಬರು ಬಂಧುತ್ವ ಪಡೆದಿರುವ ಉದಾತ್ತಭಾವನೆ ಹೊಂದಬೇಕು. ಎನ್ನುವ ಭಾವನೆಯಿಂದ ಇಬ್ಬರನ್ನು ಕರೆಯಿಸಿ ತಮ್ಮ ನಿಲುವು ಏನು, ತಮ್ಮ ನಿಲುವು ಏನು ಎಂದುಕೊಂಡು ಒಪ್ಪಿಗೆಯನ್ನು ತೆಗೆದುಕೊಳ್ಳಬೇಕೆನ್ನುವ ರೀತಿ ಈ ಒಂದು ವಿವಾದವನ್ನು ಬಗೆಹರಿಸಬಹುದಾಗಿತ್ತು ಎಂದು ನಾನಾದರೂ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ೧೯೭೪ರಿಂದ ಇರತಕ್ಕಂಥ ಈ ವಿವಾದವನ್ನು ಕೇವಲ ಆರುತಿಂಗಳಲ್ಲಿ ಬಂದಂಥ ಸರ್ಕಾರ ಸುಪ್ರೀಮ್ ಕೋರ್ಟಿಗೆ ಒಪ್ಪಿಸಿ ಅವರ ಮೂಲಕವಾಗಿ ನ್ಯಾಯ ಪಂಚಾಯಿತಿಯನ್ನು ಒಂದು ಅಸ್ತಿತ್ವಕ್ಕೆ ತರತಕ್ಕಂಥದ್ದನ್ನು ನೋಡಿದಾಗ ಬಹುಶಃ ಇವರು ದಕ್ಷಿಣ ರಾಜ್ಯಗಳಲ್ಲೂ ಕೂಡ ಶಾಂತತ್ವದಿಂದಿರ ಕೂಡದೆಂಬ ಉದ್ದೇಶದಿಂದ ಮಾಡಿದ್ದು ಎಂದು ನಮಗಾದರೂ ಅರ್ಥವಾಗುತ್ತದೆ. ಕರ್ನಾಟಕದಲ್ಲಿ ಕಾವೇರಿಯ ಬಗ್ಗೆ ತಮ್ಮ ನಿಲುವು ಏನು ? ತಾವು ಎಷ್ಟು ನೀರನ್ನು ಕೇಳುತ್ತಿದ್ದೀರಿ ಎನ್ನುವ ಒಂದು ಅಂಕಿಅಂಶಗಳನ್ನು ಸಂಗ್ರಹಿಸಿ ಅದೇ ರೀತಿಯಲ್ಲಿ ತಮಿಳುನಾಡಿನವರನ್ನು ಕರೆಯಿಸಿ ಅವರ ನಿಲುವನ್ನು ಸ್ಪಷ್ಟಪಡಿಸಿಕೊಡಬೇಕು ಎನ್ನುವ ವ್ಯವಹಾರದಲ್ಲಿ ಮಾತುಕತೆಗಳನ್ನು ನಡೆಸಿದ್ದರೆ ಬಹುಶಃ ಇವರ ಕೆಲಸವಾಗುತ್ತಿತ್ತು. ಅದನ್ನು ಅವರು ಮಾಡಲಿಲ್ಲ. ಅದರಲ್ಲಿ ಇವರು ಫೇಲ್ ಆಗಿದ್ದಾರೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗಲೂ ಕೂಡ ಕೇಂದ್ರ ಸರ್ಕಾರ ಮನಸ್ಸು ಮಾಡಿದರೆ ಈ ಕೆಲಸವನ್ನು ಮಾಡಬಹುದೆಂದು ನಾನಾದರೂ ಹೇಳುವುದಕ್ಕೆ ಇಷ್ಟಪಡುತ್ತೇನೆ. ಬಹುಶಃ ಈ ಒಂದು ಆಯೋಗವನ್ನು ನೇಮಿಸಿದ್ದರೂ ಅದರ ಕೆಲಸ ಕಾರ್ಯಗಳನ್ನು ತಾತ್ಕಾಲಿಕವಾಗಿ ತಡೆಹಿಡಿದು ಮತ್ತೆ ಉಭಯತ್ರರನ್ನು ಕರೆದು ಒಂದು ಶಾಂತ ವಾತಾವರಣವನ್ನು ನಿರ್ಮಾಣ ಮಾಡಬೇಕೆಂದು ನಾನಾದರೂ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಏತಕ್ಕೆಂದರೆ ಒಂದುವೇಳೆ ಟ್ರಿಬ್ಯೂನಲ್ ತೀರ್ಮಾನದಿಂದ ಯಾರಿಗಾದರೂ ಮನ ನೋಯಬಹುದು. ನಮ್ಮ ರಾಜ್ಯದಲ್ಲಿರತಕ್ಕಂಥ ರೈತರ ಮನಸ್ಸು ನೋಯಬಹುದು ಅಥವಾ ತಮಿಳುನಾಡಿನ ರೈತರ ಮನಸ್ಸು ನೋಯಬಹುದು. ಇಬ್ಬರೂ ಕೂಡ ಒಂದು ನ್ಯಾಯಬದ್ಧವಾದ ತೀರ್ಮಾನಕ್ಕೆ ಬರುವುದಕ್ಕೆ

ಸಾಧ್ಯವಾಗುವುದಿಲ್ಲ. ಆದಕ್ಕೋಸ್ಕರವಾಗಿ ಇದರ ಕಾರ್ಯವ್ಯಾಪ್ತಿ ಏನು ಇದೆ ಅದನ್ನು ತಾತ್ಕಾಲಿಕವಾಗಿ ತಡೆಹಿಡಿದು ನಮ್ಮವರನ್ನು ಮತ್ತು ಅವರನ್ನು ಕರೆದು ವಿಚಾರ ವಿನಿಮಯ ಮಾಡಿ ಈ ವಿವಾದವನ್ನು ಇತ್ಯರ್ಥಗೊಳಿಸಬೇಕೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈಗ ಬಹುಶಃ ತಮಿಳುನಾಡು ಸರ್ಕಾರ ಏನು ಹೇಳುತ್ತದೆ ಎಂದರೆ ಕಾವೇರಿಯಲ್ಲಿ ಬರತಕ್ಕಂಥ ನೀರನ್ನೆಲ್ಲ ತಾವೇ ಉಪಯೋಗಿಸಿಕೊಳ್ಳಬೇಕು ಎನ್ನುವ ಮಟ್ಟಿಗೆ ತಲೆಕೆಡಿಸಿಕೊಂಡಿದೆ. ಕಾವೇರಿ ನೀರನ್ನೆಲ್ಲ ತಮಿಳುನಾಡಿಗೆ ಬಿಟ್ಟುಬಿಟ್ಟು ಕರ್ನಾಟಕದ ಜಲಾನಯನದ ರೈತರು ಕೈಕಟ್ಟಿ ಕುಳಿತುಕೊಂಡು ಅವರನ್ನು ನಿರ್ಗತಿಕರನ್ನಾಗಿ ಮಾಡಬೇಕೆಂದು ತಿಳಿದುಕೊಂಡಿದೆ. ಕಾವೇರಿ ನದಿ ಕರ್ನಾಟಕದಲ್ಲಿ ಎಷ್ಟು ಮೈಲಿ ಹರಿಯುತ್ತದೆ, ತಮಿಳ್ನಾಡಿನಲ್ಲಿ ಎಷ್ಟು ಮೈಲಿ ಹರಿಯುತ್ತದೆ ಎಂಬುದನ್ನು ನೋಡಿ ವೈಜ್ಞಾನಿಕವಾಗಿ ತೀರ್ಮಾನ ಮಾಡುವುದಾದರೆ, ಈಗ ಇರತಕ್ಕ ಪಾಲು ಏನು ಇದೆ ಅದಕ್ಕಿಂತ ನೂರರಷ್ಟು ಜಾಸ್ತಿ ಪಾಲು ನಮಗೆ ದೊರೆಯುತ್ತದೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗ ನಾವು ಬಹಳ ಸಂಕಷ್ಟ ಪರಿಸ್ಥಿತಿಯಲ್ಲಿದ್ದೇವೆ. ಇದನ್ನು ಎದುರಿಸಲಿಕ್ಕೆ ಏನು ಮಾಡಬೇಕೆಂಬುದರ ಬಗ್ಗೆ ಚಿಂತನೆ ಮಾಡಬೇಕು. ಹಿಂದಿನ ಘಟನೆಗಳ ಬಗ್ಗೆ ಮಾತನಾಡುವುದರಿಂದ ಏನೂ ಪ್ರಯೋಜನವಿಲ್ಲವೆಂದು ಅನ್ನಿಸುತ್ತದೆ. ಆದ್ದರಿಂದ ನಾನು ಸರ್ಕಾರಕ್ಕೆ ವಿನಂತಿಸುವುದೇನೆಂದರೆ, ಟ್ರಿಬ್ಯೂನಲ್ ಮೂಲಕವೇ ಇತ್ಯರ್ಥ ಮಾಡಬೇಕೆಂದು ತೀರ್ಮಾನಕ್ಕೆ ಬಂದಾಗ ನಾವು ಈ ಸದನದಲ್ಲಿ ಒಂದು ಉಪ ಸಮಿತಿಯನ್ನು ಮಾಡಬೇಕು. ಕಾವೇರಿ ಜಲಾನಯನ ಪ್ರದೇಶದ ಸದಸ್ಯರು ಯಾರಿದ್ದಾರೆ ಅವರ ಒಂದು ಸಮಿತಿಯನ್ನು ರೂಪಿಸಬೇಕು. ಆ ಸಮಿತಿಯು ಟ್ರಿಬ್ಯೂನಲ್ ಮುಂದೆ ಹೋಗಿ ತಮ್ಮ ವಾದವನ್ನು ಮಂಡಿಸಬೇಕು. ಯಾವ ರೀತಿ ನೀರಿನ ಹಂಚಿಕೆಯಾಗಬೇಕೆಂಬುದನ್ನು ಅವರು ಹೇಳಬೇಕು. ಟ್ರಿಬ್ಯೂನಲ್‌ನ ಕಾರ್ಯವ್ಯಾಪ್ತಿ ಎಲ್ಲಿಯವರೆಗೆ ಮುಂದುವರಿಯುತ್ತದೆ ಅಲ್ಲಿಯವರೆಗೆ ಈ ಸದನದ ಉಪ ಸಮಿತಿ ಇರಬೇಕು, ಮತ್ತು ಆಗಾಗ್ಗೆ ಸಲಹೆ ಕೊಡುತ್ತಿರಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ವಿನಂತಿಸಿಕೊಳ್ಳುತ್ತೇನೆ. ಬೇರೆ ಯಾವುದೇ ರೀತಿಯಲ್ಲಿ ತೀರ್ಮಾನವಾಗದ ಟ್ರಿಬ್ಯೂನಲ್ ಮುಖಾಂತರವೇ ಇತ್ಯರ್ಥಪಡಿಸಬೇಕೆಂದು ವಿಚಾರ ಮಾಡಿದಾಗ ಸದನದ ಉಪ ಸಮಿತಿಯನು ನೇಮಿಸಬೇಕು. ಆ ಟ್ರಿಬ್ಯೂನಲ್ ಇರುವವರೆಗೆ ಈ ಸಮಿತಿ ಇರಬೇಕು ಮತ್ತು ಆಗಾಗ್ಗೆ ಸಲಹೆ ಕೊಡುತ್ತಿರಬೇಕೆಂದು ಮತ್ತೊಮ್ಮೆ ಒತ್ತಿ ಹೇಳಬಯಸುತ್ತೇನೆ. ಆ ಸಲಹೆ ಮುಖಾಂತರ ನಮ್ಮ ಹಕ್ಕನ್ನು ಚಲಾಯಿಸಿ ಹೋರಾಟ ಮಾಡಿ ನಮಗೆ ಬರಬೇಕಾದ ನೀರಿನ ಪಾಲನ್ನು ನಾವು ತೆಗೆದುಕೊಳ್ಳಬೇಕೆಂದು ಹೇಳಿ ಈ ವಿಷಯಕ್ಕೆ ಸದನ ಒಪ್ಪುತ್ತದೆಂದು ಭಾವಿಸಿ, ನನಗೆ ಎರಡು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ).—ಮಾನ್ಯ ಉಪಾಧ್ಯಕ್ಷಿಣಿಯವರೆ, ಈ ಸಭೆ ಪ್ರಾರಂಭವಾಗುವುದಕ್ಕೆ ಮುಂಚೆ ರಾಜ್ಯದ ಜನತೆ ಮತ್ತು ಪತ್ರಕರ್ತರು, ರಾಜಕಾರಣಿಗಳು ಇವತ್ತು ಕಾವೇರಿ ಬಗ್ಗೆ ದೊಡ್ಡ ಹೋರಾಟವನ್ನೇ ನಡೆಸುತ್ತಾರೆಂದು ಅಂದುಕೊಂಡಿದ್ದರು. ಇವತ್ತು ಸಭೆ ಪ್ರಾರಂಭವಾದಂತಹ ಪರಿಸ್ಥಿತಿಯನ್ನು ನೋಡಿದಾಗ ಕಾವೇರಿ ಬಗ್ಗೆ ಎಷ್ಟು ಆತುರ, ಆತಂಕ ಇದೆ ಎಂದು ಅನ್ನಿಸುತ್ತಿತ್ತು. ಈ ಸಭೆ ಬಹಳ ದಿವಸಗಳ ನಂತರ ಪ್ರಾರಂಭವಾದ ಸಭೆ. ಈಗ ಸಭೆಯಲ್ಲಿರತಕ್ಕ ಸದಸ್ಯರುಗಳು, ಮಂತ್ರಿಗಳನ್ನು ಸೇರಿ ಸುಮಾರು ೪೦ ಜನರಿದ್ದಾರೆ. ಅಂದರೆ ಈ ಸಭೆಯನ್ನು ಎಷ್ಟು ಗಂಭೀರವಾಗಿ ಸದಸ್ಯರು ತೆಗೆದುಕೊಂಡಿದ್ದಾರೆ ಎಂಬುದು ಗೊತ್ತಾಗುತ್ತದೆ. ೩೦ನೇ ತಾರೀಖೇ ವಗರ್ವರ್ಗಿ ನಿಂತುಹೋಯಿತು ಎಂದು ಮಂತ್ರಿಮಂಡಲದ ಸಭೆಯಲ್ಲಿ ತೀರ್ಮಾನವಾಯಿತು. ಆದರೂ ಸಹ ಸದಸ್ಯರು ಎಲ್ಲಿ ಹೋಗಿದ್ದಾರೆಂದು ಅರ್ಥವಾಗುತ್ತಿಲ್ಲ. ಈ ಸಭೆಯನ್ನು ನೋಡಿದರೆ ಶೋಚನೀಯ ಪರಿಸ್ಥಿತಿ ಕಾಣುತ್ತದೆ. ಪ್ರಾರಂಭದಲ್ಲಿ ಈ ಸಭೆಯು ಯಾವ ರೀತಿಯಲ್ಲಿ ಕಿಡಿಯನ್ನು ಕಾರಬೇಕಾಗಿತ್ತು, ಬೆಂಕಿಯ ಜ್ವಾಲೆ ಉರಿಯಬೇಕಾಗಿತ್ತು, ಸಿಡಿಲು, ಗುಡುಗು ಬರಬೇಕಾಗಿತ್ತು ಆ ರೀತಿಯಲ್ಲಿ ಬರಲಿಲ್ಲ. ಇವತ್ತಿನ ದಿವಸ ಏನು ಇಡೀ ಕನ್ನಡ ನಾಡಿನ ಮೇಲೆ, ಕರ್ನಾಟಕದ ಮೇಲೆ ಬೆಂಕಿ ಬಿದ್ದಿದೆ, ಈ ಬೆಂಕಿ ಬಿದ್ದಿರತಕ್ಕ ಪರಿಸ್ಥಿತಿಯಲ್ಲೂ ಸಹ ಶಾಸನಸಭಾ ಸದಸ್ಯರು ಎಷ್ಟು ತರಾತುರಿಯಿಂದ ಎಲ್ಲಾ ಕೆಲಸಗಳನ್ನು ಬದಿಗೊತ್ತಿ ಸಭೆ ಪ್ರಾರಂಭವಾದ ಈ ದಿವಸ ಇಡೀ ಸಭೆಯನ್ನು ತುಂಬಿರಬೇಕಾಗಿತ್ತು. ಪ್ರೇಕ್ಷಕರ ಗ್ಯಾಲರಿ ತುಂಬಿರಬೇಕಾಗಿತ್ತು. ಆದರೆ ಇಲ್ಲಿ ಬರುವಾಗಲೇ ಮಿಲಿಟರಿ ಪ್ರಭುತ್ವ ಇತ್ತು. ಯಾವ ಬಾಗಿಲಿನಲ್ಲೂ ಜನ ಬರುವ ಹಾಗೆ ಇಲ್ಲ. ಅನೇಕ ಪತ್ರಕರ್ತರನ್ನು ತಡೆದಿದ್ದನ್ನೂ ನಾವು ನೋಡಿದೆವು.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಕಾವೇರಿ ಬಗ್ಗೆ ಮಾತನಾಡಿ.

ಶ್ರೀ ವಾಟಾಳ್ ನಾಗರಾಜ್.—ಕಾವೇರಿ ಬಗ್ಗೆ ಮಾತನಾಡುತ್ತೇನೆ. ಆದರೆ ಅದು ಕಣ್ಣೀರು ಆಗಬಾರದು. ಈ ಪರಿಸ್ಥಿತಿ ನೋಡಿದರೆ ನಾಚಿಕೆಯಾಗುತ್ತದೆ. ಈ ಸಮಸ್ಯೆಯನ್ನು ಎಷ್ಟು ಎತ್ತರದಲ್ಲಿ, ಎಷ್ಟು ಮೇಲ್ಮಟ್ಟದಲ್ಲಿ ಚರ್ಚೆ ಮಾಡಬೇಕಾಗಿತ್ತೋ, ಯಾವ ರೂಪದಲ್ಲಿ ಚರ್ಚೆ ಶುರುವಾಗಬೇಕಾಗಿತ್ತೋ ಅದು ಆಗಲಿಲ್ಲ. ರಾಜ್ಯದ ಜನ, ರೈತರು ಏನು ನಿರೀಕ್ಷಣೆ ಮಾಡಿದ್ದಾರೆಂದರೆ ಶಾಸನ ಸಭೆಯಲ್ಲಿ ಸದಸ್ಯರು ರೈತರ ಹಿತವನ್ನು ಕಾಪಾಡುತ್ತಾರೆ, ರೈತರ ಹಿತವನ್ನು ಕಾಪಾಡುವುದಕ್ಕೆ ಶಾಸನ ಸಭೆ ಸೇರುತ್ತಿದೆ ಎಂದು ನಿರೀಕ್ಷಣೆ ಮಾಡಿದ್ದಾರೆ. ಮತ್ತು ಅನೇಕ ವಿರೋಧ ಪಕ್ಷದ ಮುಖಂಡರುಗಳು ಶಾಸನಸಭೆಯನ್ನು ಕರೆಯಬೇಕೆಂದು ಒತ್ತಾಯದ ಮೇಲೆ ಒತ್ತಾಯ, ಒತ್ತಾಯದ ಮೇಲೆ ಒತ್ತಾಯ ಮಾಡಿದ ಮೇಲೆ ಶಾಸನ ಸಭೆಯನ್ನು ಕರೆದಾಗ ಇದು ಎಷ್ಟು ಮಹತ್ವಪೂರ್ಣವಾದ ಶಾಸನಸಭೆ ಎಂದರೆ ಹೇಳುವುದಕ್ಕೆ ಸಾಧ್ಯವಿಲ್ಲ. ಅಂಥ ಮಹತ್ವಪೂರ್ಣವಾದ ಶಾಸನಸಭೆ ಬಹಳ ನೀರಸವಾಗಿ ನಡೆಯುತ್ತಾ ಇರುವುದನ್ನು ನೋಡಿದರೆ ಮನಸ್ಸಿಗೆ ನೋವಾಗುತ್ತಿದೆ. ಇವತ್ತು ಅಧ್ಯಕ್ಷರೇ ತಮಗೆ ಹೇಳುತ್ತಿದ್ದೇನೆ, ಈ ರೀತಿ, ಒಂದು ರೀತಿ ನೀರಸವಾಗಿ ನಮ್ಮ ರಾಜ್ಯದ ಸಮಸ್ಯೆಯನ್ನು ಈ ಸಭೆ ಮೂಲಕ ತೆಗೆದುಕೊಂಡು ಹೋಗುವುದಾದರೆ ಬಹಳ ಕಷ್ಟವಾಗುತ್ತದೆ.

(ಮಾನ್ಯ ಅಧ್ಯಕ್ಷರು ಪೀಠಕ್ಕೆ ಬಂದರು)

ತಮಿಳುನಾಡಿನ ಜನರು ಕರ್ನಾಟಕದ ಹಣೆಬರಹವೇ ಇಷ್ಟು ಎಂದು ತೀರ್ಮಾನ ಮಾಡಿಕೊಂಡಿದ್ದಾರೆ. ಯಾರು ಯಾರು ಏನು ಹೇಳಿದ್ದಾರೆ ಅದನ್ನೆಲ್ಲಾ ಒಪ್ಪಿಕೊಂಡು ಕರ್ನಾಟಕದ ಜನ ಗಂಭೀರವಾಗಿರುತ್ತಾರೆ ಎಂಬ ಭಾವನೆ ಇಡೀ ದೇಶದಲ್ಲಿ ಬಂದಿದೆ. ಇವತ್ತು ಸುಪ್ರೀಂ ಕೋರ್ಟ್ ತೀರ್ಪು ಕೊಟ್ಟಿದೆ. ಪಂಚಾಯಿತಿ ಮಂಡಳಿ ರಚನೆ ಮಾಡಿ ಎಂದು ಹೇಳಿದೆ. ನಿಜ. ಆದರೆ ತಮ್ಮ ಮೂಲಕ ಹೇಳುತ್ತಿದ್ದೇನೆ, ಇದೇ ಪರಿಸ್ಥಿತಿ ತಮಿಳುನಾಡಿನಲ್ಲಿ ನಿರ್ಮಾಣವಾಗಿದ್ದರೆ ಅಲ್ಲಿ ದೊಡ್ಡ ಗಂಭೀರವಾದ ಪರಿಸ್ಥಿತಿ ನಿರ್ಮಾಣವಾಗುತ್ತಿತ್ತು ಎಂದು ನನಗನ್ನಿಸುತ್ತಿದೆ. ಕೋರ್ಟ್ ತೀರ್ಪಿಗಾಗಲೀ ಪಂಚಾಯಿತಿ ಮಂಡಳಿ ರಚನೆಗಾಗಲೀ ಇವತ್ತು ತಮಿಳುನಾಡಿನವರು ಒಪ್ಪಿಕೊಳ್ಳುತ್ತಿರಲಿಲ್ಲ. ಅವರ ರೂಪರೇಷೆಗಳೇ ಬೇರೆ. ನಾವು ಒಂದು ನಿರ್ಣಯ ಮಾಡಬೇಕಾದರೆ ಹಿಂದೆ ಮುಂದೆ ನೋಡುತ್ತೇವೆ. ಒಂದು ವಿಚಾರವನ್ನು ಯಾವ ರೀತಿ ಹೇಳಬೇಕು ಎಂದು ಹಿಂದೆಮುಂದೆ ನೋಡುತ್ತೇವೆ. ಗುಟ್ಟಾಗಿ ಮಾತನಾಡಬೇಕು ಎಂದು ಕೆಲವರು ಅಂದುಕೊಂಡಿದ್ದಾರೆ. ಅದಲ್ಲ ಪ್ರಶ್ನೆ. ಇಂಥ ಒಂದು ಅಗಾಧವಾದ ಪ್ರಶ್ನೆ ನಮ್ಮ ಮುಂದೆ ಇದೆ. ಸುಮಾರು ಒಂದು ಕೋಟಿ ರೈತರಿಗೆ ತೀವ್ರತರವಾದ ಅನ್ಯಾಯವಾಗತಕ್ಕ ಸೂಚನೆ ನಾವು ಕಾಣುತ್ತಿದ್ದೇವೆ. ಕೇಂದ್ರ ಸರ್ಕಾರ ಹೇಳಿದ್ದಕ್ಕೆಲ್ಲಾ ನಾವು ಒಪ್ಪಿಕೊಳ್ಳುವುದಕ್ಕೆ ಹೋದರೆ ನನಗನ್ನಿಸುತ್ತದೆ ನಮ್ಮ ತರಹ ನೀರಸವಾದ ಜನ ಬೇರೆ ಇಲ್ಲ ಎಂದು. ಕಾವೇರಿ ಭಾಗದಲ್ಲಿರತಕ್ಕ ರೈತರು ಏನು ತಿಳಿದಿದ್ದಾರೆ ಅಂದರೆ ಪಂಚಾಯಿತಿ ಮಂಡಲಿ ನಮ್ಮ ಮಂಡ್ಯದಲ್ಲಿ ಬರುತ್ತದೆ ಎಂದು ತಿಳಿದುಕೊಂಡಿದ್ದಾರೆ. ಇಲ್ಲ, ಅದು ಡೆಲ್ಲಿಯಲ್ಲಿರುತ್ತದೆ. ಮಂಡ್ಯಕ್ಕೆ ಅದು ಬರುತ್ತದೆ, ಅದು ಬಂದಾಗ ಅರ್ಜಿ ಕೊಟ್ಟುಕೊಳ್ಳಬಹುದು ಎಂದು ಅವರು ತಿಳಿದುಕೊಂಡಿರಬಹುದು. ಮಂಡ್ಯ, ಮೈಸೂರು, ಶ್ರೀರಂಗಪಟ್ಟಣ ಮುಂತಾದ ಕಾವೇರಿ ಭಾಗದ ಜನ ಡೆಲ್ಲಿಗೆ ಹೋಗಬೇಕು. ಇಲ್ಲಿ ಅದು ಬರುವ ಪ್ರಶ್ನೆಯೇ ಇಲ್ಲ. ಈ ಸಭೆಯ ಮೇಲೆ, ನಮ್ಮ ಮೇಲೆ ರೈತರು ಬಹಳ ಗುರುತರವಾದ ಜವಾಬ್ದಾರಿಯನ್ನು ವಹಿಸಿದ್ದಾರೆ. ೧೯೭೭ರಿಂದ ಇಲ್ಲಿಯವರೆಗೆ ರಾಜ್ಯದಲ್ಲಿ ಯಾರು ಯಾರು ಲೋಕೋಪಯೋಗಿ ಇಲಾಖೆಯನ್ನು ಹೊಂದಿದ್ದರು ಯಾರು ಯಾರು ಮಂತ್ರಿಗಳಾಗಿದ್ದರು, ಅವರ ಕಾಲದಲ್ಲಿ ಕಾವೇರಿ ಜಲಾನಯನ ಪ್ರದೇಶದಲ್ಲಿ ನೀರನ್ನು ಹಂಚಿಕೊಳ್ಳುವುದಕ್ಕೆ ಎಷ್ಟು ರೀತಿಯ ಕಾರ್ಯಗಳನ್ನು ಕೈಗೊಂಡಿದ್ದಾರೆ, ಎಷ್ಟು ರೀತಿಯ ಯೋಜನೆಗಳನ್ನು ಮಾಡಿದ್ದಾರೆ, ಇವರಿಂದ ಎಷ್ಟು ಅನುಕೂಲವಾಗಿದೆ ಎಂಬ ಬಗ್ಗೆ ಸಮಗ್ರವಾದ ಶ್ವೇತಪತ್ರವನ್ನು ಮಾನ್ಯ ವೀರೇಂದ್ರಪಾಟೀಲರ ಸರ್ಕಾರ ಹೊರಡಿಸಬೇಕಾದುದು ಅವರ ಕರ್ತವ್ಯವಾಗಿದೆ.

ಅಧ್ಯಕ್ಷರೇ, ಇವತ್ತು ಕಾವೇರಿ ಬಗ್ಗೆ ಈ ಸಭೆಯಲ್ಲಿ ಒಂದು ಚರ್ಚೆ ನಡೆಯುತ್ತದೆಂದು ಹೇಳಿ ತೀರ್ಮಾನವಾದಾಗ ನಮಗೆಲ್ಲರಿಗೂ, ಸದಸ್ಯರೆಲ್ಲರಿಗೂ ಕಾವೇರಿ ಬಗ್ಗೆ ಏನು ಚರ್ಚೆ ಎನ್ನತಕ್ಕ ಬಗ್ಗೆ ಕಾಗದ ಪತ್ರಗಳು ನಮಗೇನೂ ಬಂದಿಲ್ಲ, ಒಬ್ಬರಿಗೂ ಬಂದಿಲ್ಲ. ಸುಪ್ರೀಮ್ ಕೋರ್ಟ್ ತೀರ್ಪು ಏನು ಎಂದು ವಿರೋಧ ಪಕ್ಷದ ಮುಖಂಡರಿಗೆ ಬಂದಿರಬಹುದು, ಅವರನ್ನು ಕರೆದಾಗ ಆದರೆ ಈ ಸಭೆಯನ್ನು ಕರೆದಾಗ ಜವಾಬ್ದಾರಿಯುತವಾಗಿ ಪ್ರತಿಯೊಂದು ಟಿಪ್ಪಣಿ ಹಾಗೂ ಕಾಗದಪತ್ರಗಳು, ಸುಪ್ರೀಮ್ ಕೋರ್ಟಿನ ತೀರ್ಪು ಇವೆಲ್ಲವನ್ನೂ ಈ ಸಭೆಯ ಮುಂದೆ ಮಂಡಿಸಬೇಕಾಗಿತ್ತು. ಈ ಸಭೆಯಲ್ಲಿ ಚರ್ಚೆಗೆ ಬರುವುದಕ್ಕಿಂತ ಒಂದು ದಿವಸ ಮುಂಚೆ ಇಡೀ ಎಲ್ಲಾ ಸದಸ್ಯರೂ ನಾಳೆಯ ಕಾವೇರಿ ನೀರಿನ ಚರ್ಚೆ ಬರುವುದಿದ್ದು ಅದರಲ್ಲಿ ಸರ್ಕಾರದ ನಿಲುವು ಏನು, ಸರ್ಕಾರ ಏನೇನು ಕಾರ್ಯಕ್ರಮಗಳನ್ನು ಇದರ ಬಗ್ಗೆ ತೆಗೆದುಕೊಂಡಿದೆ ಎಂಬುದನ್ನು ತಿಳಿದುಕೊಳ್ಳುವ ಬಗ್ಗೆ ಒಂದು ಟಿಪ್ಪಣಿ

ಯನ್ನು ಕಳುಹಿಸಬೇಕಾದಂದು ಸರ್ಕಾರದ ಕರ್ತವ್ಯ. ಬೆಳಿಗ್ಗೆಯಿಂದ ಈ ಸಭೆಯಲ್ಲಿ ನೋಡುತ್ತಿದ್ದೇವೆ. ತಾವು ತಪ್ಪು ತಿಳಿದುಕೊಳ್ಳಬಾರದು. ಬೆಳಿಗ್ಗೆ ರಾಜ್ಯ ಮತ್ತು ದೇಶದ ಸೇವೆ ಸಲ್ಲಿಸಿ ನಿಧನಹೊಂದಿದ ಗಣ್ಯರಿಗೆ ಸಂತಾಪ ಸೂಚಿಸಿದಿರಿ. ಅದರಲ್ಲಿ ನಾವೂ ಭಾಗಿಗಳಾದೆವು, ಆದರೆ ಅದು ಆದನಂತರ ಈ ಸಭೆಯೇ ಒಂದು ರೀತಿಯಲ್ಲಿ ಸಂತಾಪದ ರೀತಿಯಲ್ಲಿ ಹೋಗುತ್ತಿದೆ.

ಅಧ್ಯಕ್ಷರು.—ಇಲ್ಲ, ಕಷ್ಟ ಬಂದಿದೆಯಲ್ಲ ಅದಕ್ಕೋಸ್ಕರ...

ಶ್ರೀ ವಾಟಾಳ್ ನಾಗರಾಜ್.—ಅದು ನಿಜ. ಅದನ್ನು ನಾನು ಒಪ್ಪುತ್ತೇನೆ. ಆದುದರಿಂದ ನಾವು ಈ ರಾಜ್ಯದ ಜನತೆಯ ಬಗ್ಗೆ ಸಂತಾಪ ಸಭೆ ಎಂದು ಮಾಡಿಕೊಳ್ಳಬಹುದು.

ಅಧ್ಯಕ್ಷರು.—ಅದು ಅಭಿವ್ಯಕ್ತ ಆಗುತ್ತಿದೆಯಷ್ಟೇ.

ಶ್ರೀ ವಾಟಾಳ್ ನಾಗರಾಜ್.—ಈ ಪರಿಸ್ಥಿತಿ ಬಂದಿದೆ ಎಂದು ನಾನು ತಮಗೆ ಹೇಳುತ್ತಿದ್ದೇನೆ. ಈ ರಾಜ್ಯದ ಜನತೆ ನಮ್ಮಿಂದ ಏನು ನಿರೀಕ್ಷಣೆ ಮಾಡಿದ್ದರೋ ಆ ನಿರೀಕ್ಷಣೆಗೆ ಸರಿಯಾದ ರೀತಿಯಲ್ಲಿ ನಾವು ಕೆಲಸ ಮಾಡಬೇಕಾದುದು ನಮ್ಮ ಕರ್ತವ್ಯ. ಇಲ್ಲಿ ಒಂದು ಸಮಗ್ರವಾದ ನಿರ್ಣಯ ಆಗಲೇ ಬೇಕು, ಯಾರನ್ನೋ ಉಳಿಸುವುದಕ್ಕೋಸ್ಕರವಾಗಿ ಯಾರನ್ನೋ ಬೇಡುವುದಕ್ಕೋಸ್ಕರವಾಗಿ ಅಲ್ಲ, ಅಧ್ಯಕ್ಷರೇ. ತಾವು ಪಾರ್ಲಿಮೆಂಟಿನಲ್ಲಿದ್ದಿರಿ. ಕರ್ನಾಟಕದ ಬಗ್ಗೆ ಅಲ್ಲಿನ ಧೋರಣೆಯನ್ನು ತಾವು ಮೊದಲಿನಿಂದಲೂ ನೋಡುತ್ತಿದ್ದೀರಿ. ಹಿಂದೆ ಈ ಕರ್ನಾಟಕ ಶಾಸನಸಭೆಯ ಒಂದು ನಿಯೋಗದ ಸದಸ್ಯನಾಗಿ ಲೋಕಸಭೆಯ ಮೇಲಿನ ಪ್ರೇಕ್ಷಕರ ಗ್ಯಾಲರಿಯಲ್ಲಿ ನಾನು ಕುಳಿತು, ತಮ್ಮೆಲ್ಲರ ಮಾತನ್ನ ನಾನು ಆಲಿಸಿದ್ದೇನೆ, ಗಡಿ ಸಮಸ್ಯೆ ಬಗ್ಗೆ ತಾವು ಆಡಿದ ಮಾತು ಇನ್ನೂ ಸುವರ್ಣಾಕ್ಷರಗಳಲ್ಲಿ ಬರೆದಿದೆ, ಆಗ ನಮ್ಮ ನಾಯಕತ್ವವನ್ನು ವಹಿಸಿದ್ದವರು ಶ್ರೀಮಾನ್ ಎಸ್. ಶಿವಪ್ಪನವರು. ಆಗ ನಮ್ಮ ಜೊತೆ ದಿ: ಹಳ್ಳಿಕೇರಿ ಮುಂತಾದವರು ಬಂದಿದ್ದರು, ಅಂತಹ ಒಂದು ನಾಲ್ಕು ಜನ ನಮ್ಮ ಪಾರ್ಲಿಮೆಂಟ್ ಸದಸ್ಯರು ಅಲ್ಲಿ ಮಾತನಾಡಿದಾಗ ಎಷ್ಟು ಸೌಂದರ್ಯ, ಎಷ್ಟು ಚೆನ್ನಾಗಿತ್ತು ಎಂದು ನಮಗನ್ನಿಸುತ್ತದೆ. ಇಡೀ ಸಭೆಯ ನಿಯೋಗದ ಮೇಲೆ ನಿಯೋಗ ದೆಹಲಿಗೆ ಹೋಯಿತು. ಒಂದು ರೀತಿ ಅಂದು ಮಹಾಜನ್ ನೇಮಕವನ್ನೇ ವಿರೋಧ ಮಾಡಿದೆವು, ನೇಮಕವೇ ಬೇಡ ಎಂದು ಹೇಳಿದಾಗ, ನಮ್ಮೆಲ್ಲರ ಕೂಗು. ಗದ್ದಲ ಈ ರಾಜ್ಯದ ಸಮಗ್ರ ಪ್ರತಿಭಟನೆಯನ್ನು ವಿರೋಧಿಸಿ ಕೂಡಾ ಮಹಾಜನ್ ನೇಮಕ ಮಾಡಿದ್ದುದು ಆಯಿತು. ಮೊದಲಿನಿಂದಲೂ ಕರ್ನಾಟಕಕ್ಕೆ ಬಹಳ ಅನ್ಯಾಯವಾಗಿದೆ. ಮಹಾಜನ್ ನೇಮಕ ಆದಾಗ ಅಂತಿಮವಾಗಿ ಎರಡೂ ರಾಜ್ಯಗಳ ಮುಖ್ಯಮಂತ್ರಿಗಳು ಹಾಗೂ ಎರಡೂ ರಾಜ್ಯದ ಮುಖಂಡರು ಒಂದು ತೀರ್ಮಾನಕ್ಕೆ ಬಂದರು. ಮಹಾಜನ್ ಅವರು ಏನು ವರದಿ ಕೊಡುತ್ತಾರೋ ಅದನ್ನೇ ತೀರ್ಪು ಎಂದು ಒಪ್ಪಿಕೊಳ್ಳಬೇಕೆಂದು ಹೇಳಿ ತೀರ್ಮಾನಿಸಲಾಯಿತು. ಆದರೆ ಸ್ವಾಮಿ, ಬೆಳಗಾವಿ ಕರ್ನಾಟಕದಲ್ಲೇ ಉಳಿಯಬೇಕು ಎಂದು ಹೇಳಿದಾಗ ಮಹಾರಾಷ್ಟ್ರದವರು ಸಮಗ್ರವಾಗಿ ೧೭ ವರ್ಷದಿಂದ ಇಲ್ಲಿಯವರೆಗೂ ಒಂದೇ ಸಮನೆ ನಾವು ಅದನ್ನು ಒಪ್ಪುವುದಿಲ್ಲ ಎಂದು ಹೇಳುತ್ತಿದ್ದಾರೆ. ನಾವು ಇವತ್ತು ಕರ್ನಾಟಕದವರು ಕೇಂದ್ರ ಏನು ಹೇಳುತ್ತಾರೋ ಅದನ್ನು ಚಾಚೂ ತಪ್ಪದೇ ಗಂಭೀರವಾಗಿ ಒಪ್ಪಿಕೊಳ್ಳತಕ್ಕ ಪರಿಸ್ಥಿತಿಗೆ ನಾವು ಬರುತ್ತಿದ್ದೇವೆ. ಇದು ಸಮಂಜಸ ಅಲ್ಲ. ಈ ಕೇಸ್ ಸುಪ್ರೀಮ್ ಕೋರ್ಟ್‌ನಲ್ಲಿ ವಾದದಲ್ಲಿ ಇರುವಾಗ ನಮ್ಮ ಸರ್ಕಾರ ಬಂದು ಕೇವಲ ೬ ತಿಂಗಳು ಆಯಿತು ಎಂದು ಮುಖ್ಯಮಂತ್ರಿಗಳು ಹೇಳಿದ್ದಾರೆ. ೧೯೮೩ರಲ್ಲಿ ಅಂದಿನ ಸರ್ಕಾರ ಅಧಿಕಾರಕ್ಕೆ ಬಂದ ಮೂರು ತಿಂಗಳಲ್ಲಿ ತಂಜಾವೂರಿನ ರೈತರು ಸುಪ್ರೀಮ್ ಕೋರ್ಟಿಗೆ ಹೋದದ್ದು. ಅಲ್ಲಿಂದೀಚೆಗೆ ನಾವು ಏನು ಮಾಡಿದ್ದೇವೆ ? ೮೩ರಲ್ಲಿ ಈ ರಾಜ್ಯದಲ್ಲಿ ಒಂದು ಸರ್ಕಾರ ಬಂದಾದ ಮೇಲೆ ೩ ತಿಂಗಳಿಗೆ ತಂಜಾವೂರಿನ ರೈತರು ನ್ಯಾಯಾಲಯಕ್ಕೆ ಹೋಗಿದ್ದು ಅಲ್ಲಿಂದ ಇಲ್ಲಿಯವರೆಗೆ ಬಂದ ಸರ್ಕಾರಗಳು. ಇದ್ದ ಸರ್ಕಾರಗಳು ಹಾಗೂ ಈಗಿರತಕ್ಕ ಸರ್ಕಾರ ಹೆಜ್ಜೆ ಹೆಜ್ಜೆಗೂ, ಹಂತಹಂತವಾಗಿ ಏನು ಕಾರ್ಯಕ್ರಮಗಳನ್ನು ಕೈಗೊಂಡಿವೆ ಎನ್ನುವುದಕ್ಕೆ ಇಲ್ಲಿ ಮುಖ್ಯವಾದ ಪ್ರಶ್ನೆ.

ಅಧ್ಯಕ್ಷರು.—೧೯೮೩ರಲ್ಲಿ ಕೇಸ್ ದಾಖಲು ಆಯಿತೇ ?

ಶ್ರೀ ವಾಟಾಳ್ ನಾಗರಾಜ್.—ಹೌದು ೧೯೮೩ರಲ್ಲಿ. ಅಲ್ಲಿಂದ ಇಲ್ಲಿಯವರೆಗೆ ೭ ವರ್ಷಗಳಲ್ಲಿ ನಮ್ಮ ಕಾರ್ಯಕ್ರಮಗಳು ಏನು ? ನಮ್ಮ ಸರ್ಕಾರದಲ್ಲಿ ಅವೊತ್ತು ಇದ್ದಂತಹ ಪ್ರಶ್ನೆ ಏನು ? ಅವತ್ತಿನಿಂದ ಇವತ್ತಿನವರೆಗೆ ಯಾರು ಯಾರು ಲೋಕೋಪಯೋಗಿ ಸಚಿವರಾಗಿದ್ದರು ಅವರೆಲ್ಲರೂ ಇದರ ಬಗ್ಗೆ ಉತ್ತರವನ್ನು ಕೊಡಬೇಕಾಗುತ್ತದೆ. ಬಹುಶಃ ಹೆಚ್ಚಿಗೆ ಹಾಸನದವರೇ ಆಗಿದ್ದರು. ಈಗ ಪುಟ್ಟಸ್ವಾಮಿಗೌಡರು, ಹಿಂದೆ ದೇವೇಗೌಡರು, ಅದಕ್ಕೂ ಹಿಂದೆ ನಂಜೇಗೌಡರು, ಹಾಗೂ ಲಕ್ಕಪ್ಪನವರು ಇವರಿಗೆ ಈ ಪಾಪದ ಎಲ್ಲಾ ಹೊರೆ ಬರುತ್ತದೆ. ಹಾಸನದ ೪ ಜನರೇ ಈ ಹೊರೆ ಹೊರ

ಬೇಕಾಗುತ್ತದೆ. ನಾವು ಕಾವೇರಿ ಜನ ಕಣ್ಣೀರು ಇಡಬೇಕಾಗುತ್ತದೆ. ಅಂತಿಮವಾಗಿ ಪ್ರಚೋದನೆಗೆ ಹೋದರೆ ಏನು ಆಗುತ್ತದೆನ್ನುವುದು ಬೇರೆ. ಸುಪ್ರೀಂ ಕೋರ್ಟಿನ ತೀರ್ಮಾನವನ್ನು ಪಂಚಾಯಿತಿಯನ್ನು ಜನರು ಒಪ್ಪುವುದಿಲ್ಲ. ಅಂತಿಮವಾಗಿ ಒಪ್ಪುವ ವಿಚಾರ. ಅದು ಬೇರೆ. ಆದರೆ ಈ ೪ ಜನ ತಾವು ರಾಜ್ಯಕ್ಕೆ ಏನು ಮಾಡಿದ್ದೀರಿ ಎನ್ನುವ ತೀರ್ಮಾನವನ್ನಾದರೂ ಕೊಡಿ, ಇಲ್ಲವೇ ಈ ರಾಜ್ಯದ ಜನತೆಯನ್ನು ಹೆಣವಾಗಿ ನೀವು ೪ ಜನರು ಹೊತ್ತಾದರೂ ಹೋರಿ... ಈ ಎರಡರಲ್ಲಿ ಒಂದೇ ಉಳಿದಿರತಕ್ಕದ್ದು. ಇಲ್ಲಿ ೪ ಜನ ಹೊರುವುದಕ್ಕೆ ಕನ್ನಡನಾಡು, ಇಡೀ ಸಮಗ್ರ ಕರ್ನಾಟಕ ಒಂದು ಹೆಣವಾಗಬೇಕಾಗುತ್ತದೆ, ಇಲ್ಲ ಎಂದರೆ ಈ ಜನರ ಒಂದು ಸ್ಥಿತಿ ಏನಾಗಿದೆ ಎಂಬುದನ್ನು ನೀವು ನೋಡಬೇಕು. ಇವತ್ತು ನಾವು ರಸ್ತೆ ರಸ್ತೆಯಲ್ಲಿ ಮಾತನಾಡತಕ್ಕದ್ದಲ್ಲ. ಹೇಳಿ. ಎಲ್ಲರ ಹೊಣೆಗಾರಿಕೆ ಏನಾಗಿದೆ? ಮಾನ್ಯ ವೀರೇಂದ್ರಪಾಟೀಲ್‌ರವರು ಲೋಕೋಪಯೋಗಿ ನೀರಾವರಿ ಮಂತ್ರಿಗಳಾಗಿದ್ದಾಗಿನಿಂದ ಮಾನ್ಯ ಪುಟ್ಟಸ್ವಾಮಿಗೌಡರು ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳಾಗಿರುವವರೆಗೆ ಒಂದು ಶ್ವೇತಪತ್ರ ಈ ರಾಜ್ಯದಲ್ಲಿ ಪ್ರಕಟವಾಗಲೇ ಬೇಕು. ಆ ಶ್ವೇತ ಪತ್ರದಲ್ಲಿ ಯಾರ್ಯಾರು ಎಷ್ಟೆಷ್ಟು ಈ ರಾಜ್ಯಕ್ಕೆ ನದಿ ನೀರಿನ ಅನುಕೂಲ ಮಾಡಿದ್ದಾರೆ ಯಾವ್ಯಾವ ರೀತಿಯ ಅನುಕೂಲಗಳನ್ನು ಮಾಡಿದ್ದಾರೆ ಈ ರಾಜ್ಯದ ಸಮಗ್ರ ೪ ಕೋಟಿ ಕನ್ನಡಿಗರಿಗೆ ಅರ್ಥವಾಗುವ ರೀತಿಯಲ್ಲಿ ಅದು ಆಗಲೇಬೇಕು. ಇದಕ್ಕೆ ಸರ್ಕಾರ ಸಮಗ್ರವಾಗಿ ನಿಲ್ಲಬೇಕು. ನಾವು ಇದೇರೀತಿ ರಾಜ್ಯದಲ್ಲಿ ವಿಧಾನಸಭೆಯನ್ನು ಕರೆದು ಮಾತನಾಡಿ, ಭಾಷಣ ಮಾಡಿ ಈ ರೀತಿಯಿಂದ ಹೋಗುವುದಾದರೆ ಬಹುಶಃ ನನಗನ್ನಿಸುತ್ತದೆ ಪಂಚಾಯಿತಿ ತೀರ್ಪು ಸಹ ನಮ್ಮ ಪರವಾಗಿ ಬರುತ್ತದೆಂದು ನಾನು ಅಂದುಕೊಂಡಿಲ್ಲ. ಮುಂದಿನ ಭವಿಷ್ಯವನ್ನು ಯಾರು ನಿರ್ಣಯ ಮಾಡತಕ್ಕವರು? ಪಂಚಾಯಿತಿಯಲ್ಲಿ ಏನು ಅನುಕೂಲವಾಗುತ್ತದೆ? ನಾವು ಎಲ್ಲಾ ಕಾಗದಪತ್ರಗಳನ್ನು ಒದಗಿಸಿ ಒಳ್ಳೆಯ ರೀತಿಯ ವಾದವನ್ನು ಕೊಟ್ಟು ಒಳ್ಳೆಯ ರೀತಿಯಲ್ಲಿ ಚರ್ಚೆಮಾಡಿದರೆ ಅರ್ಥವಿತ್ತು. ಈಗ ಇದು ಏನಾಗುತ್ತದೆಂದರೆ ಇದೊಂದು ಶವ ಸಂಸ್ಕಾರ ಆಗುತ್ತದೆ. ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಇದು ಅಲ್ಲ. ಇದು ನಿಮ್ಮ ಜವಾಬ್ದಾರಿಯಿಂದ, ಹೊಣೆಗಾರಿಕೆಯಿಂದ ತಪ್ಪಿಕೊಳ್ಳತಕ್ಕ ನೀತಿ. ನಾನು ಹೇಳುತ್ತೇನೆ ನಿಜ, ನಮ್ಮ ವಿರೋಧ ಪಕ್ಷದ ನಾಯಕರು ಹೇಳಿದರು ಪಂಚಾಯತಿ ಮಂಡಳಿಯನ್ನು ಸಮಗ್ರವಾಗಿ. ನಾವು ತಿರಸ್ಕರಿಸಬೇಕೆಂದು. ನಾನು ಆ ನಿಲುವನ್ನು ಒಪ್ಪುತ್ತೇನೆ. ಆ ದಿಟ್ಟತನವನ್ನು ಒಪ್ಪುತ್ತೇನೆ ನಾವೇನು ಕೈಗೆ ಬಳೆ ಹಾಕಿಕೊಂಡಿದ್ದೇವೇನು? ಗಂಭೀರವಾಗಿ ಹೋಗಿ ಕೈಮುಗಿದು ಸ್ವಾಮಿ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ ನಾವಂತೂ ಕರ್ನಾಟಕದ ಜನ ಯಾವುದೇ ತರಹ ತೀರ್ಪು ಬಂದರೂ ಒಂದು ತೊಟ್ಟು ನೀರನ್ನು ತಮಿಳು ನಾಡಿಗೆ ಕೊಡುವ ಪ್ರಶ್ನೆಯೇ ಇಲ್ಲ. ನೀವು ಏನೇ ತೀರ್ಪು, ಕೊಡಿ ನೀರು ತೆಗೆದುಕೊಳ್ಳುವವರು ಯಾರು? ನೀರು ಕೊಡುವವರು ಯಾರು? ಎಲ್ಲಿಂದ ನೀರನ್ನು ತೆಗೆದುಕೊಳ್ಳುತ್ತಾರೆ? ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಸಚಿವರು ಏನು ಹೇಳಿದ್ದಾರೆ ಆ ಮಾತಿಗೆ ತಾವು ನಿಲ್ಲಬೇಕು ಒಂದು ತೊಟ್ಟು ನೀರನ್ನು ಬೇರೆ ರಾಜ್ಯಕ್ಕೆ ಬಿಡುವುದಿಲ್ಲವೆಂದು ಹೇಳಿದ್ದಾರೆ. ಆವೊಂದು ದಿಟ್ಟ ನಿಲುವನ್ನು ತಾಳಿದ್ದಾರೆ. ಅದರ ಹಿಂದೆ ಮುಂದೆ ಹೋಗಬಾರದು. ಇವೊತ್ತು ಪಂಚಾಯತಿ ಮಾಡಿದ್ದಾರೆ. ಅದನ್ನು ತಾವು ಒಪ್ಪಿಕೊಳ್ಳುತ್ತೀರಾ? ಹೇಗೆ ಒಪ್ಪಿಕೊಳ್ಳುತ್ತೀರಿ? ಇದುವರೆಗೆ ನಮ್ಮ ಮುಖ್ಯಮಂತ್ರಿಗಳು ಏನು ಹೇಳಿಕೊಂಡು ಬಂದರು? ಪಂಚಾಯಿತಿ ಮಂಡಳಿಯನ್ನು ವಿರೋಧ ಮಾಡುತ್ತೇವೆ. ಪಂಚಾಯಿತಿ ಮಂಡಳಿ ನಮಗೆ ಬೇಡವೆಂದು ಹೇಳಿಕೊಂಡು ಬಂದರು. ಇವತ್ತು ಸ್ವಲ್ಪ ನಿಮ್ಮ ವಾದದಲ್ಲಿ ತಿರುಗುಮುರುಗು ಇದೆ. ನೀವು ಹಿಂದೆ ಏನು ಹೇಳಿದ್ದೀರಿ ಅದೇರೀತಿ ಇರಬೇಕು. ನೀವು ನಿಮ್ಮ ಸರ್ಕಾರ ಉಳಿಯುವುದು ಹೋಗಲಿ, ನೀವು ಅಧಿಕಾರಕ್ಕೋಸ್ಕರ ಉಳಿಯುವುದು ಬೇಡ. ಕೇಂದ್ರ ಸರ್ಕಾರ ಏನು ಮಾಡುತ್ತದೆ ಎಂಬುದನ್ನು ನೋಡೋಣ. ಇವತ್ತು ಧೈರ್ಯವಾದ ನಿಲುವು ಏನಿದೆ, ಪಂಚಾಯಿತಿಯನ್ನು ವಿರೋಧಿಸುತ್ತೇವೆಂದು ಹೇಳಿರುವುದು ಸರಿಯಿದೆ ಆಕಾಶವೇನು ಕಳಚಿ ಬಿದ್ದುಹೋಗುವುದಿಲ್ಲ, ಪಂಚಾಯತಿ ಮಂಡಳಿ ರಚನೆಯಾಗುತ್ತದೆ. ಈ ಬಗ್ಗೆ ನ್ಯಾಯಾಂಗ ಇಲಾಖೆ ಏನು ಹೇಳುತ್ತಿದೆ? ನೀವು ನಿಮ್ಮ ವಾದವನ್ನು ಮಾಡಬೇಕು. ಈ ಸಭೆಯಲ್ಲಿ ಚರ್ಚೆಮಾಡಿ, ಪಂಚಾಯತಿ ಮಂಡಳಿಯಲ್ಲಿ ನೀವು ಈ ಹಣವನ್ನು ಎಷ್ಟು ದಿವಸ ಇಡಬೇಕು? ಕರ್ನಾಟಕ ರಾಜ್ಯದ ಹಣವನ್ನು ಪಂಚಾಯತಿ ಮಂಡಳಿಯಲ್ಲಿ ಎಷ್ಟು ದಿವಸ ಇಟ್ಟುಕೊಳ್ಳೋಣವೆಂದು ಇದ್ದೀರಿ?

ಅಧ್ಯಕ್ಷರು.—ಮಾನ್ಯ ಮುಖ್ಯಮಂತ್ರಿಗಳು ಅವರು ಭಾಷಣ ಮಾಡತಕ್ಕ ಕಾಲದಲ್ಲಿ ಕನ್ಸಿಸ್ಟೆಂಟ್ ಆಗಿ ಒಂದೇ ಪೊಸಿಷನ್ ತೆಗೆದುಕೊಂಡಿದ್ದಾರೆ. ಪಂಚಾಯಿತಿ ಬೇಡವೆಂದು ಹೇಳಿದ್ದಾರೆ. ಆ ಬಗ್ಗೆ ವಾದ ಮಾಡಿದ್ದಾರೆ ಆದರೂ ಸುಪ್ರೀಂಕೋರ್ಟಿನವರು ತೀರ್ಮಾನ ಕೊಟ್ಟಿದ್ದಾರೆ. ಕೇಂದ್ರ ಸರ್ಕಾರದವರು ಪಂಚಾಯಿತಿಯನ್ನು ರಚಿಸಿದ್ದಾರೆ. ಇನ್ನು ಮುಂದೆ ಏನು ಮಾಡಬೇಕು ಎನ್ನತಕ್ಕದ್ದು ಇದೆಯಲ್ಲ ಅದಕ್ಕೆ ನಿಮ್ಮ ಸಲಹೆ ಹೇಳಿ.

ಶ್ರೀ ವಾಟಾಳ್ ನಾಗರಾಜ್.—ನಾನು ಹೇಳುತ್ತಿದ್ದೇನೆ. ಈಗ ಕೇಂದ್ರಸರ್ಕಾರದವರು ಕೈತೊಳೆದು ಕೊಂಡಿದ್ದಾರೆ, ಅವರು ತಮ್ಮ ಜವಾಬ್ದಾರಿಯನ್ನು ಕಳೆದುಕೊಂಡಿದ್ದಾರೆ. ಸುಪ್ರೀಂ ಕೋರ್ಟಿನವರು ಸಹ ತಮ್ಮ ಜವಾಬ್ದಾರಿಯನ್ನು ಕಳೆದುಕೊಂಡರು.

೫–೪೫ ಪಿ. ಎಂ.

ಆದರೆ ಇದು ಯಾರ ಕುತ್ತಿಗೆಗೆ ಹಗ್ಗ? ತಮಿಳುನಾಡಿನವರು ಸಿಹಿ ಹಂಚಿದರು. ಶ್ರೀ ಕರುಣಾನಿಧಿಯವರು ಎಲ್ಲಾ ಕಡೆ ಒಂದೂವರೆ ಲಕ್ಷ ಜನರನ್ನು ಸೇರಿಸಿ ನಾವು ಗೆದ್ದಿದ್ದೇವೆ ಎಂದು ಹೇಳಿ ತಮಿಳುನಾಡಿನಾದ್ಯಂತ ಭಾರಿ ಮೆರವಣಿಗೆಗಳು, ಸಭೆಸಮಾರಂಭಗಳು, ಬಹಳ ಅದ್ದೂರಿಯಾದಂಥ ವೈಭವ ಸಮಾರಂಭಗಳು ನಡೆಯುತ್ತವೆ. ಇಲ್ಲಿ ನಮ್ಮ ಗತಿ ಏನು? ನಮ್ಮ ಸಮಾಧಿ ಆಗುತ್ತಿದೆ ಇಲ್ಲಿ. ಕನ್ನಡಿಗರ ಸಮಾಧಿಯಾಗುತ್ತಿದೆ. ಬೆಂಕಿ ಬಿದ್ದಿದೆ ರಾಜ್ಯಕ್ಕೆ. ಅದನ್ನು ನಾನು ಹೇಳುತ್ತಿದ್ದೇನೆ. ಯಾವ ಕಾರಣಕ್ಕಾಗಿ ವೀರೇಂದ್ರ ಪಾಟೀಲರ ಸರ್ಕಾರದಿಂದ ತೀರ್ಪು ಬಂತು ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಸುಪ್ರೀಂಕೋರ್ಟ್‌ನಿಂದ ತೀರ್ಪು ಬಂತು, ವೀರೇಂದ್ರ ಪಾಟೀಲರು ಸರ್ಕಾರದಿಂದ ಹೋದರು ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಕೆಲವರು ಹೇಳಿದರು, ಅಲ್ಲಿಯ ಮಂತ್ರಿಗಳು ಬಂದಿದ್ದರು ಎಂದು. ಅವರು ಇಲ್ಲಿ ಏತಕ್ಕೆ ಬರುತ್ತಾರೋ, ಮಂತ್ರಿಗಳು ಬಂದರೆ ಇಲ್ಲಿ ಕಾದುಕೊಂಡಿರುವುದಕ್ಕೆ ಆಗುವುದಿಲ್ಲ. ಏತಕ್ಕೋ ಬರುತ್ತಾರೆ, ಹೋಗುತ್ತಾರೆ ಎಷ್ಟೋ ಜನ ಮಂತ್ರಿಗಳು ಬರುತ್ತಾರೆ, ಹೋಗುತ್ತಾರೆ. ಅವರು ವೀರಪ್ಪನ್ ಅನ್ನು ಹುಡುಕುವುದಕ್ಕೆ ಬಂದಿದ್ದರೂ ಬಂದಿರಬಹುದು. ಆದರೆ ನಾವು ಬಾಗಿಲಲ್ಲೇ ಕಾಯುತ್ತಾ ಇರುವುದಕ್ಕೆ ಆಗುತ್ತದೆಯೆ? ಏತಕ್ಕೋಸ್ಕರ ಬರುತ್ತೇವೆ ಎಂದು ಹೇಳಿ ಕಾಗದ ಬರೆದು, ಪತ್ರ ಬರೆದು ಸರ್ಕಾರದ ಜೊತೆಯಲ್ಲಿ ಮಾತುಕತೆಗೆ ಬರುತ್ತೇವೆ ಎಂದು ಹೇಳಿದ್ದರೆ ಬರಲಿ. ಆದರೆ ಯಾವುದೋ ಬೇರೆ ವಿಚಾರಕ್ಕೆ, ಯಾರದ್ದೋ ಮದುವೆಗೆ ಬಂದರೆ ಮುಖ್ಯಮಂತ್ರಿಗಳು "ಏನು ಸ್ವಾಮಿ ಬಂದಿದ್ದೀರಿ?" ಎಂದು ಹೇಳುವುದಕ್ಕೆ ಆಗುವುದಿಲ್ಲ. ಇದು ಪ್ರಶ್ನೆ ಅಲ್ಲ. ಮತ್ತು ಪ್ರತಿಸಾರಿಯೂ ನಮ್ಮನ್ನು ಹೆದರಿಸಿ ಹೆದರಿಸಿ ನೀರು ತೆಗೆದುಕೊಳ್ಳುತ್ತಿದ್ದಾರೆ ಪ್ರತಿಸಾರಿಯೂ ೫ ಟಿ.ಎಂ.ಸಿ. ನೀರನ್ನು ತೆಗೆದುಕೊಳ್ಳುತ್ತಲೇ ಇದ್ದಾರೆ. ಯಾವತ್ತೂ ತೆಗೆದುಕೊಳ್ಳದೇ ಬಿಟ್ಟಿದ್ದಿಲ್ಲ. ನಮ್ಮ ಕೆಲವರು ಹೇಳುತ್ತಿದ್ದಾರೆ ಇಲ್ಲಿ ಬೊಮ್ಮಾಯಿಯವರು ಇದ್ದಾಗ ಒಳ್ಳೆಯ ನೆಂಟಸ್ತನ ಇತ್ತು ಎಂದು. ಇವರು ಬಂದಮೇಲೆ ನೆಂಟಸ್ತನ ಇಲ್ಲ ಎಂದು ಹೇಳಿದರೆ ಇದೇನು ಹುಡುಗಾಟ? ಈಗ ಬೊಮ್ಮಾಯಿಯವರು ಎಲ್ಲಿದ್ದಾರೆ? ಚೈನಾದಲ್ಲಿದ್ದಾರೆ. ಹೆಗಡೆಯವರು ಎಲ್ಲಿದ್ದಾರೆ? ಎಲ್ಲಿ ಹುಡುಕಿಕೊಂಡು ಹೋಗೋಣ? ಶ್ರೀ ಸಿಂಧ್ಯರವರೇ, ಇದು ಸಲ್ಲದು ಸ್ವಲ್ಪ ಗಂಡಸ್ತನ ತೋರಿಸಿ ರಾಜ್ಯದ ಜನತೆಗೆ ಹೇಳೋಣ. ಜನರನ್ನು ಪ್ರಚೋದನೆ ಮಾಡುವುದಕ್ಕೆ ನಿರಾಸಕ್ತರಾದರೆ ನಮ್ಮ ಹಣೆಬರಹ ಏನಾಗುತ್ತದೆ? ಹಿಂದೆ ವರುಣಾ ನಾಲೆಯನ್ನು ತಾವು ವಿರೋಧ ಮಾಡಿ ಚಡ್ಡಿ ಮೆರವಣಿಗೆ ಆಯಿತು...

ಅಧ್ಯಕ್ಷರು.—ಅದು ಆಯಿತಲ್ಲ. ಅದು ನಿಂತುಹೋಗಿದ್ದರೆ ನೀವು ಉದ್ಧರಿಸಬಹುದಿತ್ತು.

ಶ್ರೀ ವಾಟಾಳ್ ನಾಗರಾಜ್.—ನಾನು ಅದನ್ನು ವಿರೋಧಿಸುತ್ತಿಲ್ಲ. ಅಂದರೆ ಜನ ಎಲ್ಲಿಯವರೆಗೆ ಕೇಳುತ್ತಾರೆ ಹೇಳಿ. ನಾಳೆ ಕೇಂದ್ರ ಸರ್ಕಾರ ಮಿಲಿಟರಿ ತಂದು ನಿಲ್ಲಿಸಿದರೂ ತಮಿಳುನಾಡಿಗೆ ನೀರು ಕೊಡುವುದಿಲ್ಲ. ಈಗಲೇ ತಮಿಳುನಾಡಿನವರಿಗೆ ನೀರು ಕೊಟ್ಟು ಕೊಟ್ಟು ಸಾಕಾಗಿದೆ. ನಮ್ಮ ರಾಜ್ಯದಲ್ಲಿ ೨ನೇ, ೩ನೇ ಕಾವೇರಿ ಸ್ಟೇಜ್‌ನ ನೀರನ್ನು ಅವರಿಗೇ ಕೊಡುತ್ತಾ ಇರೋದು, ಇಂಥಾದ್ದರಲ್ಲಿ ನಮ್ಮ ರೈತರ ಪರಿಸ್ಥಿತಿ ಇವತ್ತು ಏನಿದೆ? ನಮ್ಮ ಬರಹ ಏನಾಗಿದೆ? ಯಾವುದಕ್ಕೋಸ್ಕರ ಕೊಡಬೇಕು, ಎಷ್ಟು ಕೊಡಬೇಕು. ಪ್ರತಿವರ್ಷವೂ ಕರುಣಾನಿಧಿಯವರು ಬರುವುದು, ಮಾತುಕತೆಯಾಡುವುದು. ಯಾರೇ ಮುಖ್ಯ ಮಂತ್ರಿಗಳು ಇರಲಿ, ಮೊದಲಿನಿಂದ ಇಲ್ಲಿಯವರೆಗೆ ನಮ್ಮ ಹತ್ತಿರ ನೀರು ಪಡೆದೇ ಇದ್ದಾರೆ. ದೇಶಕ್ಕೆಲ್ಲ ಅವರು ಈಗ ಹೇಳುತ್ತಿರುವುದೇನು? ನಮಗೆ ಬಹಳ ಅನ್ಯಾಯವಾಗಿ ಹೋಗಿದೆ, ತಮಿಳುನಾಡಿಗೆ ಅನ್ಯಾಯವಾಗಿದೆ ಎಂದು. ತಮಿಳುನಾಡಿನಲ್ಲಿ ಕಾವೇರಿ ನೀರಿನಿಂದ ವ್ಯವಸಾಯ ಮಾಡತಕ್ಕಂಥ ಭೂಮಿ ಎಷ್ಟು? ನಮ್ಮ ಕರ್ನಾಟಕದಲ್ಲಿ ನಮ್ಮದೇ ನದಿ, ನಮ್ಮಲ್ಲಿಯೇ ಅದರ ಉಗಮವಾದ ಸ್ಥಳ. ಕಾವೇರಿ ಹುಟ್ಟತಕ್ಕಂಥ ಸ್ಥಳ ನಮ್ಮದು. ನಮ್ಮ ಬಾವಿಯಲ್ಲಿ ನೀರು ಸೇದುವವರು ಜಾಸ್ತಿ ಜನ. ಬಹಳ ಚೆನ್ನಾಗಿದೆ ಈ ನ್ಯಾಯ. ಇದಕ್ಕೆ ಒಂದು ಮಂಡಲಿ, ಒಂದು ತೀರ್ಪು. ಕದ್ದವರಿಗೆ ಕದ್ದ ಎಂದು ಹೇಳಬಾರದು. ಕದ್ದವರಿಗೆ ನ್ಯಾಯ ಕೊಡುವುದಕ್ಕೆ ಒಂದು ನ್ಯಾಯ ಮಂಡಳಿ. ಯಾರು ಕಳ್ಳತನ ಮಾಡುತ್ತಾರೆ, ಖದೀಮ ಇದ್ದಾರೆ, ಅವರಿಗೆ ತೀರ್ಪು ಕೊಡುವುದಕ್ಕೆ ಒಂದು ಮಂಡಳಿ ಎಂದು ಹೇಳುವುದಾದರೆ ಇದಕ್ಕೆ ಏನು ಹೇಳಬೇಕು? ಪಂಚಾಯಿತಿ ಮಂಡಳಿಯನ್ನು ತಡೆಯತಕ್ಕಂಥ ಶಕ್ತಿ ಕೇಂದ್ರ ಸರ್ಕಾರಕ್ಕೆ ಇತ್ತು. ಅವರು ಸುಪ್ರೀಂ ಕೋರ್ಟಿಗೆ ಹೇಳಬಹುದಿತ್ತು.

ನಾವು ಗಂಭೀರವಾಗಿ ನಮ್ಮ ಮಾತುಕತೆಯಲ್ಲಿಯೇ ತೀರ್ಮಾನ ಮಾಡಿಕೊಳ್ಳುತ್ತೇವೆ. ಕೇರಳ ಮುಖ್ಯ ಮಂತ್ರಿಗಳು ಪಂಚಾಯಿತಿ ಮಂಡಳಿ ಬೇಡವೆಂದು ಹೇಳುತ್ತಿದ್ದಾರೆ. ಇದು ಯಾವುದೇ ರಾಜಕೀಯಕ್ಕೋಸ್ಕರ ಮಾತನಾಡುತ್ತಿದ್ದೇನೆ ಎಂದಲ್ಲ. ಕೇಂದ್ರದಲ್ಲಿ ಪ್ರಭಾವ ಬೀರತಕ್ಕಂಥ, ನಮ್ಮವರೇ ಆದಂಥ ಕೆಲವರು ಮುಖಂಡರು ಅತ್ಯಂತ ಉನ್ನತವಾದ ಸ್ಥಾನದಲ್ಲಿದ್ದಾರೆ. ಯಾವ ಮುಖ ಇಟ್ಟುಕೊಂಡು ಅವರು ಅಧಿಕಾರದಲ್ಲಿ ಇರಬೇಕು ಎಂದು ನಾನು ಕೇಳುತ್ತೇನೆ. ಅವರು ರಾಜೀನಾಮೆ ಕೊಡಬೇಕು, ಇದುವರೆಗೂ ಕೊಟ್ಟಿಲ್ಲ. ಬಹಳ ಅಪರಾಧ ಮಾಡುತ್ತಿದ್ದಾರೆ. ರಾಜ್ಯದ ಜನತೆಗೆ, ನಾಲ್ಕು ಕೋಟಿ ಕನ್ನಡಿಗರಿಗೆ ಅನ್ಯಾಯ ಮಾಡುತ್ತಿದ್ದಾರೆ. ಈ ರಾಜ್ಯದಲ್ಲಿ ಹುಟ್ಟಿ ಬೆಳೆದಂಥ ಜನ ಕೇಂದ್ರದಲ್ಲಿ ಅಧಿಕಾರದಲ್ಲಿರತಕ್ಕಂಥವರು ಇದ್ದಾರೆ. ಕೇಂದ್ರ ಮಂತ್ರಿಗಳು ನಮ್ಮವರು ಇದ್ದಾರೆ. ಇವತ್ತಿನವರೆಗೆ ಸರ್ಕಾರ ಎತ್ತಿಲ್ಲ. ಇದೇ ರೀತಿ ಹಿಂದೆ, ಹಿಂದಿ ವಿರುದ್ಧ ಒಂದು ದೊಡ್ಡ ಸಮಾರಂಭ ಮಾನ್ಯ ಕೆಂಗಲ್ ಹನುಮಂತಯ್ಯನವರು, ಕರ್ನಾಟಕದ ಪುತ್ರ ಮತ್ತು ತಮಿಳುನಾಡಿನ ಸಿ ಸುಬ್ರಹ್ಮಣ್ಯಂ ಅವರ ಕಾಲದಲ್ಲಿ ಇದೇ ಲಾಲ್‌ಬಾಗ್‌ನಲ್ಲಿ ನಡೆಯಿತು. ಇವತ್ತು ನಮ್ಮ ರಾಜ್ಯದ ಇಬ್ಬರು ಮಂತ್ರಿಗಳು ಕೇಂದ್ರದಲ್ಲಿದ್ದಾರೆ; ಅವರು ಒಂದೂ ಮಾತನಾಡುತ್ತಾ ಇಲ್ಲ. ಕೇಂದ್ರದಲ್ಲಿ ಉನ್ನತ ರಾಷ್ಟ್ರೀಯ ಪಕ್ಷದ ಅಧ್ಯಕ್ಷರಿದ್ದಾರೆ, ಈ ಬಗ್ಗೆ ಅವರೂ ಗಂಭೀರವಾಗಿದ್ದಾರೆ. ಅಲ್ಲದೆ ಇನ್ನೂ ಅನೇಕ ಮುಖಂಡರು ಇದ್ದಾರೆ, ನಾನು ಅವರನ್ನು ತೇಜೋವಧೆ ಮಾಡಬೇಕೆಂದಿಲ್ಲ. ಅವರು ಕೇಂದ್ರ ಸರ್ಕಾರದ ವಿರುದ್ಧ ಗಂಭೀರವಾಗಿ ರಾಜೀನಾಮೆ ಕೊಡಬೇಕಾಗಿತ್ತು. ಇವತ್ತೂ ಕೂಡ ಕಾಲ ಮಿಂಚಿಲ್ಲ ಕೇಂದ್ರ ಸರ್ಕಾರದ ನೀತಿಯನ್ನು ವಿರೋಧಿಸಿ, ಅವರು ರಾಜೀನಾಮೆ ಕೊಡಬೇಕು. ಕಾಂಗ್ರೆಸ್ಸಿನ ಪಾರ್ಲಿಮೆಂಟ್ ಸದಸ್ಯರಿಗೆ ತಾವು ಹೇಳಬೇಕು, ಕೂಡಲೇ ರಾಜೀನಾಮೆ ಕೊಟ್ಟು ಹೊರಗೆ ಬನ್ನಿ ಎಂದು ಹೇಳಬೇಕು. ನೀವು ಈ ಕೆಲಸ ಮಾಡಿ, ಈ ಸೂತ್ರ ಹಿಡಿಯಿರಿ. ನಾಳೆ ಬೆಳಿಗ್ಗೆ ಕೇಂದ್ರ ಸರ್ಕಾರ ಮಂಡ್ಯಕ್ಕೆ ಬರುತ್ತದೆ ಬೆಂಗಳೂರಿಗೆ ಅಲ್ಲ, ಪ್ರಧಾನಿಯವರು ಮಂಡ್ಯಕ್ಕೆ ಬರುತ್ತಾರೆ. ಅವರೇ ಬರುತ್ತಾರೆ, ಬಂದು ನಿಮ್ಮ ಸಮಸ್ಯೆ ಏನು ಎಂದು ಕೇಳಿ, ಅವರೇ ಮಾತುಕತೆಗೆ ಬರುತ್ತಾರೆ. ನೀವೇನೂ ಹೋಗಬೇಕಾದ್ದಿಲ್ಲ. ಏಕೆ ನಾವು ನ್ಯಾಯಾಂಗ ಇಲಾಖೆಯವರನ್ನು ಕರೆದು, ಎಲ್ಲಾ ಕಾಗದಪತ್ರಗಳನ್ನು ರೆಡಿ ಮಾಡಿ ವಾದ ಮಾಡಬೇಕು, ಇದು ಸರಿಯಾದುದಲ್ಲ. ಇದು ಒಂದು ರೀತಿ ನಮ್ಮ ನಿಲುವು ಗಂಡಸುತನವೂ ಅಲ್ಲ, ಒಂದು ರೀತಿ ಹೆಂಗಸುತನವೂ ಅಲ್ಲ. ಗಂಡಸು, ಹೆಂಗಸು ಎರಡೂ ಇರತಕ್ಕಂಥಾದ್ದು ಸರಿಯಲ್ಲ. ಈ ನೀತಿಯಿಂದ ನನಗೆ ನೋವಾಗುತ್ತದೆ. ಈ ರಾಜ್ಯದಲ್ಲಿ ದೊಡ್ಡ ಆಂದೋಳನವಾಗಲೀ, ಈ ನಾಡಿಗೋಸ್ಕರ, ಕಾವೇರಿ ನದಿಯ ಒಂದೊಂದು ಹನಿ ನೀರಿಗೂ ರಕ್ತ ಚೆಲ್ಲಲಿ, ಒಂದೊಂದು ತೊಟ್ಟು ನೀರಿಗೂ ರಕ್ತ ಚೆಲ್ಲಲಿ ಎಂದು ಹೇಳುತ್ತೇನೆ. ಕನ್ನಡ ನಾಡಿನ ಉದ್ದಗಲಕ್ಕೂ ೪ ಕೋಟಿ ಜನತೆಯ ಒಂದೊಂದು ತೊಟ್ಟು ನೀರಿಗೂ ಒಂದೊಂದು ತೊಟ್ಟು ರಕ್ತ ಚೆಲ್ಲಲಿ. ತೊಟ್ಟು ನೀರಿಗೆ ತೊಟ್ಟು ರಕ್ತ. ಈ ರೀತಿಯ ಚಳುವಳಿಯನ್ನು ನಾವು ಮಾಡಲೇಬೇಕು. ಸನ್ಯಾಸಿ ತರಹ ಹರಿಕಥೆ ಮಾಡಿಕೊಂಡು ಈ ಸಭೆಯನ್ನು ನಡೆಸಿದರೆ ಅದು ಸರಿಯಲ್ಲ. ಆದ್ದರಿಂದ, ಸಮಗ್ರವಾಗಿ ಈ ರಾಜ್ಯದಲ್ಲಿ ಒಂದು ದೊಡ್ಡ ಆಂದೋಳನ ಆಗುತ್ತದೆ ಎಂದು ಹೇಳುತ್ತೇನೆ, ಅಂತಿಮವಾಗಿ ಇದಕ್ಕೆ ನಾವೇ ಹೊಣೆಗಾರರಾಗುತ್ತೇವೆ. ಈ ಸಭೆಯ ಸದಸ್ಯರನ್ನಾಗಿ ಜನ ನಮ್ಮನ್ನು ಚುನಾಯಿಸಿ ಕಳುಹಿಸಿದ್ದಾರೆ. ನಾವು ಆ ಜನತೆಗೆ ವಂಚನೆ ಮಾಡಿದಹಾಗೆ ಆಗುತ್ತದೆ. ಈ ರಾಜ್ಯದಲ್ಲಿ ಒಂದು ದೊಡ್ಡ ಆಂದೋಳನ ಬಹುಶಃ ಈ ರಾಜ್ಯ ಸರ್ಕಾರ ಅಲ್ಲ, ಕೇಂದ್ರ ಸರ್ಕಾರ ಅಲ್ಲ ಯಾರೂ ಸಹ ನಡೆಸದೇ ಇರತಕ್ಕ ಹೋರಾಟ ಆಗಿ, ಅಂತಿಮವಾಗಿ ರಕ್ತ ಪಾತಕ್ಕೆ ಇಳಿಯುತ್ತದೆ ಎಂದು ಹೇಳುತ್ತೇನೆ. ಮುಂದಿನ ಸೂಚನೆಯಾಗಿ ಈ ಮಾತನ್ನು ನಾನು ಹೇಳುತ್ತೇನೆ. ಇದೆಲ್ಲಕ್ಕೂ ನಾವು ಹೊಣೆಯಾಗಬೇಕಾಗುತ್ತದೆ ಈ ರಾಜ್ಯ ಹೊಣೆಯಾಗಬೇಕಾಗುತ್ತದೆ. ಅದಕ್ಕೆ ಈ ಸದನದಲ್ಲಿ ಒಂದು ಸಮರ್ಥವಾದ ನಿರ್ಣಯ ಆಗಲೇಬೇಕು. ಕೇಂದ್ರ ಸರ್ಕಾರ ನಡೆದುಕೊಂಡು ಬಂದ ಬಗ್ಗೆ ಒಂದು ನಿರ್ಣಯ ಮತ್ತು ಕೇಂದ್ರವನ್ನು ವಿರೋಧ ಮಾಡುವುದಕ್ಕೆ ಒಂದು ನಿರ್ಣಯ. ಕೇಂದ್ರ ಸರ್ಕಾರದವರು ಇದುವರೆಗೂ ಹೆಜ್ಜೆ ಹೆಜ್ಜೆಗೂ ಅನ್ಯಾಯ ಮಾಡಿದ್ದಾರೆ. ಕೇಂದ್ರ ಸರ್ಕಾರ ತನ್ನ ಕರ್ತವ್ಯದಲ್ಲಿ ವಿಫಲವಾಗಿರುವುದು ಮತ್ತು ತನ್ನ ಹೊಣೆಗಾರಿಕೆಯಿಂದ ತಪ್ಪಿಸಿಕೊಂಡಿರುವುದು ಹಾಗೂ ಕರ್ನಾಟಕಕ್ಕೆ ಅನ್ಯಾಯ ಮಾಡಿರುವುದು. ಇದರ ಬಗ್ಗೆ ಸಮಗ್ರವಾದ ಒಂದು ನಿರ್ಣಯ ಆಗಲೇಬೇಕು. ಮತ್ತೊಂದು ನಿರ್ಣಯ, ಪಂಚಾಯ್ತಿಗೆ ಒಪ್ಪಿಸುವುದನ್ನು ಸಮಗ್ರವಾಗಿ ವಿರೋಧಿಸುತ್ತೇವೆ, ಪಂಚಾಯ್ತಿಗೆ ಬರುವುದಿಲ್ಲ, ನೀವು ಕೊಟ್ಟಿರತಕ್ಕ ಪಂಚಾಯಿತಿ ಸರಿ ಇಲ್ಲ ಎಂದು ಹೇಳತಕ್ಕ ಎದೆಗಾರಿಕೆ ಈ ಸರ್ಕಾರಕ್ಕೆ ಇದೆಯೇ? ಮುಖ್ಯ ಮಂತ್ರಿಗಳು ನಾಳೆ ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಲಿ. ಏಕೆ ಮುಖ್ಯ ಮಂತ್ರಿಗಳು ತಮ್ಮ ಮೈ ಮೇಲೆ ಹೊಣೆ ಹಾಕಿಕೊಳ್ಳಬೇಕು. ಎಲ್ಲರನ್ನೂ ಕೇಳಲಿ, ಎಷ್ಟು ಜನರು ಪಂಚಾಯಿತಿಗೆ ಪರ ಇದ್ದಾರೆ, ಎಷ್ಟು ಜನರು ವಿರೋಧ ಇರುತ್ತಾರೆ ಎಂಬುದು ಅಂತಿಮವಾಗಿ ತೀರ್ಮಾನ ಆಗಲಿ. ಪಂಚಾಯಿತಿ ಮಂಡಳಿ ಬೇಕೆ, ಬೇಡವೇ ಎಂಬುದು ೪ ಕೋಟಿ ಕನ್ನಡಿಗರಿಂದ ಒಂದು ಚುನಾವಣೆ ನಡೆಯಲಿ. ಪಂಚಾಯಿತಿ ಮಂಡಳಿಯನ್ನು

ವಿರೋಧಿಸಬೇಕೇ, ಪಂಚಾಯಿತಿ ಪರ ಇರಬೇಕೇ ಎಂಬುದನ್ನು ಹೇಳಲಿ. ಇವತ್ತು ಹೇಳುತ್ತಿದ್ದೇನೆ, ನೂರಕ್ಕೆ ನೂರರಷ್ಟು ಭಾಗ ಪಂಚಾಯಿತಿಯನ್ನು ವಿರೋಧಿಸುತ್ತಾರೆ, ಸಮಗ್ರವಾಗಿ ಕನ್ನಡಿಗರು ನಮಗೆ ಬೆಂಬಲ ಕೊಡುತ್ತಾರೆ. ಮುಖ್ಯ ಮಂತ್ರಿಗಳು ಯಾವಾಗ ನಮ್ಮೆಲ್ಲರನ್ನೂ ವಿರೋಧ ಪಕ್ಷದವರನ್ನು ಕರೆದು ಕೇಳುತ್ತಾರೆಂದರೆ, ಬೆಂಕಿ ಬಿದ್ದು ಊರು ಅರ್ಧ ಉರಿದು, ನೀರು ಕೂಡ ಸಿಕ್ಕದೇ ಇರತಕ್ಕಂಥ ಸಂದರ್ಭದಲ್ಲಿ, ಜರೂರು ಪತ್ರ, ಮಾತೆತ್ತಿದರೆ ಜರೂರು ಪತ್ರ. ನಾವು ಹೋಗಿ ಮಾತನಾಡಬೇಕು ನೀವೂ ಬನ್ನಿ ಎಂದು ಹೇಳುತ್ತಾರೆ. ನಾವೆಲ್ಲಾ ಒಂದಾಗಿರಬೇಕು, ಒಂದೇ ವೇದಿಕೆ ಇರಬೇಕು ವಿರೋಧಪಕ್ಷಗಳೂ ಒಂದಾಗಬೇಕು. ಈ ನಾಡನ್ನು ಉಳಿಸಿಕೊಳ್ಳುವುದಕ್ಕೆ ಈ ನೀತಿಗೆ ನಮ್ಮ ವಿರೋಧ ಇಲ್ಲ. ಈ ನಾಡನ್ನು ಉಳಿಸುವುದಕ್ಕೆ ನಾವು ಯಾವಾಗಲೂ ವಿರೋಧ ಇಲ್ಲ, ಆದರೆ ಇವತ್ತು ಇಲ್ಲಿಯವರೆಗೆ ನಿಮ್ಮ ಕರ್ತವ್ಯ ಏನು? ಅಧಿಕಾರಿಗಳು ಏನು ಮಾಡಿದ್ದಾರೆ? ಹಿಂದಿನ ಮುಖ್ಯ ಕಾರ್ಯದರ್ಶಿಯವರು ಎಲ್ಲಿದ್ದರು, ಅವರಿಗೆ ರಜೆ ಕೊಟ್ಟು ಕಳುಹಿಸಲು ಕಾರಣ ಏನು?

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಸದಸ್ಯರು ಆವೇಶದಿಂದ ಬಹಳ ಚೆನ್ನಾಗಿ ಮಾತನಾಡು ತ್ತಿದ್ದಾರೆ. ಅವರನ್ನು ತಡೆಯುವ ಕೆಲಸ ಮಾಡುತ್ತಾ ಇಲ್ಲ. ಮುಖ್ಯ ಕಾರ್ಯದರ್ಶಿಗಳ ವಿಚಾರವನ್ನು ಈ ಸಭೆಯಲ್ಲಿ ತಂದರೆ, ಅವರು ಈ ಸದನದಲ್ಲಿ ಇಲ್ಲ. ಸದನದಲ್ಲಿ ಇಲ್ಲದೇ ಇರತಕ್ಕವರ ಹೆಸರನ್ನು ಹಿಡಿದು ಮಾತನಾಡಿದರೆ, ಈ ಸದನದ ಪರಂಪರೆಗೆ ಸರಿಯಾದುದಲ್ಲವೆಂದು ನನ್ನ ಸೂಚನೆ.

ಶ್ರೀ ವಾಟಾಳ್ ನಾಗರಾಜ್.—ನಾನು ಅವರ ಹೆಸರನ್ನು ಇಲ್ಲಿ ತರುತ್ತಿಲ್ಲ. ಮುಖ್ಯ ಕಾರ್ಯ ದರ್ಶಿಗಳೂ ಎಂದು ಹೇಳಬಾರದು ಎಂದು ಹೇಳಿ ನನ್ನ ಮಾತಿನ ಸ್ವಾತಂತ್ರ್ಯವನ್ನು ಕಸಿದುಕೊಳ್ಳುವುದು ಸರಿಯಲ್ಲ. ಹಿಂದಿನ ಮುಖ್ಯ ಕಾರ್ಯದರ್ಶಿಗಳನ್ನು ಏಕಾಏಕಿ ರಜದ ಮೇಲೆ ಹೋಗಬೇಕೆಂದು ಹೇಳುವು ದಕ್ಕೆ ಕಾರಣ ಏನು ?

ಅಧ್ಯಕ್ಷರು.—ಕಾವೇರಿ ವಿವಾದಕ್ಕೂ ಮುಖ್ಯಕಾರ್ಯದರ್ಶಿಗಳಿಗೂ ಸಂಬಂಧ ಏನು ?

ಶ್ರೀ ವಾಟಾಳ್ ನಾಗರಾಜ್.—ಅಲ್ಲೇ ಪ್ರಮುಖವಾದ ಪ್ರಶ್ನೆ ಇರುವುದು. ಅವರು ಎಲ್ಲಿದ್ದರು? ಹೇಗಿದ್ದರು ? ಎಲ್ಲಿಗೆ ಹೋಗಿದ್ದರು ? ನಮ್ಮ ಸಮಸ್ಯೆಗೆ ಸಂಬಂಧಪಟ್ಟ ಕಾಗದ ಪತ್ರಗಳನ್ನು ತೆಗೆದು ಕೊಂಡು ಎಲ್ಲಿಗೆ ಹೋಗಿದ್ದರು ? ತಾವು ದಯವಿಟ್ಟು ತೀರ್ಪು ಕೊಡಬೇಡಿ ತಮ್ಮ ತೀರ್ಪು ನೋಡಿದರೇ ನಮಗೆ ಭಯವಾಗುತ್ತದೆ. ದಯವಿಟ್ಟು ತೀರ್ಪುಕೊಡಬೇಡಿ.

ಸುಪ್ರೀಂ ಕೋರ್ಟಿನಲ್ಲಿ ಇಷ್ಟೆಲ್ಲಾ ವಾದ ಆಗಿ, ಕರ್ನಾಟಕದ ಜನತೆಯನ್ನು ಗಲ್ಲಿಗೆ ಹಾಕುತ್ತೇವೆ, ನೀವು ಏನು ಹೇಳುತ್ತೀರಿ ಎನ್ನುವ ಸಂದರ್ಭ ಬಂದಾಗ, ನಮ್ಮನ್ನು ಗಲ್ಲಿಗೆ ಹಾಕಬೇಡಿ, ಏನು ಎನ್ನ ತಕ್ಕಂಥ ವಿಚಾರ ವಿನಿಮಯ ಮಾಡುವುದಕ್ಕೆ ನೀವು ನಾವು ಏನು ಮಾಡಿದ್ದೇವೆ ? ಸರಕಾರ ಮುಖ್ಯ ಕಾರ್ಯದರ್ಶಿಗಳನ್ನು ಒಂದು ತಿಂಗಳು ರಜೆಯ ಮೇಲೆ ಹೋಗಬೇಕೆಂದು ಆದೇಶ ಮಾಡಿದ ಪ್ರಸಂಗ ಏನು ? ಇವತ್ತು ನಾನು ಇದನ್ನು ಹೇಳಿದರೆ ನನಗೆ ಬಹಳ ನೋವಾಗುತ್ತದೆ ನಮ್ಮಲ್ಲಿ ನಮ್ಮ ನಾಡಿನ ಸಮಗ್ರತೆಯ ಬಗ್ಗೆ, ನಾಡಿನ ಬಗ್ಗೆ ಈ ಜನತೆಯ ಬಗ್ಗೆ ಅಭಿಮಾನ ಇರತಕ್ಕಂಥ ಅಧಿಕಾರಿಗಳು ಇಲ್ಲ. ತಾವು ದಯಮಾಡಿ ಬೆಲ್ ಹೊಡೆಯಬಾರದು. ನಿಮ್ಮ ಬೆಲ್ ಎಂದರೆ ಇತ್ತೀಚಿನ ದಿನಗಳಲ್ಲಿ ನಮಗೆ ಭಯ ಬರುತ್ತದೆ ಬೆಳಗ್ಗೆಯಿಂದ ನಾನು ನೋಡಿ ನೋಡಿ ಬಹುಶಃ ನಾಳೆ ಮಾತನಾಡೋಣ ಎಂದು ಇದ್ದೆ. ನಾಳೆಯೂ ತಾವು ನನಗೆ ಅವಕಾಶ ಕೊಡಬೇಕಾಗುತ್ತದೆ, ಅನೇಕ ಸಮಸ್ಯೆಗಳು ಇವೆ. ಇನ್ನೊಂದು ಇಪ್ಪತ್ತು ನಿಮಿಷದಲ್ಲಿ ನಾನು ಮುಗಿಸುತ್ತೇನೆ. ನಾಳೆ ತಾವು ನನಗೆ ಅವಕಾಶ ಕೊಟ್ಟರೆ ಒಳ್ಳೆಯದು. ತಾವೂ ಕಾವೇರಿ ಕಡೆಯಿಂದ ಬಂದಿರುವವರು. ತಾವು ದಯಮಾಡಿ ಅವಕಾಶ ಮಾಡಿಕೊಡಿ.

ಈಗ ಕರ್ನಾಟಕ ದ್ರೌಪತಿ ಇದ್ದ ಹಾಗೆ ಕರ್ನಾಟಕದ ಸೀರೆಯನ್ನು ದುಶ್ಯಾಸನರು ಎಳೆಯುತ್ತಿದ್ದಾರೆ. ತಾವು ಕೃಷ್ಣ ಆಗಿದ್ದೀರಿ, ಕೃಪೆ ಮಾಡಿ ಸಹಕಾರ ಮಾಡಿ. ಇದರಲ್ಲಿ ನಗುವಂತಹದು ಏನೂ ಇಲ್ಲ. ಯಾವ ಪರಿಸ್ಥಿತಿಗೆ ನಾವು ಇಳಿದಿದ್ದೇವೆ ಎಂದು ಹೇಳಿದೆ. ಮಹಾಭಾರತದಲ್ಲಿ ದ್ರೌಪದಿಗೆ ಆದ ಪರಿಸ್ಥಿತಿ ಇವತ್ತು ನಮ್ಮ ಕರ್ನಾಟಕಕ್ಕೆ ಆಗುತ್ತಿದೆ. ಕನ್ನಡಿಗರಿಗೆ ಆಗುತ್ತಿದೆ ಸೀರೆಯನ್ನು ದುಶ್ಯಾಸನರು ಎಳೆಯುತ್ತಿ ದ್ದಾರೆ ಮೇಲಿನಿಂದ ರಕ್ಷಣೆ ಇರಲೇ ಬೇಕು. ಆದುದರಿಂದ ಯಾವ ರಾಜಕೀಯ ಗೊಂದಲವನ್ನೂ ಇಟ್ಟುಕೊಳ್ಳದೆ, ಸಮಗ್ರವಾಗಿ ಈ ನಾಡನ್ನು ಉಳಿಸುವುದಕ್ಕೆ ರೈತನನ್ನು ಉಳಿಸುವುದಕ್ಕೆ ನಾವು ಎದ್ದು ನಿಲ್ಲಲೇ ಬೇಕು ಆದುದರಿಂದ ಬೇರೆ ಮಾತೇ ಇಲ್ಲ. ಇವತ್ತು ಈ ಒಂದು ಮಂಡಲಿಗೆ ಮೂರು ನ್ಯಾಯಾಧೀಶರನ್ನು ನೇಮಿಸಿದ್ದಾರೆ ಮೊದಲು ಒಂದು ರೀತಿ ನಮಗೆ ಅನ್ನಿಸಿತ್ತು. ಕೇಂದ್ರ ಸರ್ಕಾರ ಬಹುಶಃ ಈ ಮಂಡಲಿಯನ್ನು ಇಷ್ಟು ಬೇಗ ರಚಿಸುವುದಿಲ್ಲ. ಇದು ಇನ್ನೂ ಮುಂದೆ ಹೋಗಬಹು ದೆಂದು ನಾವು ಅಂದುಕೊಂಡಿದ್ದೆವು. ಆದರೆ ಎಷ್ಟು ಬೇಗ ತರಾತುರಿಯಿಂದ ಮಂಡಲಿಯ ರಚನೆ

ಮಾಡಿದ್ದಾರೆ. ಇದರ ಹಿನ್ನೆಲೆ ಏನು ? ತರಾತುರಿಯಲ್ಲಿ ಪಂಚಾಯತಿ ಮಂಡಲಿಯನ್ನು ನೇಮಿಸತಕ್ಕಂಥ ಉದ್ದೇಶ ಏನು ? ಇದರಿಂದ ಏನು ಅರ್ಥವಾಗುತ್ತದೆ ಎಂದರೆ, ತಮಿಳುನಾಡಿನವರು ಕೇಂದ್ರ ಸರಕಾರದವರು ಒಂದಾಗಿದ್ದಾರೆ. ತಮಿಳುನಾಡು ಮತ್ತು ಕೇಂದ್ರ ಸರಕಾರ ಎರಡೂ ಒಂದಾಗಿ ಬಹಳ ಬುದ್ಧಿವಂತಿಕೆಯಿಂದ ತಮ್ಮ ಹೊಣೆಗಾರಿಕೆಯನ್ನು ಕಳೆದುಕೊಂಡು ಕುಳಿತಿದ್ದಾರೆ. ಮಾನ್ಯ ಅಧ್ಯಕ್ಷರೇ ಪಂಚಾಯತಿ ನೇಮಕ ಮಾಡುವುದಕ್ಕೆ ಮುಂಚೆ ಸುಪ್ರೀಂ ಕೋರ್ಟ್ ತೀರ್ಪು ಬರುವುದಕ್ಕೆ ಮುಂಚೆ ನಮ್ಮ ಮುಖ್ಯಮಂತ್ರಿಯವರು ಏನಾಗಬಹುದೆಂದು ಹೇಳಿದ್ದರು. ಬಹುಶಃ ನಮಗೆ ಅಪಾಯ ಆಗಬಹುದು ಎನ್ನುವ ಮಾತನ್ನು ಅವರು ಹೇಳಬೇಕಾದರೆ ಈ ರೀತಿ ಸ್ವಲ್ಪ ವಿಚಾರಗಳು ಅವರಿಗೆ ಗೊತ್ತಿರಬಹುದು. ಆದುದರಿಂದ ಈ ಒಂದು ಪಂಚಾಯತಿ ಮಂಡಲಿ ನೇಮಕದ ಹಿಂದೆ ಸಮಗ್ರವಾದ ಒಂದು ದೊಡ್ಡ ಪಿತೂರಿ ಇದೆ. ಇದರಲ್ಲಿ ಎರಡನೆಯ ಅಭಿಪ್ರಾಯವೇ ಇಲ್ಲ, ಬಹಳ ಪಿತೂರಿ ಇದೆ. ಈ ಪಿತೂರಿಯಿಂದ ಕರ್ನಾಟಕ ಜನತೆಗೆ ಕನ್ನಡಿಗರಿಗೆ ತೀವ್ರ ರೀತಿಯಲ್ಲಿ ಬಹಳ ದೊಡ್ಡ ಆಘಾತವಾಗಿದೆ. ಆಘಾತಕ್ಕೆ ನಾವು ಸಿಕ್ಕಿದ್ದೇವೆ. ಇಂತಹ ಪಿತೂರಿಗಳ ಯೋಜನೆಯಿಂದ ರಚನೆಯಾದ ಮಂಡಲಿಯನ್ನು ನಾವು ವಿರೋಧಿಸಬೇಕಾಗಿದೆ ವಿರೋಧಿಸದೇ ಬೇರೆ ವಿಧಿಯೇ ಇಲ್ಲ. ಹೆಜ್ಜೆಹೆಜ್ಜೆಗೂ ಇದನ್ನು ವಿರೋಧಿಸಬೇಕಾಗಿದೆ. ನಾಳೆ ತೀರ್ಪು ಬರುತ್ತದೆ. ತೀರ್ಪು ಬಂದಮೇಲೆ ಏನು ಮಾಡಬೇಕು? ಆ ತೀರ್ಪು ನಮಗೆ ವಿರೋಧವಾಗಿ ಬಂದಾಗ, ಮಂಡಲಿ ಕೊಟ್ಟಿರತಕ್ಕಂಥ ತೀರ್ಪು ಸಮಗ್ರವಾಗಿದೆ ಆದುದರಿಂದ ಅದನ್ನು ನಾವು ಒಪ್ಪಿಕೊಳ್ಳುತ್ತೇವೆ ಎಂದು ಹೇಳುವುದಕ್ಕೆ ಆಗುತ್ತದೆಯೆ? ಇದು ಸರಿಯಲ್ಲ. ಇದೇ ರೀತಿ ಪಂಜಾಬ್ ರಾಜ್ಯಕ್ಕೆ ಆಗಿದ್ದರೆ ಬಿಡುತ್ತಿದ್ದರೆ? ಆಂಧ್ರಕ್ಕೆ ಆಗಿದ್ದರೆ ಬಿಡುತ್ತಿದ್ದರೆ? ಇದೇ ರೀತಿ ಬೇರೆ ಎಲ್ಲಿ ಆಗಿದ್ದರೂ ಅವರು ಬಿಡುತ್ತಿರಲಿಲ್ಲ. ಬೇರೆ ಕಡೆ ಆಗಲಿ. ಎಲ್ಲಿಯೇ ಆಗಲಿ ಕರ್ನಾಟಕದ ಜನರು ಏನೂ ಮಾಡಿದರೂ ಅವನ್ನು ಸಮಗ್ರವಾಗಿ ಒಪ್ಪಿಕೊಳ್ಳುತ್ತಾರೆಂದು ಏನಾದರೂ ಅವರು ತಿಳಿದುಕೊಂಡಿದ್ದರೆ ಅದು ಸರಿಯಲ್ಲ. ನಾನು ಮೊದಲಿನಿಂದಲೂ ತಮಗೆ ಹೇಳುತ್ತೇನೆ ನ್ಯಾಯ ಪಂಚಾಯತಿ ಬಗ್ಗೆ ಮಾತ್ರವಲ್ಲ ಕರ್ನಾಟಕದ ಸಮಗ್ರ ವೃದ್ಧಿಯನ್ನು ಈ ಸರ್ಕಾರ ಎಂದು ನಾನು ಹೇಳುತ್ತಿಲ್ಲ. ಹಿಂದಿನ ಸರ್ಕಾರಗಳೂ ಸಹ ಕಡೆಗಾಣಿಸಿವೆ. ಯಾವ ವಿಷಯದಲ್ಲೂ ಕರ್ನಾಟಕ ರಾಜ್ಯವನ್ನು ಮೇಲೆ ಎತ್ತಲು ಪ್ರಯತ್ನ ಮಾಡಲಿಲ್ಲ. ಇಡೀ ದೇಶದ ಭೂಪಟದಲ್ಲಿ ಕನ್ನಡದ ಜನತೆಯನ್ನು ಕರ್ನಾಟಕ ರಾಜ್ಯವನ್ನು ಮೊದಲಿನಿಂದಲೂ ಮಲತಾಯಿ ಧೋರಣೆಯಿಂದ ನೋಡುತ್ತಿದ್ದಾರೆಯೇ ಹೊರತು ಬೇರೆ ಮಾತೇ ಇಲ್ಲ. ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಮೊದಲಿನಿಂದಲೂ ಸಮಗ್ರವಾಗಿ ಅನ್ಯಾಯಗಳ ಸರಮಾಲೆ ನಡೆಯುತ್ತಿದೆ. ಈ ಅನ್ಯಾಯಗಳನ್ನು ಸಮಗ್ರವಾಗಿ ಪ್ರತಿಭಟನೆ ಮಾಡತಕ್ಕಂಥ ಒಂದು ವಾತಾವರಣವನ್ನು ರೂಪಿಸಬೇಕಾಗುತ್ತದೆ. ಆದ್ದರಿಂದ ಕೇವಲ ನಾವು ಈ ಸಭೆಯಲ್ಲಿ ಯಾವುದೋ ಒಂದು ರೀತಿಯಲ್ಲಿ ಸಣ್ಣ ನಿರ್ಣಯವನ್ನು ಮಾಡಿದರೆ ಅದರಿಂದ ತೀವ್ರತರವಾದಂಥ ಪ್ರತಿಭಟನೆ ಮಾಡಿದಂತಾಗುವುದಿಲ್ಲ. ನಾವು ಮಾಡಿದ ನಿರ್ಣಯ ತೀವ್ರತರವಾಗಿ ಪರಿಗಣಿಸತಕ್ಕಂಥ ನಿರ್ಣಯ ಆದಬೇಕಾಗುತ್ತದೆ ಆದ್ದರಿಂದ ನಾಳೆ ಮಾನ್ಯ ಮುಖ್ಯ ಮಂತ್ರಿಗಳು ಸಮಗ್ರವಾದ ಒಂದು ನಿರ್ಣಯವನ್ನು ಕೈಗೊಂಡು, ಸಮಗ್ರವಾಗಿ ಇಡೀ ರಾಜ್ಯದ ಜನತೆಯನ್ನು ಒಂದು ಕಡೆ ಸೇರಿಸಿ ನಮ್ಮ ಕರ್ನಾಟಕ ರಾಜ್ಯಕ್ಕೆ ಆಗಿರತಕ್ಕಂಥ ಅನ್ಯಾಯವನ್ನು ಒಪ್ಪಿಕೊಂಡು ಪ್ರತಿಭಟಿಸಬೇಕು. ಅದು ಬಿಟ್ಟು ಈಗ ನಡೆದಿರತಕ್ಕಂಥ ಅನ್ಯಾಯವನ್ನು ನಾವು ಒಪ್ಪಿಕೊಂಡು ಈಗ ನಾವೇನು ಮಾಡುವುದು ನ್ಯಾಯ ಪಂಚಾಯತಿಯನ್ನು ಮಾಡಿಬಿಟ್ಟಿದ್ದಾರೆ ನ್ಯಾಯ ಪಂಚಾಯತಿಗೆ ನಾವು ಹೋಗಲೇಬೇಕು ಎಂದು ಏನಾದರೂ ಮಾಡಿದರೆ ಅದು ಇಡೀ ಕರ್ನಾಟಕ ರಾಜ್ಯದ ಜನತೆಗೆ ಮಾಡಿದ ದ್ರೋಹ ಅದಕ್ಕಿಂತ ದೊಡ್ಡ ಮಹಾ ಅಪರಾಧ ಈ ಸರ್ಕಾರ ಬೇರೇನು ಮಾಡಿದಂತಾಗುವುದಿಲ್ಲವೆನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇಲ್ಲದಿದ್ದರೆ ನಾನು ಒಂದು ಮಾತನ್ನು ಹೇಳುತ್ತೇನೆ ಅದೇನೆಂದರೆ ನಾವೆಲ್ಲರೂ ಸರ್ವ ಪಕ್ಷಗಳು ಮಾನ್ಯ ಮುಖ್ಯ ಮಂತ್ರಿಗಳ ನಾಯಕತ್ವದಲ್ಲಿ ಒಂದು ದೊಡ್ಡ ಚಳುವಳಿಯನ್ನು ಹಮ್ಮಿಕೊಳ್ಳಲಿ. ಶ್ರೀಮಾನ್ ವೀರೇಂದ್ರಪಾಟೀಲರ ನಾಯಕತ್ವದಲ್ಲಿ ರಾಜ್ಯದ ಜಿಲ್ಲೆ ಜಿಲ್ಲೆಗಳಲ್ಲೂ ಶುರು ಮಾಡಲಿ, ಮೊದಲನೇ ಚಳುವಳಿ ಬೆಂಗಳೂರಿನಲ್ಲಿ ಸರ್ವ ಪಕ್ಷಗಳ ಸಭೆ ಕರೆದು ಕೇಂದ್ರ ಸರ್ಕಾರದ ವಿರುದ್ಧ ಚಳುವಳಿ ಮಾಡೋಣ. ಪರಿಣಾಮಕಾರಿಯಾಗಿ ಎದುರಿಸೋಣ. ಬೆಂಗಳೂರು ನಗರಕ್ಕೆ ಒಂದು ಕೋಟಿ ಜನ ಸೇರಿಸೋಣ. ಮೊದಲು ಅವರು ಚಳುವಳಿ ಶುರು ಮಾಡಲಿ. ಇವತ್ತು ಇಂತಹ ಪರಿಸ್ಥಿತಿಯನ್ನು ನಾವು ಸಮಗ್ರವಾಗಿ ಎದುರಿಸದಿದ್ದರೆ ಜನತೆಗೆ ನಾವು ವಂಚನೆ ಮಾಡಿದಂತಾಗುತ್ತದೆ. ಇದು ವಂಚನೆ ಎಂದರೆ ತಪ್ಪಾಗುವುದಿಲ್ಲ. ಈ ದೇಶದ ಜನಾಂಗಕ್ಕೆ ರೈತರಿಗೆ ತೊಂದರೆಯಾಗದಂತೆ ನಾವು ನೋಡಿಕೊಳ್ಳಬೇಕಾಗುತ್ತದೆ. ನಾವು ಬರೀ ಮಾತಿನಲ್ಲಿ ನಿರ್ಣಯ ಮಾಡುವುದರಿಂದ ಏನೂ ಪ್ರಯೋಜನವಾಗುವುದಿಲ್ಲ ಪ್ರತಿಭಟನೆಗಳು ನಡೆಯಬೇಕು. ಚಳುವಳಿಗಳು ನಡೆಯಬೇಕು, ಅದೂ ಸಮಗ್ರವಾದ ಚಳುವಳಿ ನಡೆಯಬೇಕು ಈ ಚಳುವಳಿಗೆ ನಾವು ಸಿದ್ಧರಾಗಬೇಕಾಗುತ್ತದೆ.

ಅಧ್ಯಕ್ಷರು.—ಮಾನ್ಯ...

ಶ್ರೀ ವಾಟಾಳ್ ನಾಗರಾಜ್.—ಇನ್ನೊಂದು ೧೦ ನಿಮಿಷ ಕೊಡಿ ಅಧ್ಯಕ್ಷರೇ ಸಾಕು ಮುಗಿಸುತ್ತೇನೆ

ಶ್ರೀ ಎಂ. ವೀರಪ್ಪಮೊಯಿಲಿ.—ಮಾನ್ಯ ಅಧ್ಯಕ್ಷರೇ...

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ವೀರಪ್ಪಮೊಯಿಲಿಯವರು ಯಾವಾಗಲೂ ನಮ್ಮ ವಿರುದ್ಧವೇ.

ಶ್ರೀ ಎಂ. ವೀರಪ್ಪಮೊಯಿಲಿ.—ನಾನು ಅವಕಾಶ ಕೊಡಿ ಎಂದು ಹೇಳಿದೆ.

ಅಧ್ಯಕ್ಷರು.—ನಾಳೆ ನಾನು ಅವಕಾಶ ಕೊಡುತ್ತೇನೆ. ನಾವು ಇನ್ನು ೬–೨೫ ನಿಮಿಷದವರೆಗೂ ಕುಳಿತುಕೊಳ್ಳಬೇಕೆಂದು ತೀರ್ಮಾನ ಮಾಡಿದ್ದೇವೆ.

ಶ್ರೀ ಎಂ. ವೀರಪ್ಪಮೊಯಿಲಿ.—ನಿಮ್ಮ ಆವೇಗ, ಆವೇಶ ಎಲ್ಲಿ ಕಟ್ ಆಗುತ್ತದೆಯೋ ಎಂದು ನಾನು ನಿಮಗೆ ಇವತ್ತೇ ಅವಕಾಶ ಕೊಡಿ ಎಂದು ಹೇಳಿದೆ.

ಅಧ್ಯಕ್ಷರು.—ನೀವು ನಾಳೆ ಎಲ್ಲಿ ಪುನಃ ಪ್ರಾರಂಭದಿಂದ ಪ್ರಾರಂಭ ಮಾಡುತ್ತೀರೋ ಎನ್ನುವ ಭಯ.

ಶ್ರೀ ವಾಟಾಳ್ ನಾಗರಾಜ್.—ತಾವು ನನ್ನ ಮೇಲೆ ಅಭಿಮಾನದಿಂದ ಆ ರೀತಿ ಹೇಳುತ್ತಿದ್ದೀರಿ. ತಾವು ಹೇಳಿದ ಹಾಗೆ ನನ್ನನ್ನು ತಾವು ತಿಳಿದುಕೊಂಡಿಲ್ಲವೆಂದುಕೊಂಡಿದ್ದೇನೆ.

ಅಧ್ಯಕ್ಷರು.—ಈಗ ಸಭೆಯು ಮುಕ್ತಾಯವಾಗಿ ಪುನಃ ನಾಳೆ ೧೧–೦೦ ಗಂಟೆಗೆ ಸೇರುವುದು.

(ಸದನವು ೬–೦೫ ನಿಮಿಷಗಳಿಗೆ ಮುಕ್ತಾಯವಾಗಿ ಪುನಃ ಮಂಗಳವಾರ ೧೯೯೦ರ ೫ನೇ ಜೂನ್‌ಗೆ ೧೧–೦೦ ಗಂಟೆಗೆ ಸೇರಲು ನಿಶ್ಚಯಿಸಿತು)